ವಿಶ್ವವಾಣಿ
ವಿಶ್ವಾಸವೇ ವಿಶ್ವ

ಯಶಸ್ವಿ ಜೈಸ್ವಾಲ್ ಮಿಂಚು

ಗುವಾಹಟಿಯಲ್ಲಿ ಮಂಗಳವಾರ ಮಳೆಯಿಂದ ಮುಂಬೈ ಇಂಡಿಯನ್ಸ್-ರಾಜಸ್ಥಾನ್ ರಾಯಲ್ಸ್ ಪಂದ್ಯವನ್ನು 11 ಓವರ್‌ಗಳಿಗೆ ಇಳಿಸಲಾಯಿತು. ಮೊದಲು ಬ್ಯಾಟ್ ಮಾಡಿದ ರಾಜಸ್ಥಾನ್ 3 ವಿಕೆಟ್‌ಗೆ 150 ರನ್ ಗಳಿಸಿತು. 32 ಎಸೆತಗಳಲ್ಲಿ 10 ಬೌಂಡರಿ, 4 ಸಿಕ್ಸರ್ ಸಹಿತ 77 ರನ್ ಬಾರಿಸಿದ ಯಶಸ್ವಿ ಜೈಸ್ವಾಲ್ ರಾಜಸ್ಥಾನದ ಗೆಲುವಿನ ರೂವಾರಿಯದರು.

ಸೊಂಪಾದ ಪುಟಗಳು

ಕಮಲ ಮುಡಿಗೇರಿಸಲು ಸಜ್ಜಾಗಿದ್ದಾರಾ ರಾಘವ್ ಛಡ್ಡಾ?

ಜನಪಥ
ರಾಘವಶರ್ಮ ನಿಡ್ಲೆ

6

ನಮ್ಮ ಬದುಕನ್ನೂ ಕೃತಕವಾಗಿಸಿದ ಕೃತಕ ಬುದ್ಧಿಮತ್ತೆ !

ಲೋಕಮತ
ಲೋಕೇಶ್ ಕಾಯರ್ಗ

7

ದಾರಿದೀಪೋಕ್ತಿ

ಇಡೀ ಜಗತ್ತು ನಿಮ್ಮನ್ನು ನಂಬದಿದ್ದರೂ ಪರವಾಗಿಲ್ಲ, ಆದರೆ ನಿಮ್ಮ ಮೇಲೆ ನಿಮಗೆ ಅಚಲವಾದ ನಂಬಿಕೆಯಿರಲಿ. ಆತ್ಮವಿಶ್ವಾಸವೆಂಬ ಆಯುಧ ನಿಮ್ಮ ಕೈಯಲ್ಲಿದ್ದರೆ, ಎಂಥ ಕಠಿಣ ಸವಾಲುಗಳನ್ನೂ ಸುಲಭವಾಗಿ ಗೆಲ್ಲಬಹುದು.

ವಕ್ರತುಂಡೋಕ್ತಿ

'ಸಮಯ ಹಣವಿದ್ದಂತೆ' ಎಂಬ ಮಾತನ್ನು ಎಲ್ಲರೂ ನಂಬುತ್ತಾರೆ. ಸಮಸ್ಯೆ ಅಂದ್ರೆ ಕೆಲವರ ಹತ್ತಿರ ಸಮಯವೂ ಇರುವುದಿಲ್ಲ, ಹಣವೂ ಇರುವುದಿಲ್ಲ!

ಅಮೆರಿಕ ಗಡುವು ಅಂತ್ಯ, ಕೊಲ್ಲಿ ಯುದ್ಧ ಇನ್ನಷ್ಟು ಭೀಕರ

ಸರ್ವನಾಶಕ್ಕೆ ಟ್ರಂಪ್ ಪಣ

ಇರಾನ್ ಸೇತುವೆ, ರೈಲ್ವೆ, ವಿಮಾನ ನಿಲ್ದಾಣಗಳ ಮೇಲೆ ದಾಳಿ

ವಿದ್ಯುತ್ ಸ್ಥಾವರಗಳ ರಕ್ಷಣೆಗೆ ಇರಾನ್‌ನಿಂದ ಮಾನವ ಸರಪಳಿ

ದೆಹಲಿ: ಒಂದೇ ರಾತ್ರಿಯಲ್ಲಿ ಇಡೀ ಇರಾನ್ ಅನ್ನು ಸರ್ವನಾಶ ಮಾಡುತ್ತೇವೆ ಎಂದು ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಹೇಳಿದ ಬೆನ್ನಲ್ಲೇ, ಅದನ್ನು ಎದುರಿಸಲು ಇರಾನ್ ಮಾನವ ಸರಪಳಿಯ ಮೊರೆ ಹೋಗಿದೆ. ನಾಗರಿಕರು, ಯುವಕರು, ಕಲಾವಿದರು, ಅಥ್ಲೀಟ್‌ಗಳೆಲ್ಲ ಸೇರಿ ವಿದ್ಯುತ್ ಸ್ಥಾವರಗಳು, ಇತರೆ ಮೂಲಸೌಕರ್ಯಗಳ ಸುತ್ತ ಮಾನವ ಸರಪಳಿಯನ್ನು ನಿರ್ಮಿಸಲು ಕರೆ ನೀಡಿದೆ. ಜನರು ಮಾನವ ಸರಪಳಿಯೊಂದಿಗೆ ಇರಾನ್ ರಕ್ಷಣೆಗೆ ಸಿದ್ಧವಾಗಿದ್ದಾರೆ. ಟ್ರಂಪ್ ಹೊಸತಾಗಿ ನೀಡಿರುವ ಗಡುವು ಭಾರತೀಯ ಕಾಲಮಾನ ಬುಧವಾರ ಬೆಳಗ್ಗೆ 5.30ಕ್ಕೆ ಮುಗಿಯಲಿದೆ. ಇದಾದ ನಂತರ ಅಮೆರಿಕ ಸರ್ವನಾಶದ ದಾಳಿ ನಡೆಸಬಹುದೆಂದು ಹೇಳಲಾಗಿದೆ.

ಇನ್ನೊಂದು ಕಡೆ ಅಮೆರಿಕ-ಇಸ್ರೇಲ್ ಇರಾನ್ ಮೇಲಿನ ದಾಳಿಯನ್ನು ಭೀಕರಗೊಳಿಸಿವೆ. ಪರಿಣಾಮ ಇರಾನ್‌ನ ಅಲ್ಬೋರ್ಜ್ ಪ್ರಾಂತ್ಯದ ಜನವಸತಿ ಪ್ರದೇಶಗಳಲ್ಲಿ 18 ಮಂದಿ ಮೃತಪಟ್ಟು, ಕನಿಷ್ಠ 24 ಮಂದಿ ಗಾಯಗೊಂಡಿದ್ದಾರೆ. ಜನವಸತಿ ಪ್ರದೇಶಗಳ ಮೇಲೆಯೇ ಇಸ್ರೇಲ್-ಅಮೆರಿಕ ಮುಗಿಬಿದ್ದಿರುವುದರಿಂದ ನಾಗರಿಕರ ಸುರಕ್ಷತೆಯ ಬಗ್ಗೆಯೇ ಕಳವಳ ಮೂಡಿದೆ. ಒಟ್ಟಾರೆ ಹಾನಿಯ ಬಗ್ಗೆ ಪರಿಶೀಲನೆ ಶುರುವಾಗಿದೆ. ಇದುವರೆಗೆ ಸೇನಾ ನೆಲೆಗಳ ಮೇಲಾಗುತ್ತಿದ್ದ ದಾಳಿ ಈಗ ಜನಸಂದಣಿ ಇರುವ ಕಡೆಗೆ ಬದಲಾಗಿರುವ ಸೂಚನೆಯನ್ನು ಅಮೆರಿಕ ನೀಡಿದೆ.

ಇರಾನ್‌ನಲ್ಲಿರುವ ಭಯೋತ್ಪಾದನಾ ಕೇಂದ್ರಗಳ ಮೇಲೆ ಇಸ್ರೇಲ್ ಕ್ಷಿಪಣಿ ದಾಳಿ ನಡೆಸಿದ್ದು, ಹಲವೆಡೆ ಭಾರೀ ಸ್ಫೋಟಗಳು ಸಂಭವಿಸಿವೆ. ರಾಜಧಾನಿ ಟೆಹರಾನ್‌ನ ಕೆಲವು ಭಾಗಗಳು ಮತ್ತು ಹತ್ತಿರದ ಕರಾಜ್ ನಗರ ಸೇರಿದಂತೆ ಹಲವೆಡೆ ಸ್ಫೋಟಗಳು ಸಂಭವಿಸಿವೆ ಎಂದು ಇಸ್ರೇಲ್ ಸೇನೆ ಹೇಳಿಕೊಂಡಿದೆ. ಅಮೆರಿಕವೂ ಇರಾನ್‌ನ ಖಾರ್ಗ್ ದ್ವೀಪದ ತೈಲ ಸಂಸ್ಕರಣಾ ಕೇಂದ್ರಗಳಲ್ಲಿ ದೊಡ್ಡ ಸ್ಫೋಟಗಳು ಸಂಭವಿಸಿವೆ. ಹಾನಿ ಬಗ್ಗೆ ಗೊತ್ತಾಗಿಲ್ಲ.

ಒಂದೇ ರಾತ್ರಿಯಲ್ಲಿ ಇಡೀ ನಾಗರಿಕತೆಯೇ ನಾಶವಾಗಲಿದೆ. ಅದನ್ನು ಮತ್ತೆಂದೂ ಸರಿಪಡಿಸಲು ಸಾಧ್ಯವಾಗುವುದಿಲ್ಲ. ಅದು ಆಗುವುದು ನನಗೆ ಇಷ್ಟವಿಲ್ಲ. ಆದರೆ ಅದಾಗಬಹುದು. ಪೂರ್ಣ ಆಡಳಿತವನ್ನೇ ಬದಲಿಸಲಿದ್ದೇವೆ. ಉಗ್ರತೆ ಕಡಿಮೆಯಿರುವ ಆಡಳಿತ ಸ್ಥಾಪನೆಯಾಗಲಿದೆ.
-ಡೊನಾಲ್ಡ್ ಟ್ರಂಪ್, ಅಮೆರಿಕ ಅಧ್ಯಕ್ಷ

ಅಮೆರಿಕ ಅಧ್ಯಕ್ಷ ಟ್ರಂಪ್ ಒಂದು ರಾತ್ರಿಯಲ್ಲಿ ಇಡೀ ನಾಗರಿಕತೆ ನಾಶವಾಗಲಿದೆ ಎಂದು ಹೇಳಿದ್ದಾರೆ. ನೀವು (ಟ್ರಂಪ್) ಮತ್ತು ನಿಮ್ಮ ಮಿತ್ರಕೂಟ ಇರಾನ್‌ನ ಪ್ರಾಚೀನ ನಾಗರಿಕತೆಯಿಂದ ಎಂದೂ ಮರೆಯಲಾಗದ ಪ್ರತಿದಾಳಿಯನ್ನು ಎದುರಿಸಲಿದ್ದೀರಿ.
-ಇರಾನ್ ರಾಯಭಾರ ಕಚೇರಿ

ಇರಾನ್‌ನ 7 ಕ್ಷಿಪಣಿ ನಾಶಪಡಿಸಿದ ಸೌದಿ

ಪಶ್ಚಿಮ ಏಷ್ಯಾದಲ್ಲಿ ಹೆಚ್ಚುತ್ತಿರುವ ಉದ್ವಿಗ್ನತೆ ಮಧ್ಯೆ, ಸೌದಿ ಅರೇಬಿಯಾ ಮಂಗಳವಾರ ತನ್ನ ವಾಯುರಕ್ಷಣಾ ಪಡೆಗಳು ಇರಾನ್‌ನ 7 ಖಂಡಾಂತರ ಕ್ಷಿಪಣಿಗಳನ್ನು ತಡೆಹಿಡಿದು ನಾಶಪಡಿಸಿವೆ ಎಂದು ಹೇಳಿಕೊಂಡಿದೆ. ಅಮೆರಿಕ ತನ್ನ ಮೇಲೆ ದಾಳಿ ಮಾಡುತ್ತಿರುವ ಬೆನ್ನಲ್ಲೇ ಅಮೆರಿಕದ ನೆಲೆಗಳಿರುವ ದೇಶಗಳ ಮೇಲೆ ಇರಾನ್ ಪ್ರತಿದಾಳಿ ಮಾಡುತ್ತಿದೆ.

ಇರಾನ್ ಪರಮೋಚ್ಚ ನಾಯಕ ಮೊಜ್ತಬಾ ಇನ್ನೂ ಪ್ರಜ್ಞಾಹೀನ

ಇದೇ ಫೆಬ್ರವರಿಯಲ್ಲಿ ಇಸ್ರೇಲ್ ಕ್ಷಿಪಣಿ ದಾಳಿಗೆ ತುತ್ತಾಗಿದ್ದ ಇರಾನಿನ ನೂತನ ಸರ್ವೋಚ್ಚ ನಾಯಕ ಮೊಜ್ತಬಾ ಖಮೇನಿ ಇನ್ನೂ ಪ್ರಜ್ಞಾಹೀನರಾಗಿದ್ದಾರೆ. ಅವರೀಗ ಇರಾನಿನ ಸರ್ವಾಧಿಕಾರಿಯೆಂದು ಘೋಷಿಸಲ್ಪಟ್ಟಿದ್ದರೂ, ಅವರು ಪ್ರಜ್ಞಾಹೀನ ರಾಗಿರುವುದರಿಂದ ಸರಕಾರದ ಸಭೆಗಳಲ್ಲಿ ಭಾಗವಹಿಸುತ್ತಿಲ್ಲ, ಯಾವುದೇ ನಿರ್ಧಾರಗಳನ್ನು ಕೈಗೊಳ್ಳುತ್ತಿಲ್ಲ ಎನ್ನಲಾಗಿದೆ.

ರಾಯಭಾರಿ ಸೆರ್ಗಿಯೋ ಜತೆ ಟ್ರಂಪ್ ರಹಸ್ಯ ಮಾತುಕತೆ

ಕದನ ವಿರಾಮಕ್ಕೆ ಸಂಬಂಧಿಸಿದಂತೆ ಇರಾನ್‌ಗೆ ನೀಡಿದ ಕೊನೆಯ ಗಡುವು ಮುಗಿಯಲು ಕೆಲವೇ ಗಂಟೆಗಳಿದ್ದಾಗ ಭಾರತದ ಅಮೆರಿಕ ರಾಯಭಾರಿ ಸೆರ್ಗಿಯೋ ಗೋರ್ ಅವರನ್ನು ಟ್ರಂಪ್ ಶ್ವೇತಭವನಕ್ಕೆ ಆಹ್ವಾನಿಸಿದ್ದು ಭಾರೀ ಕುತೂಹಲ ಮೂಡಿಸಿದೆ. ಮಾತುಕತೆ ವಿವರ ಲಭ್ಯವಾಗಿಲ್ಲ.

ಉಪಚುನಾವಣೆ: ನಾಳೆ ಮತದಾನ ಇಂದು ಮನೆಮನೆಗೆ ತೆರಳಿ ಮತಯಾಚನೆ

ಬಹಿರಂಗ ಪ್ರಚಾರಕ್ಕೆ ತೆರೆ, ನಾಯಕರ ದಂಡು ವಾಪಸ್

ಬೆಂಗಳೂರು: ಮುಂಬರುವ 2028ರ ವಿಧಾನಸಭಾ ಚುನಾವಣೆಗೆ ದಿಕ್ಸೂಚಿ ಎಂದೇ ಹೇಳಲಾದ ರಾಜ್ಯದ ಎರಡು ವಿಧಾನಸಭಾ ಕ್ಷೇತ್ರಗಳ ಉಪ ಚುನಾವಣೆಯ ಬಹಿರಂಗ ಪ್ರಚಾರಕ್ಕೆ ಮಂಗಳವಾರ ತೆರೆಬಿದ್ದಿದೆ. ಗುರುವಾರ ಕಣದಲ್ಲಿರುವ ಅಭ್ಯರ್ಥಿಗಳ ಭವಿಷ್ಯವನ್ನು ಮತದಾರ ಬರೆಯಲಿದ್ದಾನೆ.

ಬಿಜೆಪಿ ಹಾಗೂ ಕಾಂಗ್ರೆಸ್ ಪಕ್ಷದಿಂದ ರಾಜ್ಯ ಮಟ್ಟದ ನಾಯಕರು ಆಗಮಿಸಿ ಬಿರುಸಿನ ಪ್ರಚಾರ ಮಾಡುವ ಮೂಲಕ ಮತದಾರರನ್ನು ಸೆಳೆಯುವ ಯತ್ನ ಮಾಡಿದರು. ದಾವಣಗೆರೆ ದಕ್ಷಿಣ ಮತ್ತು ಬಾಗಲಕೋಟೆ ವಿಧಾನಸಭಾ ಕ್ಷೇತ್ರಗಳ ಉಪಚುನಾವಣೆಗೆ ಕಳೆದ ಎರಡು ವಾರಗಳಿಂದ ನಡೆದ ಘಟಾನುಘಟಿ ನಾಯಕರ ವಾಕ್ಸಮರ, ರೋಡ್ ಶೋ ಮತ್ತು ಪಾದಯಾತ್ರೆಗಳು ಮುಕ್ತಾಯವಾಗಿವೆ. ಬುಧವಾರ ಮನೆಮನೆಗೆ ತೆರಳಿ ಮತಯಾಚನೆ ಮಾಡಲಿದ್ದಾರೆ.

ಬಾಗಲಕೋಟೆಯಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಉಮೇಶ್ ಮೇಟಿ ಪರವಾಗಿ, ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ. ವಿಜಯೇಂದ್ರ ಅವರು ವೀರಣ್ಣ ಚರಂತಿಮಠ ಪರವಾಗಿ, ದಾವಣಗೆರೆ ದಕ್ಷಿಣದಲ್ಲಿ ಭಾರತ ಕ್ರಿಕೆಟ್ ತಂಡದ ಮಾಜಿ ನಾಯಕ ಮೊಹಮ್ಮದ್ ಅಜರುದ್ದೀನ್, ಕೆಪಿಸಿಸಿ ಅಧ್ಯಕ್ಷ ಡಿ.ಕೆ.ಶಿವಕುಮಾರ್ ಕಾಂಗ್ರೆಸ್ ಅಭ್ಯರ್ಥಿ ಎಸ್.ಎಸ್.ಸಮರ್ಥ್ ಪರವಾಗಿ ಮತಯಾಚನೆ ಮಾಡಿದರು. ಬಿಜೆಪಿ ಅಭ್ಯರ್ಥಿ ಶ್ರೀನಿವಾಸ ದಾಸಕರಿಯಪ್ಪ ಅವರ ಪರ ಬಿ.ಎಸ್.ಯಡಿಯೂರಪ್ಪ ರೋಡ್ ಶೋ ಮೂಲಕ ಪ್ರಚಾರ ನಡೆಸಿದರು. ಮತದಾರರನ್ನು ಹೊರತುಪಡಿಸಿ ಉಳಿದವರು, ಕ್ಷೇತ್ರ ಬಿಟ್ಟು ತೆರಳಬೇಕು ಎಂದು ಚುನಾವಣಾ ಆಯೋಗ ಕಟ್ಟುನಿಟ್ಟಿನ ಸೂಚನೆ ನೀಡಿದೆ. ಹೀಗಾಗಿ ಕ್ಷೇತ್ರಕ್ಕೆ ಹೊರಗಿನವರು ವಾಪಸ್ ಮರಳಿದ್ದಾರೆ.

ದಾವಣಗೆರೆಯಲ್ಲಿ ಬುಧವಾರ ಕಾಂಗ್ರೆಸ್ ಅಭ್ಯರ್ಥಿ ಸಮರ್ಥ್ ಶಾಮನೂರು ಪರ ಭಾರತ ಕ್ರಿಕೆಟ್ ತಂಡದ ಮಾಜಿ ನಾಯಕ ಮೊಹಮ್ಮದ್ ಅಜರುದ್ದೀನ್, ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಪ್ರಚಾರ ನಡೆಸಿದರು.

ನಾವು ಬಡವರಿಗಾಗಿ ಕೊಡುವ ಐದು ಗ್ಯಾರಂಟಿಗಳ ಹಣ ಬಿಡುಗಡೆ ಮಾಡಬಾರದು ಎಂದು ಬಿಜೆಪಿಯವರು ಕೋರ್ಟ್‌ಗೆ ಹೋಗಿದ್ದಾರೆ. ಆದರೆ ಕೋರ್ಟ್‌ನಲ್ಲಿ ಅವರಿಗೆ ಜಯ ಸಿಕ್ಕಿಲ್ಲ. ಅವರ ನಿಜವಾದ ಬಣ್ಣ ಈಗ ಬಯಲಾಗಿದೆ.
-ಡಿ.ಕೆ.ಶಿವಕುಮಾರ್, ಉಪಮುಖ್ಯಮಂತ್ರಿ

ಬಿಡುವಿಲ್ಲದ ವೇಳಾಪಟ್ಟಿಗಳ ನಡುವೆಯೂ ಬಹಳ ಕಷ್ಟಪಟ್ಟು ನಾನು ದಾವಣಗೆರೆಗೆ ಬಂದಿದ್ದೇನೆ. ದಯವಿಟ್ಟು ನನ್ನನ್ನು ಸೋಲಿಸಿ ಕಳುಹಿಸಬೇಡಿ. ಮಲ್ಲಿಕಾರ್ಜುನ ಖರ್ಗೆ, ಡಿ.ಕೆ.ಶಿವಕುಮಾರ್, ನಮ್ಮ ಸಿಎಂ ಸಿದ್ದರಾಮಯ್ಯರನ್ನು ಗೆಲ್ಲಿಸಬೇಕು. ಇದು ಅವರ ಗೆಲುವು ಮಾತ್ರವಲ್ಲ, ಅವರ ಕೈಗಳನ್ನು ಬಲಪಡಿಸಿದರೆ ನಿಮ್ಮ ಕೈಗಳು ಮತ್ತು ನಮ್ಮ ಕೈಗಳೂ ಬಲಗೊಳ್ಳುತ್ತವೆ. ಕಾಂಗ್ರೆಸ್ ಅಭ್ಯರ್ಥಿ ಸಮರ್ಥ್‌ರನ್ನು ಅವರನ್ನು ಗೆಲ್ಲಿಸುತ್ತೀರಿ ಎಂಬ ನಿರೀಕ್ಷೆಯೊಂದಿಗೆ ಮರಳುತ್ತಿದ್ದೇನೆ.
-ಅಜರುದ್ದೀನ್, ಭಾರತ ಕ್ರಿಕೆಟ್ ಮಾಜಿ ನಾಯಕ

5 ಕೋಟಿ ರು. ಮೌಲ್ಯದ ಚಿನ್ನ ಪತ್ತೆ

ಬೆಂಗಳೂರು: ಕಂದಾಯ ಗುಪ್ತಚರ ನಿರ್ದೇಶನಾಲಯ ಅಧಿಕಾರಿಗಳು ಬೆಂಗಳೂರು ವಿಮಾನ ನಿಲ್ದಾಣದಲ್ಲಿ ಕಾರ್ಯಾಚರಣೆ ನಡೆಸಿ 5 ಕೋಟಿ ರು. ಮೌಲ್ಯದ 2 ಚಿನ್ನದ ಬಿಸ್ಕೆಟ್ ವಶಕ್ಕೆ ಪಡೆದು ಐವರನ್ನು ಬಂಧಿಸಿದ್ದಾರೆ. ಆರೋಪಿಗಳು ಬಾಂಗ್ಲಾದೇಶದ ಮೂಲಕ ಬೆಂಗಳೂರಿಗೆ ಕ್ಯಾಪ್ಸುಲ್ ರೂಪದಲ್ಲಿ ಚಿನ್ನವನ್ನು ಸಾಗಾಟ ಮಾಡುತ್ತಿದ್ದರು. ಶೌಚಾಲಯದಲ್ಲಿ ದೇಹದ ಖಾಸಗಿ ಭಾಗದಲ್ಲಿ ಈ ಚಿನ್ನವನ್ನು ಇರಿಸಿದ್ದರು.

ಸಾರ್ವಜನಿಕ ಪ್ರಕಟಣೆ

ಸಾರ್ವಜನಿಕರಲ್ಲಿ ವಿನಂತಿ, ಶ್ರೀಮತಿ. ಗಂಗಲಕ್ಷ್ಮೀ.ಕೆ.ಎನ್ ಕೋ.ಶ್ರೀ.ರಾಜಕುಮಾರ್.ಸಿ ರವರು, ಬೆಂಗಳೂರು ಗ್ರಾಮಾಂತರ ಜಿಲ್ಲೆ, ದೊಡ್ಡಬಳ್ಳಾಪುರ ನಗರ, 1ನೇ ವಾರ್ಡ್, ಸುಭಾಷ್‌ನಗರಕ್ಕೆ ಸೇರಿದ ಮಾಜಿ ನಗರಸಭಾ ದಾಖಲೆ ಸಂಖ್ಯೆ.2516247, ಹಾಲಿ ದಾಖಲೆ ಸಂಖ್ಯೆ.24334674, ಹಾಲಿ ಪಿ.ಐ.ಡಿ.ಸಂಖ್ಯೆ.1–6–623–126, ಸ್ವತ್ತಿನ ಹಳೇ ಸಂಖ್ಯೆ. 4800/498/2017/VS–13, ನಿರ್ಧರಣಾ ಸಂಖ್ಯೆ. 4800/498/2017/VS–13, ಸೈಟ್ ನಂ.13 ರ ವಿಸ್ತೀರ್ಣ ಪೂರ್ವ–ಪಶ್ಚಿಮ 9.14 ಮೀಟರ್ ಮತ್ತು ಉತ್ತರ– ದಕ್ಷಿಣ 12.19 ಮೀಟರ್, ಒಟ್ಟು 111.48 ಚದರ ಮೀಟರ್ ಅಥವಾ 1200 ಚದರ ಅಡಿಗಳುಳ್ಳ ಸ್ವತ್ತಿಗೆ ಸಂಬಂಧಿಸಿದಂತೆ, ಶ್ರೀ.ಪಿ.ರಾಜಗೋಪಾಲಚಾರಿರವರಿಂದ, ಶ್ರೀಮತಿ.ಎಸ್. ರಾಜಲಕ್ಷ್ಮೀ ರವರಿಗೆ, ದಿನಾಂಕ 16.02.2012, ದೊಡ್ಡಬಳ್ಳಾಪುರ ಉಪನೋಂದಣಾಧಿಕಾರಿ ಕಛೇರಿಯಲ್ಲಿ, 1ನೇ ಪುಸ್ತಕದ, ಸಿಡಿ.ನಂ.DBPD264 ರಲ್ಲಿ ಶೇಖರಿಸಲ್ಪಟ್ಟ, DBP–1–08797–2011–12 ನೇ ನಂಬರಾಗಿ ನೋಂದಣಿಯಾದ ಅಸಲಿ ದಾನಪತ್ರವನ್ನು ಕಳೆದುಕೊಂಡಿರುತ್ತಾರೆ. ಈ ವಿಷಯವಾಗಿ ಬೆಂಗಳೂರು ಗ್ರಾಮಾಂತರ ಪೊಲೀಸ್ ಠಾಣೆಯುಲ್ಲಿ ನಂ.2143221/2026 ದಿನಾಂಕ: 07.04.2026 ರಂದು ದೂರು ಸಲ್ಲಿಸಲಾಗಿದೆ. ಈ ಮೇಲ್ಕಂಡ ಮೂಲ ದಾಖಲೆ ಸಿಕ್ಕಿದಲ್ಲಿ/ದೊರೆತಲ್ಲಿ ಕೂಡಲೇ ಪೊಲೀಸ್ ಠಾಣೆ ಅಥವಾ, ಈ ಕೆಳಕಂಡ ವಿಳಾಸಕ್ಕೆ ಏಳು ದಿನದೊಳಗೆ ಮರಳುವಿಕೆ ಅಥವಾ ಖುದ್ದು ಸಂಪರ್ಕಿಸಲು ಕೋರಿದೆ.

ಶ್ರೀಯುತ ಪ್ರಶಾಂತ್ ಕುಮಾರ್.ಕೆ. ಬಿ.ಎ. ಎಲ್.ಎಲ್.ಬಿ, ವಕೀಲರು, "ಲೆಕ್ಸಫಾಕ್ಟಮ್", ನಂ.690, 2ನೇ ಮಹಡಿ, 36ನೇ ಕ್ರಾಸ್ ರಸ್ತೆ, 11ನೇ ಮುಖ್ಯ ರಸ್ತೆ, 2ನೇ ಬ್ಲಾಕ್, ರಾಜಾಜಿನಗರ, ಬೆಂಗಳೂರು–10.

ಸಾರ್ವಜನಿಕ ಪ್ರಕಟಣೆ

ಸಾರ್ವಜನಿಕರಿಗೆ ಈ ಮೂಲಕ ತಿಳಿಸುವುದೇನೆಂದರೆ ನನ್ನ ಕಕ್ಷಿದಾರರಾದ **ಶ್ರೀ.ಶ್ರೀನಿವಾಸ ಮೂರ್ತಿ.ಕೆ. ಶ್ರೀ.ಜಿ. ಕೃಷ್ಣಪ್ಪ** ಇವರು ಈ ಕೆಳಕಂಡ ಷೆಡ್ಯೂಲ್‌ನಲ್ಲಿ ವಿವರಿಸಿರುವ ಸ್ಥಿರಾಸ್ತಿಯ ಮಾಲೀಕರಾಗಿದ್ದು ಇವರು ಆನೇಕಲ್‌ನ ಉಪ ನೋಂದಣಿ ಕಚೇರಿಯಲ್ಲಿ ನೋಂದಾಯಿಸಲಾದ ಶ್ರೀ.ಆರ್.ವಿ.ನಾರಾಯಣ ಸ್ವಾಮಿ ರೆಡ್ಡಿ ಅವರ ಪರವಾಗಿ ವ್ಯವಸ್ಥಾಪಕ ನಿರ್ದೇಶಕ ಶ್ರೀ.ತಲ್ಲಂ.ವಿ. ನಾಗರಾಜ್ ಪ್ರತಿನಿಧಿಸುವ ಮೆಸರ್ಸ್ ಓಂಕಾರ್ ಎಸ್ಟೇಟ್ ಪ್ರೈವೇಟ್ ಲಿಮಿಟೆಡ್‌ನಿಂದ ಕಾರ್ಯಗತಗೊಳಿಸಲಾದ ದಾಖಲೆ ಸಂಖ್ಯೆ.6107/2001–02, ಪುಸ್ತಕ–1, ಹೊಂದಿರುವ 27/12/2001 ದಿನಾಂಕದ ಮೂಲ ಮಾರಾಟ ಪತ್ರವನ್ನು ಕಳೆದುಕೊಂಡಿರುತ್ತಾರೆ, ಮತ್ತು ಈ ಷೆಡ್ಯೂಲ್ ಸ್ವತ್ತಿಗೆ ಸಂಬಂಧಿಸಿದಂತೆ ಯಾರಾದರೂ ಸ್ವತ್ತಿನ ಮೇಲೆ ಸ್ವಾಧೀನವನ್ನು ಹೊಂದಿದ್ದರೆ, ಅದನ್ನು ಈ ದಿನಾಂಕದಿಂದ ನೋಟೀಸು ಪ್ರಕಟವಾದ **ಏಳು ದಿನಗಳ** ಒಳಗಾಗಿ ಕೆಳಸಹಿದಾರರಿಗೆ ತಲುಪಿಸಬೇಕೆಂದು ಈ ಮೂಲಕ ತಿಳಿಸಲಾಗಿದೆ.

ಷೆಡ್ಯೂಲ್ ಸ್ವತ್ತು

ಬೆಂಗಳೂರು ನಗರ ಜಿಲ್ಲೆಯ ಆನೇಕಲ್ ತಾಲ್ಲೂಕಿನ ಜಿಗಣಿ ಹೋಬಳಿಯ ಹೆನ್ನಾಗರ ಹೊಸಹಳ್ಳಿ ಗ್ರಾಮದಲ್ಲಿರುವ "ಓಂಕಾರ್ ನಗರ" ಎಂದು ಕರೆಯಲ್ಪಡುವ ಲೇಔಟ್‌ನಲ್ಲಿರುವ ಸರ್ವೆ ನಂ.26 ರಲ್ಲಿ ರಚಿಸಿರುವ ವಸತಿ ಸೈಟ್ ಸಂಖ್ಯೆ.473, ಇ–ಸ್ವಾತು ಸಂಖ್ಯೆ. 150200103200600357, ಹಳೆಯ ಕಥಾ ಸಂಖ್ಯೆ. 151/160/473, ವಿ.ಪಿ. ಕಥಾ ಸಂಖ್ಯೆ.151/100/473 ಮತ್ತು, ಇದನ್ನು ಕೃಷಿಯಿಂದ ಕೃಷಿಯೇತರ ವಸತಿ ಉದ್ದೇಶಕ್ಕೆ ದಿನಾಂಕ 17.12.2000ರಂದು ಸಂಖ್ಯೆ.ALN/SR(A)/28/2000-01, ರಂತೆ ಸಹಾಯಕ ಆಯುಕ್ತರು, ಬೆಂಗಳೂರು ದಕ್ಷಿಣ ಜಿಲ್ಲೆ, ಇವರು ಹೊರಡಿಸಿರುವ ಈ ಸ್ವತ್ತಿನ ವಿಸ್ತೀರ್ಣ ಪೂರ್ವದಿಂದ ಪಶ್ಚಿಮಕ್ಕೆ ಅಳತೆ: 40 ಅಡಿ ಮತ್ತು ಉತ್ತರದಿಂದ ದಕ್ಷಿಣಕ್ಕೆ: ಒಟ್ಟು 30 ಅಡಿಗಳು 1200 ಚದರ ಅಡಿ ಅಳತೆ, ಈ ಸ್ವತ್ತಿಗೆ ಚಕ್ಕುಬಂದಿ:–ಪೂರ್ವಕ್ಕೆ: ಓಂಕಾರ್ ಲೇಔಟ್ ರಸ್ತೆ, ಪಶ್ಚಿಮಕ್ಕೆ: ಸೈಟ್ ಸಂಖ್ಯೆ 458, ಉತ್ತರಕ್ಕೆ: ಸೈಟ್ ಸಂಖ್ಯೆ 472, ದಕ್ಷಿಣಕ್ಕೆ: ಸೈಟ್ ಸಂಖ್ಯೆ 474.

**ಎನ್. ಜಗದೀಶ್ ಕುಮಾರ್, ವಕೀಲರು
ನಂ.30/1, 2ನೇ ಮಹಡಿ, 7ನೇ ಕ್ರಾಸ್,
ಎನ್.ಆರ್. ಕಾಲೋನಿ ಹತ್ತಿರ ಬಸ್ ನಿಲ್ದಾಣ,
ಹೋಟೆಲ್ ದ್ವಾರಕ ಎದುರು, ಬೆಂಗಳೂರು–560019.**

BEFORE THE NOMINEE OF DEPUTY REGISTRAR OF CHITS, I ZONE, MARGOSA ROAD, MALLESWARAM, AT BANGALORE

Dispute No. DRB-1/ CFS/156/ 2025-2026

DISPUTANT: M/s. DHANALAKSHMI SRINIVASAN CHIT FUNDS (KAR) PVT. LTD.,
Registered Office at # 32, 2nd Floor, 1st Main 8th B Cross, Near Gayathri Ganapathi Temple. Yelahanka New Town, BENGALURU-560 064
Branch: BASAVESHWARANAGAR,
Rep. by its Foreman/ Manager,
Sri. RAJKUMAR.J

OPPONENTS

1.Mr. Lokanath S/o. Manikyam
No.77/6, 1 Main Road, 7th Cross, Near Patel Channappa Industrial Estate Andrahalli Main Road, Peenya 2nd Stage, Bangalore-560091.

2.Mr. K.S. Ravi Kumar, S/o. Siddagangaiah No.17/5, 2nd Floor, 1 Main Road, 7th "C" Cross, Maruthi Nagar, Near Annamma Temple, Andrahalli Main Road, Peenya 2nd Stage, Bangalore-560091.

3.Mr. Prasanna Kumar S/o. Basavaraju
No.77/6, 1 Main Road, 7th Cross, Near Patel Channappa. Industrial Estate Andrahalli Main Road Peenya 2nd Stage. Bangalore-560091.

5. Mrs. Sudha.L. W/o. Lokanath.M
No.77/6, 1 Main Road, 7th cross, Near patel channappa. Industrial Estate Andrahalli main Road peenya 2nd stage. Bangalore-560091

NOTICE OF CONDITIONAL ATTACHMENT OF IMMOVABLE PROPERTY OF OPPONENT NO. 1 to 3 and 05 THROUGH PAPER PUBLICATION

WHEREAS, the dispuitant has field the above dispute U/S 64 (1) of the Chit fund Act, 1982, before the Deputy Registar of Chits, First zone, Margosa road, Malleshwaram, Banglore, for recovery of **Rs. 5,23,356/- (Rupees Five Lakhs Twenty Three Thousand Three Hundred and Fifty Six Only)** From the Opponents.

The Summons issued By R. P. A. D to the opponent No. 1 to 03 and 05 Appear for hearing on 04/04/2026 in this court not duly served There fore the said opponent here by summons to appear before this court in person on **24/04/2026 at 3:00 PM** before The Nominee of the Deputy Registrar of Chits sitting at 172, Suprabha Complex, 2nd Floor,, 1 G Cross, Near Sharada Colony Bus stop, 3rd Stage, Basaveshwaranagar, Bengaluru -560079.If they wish to contest the above dispute with all Relavant document failing which the above dispute will be decided as per law in you absence.

Given Under my hand & seal on this office on **04/04/2026** at Bangalore

Nominee of The Deputy Registrar of Chits, Ist Zone, Bangalore

BEFORE THE NOMINEE OF DEPUTY REGISTRAR OF CHITS, I ZONE, MARGOSA ROAD, MALLESWARAM, AT BANGALORE

Dispute No. DRB-1/ CFS/155/ 2025-2026

DISPUTANT: M/s. DHANALAKSHMI SRINIVASAN CHIT FUNDS (KAR) PVT. LTD., Registered Office at # 32, 2nd Floor, 1st Main 8th B Cross, Near Gayathri Ganapathi Temple. Yelahanka New Town, BENGALURU-560 064
Branch: BASAVESHWARANAGAR,
Rep. by its Foreman/ Manager,
Sri. RAJKUMAR.J

OPPONENTS:

Mrs. Mala Kumar and others

2. Mr.Mohan Kumar, S/o. Onkarappa No.1851,5th Main, 12th Cross, RPC Layout, hampi Nagar, Vijaya Nagar, 206 Stage, Bengaluru-560040.

4. Mr. Harshith M.Dungawath S/o Mohan kumar, No.1851, 5th Main, 12th Cross, RPC Layout, hampi Nagar, Vijaya Nagar, 204 Stage, Bengaluru-560040.

NOTICE TO OPPONENTS No.2 AND 04 THROUGH PAPER PUBLICATION

WHEREAS, the Disputant has Instituted the above dispute U/s 64 of The Chit Funds Act, 1982 before The Deputy Registrar of Chits, First Zone, Bangalore for recovery of a sum of **Rs. 2,89,008/- (Rupees Two Lakhs Eighty Nine Thousand Eight Only)** from the opponents.

The Summons issued By R. P. A. D to the opponent No.02 and 04 Appear for hearing on 04/04/2026 in this court not duly served There fore the said opponent here by summons to appear before this court in person on 24/04/2026 at 3 P M before The Nominee of the Deputy Registrar of Chits sitting at 172, Suprabha Complex, 2nd Floor, 1 G Cross, Near Sharada Colony Bus stop, 3rd Stage, Basaveshwaranagar, Bengaluru - 560079. If they wish to contest the above dispute with all Relavant document failing which the above dispute will be decided as per law in you absence.

Given Under my hand & seal on this office on 04/04/2026 at Bangalore

Nominee of The Deputy Registrar of Chits, I Zone, Bangalore

BEFORE THE NOMINEE OF DEPUTY REGISTRAR OF CHITS, I ZONE, MARGOSA ROAD, MALLESWARAM, AT BANGALORE

Dispute No. DRB-1/ CFS/156/ 2025-2026

DISPUTANT: M/s. DHANALAKSHMI SRINIVASAN CHIT FUNDS (KAR) PVT. LTD.,
Registered Office at # 32, 2nd Floor, 1st Main 8th B Cross, Near Gayathri Ganapathi Temple. Yelahanka New Town, BENGALURU-560 064
Branch: BASAVESHWARANAGAR,
Rep. by its Foreman/ Manager,
Sri. RAJKUMAR.J

OPPONENTS: Mr. Lokanath and others

OPPONENT NO. 01

Mr. Lokanath, S/o. Manikyam, No.77/6, 1st Main Road, 7th Cross, Near Patel Channappa Industrial Estate, Andrahalli Main Road, Peenya 2nd Stage, Bangalore-560091

NOTICE OF CONDITIONAL ATTACHMENT OF IMMOVABLE PROPERTY OF OPPONENT NO. 01 UNDER SECTION 68 (1) OF THE CHIT FUNDS ACT, 1982. THROUGH PAPER PUBLICATION

01. WHEREAS, the dispuitant has field the above dispute U/S 64 (1) of the Chit fund Act, 1982, before the Deputy Registar of Chits, First zone, Margosa road, Malleshwaram, Banglore, for recovery of **Rs. 5,23,356/- (Rupees Five Lakhs Twenty Three Thousand Three Hundred and Fifty Six Only)** with intrest @24 p.annum And the Court Costs From the Opponents.

02. Whereas, it is brought to my notice by the disputant through an application filed under section 68(1) of the Chit fund act 1982, accompanied by an affidavit stating that the opponents No.01. Mr. Lokanath the Subsciber/ Guaranter of this chits and now she is contemplating to dispose off the immovable property belonging to her, as mentioned in the schedule hereunder, with an intention to delay or defeat the enforcement of execution of the award that is likely to be passed in the above dispute against him.

03. The ABJ conditional notice issued by RPAD to opponent No.01 to appear before this Hon'ble Court On **04/04/2026**, the ABJ Conditional Notice to Opponent No.01 is Not served. Therefore the opponents No.01 is hereby Summoned to appear in this Court in person on 24/04/2026, The Nominee of the Depuity Registrar of Chits, Sitting At 172, Suprabha Complex, 2nd Floor,, 1st G Cross, Near Sharada Colony Bus stop, 3rd Stage, Basaveshwaranagar, Bengaluru -560079 Without Fail Opponent to Take Notice that in default of Appearance the Dispute will be heard and Disposed Ex-Party and on Merits.

04. Further the opponent No.01 is hereby informed that if he desires to have this attachment raised, he shall furnish cash secutity to the extent of the dispute Claim by depositing the amount to the disputant company and producing the original reciept issued by them to this court on before **24/04/2026 at 3:00 PM** without fail for raising the attachment if they fail to do so within the stipulated period, this Conditional attachment shall be deemed to have confirmed and made absolute to the extent of the dispute claim as per the award.

SCHEDULE PROPERTY

All that piece and parcel of the Northern Portion Property no 25 and 26, Katha No.65, assessment No.65 Dasarahalli City Municipal presently under comes the limits of BBMP Hegganahalli Village, Mayura Nagara, 9th Cross Yashwanthpura Hobli, Bengaluru North Taluk, measuring East to West 40 Feet, and North to South 25 feet total1,800 sq ft. Sothern portion RCC Roofed House together with all rights, appurtenances whatsoever whether underneath or above the surface and bounded on the: **EAST BY:** 25 feet Road, **WEST BY:** Others Property, **NORTH BY:** Remaining Portion D Schedule 20X40 Property Belongs to M Gopinath, **SOUTH BY:** Remaining Property of Site No.26.

Given under my hand & seal of this office on Dated **04/04/2026** at Bangalore

Nominee of The Deputy Registrar of Chits, Ist Zone, Bangalore

BEFORE THE NOMINEE OF DEPUTY REGISTRAR OF CHITS, I ZONE, MARGOSA ROAD, MALLESWARAM, AT BANGALORE

Dispute No. DRB-1/ CFS/156/ 2025-2026

DISPUTANT: M/s. DHANALAKSHMI SRINIVASAN CHIT FUNDS (KAR) PVT. LTD.,
Registered Office at # 32, 2nd Floor, 1st Main 8th B Cross, Near Gayathri Ganapathi Temple. Yelahanka New Town, BENGALURU-560 064
Branch: BASAVESHWARANAGAR,
Rep. by its Foreman/ Manager,
Sri. RAJKUMAR.J

OPPONENTS: Mr. Lokanath and others

OPPONENT NO. 02

Mr. K S Ravi Kumar, S/o Siddagangaiah, No.17/5, 2nd Floor, 1st Main Road, 7th C Cross, Maruthi Nagar, Near Annamma Temple, andrahalli Main Road, Peenya 2nd Stage, Bangalore - 560091.

NOTICE OF CONDITIONAL ATTACHMENT OF IMMOVABLE PROPERTY OF OPPONENT NO. 02 UNDER SECTION 68 (1) OF THE CHIT FUNDS ACT, 1982. THROUGH PAPER PUBLICATION

01. WHEREAS, the dispuitant has field the above dispute U/S 64 (1) of the Chit fund Act, 1982, before the Deputy Registar of Chits, First zone, Margosa road, Malleshwaram, Banglore, for recovery of **Rs. 5,23,356/- (Rupees Five Lakhs Twenty Three Thousand Three Hundred and Fifty Six Only)** with intrest @24 p.annum And the Court Costs From the Opponents.

02. Whereas, it is brought to my notice by the disputant through an application filed under section 68(1) of the Chit fund act 1982, accompanied by an affidavit stating that the **opponents No.02. Mr. K.S.Ravikumar** the Subsciber/ Guaranter of this chits and now she is contemplating to dispose off the immovable property belonging to her, as mentioned in the schedule hereunder, with an intention to delay or defeat the enforcement of execution of the award that is likely to be passed in the above dispute against him.

03. The ABJ conditional notice issued by RPAD to opponent No.02 to appear before this Hon'ble Court On **04/04/2026**, the ABJ Conditional Notice to Opponent No.02 is Not served. Therefore the opponents No.02 is hereby Summoned to appear in this Court in person on 24/04/2026, The Nominee of the Depuity Registrar of Chits, Sitting At 172, Suprabha Complex, 2nd Floor,, 1st G Cross, Near Sharada Colony Bus stop, 3rd Stage, Basaveshwaranagar, Bengaluru -560079 Without Fail Opponent to Take Notice that in default of Appearance the Dispute will be heard and Disposed Ex-Party and on Merits.

04. Further the opponent No.02 is hereby informed that if he desires to have this attachment raised, he shall furnish cash secutity to the extent of the dispute Claim by depositing the amount to the disputant company and producing the original reciept issued by them to this court on before **24/04/2026 at 3:00 PM** without fail for raising the attachment if they fail to do so within the stipulated period, this Conditional attachment shall be deemed to have confirmed and made absolute to the extent of the dispute claim as per the award.

SCHEDULE PROPERTY

All that piece and parcel of the Site No.5, Hegganahalli Village assessment No. 77, BBMP ward No.77 situated at Hegganahalli Village, Yashwanthpura Hobli, Bengaluru Noth Taluk, measuring East to West North Portion 20 Feet, South Portion 20 feet and North South 40 feet total,800 sq ft. together with all rights, appurtenances whatsoever whether underneath or above the surface and bounded on the: EAST BY: Others Property, WEST BY: Remaining Portion of Same Property, NORTH BY: Road, SOUTH BY: Site No.15

Given under my hand & seal of this office on Dated 4/4/2026 at Bangalore

Nominee of The Deputy Registrar of Chits, Ist Zone, Bangalore

27 ಕೋಟಿ ರು. ಮೌಲ್ಯದ ಡ್ರಗ್ಸ್ ಜಪ್ತಿ

ಬೆಂಗಳೂರು: ನಗರದ ಕಾಲೇಜು ವಿದ್ಯಾರ್ಥಿಗಳನ್ನೇ ಗುರಿಯಾಗಿಸಿಕೊಂಡು ಮಾದಕ ವಸ್ತುಗಳನ್ನು ಮಾರಾಟ ಮಾಡುತ್ತಿದ್ದ ಅಂತಾರಾಜ್ಯ ಹಾಗೂ ಅಂತಾರಾಷ್ಟ್ರೀಯ ಡ್ರಗ್ಸ್ ಮಾಫಿಯಾವನ್ನು ನಗರ ಪೊಲೀಸರು ಭೇದಿಸಿದ್ದಾರೆ.

ಹೆಬ್ಬಗೋಡಿ, ಯಲಹಂಕ ಉಪನಗರ ಸೇರಿ ವಿವಿಧೆಡೆ ಕಾರ್ಯಾಚರಣೆ ನಡೆಸಿದ ಪೊಲೀಸರು ವಿದೇಶಿ ಪ್ರಜೆ ಸೇರಿದಂತೆ ಒಟ್ಟು 8 ಮಂದಿಯನ್ನು ಜೈಲಿಗಟ್ಟಿದ್ದಾರೆ. ಜತೆಗೆ, ಬರೋಬ್ಬರಿ 27.42 ಕೋಟಿ ರುಪಾಯಿ ಮಾರುಕಟ್ಟೆ ಮೌಲ್ಯದ ಡ್ರಗ್ಸ್ ಮತ್ತಿತರ ವಸ್ತುಗಳನ್ನು ವಶಪಡಿಸಿಕೊಳ್ಳುವಲ್ಲಿ ಯಶಸ್ವಿಯಾಗಿದ್ದಾರೆ.

ಬಂಧಿತ ಎಂಟು ಮಂದಿ ಆರೋಪಿಗಳನ್ನು ವಿಚಾರಣೆಗೆ ಒಳಪಡಿಸಿದಾಗ ವಿದ್ಯಾರ್ಥಿಗಳೇ ಈ ಜಾಲದ ಪ್ರಮುಖ ಗುರಿಯಾಗಿಸಿರುವ ಮಾಹಿತಿ ಬೆಳಕಿಗೆ ಬಂದಿದೆ. ಕಡಿಮೆ ಬೆಲೆಗೆ ಮಾದಕ ವಸ್ತುಗಳನ್ನು ಖರೀದಿಸಿ ತಂದು, ವಿದ್ಯಾರ್ಥಿಗಳಿಗೆ ಹೆಚ್ಚಿನ ಬೆಲೆಗೆ ಮಾರಾಟ ಮಾಡಿ ಹಣ ಮಾಡುತ್ತಿದ್ದರು. ವಶಪಡಿಸಿಕೊಂಡ ವಸ್ತುಗಳಲ್ಲಿ 12 ಕೆಜಿ 91 ಗ್ರಾಂ ಎಂಡಿಎಂಎ, 275 ಗ್ರಾಂ ಕೋಕೇನ್, 34 ಕೆಜಿ 802 ಗ್ರಾಂ ಗಾಂಜಾ ಸೇರಿದೆ. ಜತೆಗೆ 2.85 ಲಕ್ಷ ರು. ನಗದು, 40 ಗ್ರಾಂ ಚಿನ್ನಾಭರಣ, ಒಂದು ಕಾರು, ಎರಡು ದ್ವಿಚಕ್ರ ವಾಹನ ಹಾಗೂ ಎರಡು ಮೊಬೈಲ್ ಫೋನ್‌ಗಳನ್ನೂ ವಶಪಡಿಸಿಕೊಳ್ಳಲಾಗಿದೆ.

ಈ ಜಾಲದಲ್ಲಿ ಕೇವಲ ಸ್ಥಳೀಯರು ಮಾತ್ರವಲ್ಲದೆ, ವಿದೇಶಿ ಹಾಗೂ ಹೊರರಾಜ್ಯದ ಕೊಂಡಿಗಳು ಸೇರಿದ್ದು, ಈ ಬಗ್ಗೆ ಹೆಚ್ಚಿನ ಮಾಹಿತಿಯನ್ನು ಪೊಲೀಸರು ಕಲೆಹಾಕುತ್ತಿದ್ದಾಸರೆ. ಬಂಧಿತರಲ್ಲಿ ಒಬ್ಬ ವಿದೇಶಿ ಪ್ರಜೆ, ನಾಲ್ವರು ಹೊರರಾಜ್ಯದವರು ಮತ್ತು ಮೂವರು ಸ್ಥಳೀಯರಿದ್ದಾರೆ. ಶಾಲಾ ಕಾಲೇಜುಗಳು ಮತ್ತು ಜನನಿಬಿಡ ಪ್ರದೇಶಗಳಾದ ಹೆಬ್ಬಗೋಡಿ, ಯಲಹಂಕ ಉಪನಗರ, ಮೈಕೋ ಲೇಔಟ್, ಪರಪ್ಪನ ಅಗ್ರಹಾರ, ಬಾಗಲೂರು ಹಾಗೂ ಬಾಣಸವಾಡಿ ಪೊಲೀಸ್ ಠಾಣಾ ವ್ಯಾಪ್ತಿಗಳಲ್ಲಿ ಈ ದಾಳಿಗಳನ್ನು ನಡೆಸಲಾಗಿದೆ. ನಗರದ ಆಯಕಟ್ಟಿನ ಜಾಗಗಳಲ್ಲಿ ಎಂಡಿಎಂಎ, ಕೋಕೇನ್ ಮತ್ತು ಗಾಂಜಾ ಮಾರಾಟ ಮಾಡುತ್ತಿರುವ ಬಗ್ಗೆ ಲಭ್ಯವಾದ ಖಚಿತ ಮಾಹಿತಿಯ ಮೇರೆಗೆ ಪೊಲೀಸರು ಈ ಕಾರ್ಯಾಚರಣೆ ಕೈಗೊಂಡಿದ್ದರು.

ಮುಂದುವರಿದ ತನಿಖೆ

ಬಂಧಿತ ಎಂಟು ಆರೋಪಿಗಳನ್ನು ಸದ್ಯ ನ್ಯಾಯಾಂಗ ಬಂಧನಕ್ಕೆ ಒಪ್ಪಿಸಲಾಗಿದೆ. ಆದರೆ ಈ ಜಾಲದ ಹಿಂದಿರುವ 'ಬಿಗ್ ಫಿಶ್'ಗಳ ಪತ್ತೆ ಇನ್ನೂ ಬಾಕಿ ಇದೆ. ಆರೋಪಿಗಳಿಗೆ ಡ್ರಗ್ಸ್ ಪೂರೈಕೆ ಮಾಡುತ್ತಿದ್ದ ಮುಖ್ಯಸ್ಥರ ಪತ್ತೆಗಾಗಿ ತನಿಖೆ ತೀವ್ರಗೊಂಡಿದೆ ಎಂದು ಪೊಲೀಸ್ ಪ್ರಕಟಣೆ ತಿಳಿಸಿದೆ. ಈ ಕಾರ್ಯಾಚರಣೆಯು ಡಿಸಿಪಿಗಳಾದ ನಾರಾಯಣ್ ಎಂ, ಜಿ.ಕೆ. ಮಿಥುನ್ ಕುಮಾರ್, ಮೊಹಮ್ಮದ್ ಸುಜೀತ ಹಾಗೂ ಡಾ. ವಿಕ್ರಮ್ ಆಮಟೆ ಇದ್ದರು.

ಕೆನರಾ ಬ್ಯಾಂಕ್ Canara Bank
SyndicateBank
(ಭಾರತ ಸರ್ಕಾರದ ಒಂದು ಉದ್ಯಮ)
ಪ್ರಧಾನ ಕಛೇರಿ: ಬೆಂಗಳೂರು

ಎಆರ್‌ಎಂ–1 ಶಾಖೆ,
2ನೇ ಮಹಡಿ, ನಂ.86, ಸ್ಪೆನ್ಸರ್ ಟವರ್, ಎಂ.ಜಿ. ರಸ್ತೆ,
ಬೆಂಗಳೂರು–560001. ದೂ: 080–25310066
ಇ–ಮೇಲ್: cb2366@canarabank.com

ಹರಾಜು ಮಾರಾಟ ಪ್ರಕಟಣೆ

ಪ್ರೊವಿಜೊ ನಿಯಮ 8(6)ರ ಸೆಕ್ಯೂರಿಟಿ ಇಂಟರೆಸ್ಟ್ (ಎನ್‌ಫೋರ್ಸ್‌ಮೆಂಟ್) ನಿಯಮ 2002ರ ಸೆಕ್ಯೂರಿಟೈಜೇಷನ್ ಆಂಡ್ ರಿಕನ್‌ಸ್ಟ್ರಕ್ಷನ್ ಆಫ್ ಫೈನಾನ್ಷಿಯಲ್ ಅಸ್ಸೆಟ್ಸ್ ಆಂಡ್ ಎನ್‌ಫೋರ್ಸ್‌ಮೆಂಟ್ ಆಫ್ ಸೆಕ್ಯೂರಿಟಿ ಆಕ್ಟ್ 2002ರ ಅಡಿಯಲ್ಲಿ ಸ್ಥಿರಾಸ್ತಿಗಳ ಇ–ಹರಾಜು ಮಾರಾಟ

ಸಾಮಾನ್ಯವಾಗಿ ಸಾರ್ವಜನಿಕರಿಗೆ, ಸಾಲಗಾರರು ಮತ್ತು ಜಾಮೀನುದಾರರಿಗೆ ಈ ಸೂಚನೆ ಮೂಲಕ ತಿಳಿಸುವುದೇನೆಂದರೆ ಭದ್ರತಾ ಸಾಲದಾತರಿಗೆ ಈ ಕೆಳಗೆ ವಿವರಿಸಿದ ಅಡಮಾನಾದ/ವಿಧಿಸಿದ ಚರಾಸ್ತಿ/ಸ್ಥಿರಾಸ್ತಿಯನ್ನು ಅಧಿಕೃತ ಅಧಿಕಾರಿ, **ಎಆರ್‌ಎಂ–1 ಶಾಖೆ ಕೆನರಾ ಬ್ಯಾಂಕ್, ಬೆಂಗಳೂರು,** ರವರು ಸಾಂಕೇತಿಕವಾಗಿ ಸ್ವಾಧೀನಪಡಿಸಿಕೊಂಡಿರುತ್ತಾರೆ ಮತ್ತು **ದಿನಾಂಕ: 29.04.2026 ರಂದು (ಬೆಳಗ್ಗೆ 10.30 ರಿಂದ 11.30 ರವರೆಗೆ)** ಸ್ವತ್ತನ್ನು **"ಎಲ್ಲಿದೆಯೊ ಹಾಗೆ", "ಏನಿದೆಯೊ ಹಾಗೆ", "ಹೇಗಿದೆಯೋ ಹಾಗೆ"** ಆಧಾರದಲ್ಲಿ ಸಾಲ ವಸೂಲಾತಿಗಾಗಿ ಮಾರಾಟ ಮಾಡಲಾಗುವುದು. ಸಂದಾಯವಾಗತಕ್ಕ ಮೊಬಲಗು: **ರೂ. 90,83,593.15/–** (ರೂಪಾಯಿ ತೊಂಭತ್ತು ಲಕ್ಷದ ಎಂಭತ್ತಮೂರು ಸಾವಿರದ ಐದುನೂರ ತೊಂಭತ್ತಮೂರು ಮತ್ತು ಹದಿನೈದು ಪೈಸೆ ಮಾತ್ರ) ಜೊತೆಗೆ **ದಿನಾಂಕ: 01.04.2026** ರಿಂದ ಬಡ್ಡಿ ಇತರೆ ಖರ್ಚು ವೆಚ್ಚಗಳು ಚುಕ್ತಾ ಮಾಡುವುದಕ್ಕೆ ಋಣ ಬಾಧ್ಯವಾಗಿರುತ್ತದೆ. **ಕೆನರಾ ಬ್ಯಾಂಕ್, ಎಆರ್‌ಎಂ–1 ಶಾಖೆ, ಬೆಂಗಳೂರು** ರವರಿಂದ **ಸಾಲಗಾರರಾದ: (1) ವೀಣಾ ಲಕ್ಷ್ಮೀ ಪರಶುರಾಮನ್** D/o ಸಿ ಎಸ್ ಪರಶುರಾಮನ್, ನಂ.38, ಕಾಗಲ್ ನಗರ ರಸ್ತೆ ನಂ.2 ಜಮ್ಶೆಡ್‌ಪುರ, ಸೋನಾರಿ ಪೂರ್ವ ಸಿಂಗ್‌ಭೂಮ್ ಜಾರ್ಖಂಡ್ 831011. ಮತ್ತೊಂದು ವಿಳಾಸ : ಇ–406, 3ನೇ ಮಹಡಿ, ಇ ಬ್ಲಾಕ್ ಗಾರ್ಡನ್ ರೆಸಿಡೆನ್ಸಿ, ಸರ್ವೆ ನಂ. 108/3, ಕಚನಾಯಕನಹಳ್ಳಿ, ಜಿಗಣಿ ಹೋಬಳಿ, ಆನೇಕಲ್ ತಾಲ್ಲೂಕು–560099, ಇವರುಗಳಿಗೆ ಸಾಲವನ್ನು ನೀಡಿರುತ್ತದೆ.

ಅರ್ನೆಸ್ಟ್ ಹಣವನ್ನು **M/s PSB Alliance Private Limited (https://baanknet.com/)** ಪೋರ್ಟಲ್‌ನ ಇ–ವ್ಯಾಲೆಟ್ ಮೂಲಕ ನೇರವಾಗಿ ಅಥವಾ ಚಲನ್ ಅನ್ನು ರಚಿಸುವ ಮುಖಾಂತರ RTGS/NEFT ಮೂಲಕ ಖಾತೆಯ ವಿವರಗಳಲ್ಲಿ ನಮೂದಿಸಿರುವ ಖಾತೆ ವಿವರಗಳ ಪ್ರಕಾರ **ದಿನಾಂಕ: 28.04.2026 ರ ಸಂಜೆ 5.00 ಗಂಟೆಯೊಳಗೆ** ಠೇವಣಿ ಮಾಡಬೇಕು.

(₹. ಲಕ್ಷಗಳಲ್ಲಿ)

ಲಾಟ್ ನಂ	ಸ್ಥಿರಾಸ್ತಿಗಳ ವಿವರ	ಮೀಸಲು ಬೆಲೆ	ಇಎಂಡಿ ಮೊತ್ತ	ಬಿಡ್‌ನಲ್ಲಿ ಹೆಚ್ಚುತ್ತಿರುವ ಮೌಲ್ಯ
1	ಎಂಡಿಟಿಡಿ ಎಲ್ಲಾ ಭಾಗ ಮತ್ತು ವಿಭಾಗಗಳನ್ನೊಳಗೊಂಡಿರುವ ಸ್ವತ್ತಿನ ಸಂಯೋಜಿತ ಒಂದು ಅಪಾರ್ಟ್‌ಮೆಂಟ್ ಯೂನಿಟ್‌ನ ಫ್ಲಾಟ್ ನಂ. ಇ–406, 3ನೇ ಮಹಡಿ, ಇ ಬ್ಲಾಕ್, "ಗಾರ್ಡನ್ ರೆಸಿಡೆನ್ಸಿ" ಎಂದು ಕರೆಯಲ್ಪಡುವ ಅಪಾರ್ಟ್‌ಮೆಂಟ್‌ನ ಸರ್ವೆ ನಂ. 108/3, (ಹಿಂದಿನ ಭಾಗದ ಸರ್ವೆ ನಂ. 108/2), ಸ್ವತ್ತಿನ ನಂ. 522/108/3, ಆರ್‌ಡಿಪಿಆರ್ ನಂ. 150200103200820885, ಈ ಆಸ್ತಿಯು ಕಚನಾಯಕನಹಳ್ಳಿ ಗ್ರಾಮ, ಹೆಣ್ಣಾಗರ ಗ್ರಾಮ ಪಂಚಾಯತ್, ಜಿಗಣಿ ಹೋಬಳಿ, ಆನೇಕಲ್ ತಾಲ್ಲೂಕು, ಬೆಂಗಳೂರು ಜಿಲ್ಲೆ–560099 ರಲ್ಲಿದ್ದು, ಸ್ವತ್ತಿನ ಸೂಪರ್ ಬಿಲ್ಟ್ ಅಪ್ ಪ್ರದೇಶ 1089 ಚದರ ಅಡಿ. ಆಸ್ತಿಯು ಶ್ರೀಮತಿ. ವೀಣಾ ಲಕ್ಷ್ಮಿ ಪರಶುರಾಮನ್ ರವರ ಹೆಸರಿನಲ್ಲಿದೆ. ಚಕ್ಕುಬಂದಿ : ಪೂರ್ವಕ್ಕೆ : 405 ಮತ್ತು ನಂತರ ಲಿಫ್ಟ್, ಪಶ್ಚಿಮಕ್ಕೆ : ಆಕಾಶಕ್ಕೆ ತೆರೆದಿರುವ ಅಪಾರ್ಟ್‌ಮೆಂಟ್ ಕಟ್ಟಡ, ಉತ್ತರಕ್ಕೆ : ಕಾಮನ್ ಕಾರಿಡಾರ್, ದಕ್ಷಿಣಕ್ಕೆ : ಆಕಾಶಕ್ಕೆ ತೆರೆದಿರುವ ಅಪಾರ್ಟ್‌ಮೆಂಟ್ ಕಟ್ಟಡದ ಪ್ರದೇಶ. **Coordinates of the property Latitude- 12.80502 Longitude- 77.67693**	₹.48.00	₹.4.80	₹. 1.00

ಎನ್ಕಂಬರೆನ್ಸ್ ಯಾವುದಾದರೂ ಇದ್ದಲ್ಲಿ : ಬ್ಯಾಂಕಿನ ಗಮನಕ್ಕೆ ಬಂದಿಲ್ಲ.

ಮಾರಾಟದ ವಿವರವಾದ ನಿಯಮಗಳು ಮತ್ತು ಷರತ್ತುಗಳಿಗಾಗಿ, 'ಇ–ಹರಾಜು'ಲಿಂಕ್ ಪ್ರೋವೈಡೆಡ್ ಕೆನರಾ ಬ್ಯಾಂಕ್‌ರವರ ವೆಬ್‌ಸೈಟ್: **(www.canarabank.com)** ನಲ್ಲಿ ಒದಗಿಸಲಾಗಿದೆ ಅಥವಾ **M/s PSB Alliance Private Limited (https://baanknet.com/)** ಪೋರ್ಟಲ್‌ನ ಇ–ವ್ಯಾಲೆಟ್ **ಮತ್ತು ಮುಖ್ಯ ಪ್ರಬಂಧಕರು, ಕೆನರಾ ಬ್ಯಾಂಕ್, ಎಆರ್‌ಎಂ–I ಶಾಖೆ, ಬೆಂಗಳೂರು** ಮೊಬೈಲ್ ಸಂಖ್ಯೆ: **9901642631 ಮತ್ತು 9483544116** ಯಾವುದೇ ಕೆಲಸದ ದಿನದಂದು ಕಛೇರಿ ಸಮಯದಲ್ಲಿ ಸಂಪರ್ಕಿಸಬಹುದು.

ದಿನಾಂಕ : 07.04.2026
ಸ್ಥಳ : ಬೆಂಗಳೂರು

ಸಹಿ/– ಅಧಿಕೃತ ಅಧಿಕಾರಿ,
ಕೆನರಾ ಬ್ಯಾಂಕ್

SHADOWFAX
Think ahead!

ಶ್ಯಾಡೋಫ್ಯಾಕ್ಸ್ ಟೆಕ್ನಾಲಜೀಸ್ ಲಿಮಿಟೆಡ್

ಸಿಐಎನ್: U72300KA2015PLC150324
ನೋಂದಾಯಿತ ಕಚೇರಿ: 3ನೇ ಮಹಡಿ, ಶಿಲ್ಪಿತ ಟೆಕ್ ಪಾರ್ಕ್, ಸರ್ವೆ ನಂ. 55/3 & 55/4, ಹೊರವರ್ತುಲ ರಸ್ತೆ, ದೇವರಬೀಸನಹಳ್ಳಿ ವಿಲೇಜ್, ಬೆಳ್ಳಂದೂರು, ವರ್ತೂರು ಹೋಬಳಿ, ಬೆಂಗಳೂರು– 560103, ಕರ್ನಾಟಕ, ಭಾರತ.
ದೂ.: +91 80 64525653; ಇಮೇಲ್: investors@shadowfax.in ವೆಬ್‌ಸೈಟ್: www.shadowfax.in

ಅಂಚೆ ಮತದಾನ ಪ್ರಕಟಣೆ

ಶ್ಯಾಡೋಫ್ಯಾಕ್ಸ್ ಟೆಕ್ನಾಲಜೀಸ್ ಲಿಮಿಟೆಡ್ (**"ಕಂಪನಿ"**) ಸದಸ್ಯರಿಗೆ ಈ ಮೂಲಕ ತಿಳಿಸುವುದೇನೆಂದರೆ, ಕಂಪನಿಗಳ ಕಾಯ್ದೆ, 2013ರ (**"ಕಾಯ್ದೆ"**) ಸೆಕ್ಷನ್ 108, 110 ಮತ್ತು ಇತರ ಅನ್ವಯವಾಗುವ ನಿಬಂಧನೆಗಳ ಪ್ರಕಾರ, ಯಾವುದಾದರೂ ಇದ್ದಲ್ಲಿ ಹಾಗೂ ತಿದ್ದುಪಡಿ ಮಾಡಿದಂತೆ, ಕಂಪನಿಗಳ (ನಿರ್ವಹಣೆ ಮತ್ತು ಆಡಳಿತ) ನಿಯಮಗಳು, 2014ರ ಕಾಯ್ದೆಯ ನಿಯಮ 20 ಮತ್ತು ನಿಯಮ 22ನ್ನು ಓದಿಕೊಂಡಂತೆ (**"ನಿಯಮಗಳು"**), ತಿದ್ದುಪಡಿ ಮಾಡಿದಂತೆ, ಇನ್ಸ್ಟಿಟ್ಯೂಟ್ ಆಫ್ ಕಂಪನಿ ಸೆಕ್ರೆಟರೀಸ್ ಆಫ್ ಇಂಡಿಯಾ ಹೊರಡಿಸಿದ ಸಾಮಾನ್ಯ ಸಭೆಗಳ ಮೇಲಿನ ಕಾರ್ಯದರ್ಶಿ ಮಾನದಂಡ (**"ಎಸ್‌ಎಸ್–2"**), ಸೆಕ್ಯುರಿಟೀಸ್ ಮತ್ತು ಎಕ್ಸ್‌ಚೇಂಜ್ ಬೋರ್ಡ್ ಆಫ್ ಇಂಡಿಯಾ (ಲಿಸ್ಟಿಂಗ್ ಬಾಧ್ಯತೆಗಳು ಮತ್ತು ಬಹಿರಂಗಪಡಿಸುವಿಕೆಯ ಅಗತ್ಯತೆಗಳು) ನಿಯಮಗಳು, 2015ರ ನಿಯಮ 44 (**"ಸೆಬಿ ಲಿಸ್ಟಿಂಗ್ ರೆಗ್ಯುಲೇಷನ್ಸ್"**) ಯಾವುದೇ ಶಾಸನಬದ್ಧ ಮಾರ್ಪಾಡು(ಗಳು), ಪರ್ಯಾಯ(ಗಳು) ಅಥವಾ ಮರು–ಜಾರಿಗೊಳಿಸುವಿಕೆ(ಗಳು) ಸೇರಿದಂತೆ, ಕಾರ್ಪೊರೇಟ್ ವ್ಯವಹಾರಗಳ ಸಚಿವಾಲಯ (**"ಎಂಸಿಎ"**) ಹೊರಡಿಸಿದ ದಿನಾಂಕ ಸೆಪ್ಟೆಂಬರ್ 22, 2025ರ ಸಾಮಾನ್ಯ ಸುತ್ತೋಲೆ, ಈ ನಿಟ್ಟಿನಲ್ಲಿ ಕಾಲಕಾಲಕ್ಕೆ ಹೊರಡಿಸಲಾದ ಇತರ ಸಂಬಂಧಿತ ಸುತ್ತೋಲೆಗಳೊಂದಿಗೆ ಓದಿಕೊಂಡಂತೆ (**"ಎಂಸಿಎ ಸುತ್ತೋಲೆಗಳು"**) ಮತ್ತು ಯಾವುದೇ ಇತರೆ ಅನ್ವಯವಾಗುವ ಕಾನೂನು, ನಿಯಮಗಳು ಮತ್ತು ನಿಬಂಧನೆಗಳ ಅಡಿಯಲ್ಲಿ, ಕಂಪನಿಯು ಕೆಳಗೆ ಸೇರಿಸಲಾದ ನಿರ್ಣಯಗಳಿಗೆ ಸದಸ್ಯರ ಅನುಮೋದನೆಯನ್ನು ಅಂಚೆ ಮತಪತ್ರದ ಮುಖೇನ ವಿದ್ಯುನ್ಮಾನ ವಿಧಾನದ (ಅಂದರೆ ರಿಮೋಟ್ ಇ–ಮತದಾನ) ಮೂಲಕ ಮಾತ್ರ ಪಡೆಯಲಾಗುತ್ತದೆ.

ಕ್ರ. ಸಂ.	ವಿವರಗಳು	ನಿರ್ಣಯಗಳ ವಿಧಾನ
1	ಶ್ಯಾಡೋಫ್ಯಾಕ್ಸ್ ಟೆಕ್ನಾಲಜೀಸ್ ಲಿಮಿಟೆಡ್ ಉದ್ಯೋಗಿ ಸ್ಟಾಕ್ ಆಯ್ಕೆ ಯೋಜನೆ – 2016 (SFX ESOP 2016) ಗೆ ತಿದ್ದುಪಡಿ ಮತ್ತು ಮಂಜೂರಾತಿಯ ಅನುಮೋದನೆ.	ವಿಶೇಷ ನಿರ್ಣಯ
2	ಶ್ಯಾಡೋಫ್ಯಾಕ್ಸ್ ಟೆಕ್ನಾಲಜೀಸ್ ಲಿಮಿಟೆಡ್ ಉದ್ಯೋಗಿ ಸ್ಟಾಕ್ ಆಯ್ಕೆ ಯೋಜನೆ – 2016 (SFX ESOP 2016) ನ ಪ್ರಯೋಜನಗಳನ್ನು ಅಂಗಸಂಸ್ಥೆ ಕಂಪನಿಗಳ ಉದ್ಯೋಗಿಗಳಿಗೆ ವಿಸ್ತರಿಸಲು ಅನುಮೋದನೆ.	ವಿಶೇಷ ನಿರ್ಣಯ

ಮೇಲೆ ತಿಳಿಸಲಾದ ನಿಬಂಧನೆಗಳಿಗೆ ಅನುಸಾರವಾಗಿ, ಕಂಪನಿಯು ವಿವರಣಾತ್ಮಕ ಹೇಳಿಕೆಯೊಂದಿಗೆ ಅಂಚೆ ಮತಪತ್ರ ಸೂಚನೆಯ ವಿದ್ಯುನ್ಮಾನ ಪ್ರತಿಗಳನ್ನು ವಿದ್ಯುನ್ಮಾನದ ಮೂಲಕ ನ್ಯಾಷನಲ್ ಸೆಕ್ಯುರಿಟೀಸ್ ಡಿಪಾಸಿಟರಿ ಲಿಮಿಟೆಡ್ (**"ಎನ್‌ಎಸ್‌ಡಿಎಲ್"**) ಮತ್ತು ಸೆಂಟ್ರಲ್ ಡಿಪಾಸಿಟರಿ ಸರ್ವೀಸಸ್ (ಇಂಡಿಯಾ) ಲಿಮಿಟೆಡ್ (**"ಸಿಡಿಎಸ್‌ಎಲ್"**) ನಿಂದ ಸ್ವೀಕರಿಸಲಾದ ಸದಸ್ಯರ ನೋಂದಣಿ/ಫಲಾನುಭವ ಮಾಲೀಕರ ಪಟ್ಟಿಯಲ್ಲಿ ಹೆಸರು ಕಾಣಿಸಿಕೊಂಡಿರುವ ಮತ್ತು ಅವರ ಇ–ಮೇಲ್ ಐಡಿಗಳನ್ನು ಡೆಪಾಸಿಟರೀಸ್‌ರವರೊಂದಿಗೆ ನೋಂದಾಯಿಸಿಕೊಂಡಿರುವ ಸದಸ್ಯರಿಗೆ ರವಾನಿಸುವ ಕಾರ್ಯವನ್ನು ಕಂಪನಿಯು ಮಂಗಳವಾರ, ಏಪ್ರಿಲ್ 07, 2026 ರಂದು ಪೂರ್ಣಗೊಳಿಸಿದೆ. ಎಂಸಿಎ ಸುತ್ತೋಲೆಗಳಲ್ಲಿ ಒದಗಿಸಲಾದ ವಿನಾಯಿತಿಗೆ ಅನುಗುಣವಾಗಿ ಅಂಚೆ ಮತಪತ್ರ ಸೂಚನೆಯ ಭೌತಿಕ ಪ್ರತಿಗಳು, ಅಂಚೆ ಮತಪತ್ರ ನಮೂನೆಗಳು ಮತ್ತು ಪೂರ್ವ–ಪಾವತಿಸಿದ ವ್ಯವಹಾರ ಪ್ರತ್ಯುತ್ತರ ಲಕೋಟೆಗಳನ್ನು ಅಂಚೆ ಮತಪತ್ರದ ಉದ್ದೇಶಕ್ಕಾಗಿ ಸದಸ್ಯರಿಗೆ ಕಳುಹಿಸಲಾಗುವುದಿಲ್ಲ, ಸದಸ್ಯರು ರಿಮೋಟ್ ಇ–ಮತದಾನದ ಮೂಲಕ ಮಾತ್ರ ತಮ್ಮ ಒಪ್ಪಿಗೆ (ಪರ) ಅಥವಾ ಭಿನ್ನಾಭಿಪ್ರಾಯವನ್ನು (ವಿರುದ್ಧ) ಒದಗಿಸಲು ವಿನಂತಿಸಲಾಗಿದೆ.

ಸೂಚನೆಯು ಕಂಪನಿಯ ವೆಬ್‌ಸೈಟ್ www.shadowfax.in ನಲ್ಲಿ ಮತ್ತು ಸ್ಟಾಕ್ ಎಕ್ಸ್‌ಚೇಂಜ್‌ಗಳು ಅಂದರೆ ಬಿಎಸ್‌ಸಿ ಲಿಮಿಟೆಡ್ ಮತ್ತು ನ್ಯಾಷನಲ್ ಸ್ಟಾಕ್ ಎಕ್ಸ್‌ಚೇಂಜ್ ಆಫ್ ಇಂಡಿಯಾ ಲಿಮಿಟೆಡ್‌ನ ವೆಬ್‌ಸೈಟ್ www.bseindia.com ಮತ್ತು www.nseindia.com ನಲ್ಲಿ ಮತ್ತು ಕೆಫಿನ್ ಟೆಕ್ನಾಲಜೀಸ್ ಲಿಮಿಟೆಡ್ (**"ಕೆಫಿನ್‌ಟೆಕ್"**) ನ https://evoting.kfintech.com ನಲ್ಲಿಯೂ ಸಹ ಲಭ್ಯವಿರುತ್ತದೆ. ಕಾಯಿದೆಯ ಸೆಕ್ಷನ್ 108, 110ರ ನಿಬಂಧನೆಗಳು ಜೊತೆಗೆ ತಿದ್ದುಪಡಿಯಾದ ನಿಯಮಗಳನ್ನು ಓದಿಕೊಂಡಂತೆ ಮತ್ತು ಸೆಬಿ ಲಿಸ್ಟಿಂಗ್ ರೆಗ್ಯುಲೇಷನ್ಸ್‌ನ ನಿಯಮ 44ರ ತಿದ್ದುಪಡಿಗಳಿಗೆ ಅನುಸಾರವಾಗಿ, ಕಂಪನಿಯು ಸದಸ್ಯರಿಗೆ ಕೆಫಿನ್‌ಟೆಕ್ ಒದಗಿಸಿದ ರಿಮೋಟ್ ಇ–ಮತದಾನ ಪ್ಲಾಟ್‌ಫಾರ್ಮ್‌ನಲ್ಲಿ ಮಾತ್ರ ಇ–ಮತದಾನ ಮೂಲಕ ವಿದ್ಯುನ್ಮಾನವಾಗಿ ತಮ್ಮ ಮತಗಳನ್ನು ಚಲಾಯಿಸುವ ಸೌಲಭ್ಯವನ್ನು ಒದಗಿಸಿದೆ. ರಿಮೋಟ್ ಇ–ಮತದಾನದ ಮೂಲಕ ಮತ ಚಲಾಯಿಸಲು ಲಾಗಿನ್ ರುಜುವಾತುಗಳನ್ನು ಸದಸ್ಯರಿಗೆ ಕಳುಹಿಸಲಾದ ನೋಟಿಸ್‌ನ ಟಿಪ್ಪಣಿಗಳ ಭಾಗದಲ್ಲಿ ಉಲ್ಲೇಖಿಸಲಾಗಿದೆ. ರಿಮೋಟ್ ಇ–ಮತದಾನದ ಮೂಲಕ ಮತ ಚಲಾಯಿಸಲು ವಿವರವಾದ ಕಾರ್ಯವಿಧಾನವನ್ನು ಸೂಚನೆಯಲ್ಲಿ ಒದಗಿಸಲಾಗಿದೆ.

ಇ–ಮತದಾನ ಸೌಲಭ್ಯವು ಈ ಕೆಳಗಿನ ಅವಧಿಯಲ್ಲಿ ಮಾತ್ರ ಲಭ್ಯವಿರುತ್ತದೆ:

ಇ–ಮತದಾನ ಆರಂಭದ ದಿನ, ದಿನಾಂಕ ಮತ್ತು ಸಮಯ	ಬುಧವಾರ, 08ನೇ ಏಪ್ರಿಲ್, 2026ರ ಬೆಳಿಗ್ಗೆ 9:00 ಗಂಟೆ (ಐಎಸ್‌ಟಿ) ಯಿಂದ
ಇ–ಮತದಾನ ಮುಕ್ತಾಯ ದಿನ, ದಿನಾಂಕ ಮತ್ತು ಸಮಯ	ಗುರುವಾರ, 07ನೇ ಮೇ, 2026ರ ಸಂಜೆ 5:00 ಗಂಟೆ (ಐಎಸ್‌ಟಿ) ವರೆಗೆ

ಸದರಿ ದಿನಾಂಕ ಮತ್ತು ಸಮಯವನ್ನು ಮೀರಿ ಇ–ಮತದಾನವನ್ನು ಅನುಮತಿಸಲಾಗುವುದಿಲ್ಲ ಮತ್ತು ನಂತರ ಇ–ಮತದಾನ ಮಾಡ್ಯೂಲ್ ಅನ್ನು ನಿಷ್ಕ್ರಿಯಗೊಳಿಸಲಾಗುತ್ತದೆ.

ಅಂಚೆ ಮತಪತ್ರದ ಫಲಿತಾಂಶವನ್ನು ನಿಗದಿತ ಅವಧಿಯೊಳಗೆ ಘೋಷಿಸಲಾಗುತ್ತದೆ ಮತ್ತು ಪರಿಶೀಲಕರ ವರದಿಯೊಂದಿಗೆ ಕಂಪನಿಯ ವೆಬ್‌ಸೈಟ್ www.shadowfax.in, ಸ್ಟಾಕ್ ಎಕ್ಸ್‌ಚೇಂಜ್‌ಗಳ ವೆಬ್‌ಸೈಟ್ ಅಂದರೆ, ಬಿಎಸ್‌ಇ ಲಿಮಿಟೆಡ್ ಮತ್ತು ನ್ಯಾಷನಲ್ ಸ್ಟಾಕ್ ಎಕ್ಸ್‌ಚೇಂಜ್ ಆಫ್ ಇಂಡಿಯಾ ಲಿಮಿಟೆಡ್‌ನ ವೆಬ್‌ಸೈಟ್ www.bseindia.com ಮತ್ತು www.nseindia.com ನಲ್ಲಿ ಕ್ರಮವಾಗಿ ಪ್ರಕಟಣೆ ಮಾಡಲಾಗುತ್ತದೆ.

ಇ–ಮತದಾನಕ್ಕೆ ಸಂಬಂಧಿಸಿದ ಯಾವುದೇ ಪ್ರಶ್ನೆಗಳಿದ್ದಲ್ಲಿ, ಸದಸ್ಯರು ಕೆಫಿನ್‌ಟೆಕ್ ವೆಬ್‌ಸೈಟ್ https://evoting.kfintech.com ನಲ್ಲಿ ಲಭ್ಯವಿರುವ ಸಹಾಯ ಮತ್ತು ಎಫ್‌ಎಕ್ಯೂ ವಿಭಾಗವನ್ನು ವೀಕ್ಷಿಸಬಹುದು. ಇ–ಮತದಾನಕ್ಕೆ ಸಂಬಂಧಿಸಿದ ಯಾವುದೇ ಕುಂದು ಕೊರತೆಗಳಿಗಾಗಿ, ದಯವಿಟ್ಟು ಶ್ರೀ ಶ್ಯಾಮ್ ಕುಮಾರ್, ಹಿರಿಯ ವ್ಯವಸ್ಥಾಪಕರು, ಕೆಫಿನ್ ಟೆಕ್ನಾಲಜೀಸ್ ಲಿಮಿಟೆಡ್, (ಯೂನಿಟ್: ಶ್ಯಾಡೋಫ್ಯಾಕ್ಸ್ ಟೆಕ್ನಾಲಜೀಸ್ ಲಿಮಿಟೆಡ್), ಸೆಲೆನಿಯಮ್ ಬಿಲ್ಡಿಂಗ್, ಟವರ್–ಬಿ, ಪ್ಲಾಟ್ ಸಂಖ್ಯೆ 31 & 32, ಫೈನಾನ್ಷಿಯಲ್ ಡಿಸ್ಟ್ರಿಕ್ಟ್, ನಾನಕ್ರಾಮ್‌ಗುಡ, ಸೆರಿಲಿಂಗಂಪಲ್ಲಿ, ಹೈದರಾಬಾದ್, ರಂಗಾರೆಡ್ಡಿ, ತೆಲಂಗಾಣ, ಭಾರತ–500032, ಇಮೇಲ್ ಐಡಿ: einward.ris@kfintech.com; evoting@kfintech.com ಅಥವಾ 1800 309 4001 (ಟೋಲ್ ಫ್ರೀ) ನಲ್ಲಿ ಕೆಫಿನ್ ಟೆಕ್ನಾಲಜೀಸ್ ಲಿಮಿಟೆಡ್‌ಗೆ ಸಂಪರ್ಕಿಸಬಹುದು.

ಸದಸ್ಯರು ಸೂಚನೆಯಲ್ಲಿ ನಿಗದಿಪಡಿಸಿದ ಎಲ್ಲಾ ಟಿಪ್ಪಣಿಗಳನ್ನು ಮತ್ತು ನಿರ್ದಿಷ್ಟವಾಗಿ ರಿಮೋಟ್ ಇ–ಮತದಾನ ಮೂಲಕ ಮತ ಚಲಾಯಿಸುವ ವಿಧಾನವನ್ನು ಎಚ್ಚರಿಕೆಯಿಂದ ಓದಲು ವಿನಂತಿಸಲಾಗಿದೆ. ಸೂಚನೆಯಲ್ಲಿ ವಿವರಿಸಲಾದ ಇ–ಮತದಾನಕ್ಕೆ ಸಂಬಂಧಿಸಿದ ಸೂಚನೆಗಳನ್ನು ಸದಸ್ಯರು ಎಚ್ಚರಿಕೆಯಿಂದ ಓದಲು ವಿನಂತಿಸಲಾಗಿದೆ.

ತಮ್ಮ ಇ–ಮೇಲ್ ಐಡಿಯನ್ನು ನೋಂದಾಯಿಸದ ಡಿಮೆಟೀರಿಯಲೈಸ್ಡ್ ವಿಧಾನದಲ್ಲಿ ಷೇರುಗಳನ್ನು ಹೊಂದಿರುವ ಸದಸ್ಯರು ತಮ್ಮ ಸಂಬಂಧಿತ ಡೆಪಾಸಿಟರೀ ಪಾರ್ಟಿಸಿಪೆಂಟ್ಸ್ ರವರೊಂದಿಗೆ ನೋಂದಾಯಿಸಲು / ನವೀಕರಿಸಲು ವಿನಂತಿಸಲಾಗಿದೆ.

ಈ ಅವಧಿಯಲ್ಲಿ, ಶುಕ್ರವಾರ, ಏಪ್ರಿಲ್ 03, 2026ರಂದು ಕಟ್–ಆಫ್ ದಿನಾಂಕದಂತೆ ಷೇರುಗಳನ್ನು ಹೊಂದಿರುವ ಕಂಪನಿಯ ಸದಸ್ಯರು ರಿಮೋಟ್ ಇ–ಮತದಾನದ ಮೂಲಕ ತಮ್ಮ ಮತ ಚಲಾಯಿಸಬಹುದು. ಇ–ಮತದಾನದ ಮುಕ್ತಾಯದ ದಿನಾಂಕದ ನಂತರ ಸದಸ್ಯರು ಮತ ಚಲಾಯಿಸಲು ಸಾಧ್ಯವಾಗುವುದಿಲ್ಲ. ಒಮ್ಮೆ ನಿರ್ಣಯದ ಮೇಲೆ ಮತ ಚಲಾಯಿಸಿದ ನಂತರ, ಸದಸ್ಯರು ಅದನ್ನು ನಂತರ ಬದಲಾಯಿಸಲು ಅಥವಾ ಮತ್ತೆ ಮತ ಚಲಾಯಿಸಲು ಅನುಮತಿಸಲಾಗುವುದಿಲ್ಲ. ಸದಸ್ಯರ ಮತದಾನದ ಹಕ್ಕುಗಳು ಕಟ್–ಆಫ್ ದಿನಾಂಕದಂದು ಅಂದರೆ ಶುಕ್ರವಾರ, ಏಪ್ರಿಲ್ 03, 2026ರಂದು ಕಂಪನಿಯ ಪಾವತಿಸಿದ ಈಕ್ವಿಟಿ ಷೇರು ಬಂಡವಾಳದ ಅನುಪಾತದಲ್ಲಿರುತ್ತದೆ. ಕಟ್–ಆಫ್ ದಿನಾಂಕದಂದು ಸದಸ್ಯರಲ್ಲದ ವ್ಯಕ್ತಿಯು ಈ ಸೂಚನೆಯನ್ನು ಮಾಹಿತಿಯ ಉದ್ದೇಶಕ್ಕಾಗಿ ಮಾತ್ರ ಪರಿಗಣಿಸಬೇಕು.

**ನಿರ್ದೇಶಕರ ಮಂಡಳಿಯ ಆದೇಶದ ಮೇರೆಗೆ
ಶ್ಯಾಡೋಫ್ಯಾಕ್ಸ್ ಟೆಕ್ನಾಲಜೀಸ್ ಲಿಮಿಟೆಡ್ ಪರವಾಗಿ
ಸಹಿ/–
ಕೃಷ್ಣಕಾಂತ್ ವೆಂಕಟ ಗಂಗಾವರಪು
ಕಂಪನಿ ಕಾರ್ಯದರ್ಶಿ & ಕಂಪ್ಲೈನ್ಸ್ ಅಧಿಕಾರಿ**
M. No.: A17291

**ಸ್ಥಳ : ಬೆಂಗಳೂರು
ದಿನಾಂಕ : ಏಪ್ರಿಲ್ 07, 2026**

ಡಿಜೆ ಹಳ್ಳಿಯಲ್ಲಿ ಅಗ್ನಿ ಅವಘಡ: 6 ಹಸು ಸಾವು

ಬೆಂಗಳೂರು: ಪ್ಲೈವುಡ್ ಅಂಗಡಿಯೊಂದರಲ್ಲಿ ಸೋಮವಾರ ತಡರಾತ್ರಿ ಕಾಣಿಸಿಕೊಂಡ ಬೆಂಕಿಯು ದನಗಳ ಕೊಟ್ಟಿಗೆಗೆ ವ್ಯಾಪಿಸಿದ ಪರಿಣಾಮ ಆರು ಹಸುಗಳು ಸಾವನ್ನಪ್ಪಿರುವ ದಾರುಣ ಘಟನೆ ಡಿ.ಜೆ. ಹಳ್ಳಿ ಪೊಲೀಸ್ ಠಾಣಾ ವ್ಯಾಪ್ತಿಯ ಶಾಂಪುರ ರಸ್ತೆಯಲ್ಲಿ ನಡೆದಿದೆ. ಸೋಮವಾರ ತಡರಾತ್ರಿ 1:30ರ ಸುಮಾರಿಗೆ ಏಕಾಏಕಿ ಬೆಂಕಿ ಕಾಣಿಸಿಕೊಂಡಿದೆ. ನೋಡ ನೋಡುತ್ತಿದ್ದಂತೆ ಬೆಂಕಿ ಜ್ವಾಲೆ ಹೊತ್ತಿ ಉರಿದಿದೆ. ಅಂಗಡಿ ಪಕ್ಕದಲ್ಲಿರುವ ಹಸುವಿನ ಶೆಡ್‌ಗೆ ಅಗ್ನಿ ಕ್ಷಣಾರ್ಧದಲ್ಲಿ ವ್ಯಾಪಿಸಿದ ಪರಿಣಾಮ ಆರು ಹಸುಗಳು ಬೆಂಕಿಗಾಹುತಿಯಾಗಿವೆ. ಶೆಡ್‌ನಲ್ಲಿದ್ದ ಇತರೆ ಹಸುಗಳು ಗಂಭೀರವಾಗಿ ಗಾಯಗೊಂಡಿದ್ದು, ಪಶು ವೈದ್ಯರು ಚಿಕಿತ್ಸೆ ನೀಡುತ್ತಿದ್ದಾರೆ ಎಂದು ಪೊಲೀಸರು ತಿಳಿಸಿದ್ದಾರೆ.

ಶಾಂಪುರ ರಸ್ತೆಯ ಮುನೇಶ್ವರ ನಗರದಲ್ಲಿ ಹಲವು ವರ್ಷಗಳಿಂದ ಅಹ್ಮದ್ ಎಂಬುವರು ಪ್ಲೈವುಡ್ ಅಂಗಡಿ ಇಟ್ಟುಕೊಂಡಿದ್ದರು. ಎಂದಿನಂತೆ ಕೆಲಸ ಮುಗಿಸಿ ಅಂಗಡಿಗೆ ಬೀಗ ಹಾಕಿ ಮನೆಗೆ ತೆರಳಿದ್ದರು. ತಡರಾತ್ರಿ ಅಂಗಡಿಯಲ್ಲಿ ಏಕಾಏಕಿ ಬೆಂಕಿ ಕಾಣಿಸಿಕೊಂಡಿದ್ದು, ಕ್ಷಣಾರ್ಧದಲ್ಲಿ ಅಂಗಡಿಯಲ್ಲಿದ್ದ ಪ್ಲೈವುಡ್ ಸೇರಿದಂತೆ ಪೀಠೋಪಕರಣಕ್ಕೆ ಬೆಂಕಿ ತಗುಲಿದೆ. ಅಂಗಡಿ ಮುಂದೆ ನಿಂತಿದ್ದ ಟಾಟಾ ಏಸ್ ವಾಹನ ಹಾಗೂ ನಾಲ್ಕು ದ್ವಿಚಕ್ರವಾಹನಗಳಿಗೆ ಬೆಂಕಿ ಕಿಡಿ ವ್ಯಾಪಿಸಿ ಸಂಪೂರ್ಣ ಹಾನಿಯಾಗಿವೆ. ಅಲ್ಲದೆ ಪಕ್ಕದ ಮನೆಯ ಬಾಗಿಲು, ಕಿಟಕಿ, ಟಿವಿ ಸೇರಿದಂತೆ ಇತರೆ ಗೃಹಯೋಪಯೋಗಿ ವಸ್ತುಗಳಿಗೂ ಬೆಂಕಿ ತಗುಲಿದೆ ಎಂದು ಪೊಲೀಸರು ತಿಳಿಸಿದ್ದಾರೆ.

ನಿಂತಲ್ಲೇ ಸಜೀವ ದಹನವಾದ ಮೂಕ ಪ್ರಾಣಿಗಳು: ಅಂಗಡಿಗೆ ತಾಕಿಕೊಂಡಿರುವ ದನದ ಕೊಟ್ಟಿಗೆಗೆ ಬೆಂಕಿಯ ಜ್ವಾಲೆ ವ್ಯಾಪಿಸಿದೆ. ಮೂಕ ಪ್ರಾಣಿಗಳು ಗೋಳಾಡಿದರೂ ಪ್ರಯೋಜವಾಗದೆ ಕೊಟ್ಟಿಗೆಯಲ್ಲಿದ್ದ 20 ಹಸುಗಳ ಪೈಕಿ 6 ಹಸುಗಳು ಸಜೀವ ದಹನವಾಗಿವೆ. ಕೆಲ ಹಸುಗಳಿಗೆ ಗಂಭೀರ ಗಾಯಗಳಾಗಿವೆ.

ಅನೈತಿಕ ಸಂಬಂಧಕ್ಕೆ ಅಡ್ಡಿ: ಪ್ರೇಯಸಿಯ ಪತಿ ಹತ್ಯೆ

ಬೆಂಗಳೂರು: ಅನೈತಿಕ ಸಂಬಂಧಕ್ಕೆ ಅಡ್ಡಿಯಾದ ಪ್ರೇಯಸಿಯ ಪತಿಯನ್ನು ಪ್ರಿಯಕರ ಹತ್ಯೆ ಮಾಡಿರುವ ಘಟನೆ ಬೆಂಗಳೂರಿನಲ್ಲಿ ನಡೆದಿದೆ.ಸುನೀಲ್ ನಾಯಕ್ ಕೊಲೆಯಾದ ಪತಿ. ಪ್ರಿಯಕರ ಬಸುದೇವ್ ಮಲ್ಲಿಕ್ ಈ ಕೃತ್ಯ ಎಸಗಿದ್ದಾನೆ. ಆರೋಪಿ ಬಸುದೇವ್ ಮಲ್ಲಿಕ್ ಸುನೀಲ್ ನಾಯಕ್ ಪತ್ನಿಯೊಂದಿಗೆ ಸಲುಗೆ ಹೊಂದಿದ್ದ. ಈ ವಿಚಾರ ತಿಳಿದು ಸುನೀಲ್ ನಾಯಕ್ ಗಲಾಟೆ ಮಾಡಿದ್ದ. ಇದರಿಂದ ಕೋಪಗೊಂಡ ಆರೋಪಿ ಬಸುದೇವ್ ನಾಯಕ್ ಮದ್ಯಪಾನ ಮಾಡುವ ನೆಪದಲ್ಲಿ ಒಟ್ಟಿಗೆ ಸೇರಿ ಕಂಠಪೂರ್ತಿ ಕುಡಿಸಿ ಸುನೀಲ್ ನಾಯಕ್‌ನನ್ನ ಕೊಲೆ ಮಾಡಿದ್ದ. ಕೊಲೆ ಬಳಿಕ ಮೃತದೇಹವನ್ನು ಮೂಟೆಯಲ್ಲಿ ಹಾಕಿ ಬೊಮ್ಮಸಂದ್ರದ ನಿರ್ಜನ ಪ್ರದೇಶದಲ್ಲಿ ಎಸೆದಿದ್ದ. ಈ ಸಂಬಂಧ ಬಂಡೇಪಾಳ್ಯ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿತ್ತು. ಸದ್ಯ ಆರೋಪಿ ಬಸುದೇವ್ ಮಲ್ಲಿಕ್‌ನನ್ನು ಪೊಲೀಸರು ಬಂಧಿಸಿದ್ದಾರೆ.

ಬೈರತಿ ಜಾಮೀನು ರದ್ದು ಕೋರಿ ಹೈಗೆ ಅರ್ಜಿ

ಬೆಂಗಳೂರು: ರೌಡಿ ಶೀಟರ್ ಶಿವಪ್ರಕಾಶ್ ಅಲಿಯಾಸ್ ಬಿಕ್ಲು ಶಿವ ಹತ್ಯೆ ಪ್ರಕರಣದಲ್ಲಿ ಕೆ.ಆರ್. ಪುರ ಶಾಸಕ ಬೈರತಿ ಬಸವರಾಜ್‌ಗೆ ಜಾಮೀನು ಮಂಜೂರು ಮಾಡಿದ ಜನಪ್ರತಿನಿಧಿಗಳ ವಿಶೇಷ ನ್ಯಾಯಾಲಯ ಆದೇಶ ರದ್ದುಪಡಿಸುವಂತೆ ಕೋರಿ ರಾಜ್ಯ ಸರಕಾರವು ಹೈಕೋರ್ಟ್‌ಗೆ ಅರ್ಜಿ ಸಲ್ಲಿಸಿದೆ.

ಬೆಂಗಳೂರಿನ ಜನಪ್ರತಿನಿಧಿಗಳ ವಿಶೇಷ ನ್ಯಾಯಾಲಯ 2026ರ ಮಾರ್ಚ್ 12ರಂದು ಹೊರಡಿಸಿದ ಆದೇಶ ರದ್ದು ಕೋರಿ ಸಿಐಡಿ ತನಿಖಾಧಿಕಾರಿಯು ಅರ್ಜಿ ಸಲ್ಲಿಸಿದ್ದಾರೆ. ಅರ್ಜಿಯಲ್ಲಿ ಪ್ರಕರಣದಲ್ಲಿ 5ನೇ ಆರೋಪಿಯಾಗಿರುವ ಕೆ.ಆರ್.ಪುರ ಶಾಸಕ ಬಿ.ಎ. ಬಸವರಾಜ್ ಅವರನ್ನು ಪ್ರತಿವಾದಿ ಮಾಡಲಾಗಿದೆ.ಪ್ರಕರಣ ಸಂಬಂಧ ಅರ್ಜಿದಾರರನ್ನು ಈಗಾಗಲೇ ಪೊಲೀಸ್ ವಶದಲ್ಲಿಟ್ಟುಕೊಂಡು ನಡೆಸಿರುವ ವಿಚಾರಣೆ ಪೂರ್ಣಗೊಂಡಿದೆ. ಮತ್ತೆ ಪೊಲೀಸ್ ವಶದಲ್ಲಿಟ್ಟುಕೊಂಡು ವಿಚಾರಣೆ ನಡೆಸಬೇಕಾದ ಅಗತ್ಯವಿಲ್ಲ ಎಂಬ ಅಂಶ ಸಿಐಡಿ ತನಿಖಾಧಿಕಾರಿಗಳು ಸಲ್ಲಿಸಿರುವ ರಿಮ್ಯಾಂಡ್ ಅರ್ಜಿಯಿಂದ ತಿಳಿಯಲಿದೆ. ಆದ್ದರಿಂದ, ಅರ್ಜಿದಾರರಿಗೆ ಕಠಿಣ ಷರತ್ತುಗಳನ್ನು ವಿಧಿಸಿ ಜಾಮೀನು ಮಂಜೂರು ಮಾಡಬಹುದಾಗಿದೆ ಎಂದು ಜನಪ್ರತಿನಿಧಿಗಳ ವಿಶೇಷ ನ್ಯಾಯಾಲಯವು ಮಾ. 12ರಂದು ಹೊರಡಿಸಿದ್ದ ಆದೇಶದಲ್ಲಿ ತಿಳಿಸಿತ್ತು.

ಪ್ರಕರಣದ ಹಿನ್ನೆಲೆ:

ಬೆಂಗಳೂರಿನ ಹಲಸೂರು ಕೆರೆಯ ಸಮೀಪದ ಮನೆಯೊಂದರ ಎದುರು 2025ರ ಜುಲೈನಲ್ಲಿ ರೌಡಿಶೀಟರ್ ಬಿಕ್ಲು ಶಿವ ಅಲಿಯಾಸ್ ಶಿವಪ್ರಕಾಶ್ ಕೊಲೆ ನಡೆದಿತ್ತು. ಮೃತನ ತಾಯಿ ವಿಜಯಲಕ್ಷ್ಮಿ ನೀಡಿದ್ದ ದೂರು ಆಧರಿ ಭಾರತೀನಗರ ಠಾಣೆಯಲ್ಲಿ ಕೊಲೆ ಅಪರಾಧ ಸಂಬಂಧ ಎಫ್‌ಐಆರ್ ದಾಖಲಾಗಿತ್ತು. ನಂತರ ಪ್ರಕರಣದ ತನಿಖೆಯು ಸಿಐಡಿ ಪೊಲೀಸರಿಗೆ ವರ್ಗಾವಣೆಯಾಗಿತ್ತು. ತನಿಖೆ ನಡೆಸಿದ್ದ ಐದನೇ ಆರೋಪಿ ಬೈರತಿ ಬಸವರಾಜ್ ಮತ್ತು 18ನೇ ಆರೋಪಿಯನ್ನು ಹೊರತುಪಡಿಸಿ, 4,236 ಪುಟಗಳ ಆರೋಪ ಪಟ್ಟಿಯನ್ನು ಜನಪ್ರತಿನಿಧಿಗಳ ವಿಶೇಷ ನ್ಯಾಯಾಲಯಕ್ಕೆ ಸಲ್ಲಿಸಿದ್ದರು. ನಂತರ ಬಸವರಾಜು ಅವರ ನಿರೀಕ್ಷಣಾ ಜಾಮೀನು ಅರ್ಜಿಯನ್ನು ವಜಾಗೊಳಿಸಿ 2026ರ ಫೆಬ್ರವರಿ 10ರಂದು ಹೈಕೋರ್ಟ್ ತೀರ್ಪು ನೀಡಿತ್ತು. ಫೆಬ್ರವರಿ 12ರಂದು ಸುಪ್ರಿಂ ಕೋರ್ಟ್ ಸಹ ಬೈರತಿ ಬಸವರಾಜ್‌ಗೆ ನಿರೀಕ್ಷಣಾ ಜಾಮೀನು ನಿರಾಕರಿಸಿತ್ತು. ಇದರಿಂದ ಅಂದೇ ಬೈರತಿ ಬಸವರಾಜ್ ಬಂಧನವಾಗಿತ್ತು. ಬಳಿಕ ಜನಪ್ರತಿನಿಧಿಗಳ ವಿಶೇಷ ನ್ಯಾಯಾಲಯವು ಮಾ. 12ರಂದು ಜಾಮೀನು ಮಂಜೂರು ಮಾಡಿತ್ತು.

ಕೋಟ್ಯಂತರ ಮೌಲ್ಯದ ಚಿನ್ನಾಭರಣ ವಂಚನೆ

ಬೆಂಗಳೂರು: ಸ್ನ್ಯಾಪ್ ಚಾಟ್ ಮೂಲಕ ಗೃಹಿಣಿಯನ್ನು ಪರಿಚಯಿಸಿ ಸ್ನೇಹ ಬೆಳೆಸಿಕೊಂಡು ಹಂತ–ಹಂತವಾಗಿ ಕೋಟ್ಯಂತರ ಮೌಲ್ಯದ ಚಿನ್ನಾಭರಣ ಪಡೆದು ವಂಚಿಸಿದ್ದ ಇಬ್ಬರು ಅಂತಾರಾಜ್ಯ ವಂಚಕರನ್ನು ನಗರದ ಕೆ.ಆರ್.ಪುರ ಪೊಲೀಸರು ಬಂಧಿಸಿದ್ದಾರೆ. ವಂಚನೆಗೊಳಗಾದ 38 ವರ್ಷದ ಗೃಹಿಣಿ ನೀಡಿದ ದೂರು ಆಧರಿಸಿ ಆಂಧ್ರ ಪ್ರದೇಶದ ಮಹೇಶ್ ಹಾಗೂ ಸ್ವಾಮಿ ಎಂಬವರನ್ನು ಬಂಧಿಸಿ 85 ಲಕ್ಷ ರೂ ಮೌಲ್ಯದ 571 ಗ್ರಾಂ ಚಿನ್ನಾಭರಣ ವಶಕ್ಕೆ ಪಡೆದುಕೊಳ್ಳಲಾಗಿದೆ. ಆರೋಪಿಗಳನ್ನು ನ್ಯಾಯಾಂಗ ಬಂಧನಕ್ಕೆ ಒಪ್ಪಿಸಲಾಗಿದೆ.

ಗೃಹಿಣಿಯ ಪತಿ ಸಾಫ್ಟ್‌ವೇರ್ ಎಂಜಿನಿಯರ್ ಆಗಿದ್ದು, ದಂಪತಿಗೆ ಇಬ್ಬರು ಮಕ್ಕಳಿದ್ದಾರೆ. ಸಾಮಾಜಿಕ ಜಾಲತಾಣ ಸ್ನ್ಯಾಪ್ ಚಾಟ್‌ನಲ್ಲಿ ಒಂದು ವರ್ಷದ ಹಿಂದೆ ಆರೋಪಿಯು ಗೃಹಿಣಿಯನ್ನು ಪರಿಚಯಿಸಿಕೊಂಡಿದ್ದ. ಬಳಿಕ ಇಬ್ಬರೂ ಮೊಬೈಲ್ ನಂಬರ್ ವಿನಿಮಯ ಮಾಡಿಕೊಂಡಿದ್ದರು. ಕ್ರಮೇಣ ಸಲುಗೆ ಬೆಳೆದಿದೆ. ಪರಸ್ಪರ ಖಾಸಗಿ ಮೆಸೇಜ್ ಮಾಡಿಕೊಂಡಿದ್ದಾರೆ. ಈ ಸಲುಗೆಯನ್ನು ದುರ್ಬಳಕೆ ಮಾಡಿಕೊಂಡ ಮಹೇಶ್, ಬಿಸಿನೆಸ್ ಮಾಡಲು ಹಣದ ಅಗತ್ಯವಿದೆ ಎಂದು ಸುಳ್ಳು ಹೇಳಿ ಮಹಿಳೆಯಿಂದ ಹಂತ–ಹಂತವಾಗಿ ಸುಮಾರು 2 ಕೆ.ಜಿ. ಚಿನ್ನ ಪಡೆದಿದ್ದ. ಇದಕ್ಕೆ ಪ್ರತಿಯಾಗಿ ಹಣ ನೀಡುವುದಾಗಿ ಭರವಸೆ ನೀಡಿದ್ದ. ಮನೆಯಲ್ಲಿ ಚಿನ್ನವಿಲ್ಲದಿರುವುದನ್ನು ಅನುಮಾನಗೊಂಡು ಪತಿ ಪ್ರಶ್ನಿಸಿದಾಗ ವಂಚನೆಯಾಗಿರುವುದು ಬೆಳಕಿಗೆ ಬಂದಿದೆ ಎಂದು ಪೊಲೀಸರು ತಿಳಿಸಿದ್ದಾರೆ.ಬಿ.ಟೆಕ್ ಪದವೀಧರನಾಗಿದ್ದ ಮಹೇಶ್, ಕೆಲ ವರ್ಷಗಳ ಹಿಂದೆ ಪತ್ನಿಗೆ ವಿಚ್ಛೇದನ ನೀಡಿದ್ದ. ಆನ್‌ಲೈನ್ ಬೆಟ್ಟಿಂಗ್ ವ್ಯಾಮೋಹದಿಂದ ಊರಿನಲ್ಲಿ ಸಾಲ ಮಾಡಿಕೊಂಡಿದ್ದ. ಸಾಲಗಾರರಿಂದ ತಪ್ಪಿಸಿಕೊಳ್ಳಲು ಹೈದರಾಬಾದ್‌ನಲ್ಲಿ ನೆಲೆಸಿದ್ದ. ದುಬೈನಲ್ಲಿ ಕೆಲಸ ಮಾಡುತ್ತಿರುವುದಾಗಿ ಮನೆಯ ವರನ್ನು ನಂಬಿಸಿದ್ದ. ಇದೇ ವೇಳೆ ಸ್ನ್ಯಾಪ್ ಚಾಟ್ ಮೂಲಕ ಗೃಹಿಣಿಯ ಪರಿಚಯವಾಗಿದೆ. ಆಕೆಯೂ ಸಲುಗೆಯಿಂದಲೇ ವರ್ತಿಸಿದ್ದಾಳೆ. ಬೆಂಗಳೂರಿಗೆ ಬಂದು ಹಲವು ಬಾರಿ ಮಹಿಳೆಯನ್ನು ರಹಸ್ಯವಾಗಿ ಭೇಟಿಯಾಗಿ ಹಣ ಪಡೆದಿದ್ದ. ಭೇಟಿ ವಿಚಾರವನ್ನು ಮನೆಯವರಿಗೆ ಹೇಳಿರಲಿಲ್ಲ. ವಂಚನೆ ಬಯಲಾದಾಗ ಪತಿಗೆ ತನ್ನನ್ನು ಬ್ಲ್ಯಾಕ್ ಮೇಲ್ ಮಾಡಿ ವಂಚಿಸಿದ್ದಾರೆ ಎಂದು ಮನೆಯವರಿಗೆ ಹಾಗೂ ಪೊಲೀಸರ ಮುಂದೆ ಹೇಳಿದ್ದಳು. ಪ್ರಕರಣ ದಾಖಲಿಸಿಕೊಂಡು ತನಿಖೆ ನಡೆಸಿದಾಗ ಅಸಲಿ ಕಹಾನಿ ಬೆಳಕಿಗೆ ಬಂದಿದೆ ಎಂದು ಪೊಲೀಸರು ತಿಳಿಸಿದ್ದಾರೆ.

ಕೋಟ್ಯಂತರ ಹಣ ಪಡೆದ ಬೆಟ್ಟಿಂಗ್ ಆಡಿ ಸೋತ: ಆನ್‌ಲೈನ್ ಬೆಟ್ಟಿಂಗ್ ವ್ಯಾಮೋಹ ಬೆಳೆಸಿಕೊಂಡಿದ್ದ ಆರೋ ಪಿಯು ಗೃಹಿಣಿಯಿಂದ ಪಡೆದಿದ್ದ ಕೋಟ್ಯಂತರ ಮೌಲ್ಯದ ಚಿನ್ನವನ್ನು ನಗದಾಗಿ ಪರಿವರ್ತಿಸಿ ಬೆಟ್ಟಿಂಗ್‌ನಲ್ಲಿ ಹೂಡಿ ಹಣ ಕಳೆದುಕೊಂಡಿದ್ದ. ಹೈದರಾಬಾದ್ ಸೇರಿದಂತೆ ನಗರದ ಕೆಲವೆಡೆ ಚಿನ್ನಾಭರಣ ಗಿರವಿಟ್ಟು ಹಣ ಪಡೆದಿದ್ದ. ಈತನ ಮಾಹಿತಿ ಆಧರಿಸಿ ಪೊಲೀಸರು ಲಕ್ಷಾಂತರ ಮೌಲ್ಯದ ಚಿನ್ನಾಭರಣ ವಶಕ್ಕೆ ಪಡೆದುಕೊಂಡಿದ್ದಾರೆ. ಪ್ರಕರಣದ ಎರಡನೇ ಆರೋಪಿಯಾಗಿರುವ ಸ್ವಾಮಿ ಎಂಬಾತ ಸ್ನ್ಯಾಪ್ ಚಾಟ್ ಮೂಲಕ ಪರಿಚಯಿಸಿಕೊಂಡು ಮಹಿಳೆಗೆ ವಂಚಿಸಿ ದ್ದ. ಬಂಧಿತರಾಗಿರುವ ಇಬ್ಬರು ಆರೋಪಿಗಳು ಒಬ್ಬರಿ ಗೊಬ್ಬರು ಪರಿಚಯರವಿಲ್ಲ. ಅಲ್ಲದೆ, ಇನ್ನಿಬ್ಬರೊಂದಿಗೆ ಮಹಿಳೆ ಮೆಸೇಜ್ ಮಾಡಿರುವುದು ತನಿಖೆಯಲ್ಲಿ ಕಂಡುಬಂದಿದೆ ಎಂದು ಮೂಲಗಳು ತಿಳಿಸಿವೆ.

ಮೇಖ್ರಿ ಸರ್ಕಲ್ ಬಳಿ 4 ಲೇನ್ ಫ್ಲೈಓವರ್

ಬೆಂಗಳೂರು: ಮೇಖ್ರಿ ಸರ್ಕಲ್ ಬಳಿಯ ಸಂಚಾರ ದಟ್ಟಣೆಯನ್ನು ನಿರ್ವಹಿಸುವ ಸಲುವಾಗಿ ಬಿಡಿಎಯು ನಾಲ್ಕು ಲೈನ್ ಎಲಿವೇಟೆಡ್ ಕಾರಿಡಾರ್ ನಿರ್ಮಾಣಕ್ಕೆ ಮುಂದಾಗಿದ್ದು, ಈ ನಿಟ್ಟಿನಲ್ಲಿ ಟೆಂಡರ್‌ನ್ನು ಆಹ್ವಾನಿಸಿದೆ.

ಬಿಡಿಎಯು ಸುಮಾರು 420 ಕೋಟಿ ರು.ವೆಚ್ಚದಲ್ಲಿ 1.6 ಕಿ.ಮೀ ದೂರದ ಫೋರ್ ಲೈನ್ ಎಲಿವೇಟೆಡ್ ಕಾರಿಡಾರ್ ನಿರ್ಮಾಣಕ್ಕೆ ಮುಂದಾಗಿದ್ದು, ಈ ಮೂಲಕ ಸಂಚಾರ ದಟ್ಟಣೆಯನ್ನು ನಿರ್ವಹಿಸಲು ಚಿಂತನೆ ನಡೆಸಿದೆ. ಈ ಮೇಲ್ಸೇತುವೆ ನಿರ್ಮಾಣಕ್ಕೆ ಕಳೆದ ಮಾರ್ಚ್ 26 ರಂದು ಬಿಡಿಎ ಟೆಂಡರ್ ಆಹ್ವಾನಿಸಿದ್ದು, ಕಳೆದ ನಾಲ್ಕು ತಿಂಗಳಿನಲ್ಲಿ ಎರಡನೇ ಬಾರಿ ಟೆಂಡರ್‌ನ್ನು ಕರೆಯಲಾಗಿದೆ. 2025ರ ಡಿಸೆಂಬರ್ 25ರಂದೇ ಈ ಯೋಜನೆಗೆ ಟೆಂಡರ್ ಕರೆದರೂ ಕೆಲವು ತಾಂತ್ರಿಕ ಕಾರಣಗಳಿಂದ ಈಗ ಮತ್ತೆ ಪ್ರಕ್ರಿಯೆಗೆ ವೇಗ ನೀಡುವ ಕೆಲಸ ಮಾಡಿದ್ದಾರೆ. ಹೊಸ ಮೇಲ್ಸೇತುವೆ ಯುಎಸ್ ಸ್ಟಾಫ್ ಕ್ವಾರ್ಟರ್ಸ್ ಬಳಿಯಿಂದ ಆರಂಭವಾಗಿ ಮೇಖ್ರಿ ಸರ್ಕಲ್ ವರೆಗೂ ಇರಲಿದೆ. ಇಲ್ಲಿ ಒಂದು ಎತ್ತರಿಸಿದ ರೋಟರಿ ಜಂಕ್ಷನ್ ನಿರ್ಮಿಸಲಾಗುತ್ತದೆ.

ಯಶವಂತಪುರದಿಂದ ಜಯಮಹಲ್ ತೆರಳುವವರು ಈ ಯೋಜನೆ ಬಿಗ್ ರಿಲೀಫ್ ನೀಡುವ ಉದ್ದೇಶದಿಂದ ಈ ಯೋಜನೆಯ ಭಾಗವಾಗಿ ಮೇಖ್ರಿ ಸರ್ಕಲ್ ನಿಂದ ಎರಡು ಡೌನ್ ರ್‍ಯಾಂಪ್‌ಗಳ ಯೋಜನೆಯನ್ನು ಹಾಕಿದ್ದು, ಒಂದು ಸಿವಿ ರಾಮನ್ ರೋಡ್ ಮೂಲಕ ಯಶವಂತಪುರ ಕಡೆಗೆ ಸಾಗಿದರೆ, ಮತ್ತೊಂದು ಜಯಮಹಲ್ ಕಡೆ ಸಾಗುವ ಪ್ರಯಾಣಿಕರಿಗೆ ಅನುಕೂಲವಾಗುವಂತೆ ನಿರ್ಮಾಣ ಮಾಡಲಿದ್ದಾರೆ.

ಸಮಾಚಾರ ಸಣ್ಣದಲ್ಲ

ವಿನಯ್ ಟೋನ್ಸೆ ಅಧಿಕಾರ ಸ್ವೀಕಾರ

ಬೆಂಗಳೂರು: ಯೆಸ್ ಬ್ಯಾಂಕ್ ಬ್ಯಾಂಕಿನ ವ್ಯವಸ್ಥಾಪಕ ನಿರ್ದೇಶಕ ಮತ್ತು ಮುಖ್ಯ ಕಾರ್ಯನಿರ್ವಹಣಾಧಿಕಾರಿ ಆಗಿ ಅಧಿಕಾರ ಸ್ವೀಕಾರ ಮಾಡಿದ್ದಾರೆ. ಯೆಸ್ ಬ್ಯಾಂಕ್ ಸುಭದ್ರ ಅಡಿಪಾಯ ಹೊಂದಿದೆ ಮತ್ತು ಕಳೆದ 6 ವರ್ಷ ಗಳಲ್ಲಿ ತನ್ನ ಚೇತರಿಸಿಕೊಳ್ಳುವ ಸಾಮರ್ಥ್ಯ ಸಾಬೀತುಪಡಿಸಿದೆ. ನಾನು ಯೆಸ್ ಬ್ಯಾಂಕ್‌ನಲ್ಲಿ ನನ್ನ ಪ್ರಯಾಣವನ್ನು ಪ್ರಾರಂಭಿಸುತ್ತಿರುವಾಗ, ಲಾಭದಾಯಕ ಬೆಳವಣಿಗೆಯನ್ನು ವೇಗಗೊಳಿಸುವುದು, ನಮ್ಮ ಉದ್ಯೋಗಿಗಳು, ಗ್ರಾಹಕರು, ಹೂಡಿಕೆದಾರರು ಮತ್ತು ಪಾಲುದಾರರೊಂದಿಗೆ ಸಂಬಂಧವನ್ನು ಮತ್ತಷ್ಟು ಗಾಢವಾಗಿಸುವುದು ಹಾಗೂ ನಮ್ಮ ಬ್ಯಾಲೆನ್ಸ್ ಶೀಟ್ ಅನ್ನು ಬಲಪಡಿಸುವುದು ನನ್ನ ಪ್ರಮುಖ ಗುರಿಯಾಗಿದೆ. ನಮ್ಮಲ್ಲಿ ಸದೃಢ ಡಿಜಿಟಲ್ ವೇದಿಕೆಗಳು ಸೇರಿದಂತೆ ಎಲ್ಲಾ ರೀತಿಯ ಸೂಕ್ತವಾದ ಅಂಶಗಳಿವೆ ಮತ್ತು ಇಲ್ಲಿ ಬೆಳವಣಿಗೆಗೆ ಹೆಚ್ಚಿನ ಅವಕಾಶಗಳಿವೆ ಎಂದು ನಾನು ಭಾವಿಸುತ್ತೇನೆ. ಸಂಸ್ಥೆಯ ಸುಸ್ಥಿರ ಬೆಳವಣಿಗೆಯನ್ನು ಉತ್ತೇಜಿಸುವ ಜೊತೆಗೆ ನಮ್ಮೆಲ್ಲಾ ಪಾಲುದಾರರಿಗೆ ಶಾಶ್ವತವಾದ ಮೌಲ್ಯವನ್ನು ಸೃಷ್ಟಿಸುತ್ತೇವೆ ಎಂದು ನನಗೆ ವಿಶ್ವಾಸ ವಿದೆ ಎಂದು ವಿನಯ್ ಎಂ. ಟೋನ್ಸೆ ತಿಳಿಸಿದ್ದಾರೆ.

ಜಲ ಮಂಡಳಿಯಿಂದ ನೀರಿನ ಅದಾಲತ್



ಬೆಂಗಳೂರು: ಬೆಂಗಳೂರು ಜಲ ಮಂಡಳಿ ವತಿಯಿಂದ ಏ.9ರ ಬೆಳಗ್ಗೆ 9.30 ರಿಂದ 11.00 ಗಂಟೆಯವರೆಗೆ ನೀರಿನ ಅದಾಲತ್‌ನ್ನು ಆಯೋಜಿಸಲಾಗಿದೆ ಎಂದು ಮಂಡಳಿ ತಿಳಿಸಿದೆ. ನಗರದ ಉತ್ತರ-2-1, ದಕ್ಷಿಣ-1-1, ದಕ್ಷಿಣ-2-1, ನೈರುತ್ಯ -1, ನೈರುತ್ಯ - 4, ಪೂರ್ವ -1-2, ಪೂರ್ವ -2-2, ಆಗ್ನೇಯ - 2, ಆಗ್ನೇಯ - 5, ಪಶ್ಚಿಮ-1-2 ಮತ್ತು ಪಶ್ಚಿಮ-2-2, ಉಪ ವಿಭಾಗಗಳಲ್ಲಿ ನೀರಿನ ಬಿಲ್ಲು, ನೀರು ಮತ್ತು ಒಳಚರಂಡಿ ಸಂಪರ್ಕ ಕಲ್ಪಿಸುವಲ್ಲಿನ ವಿಳಂಬ, ಗೃಹ ಬಳಕೆ ಯಿಂದ ಗೃಹೇತರ ಬಳಕೆ ಪರಿವರ್ತನೆ ವಿಳಂಬ ಮತ್ತಿತರ ಕುಂದು ಕೊರತೆಗಳಿಗೆ ಸಂಬಂಧಿಸಿದ ಸಮಸ್ಯೆಗಳನ್ನು ಪರಿಹರಿಸಲು ಸಾರ್ವಜನಿಕರು ಮಂಡಳಿಯ 24/7 ದೂರು ನಿರ್ವಹಣಾ ಕೇಂದ್ರದ ಸಹಾಯವಾಣಿ 1916ಗೆ ಕರೆ ಮಾಡಿ ಅಥವಾ ವಾಟ್ಸ್ ಅಪ್ ನಂಬರ್ 8762228888 ಸಂದೇಶದ ಮೂಲಕ ದೂರನ್ನು ಸಲ್ಲಿಸಬಹುದು ಎಂದು ಮಂಡಳಿ ತಿಳಿಸಿದೆ.

ಇಂದು ವಿಶ್ವ ಜಲ ದಿನ ಆಚರಣೆ

ಬೆಂಗಳೂರು: ಬೆಂಗಳೂರು ಜಲಮಂಡಳಿ ಹಾಗೂ ಬೆಂಗಳೂರು ಜಲಮಂಡಳಿ ಅಭಿಯಂತರರ ಸಂಘದ ಸಂಯುಕ್ತ ಆಶ್ರಯದಲ್ಲಿ ಏ.8 ರಂದು ಬೆಳಗ್ಗೆ 10.30 ಗಂಟೆಗೆ ಡಾ. ಬಿ.ಆರ್. ಅಂಬೇಡ್ಕರ್ ಸ್ಕೂಲ್ ಆಫ್ ಎಕನಾಮಿಕ್ಸ್ ಯೂನಿವರ್ಸಿಟಿ, ಜ್ಞಾನಭಾರತಿ ಕ್ಯಾಂಪಸ್‌ನಲ್ಲಿ 'ವಿಶ್ವ ಜಲ ದಿನ 2026' ಕಾರ್ಯಕ್ರಮವನ್ನು ಆಯೋಜಿಸಲಾಗಿದೆ. ಈ ವರ್ಷದ ಕಾರ್ಯಕ್ರಮವು ನೀರು ಮತ್ತು ಲಿಂಗತ್ವ ಎಂಬ ವಿಶೇಷ ವಿಷಯದಡಿ ನಡೆಯಲಿದ್ದು, ಎಲ್ಲಿ ನೀರು ಹರಿಯುತ್ತದೋ, ಅಲ್ಲಿ ಸಮಾನತೆ ಬೆಳೆಯುತ್ತದೆ ಎಂಬ ಘೋಷವಾಕ್ಯವನ್ನು ಹೊಂದಿದೆ. ಕಾರ್ಯಕ್ರಮದ ಅಧ್ಯಕ್ಷತೆ ಹಾಗೂ ಉದ್ಘಾಟನೆಯನ್ನು ಜಲಮಂಡಳಿ ಅಧ್ಯಕ್ಷ ಡಾ.ರಾಮ್ ಪ್ರಸಾತ್ ಮನೋಹರ್ ಮಾಡಲಿದ್ದು, ಮ್ಯಾಪಿಂಗ್ ಮಲ್ನಾಡ್ ಸಂಸ್ಥೆಯ ಸಂಸ್ಥಾಪಕಿ ನಿರ್ಮಲಾ ಗೌಡ, ಡಾ.ಬಿ. ಆರ್.ಅಂಬೇಡ್ಕರ್ ಸ್ಕೂಲ್ ಆಫ್ ಎಕನಾಮಿಕ್ಸ್ ವಿವಿ ರಿಜಿಸ್ಟ್ರಾರ್ ಮಮತಾದೇವಿ. ಜಿ.ಎಸ್., ಕೇಂದ್ರ ಅಂತರ್ಜಲ ಮಂಡಳಿಯ ವಿಜ್ಞಾನಿ ವೀಣಾ. ಆರ್. ಅಚ್ಯುತ ಹಾಗೂ ವಿಂಜನಹಳ್ಳಿ ಆರೋಹಣ ಗ್ರಾಮೀಣ ಸಂಸ್ಥೆಯ ಸಂಸ್ಥಾಪಕ ಕಾರ್ಯದರ್ಶಿ ಆಶಾ ಎಸ್. ಇರಲಿದ್ದಾರೆ. ಮಧ್ಯಾಹ್ನ 3.00 ಗಂಟೆಗೆ ನಟ ಮತ್ತು ನಿರ್ದೇಶಕ ಡಾ. ರೋಹಿತ್ ನಾಗೇಶ್ ಮತ್ತು ಸಂಗಡಿಗರಿಂದ ಯಾಂತ್ರಿಕ ಬದುಕಲ್ಲಿ ತಂತ್ರಜ್ಞಾನ ಕುರಿತು ಕಾರ್ಯಕ್ರಮವನ್ನು ನೀಡಲಿದ್ದು, ಜಲಮಂಡಳಿಯ ಅಭಿಯಂತರರ ಸಂಘದ ಅಧ್ಯಕ್ಷ ಬಿ.ಸಿ. ಗಂಗಾಧರ, ಪ್ರಧಾನ ಮುಖ್ಯ ಅಭಿಯಂತರ ಬಿ.ಎಸ್. ದಲಾಯತ್, ಅಭಿಯಂತರರ ಸಂಘದ ಉಪಾಧ್ಯಕ್ಷ ರಮಾನಂದ ಹಾಗೂ ಕಾರ್ಯದರ್ಶಿ ಎ.ರಾಜಶೇಖರ, ಹಿರಿಯ ಅಧಿಕಾರಿಗಳು, ಸಿಬ್ಬಂದಿ ಭಾಗವಹಿಸಲಿದ್ದಾರೆ.

ಇಂಡಕ್ಷನ್ ಹೀಟರ್ ಉತ್ಪಾದನೆಗೆ ಪ್ರೋತ್ಸಾಹಿಸಿ

ಬೆಂಗಳೂರು: ಇಂಡಕ್ಷನ್ ಹೀಟರ್ ಉತ್ಪಾದನೆಗೆ ಒತ್ತು ನೀಡುವಂತೆ ಹಾಗೂ ಜಿಎಸ್‌ಟಿ ಕಡಿಮೆ ಮಾಡುವಂತೆ ಇಂಡಕ್ಷನ್ ಸ್ಟೌವ್ ತಯಾರಿ ಮಾಡುವ ಕಂಪನಿ ಲಾರ್‌ಮನ್ಸ್ ಕಿಚನ್ ನಿರ್ದೇಶಕ ಡಾ. ಚಂದ್ರಮೌಳಿ ಮನವಿ ಮಾಡಿದರು. ಸುದ್ದಿಗೋಷ್ಠಿಯಲ್ಲಿ ಮಾತನಾಡಿ, ಪಶ್ಚಿಮ ಏಷ್ಯಾದಲ್ಲಿ ಹೆಚ್ಚುತ್ತಿರುವ ಉದ್ವಿಗ್ನತೆಯಿಂದಾಗಿ ಇಂಧನ ಬೆಲೆಗಳು ಏರಿಕೆಯಾಗುತ್ತಿರುವ ಕಾರಣ ಇದಕ್ಕೆ ಪರ್ಯಾಯವಾಗಿ ಇಂಡಕ್ಷನ್ ಹೀಟರ್ ಉತ್ಪಾದನೆಗೆ ಒತ್ತು ನೀಡುವಂತೆ ಹಾಗೂ ಜಿಎಸ್‌ಟಿ ಕಡಿಮೆ ಮಾಡುವಂತೆ ಕೇಂದ್ರ ಸರಕಾರಕ್ಕೆ ಮನವಿಸಲ್ಲಿಸಲಾಗಿದೆ. ಇಂಡಕ್ಷನ್ ವ್ಯವಸ್ಥೆಗಳ ಹೆಚ್ಚಿನ ಅಳವಡಿಕೆಯು ಎಲ್‌ಪಿಜಿ ಮತ್ತು ಇತರ ಇಂಧನಗಳ ಮೇಲಿನ ಅವಲಂಬನೆಯನ್ನು ಕಡಿಮೆ ಮಾಡಲು ಸಹಾಯ ಮಾಡುತ್ತದೆ. ಇದರಿಂದಾಗಿ ಇಂಧನ ಸುರಕ್ಷತೆ ಸಾಧಿಸಲು ಹಾಗೂ ದೇಶದ ಆಮದು ಹೊರೆಯನ್ನು ಕಡಿಮೆ ಮಾಡಲು ಸಾಧ್ಯವಾಗುತ್ತದೆ. ಅಲ್ಲದೇ ಇಂಡಕ್ಷನ್ ತಂತ್ರಜ್ಞಾನವು ಹೆಚ್ಚಿನ ಪ್ರಮಾಣದ ವಿದ್ಯುತ್ ಶಕ್ತಿಯನ್ನು ನೇರವಾಗಿ ಶಾಖವಾಗಿ ಪರಿವರ್ತಿಸುವುದರಿಂದ ಸಮಯದ ಉಳಿತಾಯದ ಜತೆಗೆ ಇಂಧನ ವ್ಯರ್ಥವಾಗುವುದು ಸಹ ತಡೆಯಬಹುದು ಎಂದರು. ಈ ವೇಳೆ ಪ್ರಮೋದ್ ಮೌಳಿ,ರಘುನಾಥ ಸೇರಿದಂತೆ ಇನ್ನಿತರರು ಇದ್ದರು.

ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯದ 12 ಮತ್ತು 13ನೇ ದೀಕ್ಷಾಂತ ಘಟಿಕೋತ್ಸವದಲ್ಲಿ ವಿದ್ಯಾರ್ಥಿಗಳಿಗೆ ಪದವಿ ಪ್ರದಾನ

ಜ್ಞಾನವೇ ಸಮಾಜ ಪರಿವರ್ತನೆ ಶಕ್ತಿ: ಗೆಹ್ಲೋಟ್

ವಿಶ್ವವಾಣಿ ಸುದ್ದಿಮನೆ ಬೆಂಗಳೂರು

ವಿದ್ಯಾರ್ಥಿಗಳು ತಮ್ಮ ಶಿಕ್ಷಣ ಮತ್ತು ಜ್ಞಾನವನ್ನು ವೈಯಕ್ತಿಕ ಪ್ರಗತಿಗೆ ಮಾತ್ರ ಸೀಮಿತಗೊಳಿಸದೆ, ಸಮಾಜ ಮತ್ತು ರಾಷ್ಟ್ರದ ಕಲ್ಯಾಣಕ್ಕಾಗಿ ಬಳಸಬೇಕು ಎಂದು ರಾಜ್ಯಪಾಲ ಥಾವರ್ ಚಂದ್ ಗೆಹ್ಲೋಟ್ ತಿಳಿಸಿದರು.

ನಗರದ ಜ್ಞಾನಜ್ಯೋತಿ ಸಭಾಂಗಣದಲ್ಲಿ ಮಂಗಳವಾರ ಆಯೋಜಿಸಿದ್ದ ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯದ 12ನೇ ಮತ್ತು 13ನೇ ದೀಕ್ಷಾಂತ ಘಟಿಕೋತ್ಸವ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ಪದವಿ ಪಡೆಯುತ್ತಿರುವ ವಿದ್ಯಾರ್ಥಿಗಳಿಗೆ ಇದು ಮಹತ್ವದ ಘಟ್ಟವಾಗಿದ್ದು, ಅವರು ಸಂಪಾದಿಸಿರುವ ಜ್ಞಾನವು ಸಮಾಜ ಸೇವೆಯ ದಿಕ್ಕಿನಲ್ಲಿ ಉಪಯೋಗವಾಗಬೇಕು. ಜ್ಞಾನವು ಜನರ ಹಿತಕ್ಕಾಗಿ ಬಳಸಿದಾಗ ಮಾತ್ರ ಅದರ ನಿಜವಾದ ಮೌಲ್ಯ ವ್ಯಕ್ತವಾಗುತ್ತದೆ. ಜ್ಞಾನವು ವಿನಮ್ರತೆಯನ್ನು ತರುತ್ತದೆ, ವಿನಮ್ರತೆ ಯೋಗ್ಯತೆಯನ್ನು, ಯೋಗ್ಯತೆ ಸಮೃದ್ಧಿಯನ್ನು ಮತ್ತು ಸಮೃದ್ಧಿ ಸದಾಚಾರವನ್ನು ತರುತ್ತದೆ ಎಂದರು.

ಸಂಸ್ಕೃತವು ಕೇವಲ ಭಾಷೆಯಲ್ಲ, ಅದು ಭಾರತದ ಆತ್ಮವಾಗಿದ್ದು, ದೇಶದ ಸಂಸ್ಕೃತಿ, ನಾಗರಿಕತೆ ಮತ್ತು ತತ್ವಶಾಸ್ತ್ರದ ಮೂಲವಾಗಿದೆ. ವೇದಗಳು, ಉಪನಿಷತ್ತುಗಳು ಮತ್ತು ಮಹಾಕಾವ್ಯಗಳೆಲ್ಲ ಸಂಸ್ಕೃತದಲ್ಲಿ ರೂಪುಗೊಂಡಿದ್ದು, ಅದರ ರಚನಾತ್ಮಕ ಸ್ಪಷ್ಟತೆ ಕೃತಕ ಬುದ್ಧಿಮತ್ತೆ ಮತ್ತು ದತ್ತಾಂಶ ವಿಜ್ಞಾನದಂತಹ ಆಧುನಿಕ ಕ್ಷೇತ್ರಗಳಲ್ಲಿಯೂ ಉಪಯುಕ್ತವಾಗಿದೆ. ಸ್ವಾವಲಂಬಿ ಮತ್ತು ಅಭಿವೃದ್ಧಿ ಹೊಂದಿದ ಭಾರತ ನಿರ್ಮಾಣದಲ್ಲಿ ಯುವಕರ ಪಾತ್ರ ಅತ್ಯಂತ ಮುಖ್ಯವಾಗಿದೆ. ಪ್ರಾಚೀನ ಜ್ಞಾನ ಮತ್ತು ಆಧುನಿಕ ವಿಜ್ಞಾನವನ್ನು ಸಮನ್ವಯಗೊಳಿಸಿ, ಸಂಶೋಧನೆ ಮತ್ತು ನವೀನತೆಯಲ್ಲಿ ತೊಡಗಿಕೊಳ್ಳಬೇಕು ಎಂದರು.

ವಿಶ್ವವು ಮಾನಸಿಕ ಒತ್ತಡ, ಪರಿಸರ ಸಮಸ್ಯೆಗಳು ಮತ್ತು ಸಾಮಾಜಿಕ ಅಸಮತೋಲನಗಳನ್ನು ಎದುರಿಸುತ್ತಿರುವ ಸಂದರ್ಭದಲ್ಲಿ ಭಾರತೀಯರು ಜ್ಞಾನ ಪರಂಪರೆಯ ಮಹತ್ವವನ್ನು ತಿಳಿಯಬೇಕು. ವಸುಧೈವ ಕುಟುಂಬಕಂ ಮತ್ತು ಸರ್ವೇ ಭವಂತು ಸುಖಿನಃ ಎಂಬ ತತ್ವಗಳು ಮಾನವೀಯತೆಗೆ ಹೊಸ ದಿಕ್ಕನ್ನು ನೀಡುತ್ತವೆ ಎಂದರು.

ಈ ವೇಳೆ ಲೋಕಸಭಾ ಸದಸ್ಯ ಡಾ.ಸಿ.ಎನ್. ಮಂಜುನಾಥ್ ಮಾತನಾಡಿ, ಯಶಸ್ಸಿಗೆ ಯಾವುದೇ ಸುಲಭ ಮಾರ್ಗವಿಲ್ಲ. ಇಂದಿನ ಯುವ ಪೀಳಿಗೆ ಮುಂದೆ ದೇಶ ಕಟ್ಟುವವರಾಗುತ್ತಾರೆ. ಜ್ಞಾನವನ್ನು ಉದ್ಯೋಗಕ್ಕಷ್ಟೇ ಸೀಮಿತಗೊಳಿಸದೆ ಸಮಾಜ ಸೇವೆಗೆ ಬಳಸಬೇಕು.

ಸಂಸ್ಕೃತವು ಭಾರತೀಯ ಜ್ಞಾನ ಪರಂಪರೆಯ ಮೂಲವಾಗಿದ್ದು, ಅದರ ಮೌಲ್ಯಗಳು ಆಧುನಿಕ ಜೀವನಕ್ಕೂ ಮಾರ್ಗದರ್ಶಕವಾಗಿವೆ. ವಿದ್ಯಾರ್ಥಿಗಳು ಆತ್ಮವಿಶ್ವಾಸ, ನಿರಂತರ ಅಧ್ಯಯನ ಮತ್ತು ಸೇವಾಭಾವನೆಯೊಂದಿಗೆ ಮುಂದೆ ಸಾಗಬೇಕು ಎಂದರು.

ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯದ 12ನೇ ಮತ್ತು 13ನೇ ದೀಕ್ಷಾಂತ ಘಟಿಕೋತ್ಸವದಲ್ಲಿ ರಾಜ್ಯಪಾಲ ಥಾವರ್ ಚಂದ್ ಗೆಹ್ಲೋಟ್ ಅವರು ಗೌರವ ಡಾಕ್ಟರೇಟ್ ಪದವಿ ಪ್ರದಾನ ಮಾಡಿದರು. ಈ ವೇಳೆ ಲೋಕಸಭಾ ಸದಸ್ಯ ಡಾ.ಸಿ.ಎನ್.ಮಂಜುನಾಥ್, ಕರ್ನಾಟಕ ಸಂಸ್ಕೃತ ವಿ.ವಿ ಕುಲಪತಿ ಪ್ರೊ. ಅಹಲ್ಯಾ ಎಸ್ ಸೇರಿದಂತೆ ಇನ್ನಿತರರು ಉಪಸ್ಥಿತರಿದ್ದರು.

> ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯವು ಭವಿಷ್ಯದಲ್ಲಿ ಸಂಸ್ಕೃತ ಅಧ್ಯಯನ, ಸಂಶೋಧನೆ, ಹಸ್ತಪ್ರತಿ ಸಂರಕ್ಷಣೆ ಮತ್ತು ಅಂತರರಾಷ್ಟ್ರೀಯ ಶೈಕ್ಷಣಿಕ ಸಹಯೋಗದಲ್ಲಿ ಮತ್ತಷ್ಟು ಸಾಧನೆ ಮಾಡಲಿದೆ ಎಂಬ ವಿಶ್ವಾಸವಿದೆ. ಯೋಗ, ಆಯುರ್ವೇದ, ಧ್ಯಾನ ಮತ್ತು ನೈತಿಕ ಜೀವನದ ತತ್ವಗಳು ಇಂದಿಗೂ ಪ್ರಸ್ತುತವಾಗಿವೆ.
>
> **-ಥಾವರ್ ಚಂದ್ ಗೆಹ್ಲೋಟ್**, ರಾಜ್ಯಪಾಲ

> ಪದವಿ ಕೇವಲ ಪ್ರಮಾಣಪತ್ರವಲ್ಲ, ಅದು ಸಮಾಜದಲ್ಲಿ ಬದಲಾವಣೆ ತರಬಲ್ಲ ಶಕ್ತಿ. ವಿವಿಯ ಡಿಜಿಟಲ್ ಗ್ರಂಥಾಲಯ, ಪರಂಪರೆಯ ಜ್ಞಾನ ಮುಂದಿನ ಪೀಳಿಗೆಗೆ ಸಾಗಿಸಲು ಪಾಂಡುಲಿಪಿ ಸಂರಕ್ಷಣೆ, ಕೃತಕ ಬುದ್ಧಿಮತ್ತೆ ತರಬೇತಿ ಕಾರ್ಯಕ್ರಮ ಪರಿಚಯಿಸಲಾಗಿದೆ. ವಿದೇಶಿ ವಿವಿಗಳೊಂದಿಗೆ ಜ್ಞಾನ ವಿನಿಮಯದ ಅವಕಾಶ ಕಲ್ಪಿಸಿದೆ.
>
> **-ಪ್ರೊ. ಅಹಲ್ಯಾ ಎಸ್. ಕುಲಪತಿ**

6 ಜನರಿಗೆ ಗೌರವ ಡಾಕ್ಟರೇಟ್, 36 ಮಂದಿಗೆ ಪಿಎಚ್.ಡಿ ಪದವಿ

ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯದ 12ನೇ ಮತ್ತು 13ನೇ ದೀಕ್ಷಾಂತ ಘಟಿಕೋತ್ಸವದಲ್ಲಿ ಭಿಕ್ಷು ಆನಂದ ಥೇರ ಸ್ವಾಮೀಜಿ, ಡಾ. ಪುಷ್ಪಾ ದೀಕ್ಷಿತ್, ಡಾ. ವ್ಯಾಸನ್ ಕೆರೆ ಪ್ರಭಂಜನಾಚಾರ್ಯ, ಡಾ. ನಿರ್ಮಲಾನಂದನಾಥ ಸ್ವಾಮೀಜಿ, ಪ್ರೊ. ಶಿಂಗಪ್ಪ ಎಚ್.ಎಂ. ಮತ್ತು ಪ್ರೊ. ಸುಕಾಂತ ಕುಮಾರ್ ಸೇನಾಪತಿ ಅವರಿಗೆ ಧರ್ಮ ಮತ್ತು ಸಂಸ್ಕೃತಿಯ ಪ್ರಚಾರ ಹಾಗೂ ಸಮಾಜ ಸೇವೆಯಲ್ಲಿ ನೀಡಿದ ಕೊಡುಗೆಗಾಗಿ ಗೌರವ ಪದವಿಗಳನ್ನು ಪ್ರದಾನ ಮಾಡಲಾಯಿತು. ವಿವಿಧ ವಿಭಾಗಗಗಳಲ್ಲಿ ಸಂಶೋಧನೆ ಪೂರ್ಣಗೊಳಿಸಿಸಿರುವ 36 ವಿದ್ಯಾರ್ಥಿಗಳಿಗೆ ಪಿಎಚ್.ಡಿ-ವಿದ್ಯಾವಾರಿಧಿ ಪದವಿ. 2023-24 ಮತ್ತು 2024-25ನೇ ಶೈಕ್ಷಣಿಕ ವರ್ಷಗಳಲ್ಲಿ ಉತ್ತೀರ್ಣರಾದ ಒಟ್ಟು 917 ವಿದ್ಯಾರ್ಥಿಗಳಿಗೆ ಸ್ನಾತಕ ಹಾಗೂ ಸ್ನಾತಕೋತ್ತರ ಪದವಿ, ವಿವಿಧ ದತ್ತಿನಿಧಿಗಳ ಮೂಲಕ 53 ವಿದ್ಯಾರ್ಥಿಗಳಿಗೆ ಸ್ವರ್ಣ ಪದಕಗಳನ್ನು ಪ್ರದಾನ ಮಾಡಲಾಯಿತು.

ಮಹಾರಾಷ್ಟ್ರ ರಾಜ್ಯ ಪೊಲೀಸ್ ವತಿಯಿಂದ ನಾಗಪುರದಲ್ಲಿ ಮಾ. 29 ರಿಂದ ಏ. 3ರವರೆಗೆ ನಡೆದ ಆಲ್ ಇಂಡಿಯಾ ಪೊಲೀಸ್ ಡ್ಯೂಟಿ ಮೀಟ್ 2026 ರಲ್ಲಿ 5 ಚಿನ್ನ, 2 ಬೆಳ್ಳಿ, 1 ಕಂಚಿನ ಪದಕಗಳಿಂದ ಚಾಂಪಿಯನ್ ಟ್ರೋಫಿ ತನ್ನದಾಗಿಸಿಕೊಂಡ ಸಿಆರ್‌ಪಿಎಫ್‌ನ ಕೆ9 ತಂಡಕ್ಕೆ ಗೃಹ ವ್ಯವಹಾರಗಳ ರಾಜ್ಯ ಸಚಿವ ನಿತ್ಯಾನಂದ ರೈ ಅವರು ಟ್ರೋಫಿ ನೀಡಿದರು.

ಜನಗಣತಿಯಲ್ಲಿ ಆಯುಕ್ತರು ಭಾಗಿ

ಬೆಂಗಳೂರು: ದಕ್ಷಿಣ ನಗರ ಪಾಲಿಕೆ ವ್ಯಾಪ್ತಿಯಲ್ಲಿ ರಾಷ್ಟ್ರೀಯ ಜನಗಣತಿ ಕಾರ್ಯವನ್ನು ವ್ಯವಸ್ಥಿತವಾಗಿ ನಡೆಸಲು ಅಗತ್ಯ ಸಿದ್ಧತೆಗಳು ಭರದಿಂದ ಸಾಗಿದ್ದು, ಜೆಪಿ ನಗರದ ಆರ್‌ವಿ ಡೆಂಟಲ್ ಕಾಲೇಜಿನಲ್ಲಿ ಪಾಲಿಕೆ ಆಯುಕ್ತರು, ಪ್ರಧಾನ ಜನಗಣತಿ ಅಧಿಕಾರಿಗಳು ಶಿಬಿರಕ್ಕೆ ಭೇಟಿ ನೀಡಿ ಪ್ರತಿಕ್ರಿಯೆಗಳನ್ನು ಪರಿಶೀಲಿಸಿದರು.

ಆಯುಕ್ತರಿಂದ ಸ್ವಯಂ ಗಣತಿ: ತರಬೇತಿ ಕೇಂದ್ರಕ್ಕೆ ಭೇಟಿ ನೀಡಿದ ಸಂದರ್ಭದಲ್ಲಿ ಆಯುಕ್ತರು ಸ್ವತಃ ತಾವೇ 'ಸ್ವಯಂ ಜನಗಣತಿ' ಪ್ರಕ್ರಿಯೆಯಲ್ಲಿ ಪಾಲ್ಗೊಂಡು ತಮ್ಮ ವಿವರಗಳನ್ನು ನೋಂದಾಯಿಸುವ ಮೂಲಕ ಗಣತಿದಾರರು ಹಾಗೂ ಮೇಲ್ವಿಚಾರಕರು ಸಹ ಅವರೊಂದಿಗೆ ಸ್ವಯಂ ಗಣತಿಯಲ್ಲಿ ಪಾಲ್ಗೊಳ್ಳಲು ಪ್ರೇರೇಪಿಸಿದರು. ಇದರಿಂದ ತರಬೇತಿ ಕೊಠಡಿಯಲ್ಲಿದ್ದ ಸುಮಾರು 100ಕ್ಕೂ ಹೆಚ್ಚು ಗಣತಿದಾರರು ಮತ್ತು ಮೇಲ್ವಿಚಾರಕರು ಏಕಕಾಲದಲ್ಲಿ ಈ ಸ್ವಯಂ ಗಣತಿ ಪ್ರಕ್ರಿಯೆಯಲ್ಲಿ ಭಾಗವಹಿಸಿದ್ದು ವಿಶೇಷವಾಗಿತ್ತು. ಸಾರ್ವಜನಿಕರು ಆನ್‌ಲೈನ್ ಮೂಲಕ ತಮ್ಮ ವಿವರಗಳನ್ನು ತಾವೇ ದಾಖಲಿಸುವುದರಿಂದ ಸಮಯ ಉಳಿತಾಯವಾಗುವುದಲ್ಲದೆ, ನಿಖರವಾದ ಮಾಹಿತಿ ಲಭ್ಯವಾಗುತ್ತದೆ. ಇದನ್ನು ಉತ್ತೇಜಿಸಲು ಅಧಿಕಾರಿಗಳೇ ಮೊದಲು ಭಾಗವಹಿಸುವುದು ಅಗತ್ಯ, ಎಂದು ಈ ಸಂದರ್ಭದಲ್ಲಿ ಆಯುಕ್ತರು ತಿಳಿಸಿದರು.

ಗಣತಿದಾರರೊಂದಿಗೆ ಸಂವಾದ ಮತ್ತು ಮಾರ್ಗದರ್ಶನ: ತರಬೇತಿ ಕೇಂದ್ರದಲ್ಲಿ ಗಣತಿದಾರರು ಎದುರಿಸುತ್ತಿರುವ ತಾಂತ್ರಿಕ ಸವಾಲುಗಳು ಮತ್ತು ಕ್ಷೇತ್ರಕಾರ್ಯದ ವೇಳೆ ಉದ್ಭವಿಸಬಹುದಾದ ಸಮಸ್ಯೆಗಳ ಕುರಿತು ಆಯುಕ್ತರು ಸುದೀರ್ಘವಾಗಿ ಚರ್ಚಿಸಿದರು. ಆಯುಕ್ತರು ಕೇವಲ ವೇದಿಕೆಯ ಮೇಲೆ ಭಾಷಣ ಮಾಡದೆ, ಪ್ರತಿಯೊಬ್ಬ ಗಣತಿದಾರರ ಬಳಿ ತೆರಳಿ ಅವರ ಸಂದೇಹಗಳನ್ನು ಆಲಿಸಿದರು. ಹಾಗೂ ಮೊಬೈಲ್ ಆಪ್ ಬಳಕೆ, ದತ್ತಾಂಶ ಸುರಕ್ಷತೆ ಮತ್ತು ಮನೆಗಳ ಗುರುತಿಸುವಿಕೆಯಲ್ಲಿ ಇರುವ ಗೊಂದಲಗಳಿಗೆ ಸ್ಥಳದಲ್ಲೇ ಪರಿಹಾರ ಸೂಚಿಸಿದರು.

ಜನಗಣತಿಯು ದೇಶದ ಭವಿಷ್ಯದ ಯೋಜನೆಗಳ ರೂಪಿಸುವಿಕೆಗೆ ಬುನಾದಿಯಾಗಿದೆ. ಬೆಂಗಳೂರಿನಂತಹ ಪ್ರದೇಶದಲ್ಲಿ ಪ್ರತಿ ಮನೆಯನ್ನು ತಲುಪುವುದು ಸವಾಲಿನ ಕೆಲಸ. ಬೆಂಗಳೂರು ದಕ್ಷಿಣದ ಪ್ರತಿಯೊಬ್ಬ ನಾಗರಿಕನ ಮಾಹಿತಿ ಸರಿಯಾಗಿ ದಾಖಲಾಗುವುದನ್ನು ಖಚಿತಪಡಿಸಿ ಕೊಳ್ಳುವುದು ಪ್ರತಿಯೊಬ್ಬ ಗಣತಿದಾರನ ಕರ್ತವ್ಯ ಎಂದು ತಿಳಿಸಿದರು. ಈ ವೇಳೆ ತರಬೇತಿ ಚಾರ್ಜ್ ಅಧಿಕಾರಿಯಾದ ಮನು ಗೌಡ ಹಾಗೂ ಇನ್ನಿತರ ಅಧಿಕಾರಿಗಳು ಉಪಸ್ಥಿತರಿದ್ದರು.

ಮಳೆಗಾಲ: ಮುನ್ನೆಚ್ಚರಿಕಾ ಕ್ರಮ ಕೈಗೊಳ್ಳಿ

ಬೆಂಗಳೂರು: ನಗರ ಪಾಲಿಕೆ ವ್ಯಾಪ್ತಿಯಲ್ಲಿ ಮುಂಬರು ಮಳೆಗಾಲದ ಮುನ್ನೆಚ್ಚರಿಕಾ ಸಿದ್ಧತೆಗಳು ಹಾಗೂ ಕಾಮಗಾರಿಗಳ ಪ್ರಗತಿ ಕುರಿತು ಅಧಿಕಾರಿಗಳೊಂದಿಗೆ ಪಶ್ಚಿಮ ನಗರ ಪಾಲಿಕೆ ಆಯುಕ್ತ ಡಾ. ರಾಜೇಂದ್ರ ಕೆ.ವಿ ಸಭೆ ನಡೆಸಿದರು.

ಸಭೆಯಲ್ಲಿ ಆಯುಕ್ತರು ಮಳೆಗಾಲದ ಸಮಯದಲ್ಲಿ ಯಾವುದೇ ಲೋಪಗಳಿಲ್ಲದಂತೆ ವಿಭಾಗ ಮಟ್ಟದಲ್ಲಿ ಎಲ್ಲಾ ಅಭಿಯಂತರರು ಸಮರ್ಪಕ ಮುಂಜಾಗ್ರತಾ ಕ್ರಮಗಳನ್ನು ಕೈಗೊಳ್ಳಬೇಕು. ಪಾಲಿಕೆ ವ್ಯಾಪ್ತಿಯಲ್ಲಿರುವ ನೀರು ನಿಲ್ಲುವ ಸ್ಥಳಗಳನ್ನು ಮುಂಚಿತವಾಗಿ ಗುರುತಿಸಿ, ತಕ್ಷಣ ಪರಿಹಾರ ಕ್ರಮಗಳನ್ನು ಕೈಗೊಳ್ಳಬೇಕು. ರಾಜಕಾಲುವೆ ಹಾಗೂ ಶೋಲ್ಡರ್ ಡ್ರೇನ್ ಗಳ ಶುದ್ಧೀಕರಣ ಕಾರ್ಯಗಳನ್ನು ತುರ್ತುವಾಗಿ ಕೈಗೊಳ್ಳಬೇಕು. ಜತೆಗೆ ಡೆಬ್ರೀಸ್ ತೆರವುಗೊಳಿಸುವ ಕಾರ್ಯವನ್ನು ಸಮಗ್ರವಾಗಿ ನಡೆಸಬೇಕು. ರಸ್ತೆಗಳಲ್ಲಿರುವ ಗುಂಡಿಗಳನ್ನು ತಕ್ಷಣವೇ ಮುಚ್ಚಿ ಸಾರ್ವಜನಿಕರಿಗೆ ಅನುಕೂಲವಾಗುವಂತೆ ಕ್ರಮ ಕೈಗೊಳ್ಳಲು ತಿಳಿಸಿದರು.

ಪಶ್ಚಿಮ ನಗರ ಪಾಲಿಕೆ ಆಯುಕ್ತ ಡಾ. ರಾಜೇಂದ್ರ ಕೆ.ವಿ ಅವರು ಅಧಿಕಾರಿಗಳೊಂದಿಗೆ ಸಭೆ ನಡೆಸಿದರು.

ಸಹಾಯಕ ಕಾರ್ಯಪಾಲಕ ಅಭಿಯಂತರರ ಮಟ್ಟದಲ್ಲಿ ನಿಯಂತ್ರಣ ಕೊಠಡಿಗಳನ್ನು ಸ್ಥಾಪಿಸಿ, ತ್ವರಿತ ಸಂವಹನಕ್ಕಾಗಿ ವಾಟ್ಸ್‌ಆಪ್ ಗುಂಪುಗಳನ್ನು ರಚಿಸಿ ಪರಿಣಾಮಕಾರಿಯಾಗಿ ಜಾರಿಗೊಳಿಸಬೇಕು. ಅಪಾಯದ ಪರಿಸ್ಥಿತಿಗಳಲ್ಲಿ ಸಾರ್ವಜನಿಕರಿಗೆ ನೆರವಾಗಲು ಕಾಳಜಿ ಕೇಂದ್ರಗಳನ್ನು ರಚಿಸಲು ಸ್ಥಳ ಗುರುತಿಸಿ ಸಿದ್ಧವಾಗಿರಿಸಿ. ಪ್ರವಾಹ ಸಂಬಂಧಿತ ಕಾರ್ಯಗಳಿಗೆ ಅಗತ್ಯವಿರುವ ಯಂತ್ರೋಪಕರಣಗಳು, ಮಾನವ ಸಂಪನ್ಮೂಲಗಳು ಹಾಗೂ ಇತರ ಸೌಲಭ್ಯಗಳ ಮ್ಯಾಪಿಂಗ್ ಕಾರ್ಯವನ್ನು ಪೂರ್ಣಗೊಳಿಸಬೇಕು ಎಂದು ಸೂಚಿಸಿದರು. ಪಾಲಿಕೆ ವ್ಯಾಪ್ತಿಯಲ್ಲಿರುವ ಅನಧಿಕೃತ ಫ್ಲೆಕ್ಸ್ ಬ್ಯಾನರ್‌ಗಳನ್ನು ತಕ್ಷಣವೇ ತೆರವುಗೊಳಿಸಬೇಕು. ಅಗತ್ಯವಿರುವ ಸ್ಥಳಗಳಲ್ಲಿ ಬೀದಿ ದೀಪಗಳನ್ನು ಬದಲಾಯಿಸಿ ಸರಿಪಡಿಸಲು ವಿದ್ಯುತ್ ವಿಭಾ ಗದ ಕಾರ್ಯಪಾಲಕ ಅಭಿಯಂತರರಿಗೆ ಸೂಚಿಸಿದರು.

ಕಚೇರಿ ಸ್ಥಳದ ಮಾರುಕಟ್ಟೆ: ಬೆಂಗಳೂರು ದೇಶದಲ್ಲೇ ಮುಂದು

ಬೆಂಗಳೂರು: ಭಾರತದ ರಿಯಲ್ ಎಸ್ಟೇಟ್ ಕ್ಷೇತ್ರದಲ್ಲಿ ಕಚೇರಿ ಸ್ಥಳಾವಕಾಶಗಳ ಮಾರುಕಟ್ಟೆಯಲ್ಲಿ ಬೆಂಗಳೂರು ದೇಶದಲ್ಲೇ ಮುಂಚೂಣಿಯಲ್ಲಿದ್ದು, 2026ರ ಮೊದಲ ತ್ರೈಮಾಸಿಕದಲ್ಲಿ 9.2 ಮಿಲಿಯನ್ ಚದರ ಅಡಿ ವ್ಯವಹಾರಗಳನ್ನು ದಾಖಲಿಸಿದೆ ಎಂದು ನೈಟ್ ಫ್ರ್ಯಾಂಕ್ ಇಂಡಿಯಾ ತನ್ನ ಇತ್ತೀಚಿನ ವರದಿಯಲ್ಲಿ ತಿಳಿಸಿದೆ.

ಈ ಕುರಿತು ನೈಟ್ ಫ್ರ್ಯಾಂಕ್ ಇಂಡಿಯಾದ ಬೆಂಗಳೂರಿನ ಆಕ್ಯುಪೈಯರ್ ಸ್ಟ್ರಾಟಜಿ ಮತ್ತು ಸೊಲ್ಯೂಷನ್ಸ್ ವಿಭಾಗದ ರಾಷ್ಟ್ರೀಯ ನಿರ್ದೇಶಕ ರಾಹಿಲ್ ಗಿಬ್ರಾನ್ ಅವರು ಮಾತನಾಡಿ, ನಗರದ ವಸತಿ ಮಾರುಕಟ್ಟೆಯೂ ಸ್ಥಿರ ಬೆಳವಣಿಗೆ ಕಾಣಿಸಿಕೊಂಡಿದೆ. ವರದಿ ಪ್ರಕಾರ, ಬೆಂಗಳೂರಿನ ವಸತಿ ವಲಯವು ವರ್ಷದಿಂದ ವರ್ಷಕ್ಕೆ ಶೇ. 5ರಷ್ಟು ಏರಿಕೆಯಾಗಿದೆ. ಕಳೆದ ವರ್ಷದ ಇದೇ ಅವಧಿಯಲ್ಲಿ 12,504 ಯುನಿಟ್‌ಗಳಿದ್ದ ಮಾರಾಟ ಈ ವರ್ಷ 13,092 ಯುನಿಟ್‌ಗಳಿಗೆ ಏರಿಕೆಯಾಗಿದೆ. ಭಾರತದ ಒಟ್ಟಾರೆ ವಸತಿ ಮಾರುಕಟ್ಟೆಯಲ್ಲಿ ಶೇ 4ರಷ್ಟು ಕುಸಿತ ಕಂಡುಬರುತ್ತಿರುವ ಸಂದರ್ಭದಲ್ಲಿಯೇ ಬೆಂಗಳೂರಿನ ಈ ಸಾಧನೆ ವಿಶೇಷವಾಗಿದೆ. ಕಡಿಮೆ ಬೆಲೆಯ ವಸತಿ ವಿಭಾಗದಲ್ಲಿ ಕುಸಿತ ಕಂಡುಬಂದರೂ, ಮಧ್ಯಮ ಹಾಗೂ ಲಕ್ಸುರಿ ವಸತಿ ವಿಭಾಗಗಳಲ್ಲಿ ಗಣನೀಯ ಏರಿಕೆ ಕಂಡುಬಂದಿದೆ.

ಕನಕಪುರದಿಂದ ನಾಲ್ಕು ಬಸ್ ಸಂಚಾರ ಆರಂಭ

ಬೆಂಗಳೂರು: ರಾಜಧಾನಿ ಬೆಂಗಳೂರಿನಿಂದ ಕನಕಪುರಕ್ಕೆ ಬಸ್ ಸೇವೆ ಒದಗಿಸುವಂತೆ ಸಾರ್ವಜನಿಕರು ಹಾಗೂ ಉದ್ಯೋಗಿಗಳ ಮನವಿಗೆ ಕೆಎಸ್‌ಆರ್‌ಟಿಸಿಯು ನಾಲ್ಕು ಬಸ್‌ಗಳನ್ನು ನಿಯೋಜಿಸಲು ಮುಂದಾಗಿದೆ.

ಕಳೆದ ಎರಡು ದಶಕಗಳಿಂದ ಬೆಂಗಳೂರಿನಿಂದ ಕನಕಪುರಕ್ಕೆ ನೇರ ಬಸ್ ಸೇವೆ ಇರಲಿಲ್ಲ. ಇದರಿಂದ ಸಾರ್ವಜನಿಕರು ಹಾಗೂ ಉದ್ಯೋಗಿಗಳಿಗೆ ಸಂಚಾರವೇ ದೊಡ್ಡ ಸಮಸ್ಯೆಯಾಗಿ ಪರಿಣಮಿಸಿತ್ತು. 2003ರಲ್ಲಿ ಕಾರಣಾಂತಗಳಿಂದ ಕನಕಪುರಕ್ಕೆ ಬಸ್‌ಗಳ ಸಂಚಾರ ಸ್ಥಗಿತವಾಗಿತ್ತು. ಇದರಿಂದ ಒಂದಷ್ಟು ಸಮಸ್ಯೆಗಳು ಉಂಟಾಗಿತ್ತು. ಇದನ್ನು ಗಮನಿಸಿದ ಜನ ಕರ್ನಾಟಕ ಜನಪರ ವೇದಿಕೆ ರಾಜ್ಯ ಸಲಹೆಗಾರ ಕುಮಾರ ಸ್ವಾಮಿ ಅವರು ಸಾರ್ವಜನಿಕರ ಹಿತದೃಷ್ಟಿಯಿಂದ ಇತ್ತೀಚೆಗೆ ಸಾರಿಗೆ ನಿಗಮಕ್ಕೆ ಮನವಿ ಸಲ್ಲಿಸಿದ್ದರು. ಬಸ್ ಸೇವೆಗಳಿಂದ ಒಂದಷ್ಟು ಅನುಕೂಲವಾಗಲಿದೆ ಎಂದು ವಿವರಿಸಿದ್ದರು.

ಮನವಿಗೆ ಸ್ಪಂದಿಸಿದ ಕೆಎಸ್‌ಆರ್‌ಟಿಸಿ ಅಧಿಕಾರಿಗಳು ಕನಕಪುರ-ಬೆಂಗಳೂರು ನಡುವೆ ಬೆಳಗ್ಗೆ ಮತ್ತು ಸಂಜೆ ನಾಲ್ಕು ಬಸ್‌ಗಳ ಕಾರ್ಯಾಚರಣೆಯನ್ನು ಆರಂಭಿಸಿದೆ. ಈ ಮೂಲಕ 20 ವರ್ಷಗಳ ಬಳಿಕ ಕಾರ್ಮಿಕರು, ಸಾರ್ವಜನಿಕರು, ಮಹಿಳೆಯರು ಸೇರಿದಂತೆ ಸಾವಿರಾರು ಪ್ರಯಾಣಿಕರಿಗೆ ನಿತ್ಯ ಬಸ್ ಸೇವೆ ಲಭಿಸಿದಂತಾಗಿದೆ. ಕನಕಪುರದಿಂದ ಬೆಳಗ್ಗೆ 6.30, 7.30, 08 ಗಂಟೆ ಹಾಗೂ 09 ಗಂಟೆಗೆ ಬೆಂಗಳೂರು ಕೆಂಪೇಗೌಡ ಬಸ್ ನಿಲ್ದಾಣಕ್ಕೆ ಬರಲಿವೆ. ಬೆಂಗಳೂರು ಬಸ್ ನಿಲ್ದಾಣದಿಂದ ಸಂಜೆ 5.30, 6.30 ಮತ್ತು 8.30 ಕ್ಕೆ ಕನಕಪುರಕ್ಕೆ ಕೆಎಸ್‌ಆರ್‌ಟಿಸಿ ಬಸ್‌ಗಳನ್ನು ಕಾರ್ಯಾಚರಣೆ ಮಾಡಲಾಗುತ್ತಿದೆ ಎಂದು ಪ್ರಕಟಣೆಯಲ್ಲಿ ತಿಳಿಸಿದೆ.

2,562 ಹೆಣ್ಣು ಮಕ್ಕಳಿಗೆ ಎಚ್‌ಪಿವಿ ಲಸಿಕೆ



ಬೆಂಗಳೂರು: ಜಿಬಿಎ ವ್ಯಾಪ್ತಿಯಲ್ಲಿ ಎಚ್‌ಪಿವಿ ಲಸಿಕಾ ಅಭಿಯಾನ ಕಾರ್ಯಕ್ರಮವನ್ನು ಆಯೋಜಿಸಲಾಗಿದ್ದು, 2562 ಹೆಣ್ಣು ಮಕ್ಕಳಿಗೆ ಲಸಿಕೆ ನೀಡಲಾಗಿದೆ. ಜಿಬಿಎ ವ್ಯಾಪ್ತಿಯ 365 ವಾರ್ಡುಗಳಲ್ಲಿ 1,18,339 ಹೆಣ್ಣು ಮಕ್ಕಳಿಗೆ ಲಸಿಕೆ ನೀಡುವ ಗುರಿ ಹೊಂದಲಾಗಿದ್ದು, ಈ ಲಸಿಕೆಯನ್ನು 145 ನಗರ ಪ್ರಾಥಮಿಕ ಆರೋಗ್ಯ ಕೇಂದ್ರಗಳಲ್ಲಿ ನೀಡಲಾಗು ತ್ತಿದೆ. ಈಗಾಗಲೇ ಖಾಸಗಿ ಆಸ್ಪತ್ರೆಗಳಲ್ಲಿ ಲಸಿಕೆ ಪಡೆದಿರುವ ಮಕ್ಕಳಿಗೆ ಮರು ಲಸಿಕೆ ನೀಡಲಾ ಗುವುದಿಲ್ಲ, ಇಲ್ಲಿಯವರೆಗೆ ಜಿಬಿಎ ವ್ಯಾಪ್ತಿಯಲ್ಲಿ 2562 ಹೆಣ್ಣು ಮಕ್ಕಳಿಗೆ ಲಸಿಕೆ ನೀಡಲಾಗಿದ್ದು, ಯಾವುದೇ ಅಡ್ಡ ಪರಿಣಾಮಗಳು ವರದಿಯಾಗಿಲ್ಲ. ಪಾಲಕರು ಯಾವುದೇ ತಪ್ಪು ನಂಬಿಕೆಗಳು ಅಥವಾ ಸಾಮಾಜಿಕ ಜಾಲತಾಣಗಳಲ್ಲಿ ಹರಡುವ ಸುಳ್ಳು ಮಾಹಿತಿಗಳಿಗೆ ಒಳಗಾಗದೆ, ತಮ್ಮ ಮಕ್ಕಳ ಭವಿಷ್ಯ ಆರೋಗ್ಯದ ದೃಷ್ಟಿಯಿಂದ ಸಮೀಪದ ಆರೋಗ್ಯ ಕೇಂದ್ರಗಳನ್ನು ಸಂಪರ್ಕಿಸಿ 14 ರಿಂದ 15 ವರ್ಷದ ಎಲ್ಲಾ ಹೆಣ್ಣು ಮಕ್ಕಳಿಗೂ ಏಕ್ಕ ಲಸಿಕೆ ಹಾಕಿಸುವಂತೆ ವಿನಂತಿಸಲಾಗಿದೆ. ಪೋಷಕರ ಪೂರ್ಣ ಸಹಕಾರದಿಂದ ಮಾತ್ರ ಈ ಅಭಿಯಾನವನ್ನು ಯಶಸ್ವಿಗೊಳಿಸಲು ಸಾಧ್ಯವಾಗುತ್ತದೆ. ಪೋಷಕರು ತಮ್ಮ ಮಕ್ಕಳನ್ನು ಸಮೀಪದ ಆರೋಗ್ಯ ಕೇಂದ್ರಗಳಿಗೆ ಕರೆದುಕೊಂಡು ಹೋಗಿ ಶೇ.100ರಷ್ಟು ಲಸಿಕಾಕರಣ ಸಾಧಿಸಲು ಸಹಕರಿಸುವಂತೆ ಮನವಿ ಮಾಡಲಾಗಿದೆ.

ಮಹಿಳಾ ದಿನಾಚರಣೆಯಲ್ಲಿ ಸರಕಾರದ ಮುಖ್ಯ ಕಾರ್ಯದರ್ಶಿ ಡಾ.ಶಾಲಿನಿ ರಜನೀಶ್

ಆಡಳಿತದಲ್ಲಿ ಮಹಿಳೆಯರ ಪಾತ್ರ ಮಹತ್ವ

ಬೆಂಗಳೂರು: ಮಹಿಳೆಯರು ಇಂದು ಸರಕಾರಿ ಸೇವೆ ಸೇರಿದಂತೆ ವಿವಿಧ ಕ್ಷೇತ್ರಗಳಲ್ಲಿ ಹೆಚ್ಚಿನ ಪ್ರಮಾಣದಲ್ಲಿ ಭಾಗವಹಿಸುತ್ತಿರುವುದು ಸಮಾಜಿಕ ಪ್ರಗತಿಯ ಪ್ರಮುಖ ಸೂಚಕವಾಗಿದೆ ಎಂದು ಸರಕಾರದ ಮುಖ್ಯ ಕಾರ್ಯದರ್ಶಿ ಡಾ.ಶಾಲಿನಿ ರಜನೀಶ್ ತಿಳಿಸಿದರು.

ಕರ್ನಾಟಕ ರಾಜ್ಯ ಸರಕಾರಿ ನೌಕರರ ಸಂಘದ ವತಿಯಿಂದ ಮಂಗಳವಾರ ಆಯೋಜಿಸಿದ್ದ ಅಂತಾರಾಷ್ಟ್ರೀಯ ಮಹಿಳಾ ದಿನಾಚರಣೆ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ನಾಗರಿಕ ಸೇವೆ ಮಾಡುವ ಸಂದರ್ಭದಲ್ಲಿ ಮಹಿಳಾ ನೌಕರರು ತಮ್ಮ ಸಹಜವಾದ ಅನುಕಂಪ, ಸಹನೆ ಮತ್ತು ಜವಾಬ್ದಾರಿತನವನ್ನು ಬಳಸಿಕೊಂಡು ಕೆಲಸ ಮಾಡಿದರೆ, ಜನತೆಗೆ ಇನ್ನಷ್ಟು ಉತ್ತಮ ಸೇವೆ ನೀಡಲು ಸಾಧ್ಯವಾಗುತ್ತದೆ. ಮಹಿಳೆಯರ ಮೇಲಿನ ಕಾಳಜಿ ಮತ್ತು ಮಮತೆಯಿಂದ ಇಂತಹ ಕಾರ್ಯಕ್ರಮಗಳನ್ನು ಅಚ್ಚುಕಟ್ಟಾಗಿ ಆಯೋಜಿಸಿರುವುದು ಶ್ಲಾಘನೀಯ. ಮಹಿಳಾ ನೌಕರರು ತಮ್ಮ ಕರ್ತವ್ಯಗಳನ್ನು ಮನೆಯ ಜವಾಬ್ದಾರಿಯಂತೆ ಭಾವಿಸಿ ನಿರ್ವಹಿಸಿದಾಗ, ಆಡಳಿತ ವ್ಯವಸ್ಥೆಯಲ್ಲಿ ಗುಣಾತ್ಮಕ ಬದಲಾವಣೆ ಸಾಧ್ಯವಾಗುತ್ತದೆ ಎಂದರು.

ಈ ವೇಳೆ ರಾಜ್ಯ ಮಹಿಳಾ ಆಯೋಗದ ಅಧ್ಯಕ್ಷೆ ಡಾ. ನಾಗಲಕ್ಷ್ಮಿ ಚೌಧರಿ ಮಾತನಾಡಿ, ಮಹಿಳೆಯರಿಗೆ ಕುಟುಂಬ ಹಾಗೂ ಸಮಾಜದಲ್ಲಿ ಸಮಾನ ಸ್ಥಾನಮಾನ ಸಿಗಬೇಕಾಗಿರುವುದು ಇಂದಿನ ಅಗತ್ಯವಾಗಿದೆ. ಎಷ್ಟು ಕುಟುಂಬಗಳಲ್ಲಿ ಮಹಿಳೆಯರಿಗೆ ಸಮಾನ ಗೌರವ ಮತ್ತು ಸಹಕಾರ ದೊರೆಯುತ್ತಿದೆ ಎಂಬ ಪ್ರಶ್ನೆಯನ್ನು ಎಲ್ಲರು ಅರಿಯಬೇಕು. ಹೆರಿಗೆ ಸಂದರ್ಭದಲ್ಲಿ ಮಹಿಳೆ ಅನುಭವಿಸುವ ನೋವು ಮತ್ತು ಅದರ ನಂತರದ ಜೀವನವನ್ನು ಪುನರ್‌ಜನ್ಮದಂತೆ ಪರಿಗಣಿಸಬಹುದು. ಇಂತಹ ಶಕ್ತಿಶಾಲಿ ಮಹಿಳೆಯರ ಪರವಾಗಿ ಧ್ವನಿ ಎತ್ತಿದ ಮೊದಲ ವ್ಯಕ್ತಿ ಬಸವಣ್ಣ. ಅವರ ಸಮಾನತೆ ಮತ್ತು ನ್ಯಾಯಕತ್ವಗಳು ಇಂದಿಗೂ ಪ್ರಸ್ತುತವಾಗಿವೆ ಎಂದರು.



ಅಂತಾರಾಷ್ಟ್ರೀಯ ಮಹಿಳಾ ದಿನಾಚರಣೆ ಕಾರ್ಯಕ್ರಮವನ್ನು ಮುಖ್ಯ ಕಾರ್ಯದರ್ಶಿ ಡಾ. ಶಾಲಿನಿ ರಜನೀಶ್ ಉದ್ಘಾಟಿಸಿದರು. ಈ ವೇಳೆ ರಾಜ್ಯ ಮಹಿಳಾ ಆಯೋಗದ ಅಧ್ಯಕ್ಷೆ ಡಾ. ನಾಗಲಕ್ಷ್ಮಿ ಚೌಧರಿ, ನಟಿ ಸಪ್ತಮಿ ಗೌಡ, ಕರ್ನಾಟಕ ರಾಜ್ಯ ಸರಕಾರಿ ನೌಕರರ ಸಂಘದ ರಾಜ್ಯಾಧ್ಯಕ್ಷ ಸಿ.ಎಸ್. ಷಡಾಕ್ಷರಿ ಸೇರಿದಂತೆ ಇನ್ನಿತರರು ಉಪಸ್ಥಿತರಿದ್ದರು.

> ಇಂದಿನ ಯುಗದಲ್ಲಿ ಹೆಣ್ಣುಮಕ್ಕಳು ಕೇವಲ ಶಿಕ್ಷಣ ಕ್ಷೇತ್ರದಲ್ಲಷ್ಟೇ ಅಲ್ಲದೆ ಕ್ರೀಡೆ, ವಿಶೇಷವಾಗಿ ಅಥ್ಲೆಟಿಕ್ಸ್ ಸೇರಿದಂತೆ ವಿವಿಧ ಕ್ಷೇತ್ರಗಳಲ್ಲಿ ತಮ್ಮ ಸಾಮರ್ಥ್ಯವನ್ನು ತೋರಿಸಬೇಕಾಗಿದೆ. ಮಹಿಳೆಯರು ತಮ್ಮ ಪ್ರತಿಭೆಯನ್ನು ಹೊರಹಾಕಲು ಯಾವುದೇ ಅಡ್ಡಿಯನ್ನು ಪರಿಗಣಿಸಬಾರದು. ಮಹಿಳೆಯರ ಮೇಲಿನ ದೌರ್ಜನ್ಯಗಳ ಬಗ್ಗೆ ಭಯವಿಲ್ಲದೆ ಸಮಾಜದ ಮುಖ್ಯವಾಹಿನಿಯಲ್ಲಿ ಚರ್ಚೆ ನಡೆಯಬೇಕು.
>
> **-ಸಪ್ತಮಿ ಗೌಡ**, ನಟಿ

ಚಿತ್ರದುರ್ಗ-ಬೆಂಗಳೂರು ಸಾರಿಗೆ ನೌಕರರ ಪಾದಯಾತ್ರೆ ಇಂದು

ಬೆಂಗಳೂರು: ವಿವಿಧ ಬೇಡಿಕೆ ಈಡೇರಿಕೆಗೆ ಆಗ್ರಹಿಸಿ ಪ್ರತಿಭಟನೆಯನ್ನು ತೀವ್ರಗೊಳಿಸಿರುವ ಕೆಎಸ್‌ಆರ್‌ಟಿಸಿ ಸಿಬ್ಬಂದಿ ಬುಧವಾರ ಚಿತ್ರದುರ್ಗದಿಂದ ಬೆಂಗಳೂರಿಗೆ ಪಾದಯಾತ್ರೆ ಆರಂಭಿಸಲಿದ್ದಾರೆ. ಜನವರಿ 1, 2024 ರಿಂದ 7 ನೇ ವೇತನ ಆಯೋಗದ ಮಾದರಿಯಲ್ಲಿ ಸರಕಾರಿ ನೌಕರರಿಗೆ ಸಮಾನವಾದ ವೇತನವನ್ನು ಜಾರಿಗೊಳಿಸುವುದು, 38 ತಿಂಗಳ ಬಾಕಿ ವೇತನ ಪಾವತಿ ಮತ್ತು ಕಾರ್ಮಿಕ ಸಂಘಟನೆಗಳ ಮಾನ್ಯತೆಗಾಗಿ ತಕ್ಷಣವೇ ಯೂನಿಯನ್ ಚುನಾವಣೆ ನಡೆಸುವುದು ಸೇರಿ ವಿವಿಧ ಬೇಡಿಕೆಗಳನ್ನು ಮುಂದಿಟ್ಟಿದ್ದಾರೆ. ಕಳೆದ 3 ವರ್ಷಗಳಿಂದ ರಾಜ್ಯ ಸರಕಾರ ಪದೇ ಪದೆ ಭರವಸೆ ನೀಡಿದ್ದರೂ ದೀರ್ಘಾವಧಿಯ ವಿಳಂಬದ ಕಾರಣ ಹಂತ ಹಂತವಾಗಿ ವೇತನ ಪಾವತಿಯನ್ನು ತಿರಸ್ಕರಿಸಿದ್ದಾರೆ. ಈ ಹಿನ್ನೆಲೆ ಬುಧವಾರ ಚಿತ್ರದುರ್ಗದಿಂದ ಪ್ರತಿಭಟನೆ ಆರಂಭವಾಗಲಿದ್ದು, ಜಿಲ್ಲಾಧಿಕಾರಿ ಮೂಲಕ ಸಿಎಂಗೆ ಮನವಿ ಸಲ್ಲಿಸಿ ಬೆಂಗಳೂರಿಗೆ ಪಾದಯಾತ್ರೆ ನಡೆಸಲಿದ್ದಾರೆ. ಮಾರ್ಚ್ 21 ರಂದು ಫ್ರೀಡಂ ಪಾರ್ಕ್‌ನಲ್ಲಿ ಸಮಾವೇಶಗೊಳ್ಳಲು ನಿರ್ಧರಿಸಲಾಗಿದ್ದು, ಅಲ್ಲಿ ಒಕ್ಕೂಟಗಳು ಅನಿರ್ದಿಷ್ಟಾವಧಿ ಉಪವಾಸ ಸತ್ಯಾಗ್ರಹವನ್ನು ನಡೆಸಲು ಯೋಜಿಸಿವೆ. ನಾಲ್ಕು ನಿಗಮಗಳಿಂದ ಸುಮಾರು 1.15 ಲಕ್ಷ ಉದ್ಯೋಗಿಗಳನ್ನು ಈ ಯೂನಿಯನ್ ಪ್ರತಿನಿಧಿಸಲಿದೆ.

ಕೆಎಸ್‌ಆರ್‌ಟಿಸಿ ಎಂಪ್ಲಾಯೀಸ್ ಲೀಗ್ ರಾಜ್ಯಾಧ್ಯಕ್ಷ ಆರ್. ಚಂದ್ರಶೇಖರ್ ಈ ಕುರಿತು ಮಾಹಿತಿ ನೀಡಿ, ಕಳೆದ ಮೂರು ವರ್ಷಗಳಿಂದ ಸರಕಾರ ಹಲವು ಬಾರಿ ಸಭೆ ನಡೆಸಿದ್ದರೂ ತಮ್ಮ ಬೇಡಿಕೆ ಈಡೇರಿಸುವ ನಿಟ್ಟಿನಲ್ಲಿ ಯಾವುದೇ ಸೂಕ್ತ ಕ್ರಮ ಕೈಗೊಂಡಿಲ್ಲ. ರಾಜ್ಯ ಸರಕಾರ ಇಲ್ಲಿಯವರೆಗೂ ನಮ್ಮ ಬೇಡಿಕೆ ಈಡೇರಿಸುವ ಬದಲು ಕೇವಲ ಮಾತುಕತೆಯಲ್ಲಿ ನಿರತವಾಗಿದೆ. ಸೋಮವಾರ ಎಲ್ಲ 4 ನಿಗಮಗಳ ವ್ಯವಸ್ಥಾಪಕರು ನಡೆಸಿದ ಸಭೆಯಲ್ಲಿ ಶೇ.5ರಷ್ಟು ಡಿಎ ಹೆಚ್ಚಿಸುವ ಆಫರ್ ನೀಡಿದ್ದಾರೆ ಎಂದು ತಿಳಿಸಿದರು.

ಸಮಾಚಾರ ಸಣ್ಣದಲ್ಲ

ರಾಜ್ಯದ ವಿವಿಧೆಡೆ ನಾಲ್ಕು ದಿನ ಮಳೆ

ಬೆಂಗಳೂರು: ಬಂಗಾಳಕೊಲ್ಲಿಯಲ್ಲಿ ಉಂಟಾಗಿರುವ ಮೇಲ್ಮಟ್ಟದ ವಾಯು ಸುಳಿಗಾಳಿಯ ಪರಿಣಾಮವಾಗಿ ರಾಜಧಾನಿ ಬೆಂಗಳೂರು ಸೇರಿದಂತೆ ರಾಜ್ಯದ ವಿವಿಧ ಜಿಲ್ಲೆಗಳಲ್ಲಿ ಮುಂದಿನ ನಾಲ್ಕು ದಿನಗಳ ಕಾಲ ಮಳೆಯಾಗುವ ಸಾಧ್ಯತೆ ಇದೆ ಎಂದು ಹವಾಮಾನ ಇಲಾಖೆ ಮುನ್ಸೂಚನೆ ನೀಡಿದೆ. ಆಂಧ್ರಪ್ರದೇಶದ ದಕ್ಷಿಣ ಕರಾವಳಿಯ ಪಶ್ಚಿಮ ಮಧ್ಯ ಬಂಗಾಳಕೊಲ್ಲಿಯಲ್ಲಿ ಸಮುದ್ರ ಮಟ್ಟದಿಂದ ಸುಮಾರು 1.5 ಕಿ.ಮೀ ಎತ್ತರದಲ್ಲಿ ವಾಯು ಸುಳಿಗಾಳಿ ಮುಂದುವರಿದಿದೆ. ಇದರ ಪ್ರಭಾವದಿಂದ ಕರ್ನಾಟಕದ ದಕ್ಷಿಣ ಒಳನಾಡು ಮತ್ತು ಉತ್ತರ ಒಳನಾಡಿನ ಕೆಲವು ಭಾಗಗಳಲ್ಲಿ ಮೋಡ ಕವಿದ ವಾತಾವರಣವಿದ್ದು, ಮಳೆ ಸುರಿಯಲಿದೆ.

ಮೂರು ಜಿಲ್ಲೆಗಳಿಗೆ 'ಯೆಲ್ಲೋ ಅಲರ್ಟ್': ದಕ್ಷಿಣ ಒಳನಾಡಿನ ಮೂರು ಜಿಲ್ಲೆಗಳಾದ ಚಿಕ್ಕಬಳ್ಳಾಪುರ, ಕೋಲಾರ ಮತ್ತು ಚಾಮರಾಜನಗರ ಜಿಲ್ಲೆಗಳಲ್ಲಿ ಭಾರೀ ಮಳೆಯಾಗುವ ಸಾಧ್ಯತೆ ಇರುವುದರಿಂದ ಹವಾಮಾನ ಇಲಾಖೆ 'ಯೆಲ್ಲೋ ಅಲರ್ಟ್ ಘೋಷಿಸಿದೆ. ಉಳಿದಂತೆ ಬೆಂಗಳೂರು ನಗರ, ಬೆಂಗಳೂರು ಗ್ರಾಮಾಂತರ ಮತ್ತು ರಾಮನಗರ ಜಿಲ್ಲೆಗಳಲ್ಲಿ ಗಾಳಿ ಸಹಿತ ಮಳೆಯಾಗುವ ಮುನ್ಸೂಚನೆ ಇದೆ. ಬೆಂಗಳೂರಿನಲ್ಲಿ ಆಕಾಶ ಶುಭ್ರವಾಗಿದ್ದರೂ, ಸಂಜೆ ಅಥವಾ ರಾತ್ರಿಯ ವೇಳೆಗೆ ಮೋಡ ಕವಿದ ವಾತಾವರಣ ನಿರ್ಮಾಣವಾಗಿ ಅಲ್ಲಲ್ಲಿ ಚದುರಿದಂತೆ ಮಳೆಯಾಗುವ ಸಾಧ್ಯತೆ ಇದೆ. ನಗರದಲ್ಲಿ ಗರಿಷ್ಠ ತಾಪಮಾನ 34 ಡಿಗ್ರಿ ಸೆಲ್ಸಿಯಸ್ ಹಾಗೂ ಕನಿಷ್ಠ ತಾಪಮಾನ 23 ಡಿಗ್ರಿ ಸೆಲ್ಸಿಯಸ್ ದಾಖಲಾಗುವ ನಿರೀಕ್ಷೆಯಿದೆ ಎಂದು ಇಲಾಖೆ ಹೇಳಿದೆ.

ಅಂಕಿ-ಅಂಶಗಳ ಸಂಗ್ರಹ ಮಾತ್ರವಲ್ಲದೇ, ಆರೋಗ್ಯ ಹಕ್ಕುಗಳ ರಕ್ಷಣೆ, ಸಾಮಾಜಿಕ ಸಬಲೀಕರಣದ ಉದ್ದೇಶ

ಅಪ್ರಾಪ್ತರ ಗರ್ಭಧಾರಣೆ ತಡೆಗೆ ಕಡ್ಡಾಯ ಲೆಕ್ಕಪರಿಶೋಧನೆ

ಬೆಂಗಳೂರು: ಅಪ್ರಾಪ್ತರಲ್ಲಿ (10-18 ವರ್ಷ) ಕಂಡುಬರುವ ಗರ್ಭಧಾರಣೆಯ ಪ್ರಕರಣಗಳನ್ನು ಗಂಭೀರವಾಗಿ ಪರಿಗಣಿಸಿರುವ ಸರಕಾರ, ಪ್ರತಿಯೊಂದು ಪ್ರಕರಣದ ಮೇಲೆ ಕಡ್ಡಾಯವಾಗಿ ಲೆಕ್ಕಪರಿಶೋಧನೆ ನಡೆಸಲು ಆದೇಶಿಸಿದೆ. ಈ ಆದೇಶವು ಕೇವಲ ಅಂಕಿ-ಅಂಶಗಳ ಸಂಗ್ರಹ ಮಾತ್ರವಲ್ಲದೇ, ಹದಿಹರೆಯದವರ ಆರೋಗ್ಯ ಹಕ್ಕುಗಳ ರಕ್ಷಣೆ ಮತ್ತು ಸಾಮಾಜಿಕ ಸಬಲೀಕರಣದ ಉದ್ದೇಶ ಹೊಂದಿದೆ.ಸರಕಾರವು ಈ ಸಮಸ್ಯೆಯನ್ನು ಮೂಲದಿಂ ದಲೇ ಹೋಗಲಾಡಿಸಲು ಕ್ರಮಬದ್ಧವಾದ ವ್ಯವಸ್ಥೆ ರೂಪಿಸಿದೆ. 10 ರಿಂದ 18 ವರ್ಷ ವಯಸ್ಸಿನ ಹುಡುಗಿಯರಲ್ಲಿ ಸಂಭವಿಸುವ ಎಲ್ಲಾ ಗರ್ಭಧಾರಣೆಗಳನ್ನು ತಾಲ್ಲೂಕು ಆರೋಗ್ಯ ಅಧಿಕಾರಿಗಳು ಕಡ್ಡಾಯವಾಗಿ ಲೆಕ್ಕಪರಿಶೋಧನೆಗೆ ಒಳಪಡಿಸಬೇಕು. ಸರಕಾರಿ ಅಥವಾ ಖಾಸಗಿ ಯಾವುದೇ ಆರೋಗ್ಯ ಸಂಸ್ಥೆಯಿರಲಿ, ಅಂತಹ ಪ್ರಕರಣಗಳು ಕಂಡುಬಂದಲ್ಲಿ ಅವುಗಳನ್ನು ಕಡ್ಡಾಯವಾಗಿ ಸಂತಾನೋತ್ಪತ್ತಿ ಮತ್ತು ಮಕ್ಕಳ ಆರೋಗ್ಯ ಪೋರ್ಟಲ್‌ನಲ್ಲಿ ದಾಖಲಿಸಬೇಕು. ಇದು ದತ್ತಾಂಶದ ಪಾರದರ್ಶಕತೆ ಮತ್ತು ನಿಖರತೆ ಖಚಿತಪಡಿಸುತ್ತದೆ.

ಲೆಕ್ಕಪರಿಶೋಧನಾ ಸಮಿತಿಯ ಪಾತ್ರ: ಕ್ಷೇತ್ರ ಮಟ್ಟದಲ್ಲಿ ಸಮರ್ಪಕವಾಗಿ ಕಾರ್ಯ ನಿರ್ವಹಿಸಲು ಸಮಿತಿಯೊಂದನ್ನು ರಚಿಸಲಾಗಿದೆ. ತಾಲ್ಲೂಕು ಆರೋಗ್ಯ ಅಧಿಕಾರಿ ಅಧ್ಯಕ್ಷರಾಗಿದ್ದು, ಪ್ರಾಥಮಿಕ ಆರೋಗ್ಯ ಕೇಂದ್ರದ ವೈದ್ಯಾಧಿಕಾರಿ, ಆರೋಗ್ಯ ನಿರೀಕ್ಷಕರು, ಆಶಾ ಕಾರ್ಯಕರ್ತರು, ಅಂಗನವಾಡಿ ಕಾರ್ಯಕರ್ತರು ಮತ್ತು ಶಾಲಾ ಪ್ರತಿನಿಧಿಗಳು ಸದಸ್ಯರಾಗಿರುತ್ತಾರೆ. ಈ ಸಮಿತಿಯು ಪ್ರತಿ ಪ್ರಕರಣದ ಮೂಲ ಕಾರಣಗಳನ್ನು ಪರಿಶೀಲನೆ ನಡೆಸಲಿದೆ. ಕೇವಲ ವೈದ್ಯಕೀಯ ವರದಿ ಪಡೆಯುವುದಷ್ಟೇ ಅಲ್ಲದೆ, ಆ ಹುಡುಗಿಯ ಸಾಮಾಜಿಕ ಮತ್ತು ಕುಟುಂಬದ ಪರಿಸ್ಥಿತಿಯನ್ನು ವಿಶ್ಲೇಷಿಸುವುದು ಈ ಸಮಿತಿಯ ಜವಾಬ್ದಾರಿಯಾಗಿದೆ. ಇದಲ್ಲದೇ, ಮದುವೆಯಾದ ವಯಸ್ಸು ಮತ್ತು ಶೈಕ್ಷಣಿಕ ಸ್ಥಿತಿಗತಿ, ಸಂತಾನೋತ್ಪತ್ತಿ ಆರೋಗ್ಯದ ಬಗ್ಗೆ ಆ ಹುಡುಗಿಗೆ ಇದ್ದ ಅರಿವು, ಗರ್ಭನಿರೋಧಕಗಳ ಲಭ್ಯತೆ ಮತ್ತು ಅವುಗಳ ಬಳಕೆ ಬಗ್ಗೆ ಮಾಹಿತಿ ಇತ್ತೇ? ಸಾಮಾಜಿಕ-ಆರ್ಥಿಕ ಹಿನ್ನೆಲೆ ಮತ್ತು ಆ ಕುಟುಂಬವು ಯಾವುದಾದರೂ ದೌರ್ಬಲ್ಯಕ್ಕೆ ಒಳಗಾಗಿದೆಯೇ? ರಾಷ್ಟ್ರೀಯ ಕಿಶೋರ್ ಸ್ವಾಸ್ಥ್ಯ ಕಾರ್ಯಕ್ರಮ ಅಡಿಯಲ್ಲಿ ಆಕೆಗೆ ಈ ಮೊದಲು ಸೇವೆಗಳು ತಲುಪಿದ್ದವೇ? ಎಂಬುದರ ಕುರಿತು ಸಹ ಪರಿಶೀಲನೆ ನಡೆಸಲಾಗುತ್ತದೆ.

'ಸ್ನೇಹ ಕೇಂದ್ರ'ಗಳ ಮೂಲಕ ತಾರುಣ್ಯಾವಸ್ಥೆ

ವರದಿಯು ಕೇವಲ ತಪಾಸಣೆಗೆ ಸೀಮಿತವಾಗದೆ, ಭವಿಷ್ಯದಲ್ಲಿ ಇಂತಹ ಪ್ರಕರಣಗಳು ಮರುಕಳಿಸದಂತೆ ತಡೆಯಲು ಕ್ರಮಗಳನ್ನು ಸೂಚಿಸಿದೆ. 'ಸ್ನೇಹ ಕೇಂದ್ರ'ಗಳ ಮೂಲಕ ತಾರುಣ್ಯಾವಸ್ಥೆಯ ಆರೋಗ್ಯದ ಬಗ್ಗೆ ತರಬೇತಿ ಮತ್ತು ಸಮಾಲೋಚನೆ ನೀಡುವುದು, ಶಾಲೆಯಿಂದ ಹೊರಗುಳಿದ ಮತ್ತು ವಲಸೆ ಬಂದ ಕುಟುಂಬಗಳ ಹೆಣ್ಣುಮಕ್ಕಳನ್ನು ಮುಂಚಿತವಾಗಿಯೇ ಗುರುತಿಸಿ ಅವರ ಬಗ್ಗೆ ಹೆಚ್ಚಿನ ನಿಗಾ ವಹಿಸುವುದು ಮತ್ತು ಅನಿವಾರ್ಯ ಸಂದರ್ಭಗಳಲ್ಲಿ ಸುರಕ್ಷಿತ ಗರ್ಭಪಾತ ಬಗ್ಗೆ ಸಮಾಲೋಚನೆ ಮತ್ತು ಕಾನೂನುಬದ್ಧ ನೆರವು ನೀಡುವ ಬಗ್ಗೆ ಕ್ರಮ ಕೈಗೊಳ್ಳಲಾಗುತ್ತದೆ.

ವಿವಿಧ ಹಂತದಲ್ಲಿ ಮೇಲ್ವಿಚಾರಣೆ

ಸರಕಾರದ ಆದೇಶವನ್ನು ಅನುಷ್ಠಾನಗೊಳಿಸಲು ವಿವಿಧ ಹಂತಗಳಲ್ಲಿ ಮೇಲ್ವಿಚಾರಣೆ ಮಾಡಲಾಗುತ್ತದೆ. ಜಿಲ್ಲಾ ಮಟ್ಟದಲ್ಲಿ ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಅಧಿಕಾರಿ ಮಾಡಲಿದ್ದು, ರಾಜ್ಯ ಮಟ್ಟದಲ್ಲಿ ಉಪ ನಿರ್ದೇಶಕರು ಮತ್ತು ರಾಷ್ಟ್ರೀಯ ಆರೋಗ್ಯ ಮಿಷನ್ ನಿರ್ದೇಶಕರು ಗಮನಹರಿಸಲಿದ್ದಾರೆ. ಜಿಲ್ಲಾಧಿಕಾರಿಗಳು ಜಿಲ್ಲಾ ಮಟ್ಟದಲ್ಲಿ ಈ ಕಾರ್ಯಕ್ರಮದ ಪ್ರಗತಿಯನ್ನು ನಿಯತಕಾಲಿಕವಾಗಿ ಪರಿಶೀಲಿಸಬೇಕು ಎಂದು ಆದೇಶದಲ್ಲಿ ಉಲ್ಲೇಖ ಮಾಡಲಾಗಿದೆ.

ದಯಾಮರಣ ಕೋರಿ ಕಾನ್‌ಸ್ಟೇಬಲ್‌ಗಳ ಪತ್ರ

ಬೆಂಗಳೂರು: ಪೊಲೀಸ್ ಇಲಾಖೆಯಲ್ಲಿನ ಅಂತರ್ ಜಿಲ್ಲಾ ವರ್ಗಾವಣೆ ಪ್ರಕ್ರಿಯೆಯ ವಿಳಂಬವು ಈಗ ವಿವಾದಕ್ಕೆ ಕಾರಣವಾಗಿದೆ. ವರ್ಗಾವಣೆ ಸಿಗದೆ ಕಂಗಾಲಾಗಿರುವ ಪೊಲೀಸ್ ಕಾನ್‌ಸ್ಟೆಬಲ್‌ಗಳು ನೇರವಾಗಿ ರಾಜ್ಯಪಾಲರಿಗೆ ಪತ್ರ ಬರೆದು 'ದಯಾಮರಣ' ಕೋರಿರುವುದು ಸರಕಾರಕ್ಕೆ ನುಂಗಲಾರದ ತುತ್ತಾಗಿ ಪರಿಣಮಿಸಿದೆ. ಈ ಕುರಿತು ಗೃಹ ಸಚಿವ ಡಾ. ಜಿ. ಪರಮೇಶ್ವರ್ ಸ್ಪಷ್ಟನೆ ನೀಡಿದ್ದಾರೆ.

ರಾಜ್ಯಪಾಲರಿಗೆ ಪತ್ರ ಬರೆದಿರುವ ಬಗ್ಗೆ ಮಂಗಳವಾರ (ಏ.7) ಪ್ರತಿಕ್ರಿಯಿಸಿರುವ ಗೃಹ ಸಚಿವ ಡಾ.ಜಿ. ಪರಮೇಶ್ವರ್, ನಿಯಮದ ಪ್ರಕಾರ ಒಬ್ಬ ಸಿಬ್ಬಂದಿ ಕನಿಷ್ಠ ಏಳು ವರ್ಷಗಳ ಕಾಲ ಒಂದು ಜಿಲ್ಲೆಯಲ್ಲಿ ಸೇವೆ ಸಲ್ಲಿಸಿದ ನಂತರವಷ್ಟೇ ಅಂತರ್ ಜಿಲ್ಲಾ ವರ್ಗಾವಣೆಗೆ ಅರ್ಜಿ ಸಲ್ಲಿಸಲು ಅರ್ಹರಾಗುತ್ತಾರೆ. ಏಳು ವರ್ಷ ತುಂಬಿದ ತಕ್ಷಣ ವರ್ಗಾವಣೆ ಖಚಿತ ಎಂದಲ್ಲ. ಅರ್ಜಿದಾರರ ಹಿರಿತನ ಮತ್ತು ಆ ಜಿಲ್ಲೆಯಲ್ಲಿ ಲಭ್ಯವಿರುವ ಖಾಲಿ ಹುದ್ದೆಗಳನ್ನು ಪರಿಗಣಿಸಿ ಆದ್ಯತೆ ನೀಡಲಾಗುತ್ತದೆ. ನಿಯಮಾನುಸಾರವೇ ವರ್ಗಾವಣೆ ನಡೆಸಲಾಗುತ್ತಿದೆ ಎಂದು ಸ್ಪಷ್ಟಪಡಿಸಿದ್ದಾರೆ.

ಇತ್ತೀಚಿನ 402 ಪಿಎಸ್‌ಐ ಅಧಿಸೂಚನೆಯಲ್ಲಿ ಶೇ.80 ರಷ್ಟು ಅಭ್ಯರ್ಥಿಗಳು ಉತ್ತರ ಕರ್ನಾಟಕದವರಾಗಿದ್ದಾರೆ. ದಕ್ಷಿಣ ಕನ್ನಡ ಮತ್ತು ಕೊಡಗಿನಂತಹ ಜಿಲ್ಲೆಗಳಲ್ಲಿ ಸ್ಥಳೀಯ ಅಭ್ಯರ್ಥಿಗಳ ಆಯ್ಕೆ ಪ್ರಮಾಣ ಕೇವಲ ತಲಾ ಇಬ್ಬರಷ್ಟಿದೆ. ಹೀಗಾಗಿ, ಅನಿವಾರ್ಯವಾಗಿ ಉತ್ತರ ಕರ್ನಾಟಕದವರನ್ನು ಇತರ ಜಿಲ್ಲೆಗಳಿಗೆ ನಿಯೋಜಿಸಬೇಕಾಗುತ್ತದೆ. ಅವರು 7 ವರ್ಷಗಳ ಕಾಲ ಅಲ್ಲಿ ಸೇವೆ ಸಲ್ಲಿಸುವುದು ಅನಿವಾರ್ಯ. ಕಾನ್ಸ್ಟೇಬಲ್ಗಳು ಇಂತಹ ಹತಾಶೆಯ ನಿರ್ಧಾರಗಳನ್ನು ತೆಗೆದು ಕೊಳ್ಳುವ ಅಗತ್ಯವಿಲ್ಲ. ಇಲಾಖೆ ಅವರ ಪರವಾಗಿದೆ. ನಿಯಮ ಉಲ್ಲಂಘಿಸಿ ಯಾರಿಗೂ ವರ್ಗಾವಣೆ ನೀಡಲು ಸಾಧ್ಯವಿಲ್ಲ, ಹಿರಿತನದ ಆಧಾರದಲ್ಲಿ ಎಲ್ಲವನ್ನೂ ಸರಿಪಡಿಸಲಾಗುವುದು. ಯಾರೋ ಸೃಷ್ಟಿಸಿದ ಗೊಂದಲಕ್ಕೆ ಸಿಬ್ಬಂದಿ ಬಲಿಯಾಗಬಾರದು ಎಂದು ತಿಳಿಸಿದರು.

ಕೆಪಿಎಸ್‌ಸಿ ಅಕ್ರಮ ಸಿಬಿಐ ತನಿಖೆಗೆ ವಹಿಸಲು ಆಗ್ರಹ

ಇಂದಿನಿಂದ ಅಕ್ಸಾ ನಿರ್ದಿಷ್ಟಾವಧಿ ಧರಣಿ

ಧಾರವಾಡ: ಕರ್ನಾಟಕ ಲೋಕಸೇವಾ ಆಯೋಗದಲ್ಲಿ (ಕೆಪಿಎಸ್‌ಸಿ) ನಡೆದಿರುವ ಅಕ್ರಮಗಳ ತನಿಖೆಯನ್ನು ಸಿಬಿಐಗೆ ವಹಿಸಬೇಕು ಎಂದು ಆಗ್ರಹಿಸಿ ಏ.8ರಿಂದ ಧಾರವಾಡ ಜಿಲ್ಲಾಧಿಕಾರಿ ಕಚೇರಿ ಎದುರು ಅನಿರ್ದಿಷ್ಟಾವಧಿ ಪ್ರತಿಭಟನೆ ನಡೆಸಲಾಗುವುದು, ಇದಕ್ಕೆ ಪೊಲೀಸ್ ಇಲಾಖೆಯ ಅನುಮತಿ ಕೋರಲಾಗಿದೆ ಎಂದು ಅಖಿಲ ಕರ್ನಾಟಕ ರಾಜ್ಯ ವಿದ್ಯಾರ್ಥಿಗಳ ಸಂಘಟನೆ (ಅಕ್ಸಾ) ಅಧ್ಯಕ್ಷ ಕಾಂತಕುಮಾರ ತಿಳಿಸಿದರು.

ಸುದ್ದಿಗೋಷ್ಠಿಯಲ್ಲಿ ಮಾತನಾಡಿ, ಕೆಪಿಎಸ್‌ಸಿಯಲ್ಲಿ ಭ್ರಷ್ಟಾಚಾರ ವ್ಯಾಪಕವಾಗಿದೆ. ಸಿಬಿಐನಿಂದ ಸಮಗ್ರ ತನಿಖೆ ನಡೆಸಿ ತಪ್ಪಿತಸ್ಥರ ವಿರುದ್ಧ ಕ್ರಮ ಜರುಗಿಸಬೇಕು ಎಂದು ಒತ್ತಾಯಿಸಿದರು.

ಸರಕಾರ ಈಗಾಗಲೇ ಹೇಳಿರುವಂತೆ 56 ಸಾವಿರ ಹುದ್ದೆಗಳ ನೇಮಕಾತಿಗೆ ಪ್ರಕ್ರಿಯೆಯನ್ನು ಶೀಘ್ರ ಆರಂಭಿಸಬೇಕು. ಒಳಮೀಸಲಾತಿ ವಿಷಯ ಮುಂದಿಟ್ಟು ವಿಳಂಬ ಮಾಡಬಾರದು. ವಿವಿಧ ಇಲಾಖೆಗಳಲ್ಲಿ ಖಾಲಿ ಇರುವ 2.84 ಲಕ್ಷ ಹುದ್ದೆಗಳ ಭರ್ತಿಗೆ ಹಂತಹಂತವಾಗಿ ನೇಮಕಾತಿ ಪ್ರಕ್ರಿಯೆ ನಡೆಸಬೇಕು ಎಂದು ಕೋರಿದರು.

ಕೇಂದ್ರ ಸರಕಾರದಲ್ಲೂ 9 ಲಕ್ಷ ಹುದ್ದೆಗಳು ಖಾಲಿ ಇವೆ. ಯುಪಿಎಸ್‌ಸಿ ಪರೀಕ್ಷೆಗಳಲ್ಲಿ ಕರ್ನಾಟಕದಿಂದ ಆಯ್ಕೆಯಾಗುವವರ ಸಂಖ್ಯೆ ಕಡಿಮೆ ಇದೆ. ಕೇಂದ್ರ ಸರಕಾರದ ಹುದ್ದೆಗಳ ಭರ್ತಿಗೆ ನಡೆಯುವ ವಿವಿಧ ಸ್ಪರ್ಧಾತ್ಮಕ ಪರೀಕ್ಷೆಗಳನ್ನು ಕನ್ನಡದಲ್ಲಿಯೂ ಬರೆಯಲು ಅವಕಾಶ ಕಲ್ಪಿಸಬೇಕು ಎಂದು ಒತ್ತಾಯಿಸಿದರು.

ಕರ್ನಾಟಕ ಪರೀಕ್ಷಾ ಪ್ರಾಧಿಕಾರ (ಕೆಇಎ) ಹಲವು ಸುಧಾರಣೆ ಕ್ರಮಗಳನ್ನು ಅಳವಡಿಸಿಕೊಂಡಿದೆ. ಕೆಇಎ ಮೂಲಕವೇ ನೇಮಕಾತಿ ಪ್ರಕ್ರಿಯೆ ನಡೆಸಬೇಕು. ಕೆಪಿಎಸ್‌ಸಿಯಿಂದ ನಡೆಸಬಾರದು. ಕೆಇಎ ಕಾರ್ಯನಿರ್ವಾಹಕ ನಿರ್ದೇಶಕ ಪ್ರಸನ್ನ ಅವರನ್ನು ವರ್ಗಾವಣೆ ಮಾಡಬಾರದು.

- ಕಾಂತಕುಮಾರ ಅಕ್ಸಾ ಅಧ್ಯಕ್ಷ

ಆರ್.ಡಿ.ಪಾಟೀಲ ಸ್ಥಳಾಂತರ ಹೈಕೋರ್ಟ್‌ನಿಂದ ರದ್ದು

ಕಲಬುರಗಿ: ಪಿಎಸ್‌ಐ ನೇಮಕಾತಿ ಅಕ್ರಮ ಪ್ರಕರಣದ ಪ್ರಮುಖ ಆರೋಪಿ ರುದ್ರಗೌಡ ಪಾಟೀಲ ಅಲಿಯಾಸ್ ಆರ್.ಡಿ.ಪಾಟೀಲನನ್ನು ಕಲಬುರಗಿ ಸೆಂಟ್ರಲ್ ಜೈಲಿನಿಂದ ಮೈಸೂರಿನ ಕೇಂದ್ರ ಕಾರಾಗೃಹಕ್ಕೆ ಸ್ಥಳಾಂತರಿಸಲು ಅನುಮತಿ ನೀಡಿದ್ದ ಜಿಲ್ಲಾ ಕೋರ್ಟ್ ಆದೇಶವನ್ನು ಹೈಕೋರ್ಟ್‌ನ ಕಲಬುರಗಿ ಪೀಠವು ರದ್ದುಗೊಳಿಸಿದೆ.ಅಲ್ಲದೇ, ಆರ್.ಡಿ. ಪಾಟೀಲನನ್ನು ಮೈಸೂರು ಜೈಲಿನಿಂದ ಕಲಬುರಗಿ ಜೈಲಿಗೆ ಮರು ಸ್ಥಳಾಂತರಿಸಲು ಕ್ರಮವಹಿಸುವಂತೆ ಹೈಕೋರ್ಟ್ ಸೂಚಿಸಿದೆ. ಹೀಗಾಗಿ ಆರ್.ಡಿ.ಪಾಟೀಲ ಮತ್ತೆ ಕಲಬುರಗಿ ಜೈಲಿಗೆ ಬರುವುದು ನಿಶ್ಚಿತಗೊಂಡಿದೆ.



ರಾಜ್ಯದ ವಿವಿಧೆಡೆ 20ಕ್ಕೂ ಹೆಚ್ಚು ಪ್ರಕರಣಗಳನ್ನು ಎದುರಿಸುತ್ತಿರುವ ಆರ್.ಡಿ.ಪಾಟೀಲ 2023ರ ನವೆಂಬರ್ 11ರಿಂದ ಕಲಬುರಗಿ ಕೇಂದ್ರ ಕಾರಾಗೃಹದಲ್ಲಿ ವಿಚಾರಣಾ ಕೈದಿಯಾಗಿದ್ದ. 2025ರ ವರ್ಷಾಂತ್ಯದ ಕೆಲವು ತಿಂಗಳಲ್ಲಿ ಜೈಲು ಅಧಿಕಾರಿಗಳೊಂದಿಗೆ ಕಿರಿಕ್ ಮಾಡಿಕೊಂಡಿದ್ದ. ಬಳಿಕ ಆತನ ಸ್ಥಳಾಂತರಕ್ಕೆ ಜೈಲಿನ ಅಧಿಕಾರಿಗಳು ಪತ್ರ ಬರೆದಿದ್ದರು.

ಈ ಸಂಬಂಧ ಕೆಲವು ಭದ್ರತಾ ಕಾರಣಗಳನ್ನು ನೀಡಿ ಕಲಬುರಗಿಯ ಪ್ರಧಾನ ಜಿಲ್ಲಾ ಮತ್ತು ಸೆಷನ್ಸ್ ನ್ಯಾಯಾಲಯವು 2026ರ ಜನವರಿ 27ರಂದು ಆರ್.ಡಿ.ಪಾಟೀಲ ಅವರನ್ನು ಮೈಸೂರು ಜೈಲಿಗೆ ವರ್ಗಾಯಿಸಲು ಅನುಮತಿ ನೀಡಿತ್ತು. ಬಳಿಕ ಆರ್.ಡಿ.ಪಾಟೀಲನನ್ನು ಮೈಸೂರು ಜೈಲಿಗೆ ಜನವರಿ 28ರಂದು ಸ್ಥಳಾಂತರಿಸಲಾಗಿತ್ತು. ಜಿಲ್ಲಾ ಕೋರ್ಟ್ ಆದೇಶವನ್ನು ಪ್ರಶ್ನಿಸಿ ಆರ್.ಡಿ.ಪಾಟೀಲರ ಪತ್ನಿ ಶೋಭಾ ಪಾಟೀಲ ಅವರು ಹೈಕೋರ್ಟ್‌ನಲ್ಲಿ ರಿಟ್ ಅರ್ಜಿ ಸಲ್ಲಿಸಿದ್ದರು.

ತೆರಿಗೆ ಕಟ್ಟಿಲ್ಲ: ಬೆಂಗಳೂರು ನಗರವೊಂದರಲ್ಲೇ 54.6 ಕೋಟಿ ರು. ಸಂಗ್ರಹ!

ಹೊರರಾಜ್ಯದ ವಾಹನಗಳಿಗೆ ದಂಡಾಸ್ತ್ರ

ಬೆಂಗಳೂರು: ಕಡಿಮೆ ಹಣ ನೀಡಿ ನೆರೆರಾಜ್ಯಗಳಲ್ಲಿ ವಾಹನಗಳನ್ನು ಖರೀದಿಸಿ ತೆರಿಗೆ ಕಟ್ಟದೇ ಓಡಾಡುತ್ತಿದ್ದ ವಾಹನ ಸವಾರರಿಗೆ ಸಾರಿಗೆ ಇಲಾಖೆ ಬಿಸಿ ಮುಟ್ಟಿಸಿದೆ. ಕಳೆದ 5 ವರ್ಷಗಳಲ್ಲಿ ರಾಜ್ಯದ ವಿವಿಧೆಡೆ ವಿಶೇಷ ಕಾರ್ಯಾಚರಣೆಗಳ ಮೂಲಕ ಬರೋಬ್ಬರಿ 62.4 ಕೋಟಿ ರು. ದಂಡ ವಸೂಲಿ ಮಾಡಲಾಗಿದೆ. ಈ ಪೈಕಿ ಬೆಂಗಳೂರಿನಲ್ಲಿ 54.6 ಕೋಟಿ ರು. ದಂಡ ಸಂಗ್ರಹವಾಗಿದೆ.

ಸಾರಿಗೆ ಇಲಾಖೆ ನೀಡಿರುವ ಅಂಕಿ-ಅಂಶಗಳ ಪ್ರಕಾರ, ರಾಜ್ಯಾದ್ಯಂತ 773 ದ್ವಿಚಕ್ರ ವಾಹನ ಮಾಲೀಕರು ಹಾಗೂ 4,504 ಕಾರು ಮಾಲೀಕರ ವಿರುದ್ಧ ತೆರಿಗೆ ವಂಚನೆ ಸಂಬಂಧ ಪ್ರಕರಣ ದಾಖಲಾಗಿದೆ. ಈ ಪೈಕಿ ಬೆಂಗಳೂರಿನಲ್ಲಿ ಶೇ.85ರಷ್ಟು ಪ್ರಕರಣಗಳು ಪತ್ತೆಯಾಗಿದ್ದು, ನಗರದ 747 ದ್ವಿಚಕ್ರ ವಾಹನ ಮಾಲೀಕರು ಹಾಗೂ 3,739 ಕಾರು ಮಾಲೀಕರು ಕರ್ನಾಟಕಕ್ಕೆ ತೆರಿಗೆ ಪಾವತಿಸದೇ ನೆರೆರಾಜ್ಯದ ವಾಹನಗಳನ್ನು ಬಳಸಿರುವುದು ಬೆಳಕಿಗೆ ಬಂದಿದೆ.

ಈ ಬಗ್ಗೆ ಮಾಹಿತಿ ನೀಡಿರುವ ಹಿರಿಯ ಸಾರಿಗೆ ಅಧಿಕಾರಿಯೊಬ್ಬರು, 'ಬೇರೆ ರಾಜ್ಯಗಳಲ್ಲಿ ತೆರಿಗೆ ಕಡಿಮೆ ಇರುವುದರಿಂದ ಐಷಾರಾಮಿ ಕಾರು, ಬೈಕ್‌ಗಳನ್ನು ಖರೀದಿಸಲಾಗುತ್ತಿದೆ. ರಾಜ್ಯದಲ್ಲಿ ವಾಣಿಜ್ಯ ಚಟುವಟಿಕೆಗಳಲ್ಲಿ ತೊಡಗಿಸಿಕೊಂಡ ಅನೇಕರು ತೆರಿಗೆ ಉಳಿಸುವ ಸಲುವಾಗಿ ಅನ್ಯರಾಜ್ಯದ ವಾಹನಗಳ ಖರೀದಿಗೆ ಮುಂದಾಗುತ್ತಿದ್ದಾರೆ'' ಎಂದು ಮಾಹಿತಿ ನೀಡಿದ್ದಾರೆ.

ಬೇರೆ ರಾಜ್ಯಗಳ ವಾಹನಗಳನ್ನು ಖರೀದಿಸಿದ ಬಳಿಕ, ಎನ್‌ಒಸಿ ಪಡೆದರೂ ಕೆಲ ಮಾಲೀಕರು ಕರ್ನಾಟಕದಲ್ಲಿ ತೆರಿಗೆ ಪಾವತಿಸದೇ ವಾಹನಗಳನ್ನು ಬಳಸುವ ಪ್ರಕರಣಗಳು ಹೆಚ್ಚಾಗುತ್ತಿದ್ದು, ದಿಲ್ಲಿ, ಕೇರಳ, ಪುದುಚೆರಿ, ಗೋವಾ ಸೇರಿದಂತೆ ಬೇರೆ ಬೇರೆ ಭಾಗದ ವಾಹನಗಳು ಹೆಚ್ಚಾಗಿ ನಿಯಮ ಉಲ್ಲಂಘಿಸಿ ರಸ್ತೆಗೆ ಇಳಿಯುತ್ತಿರುವುದು ಕಾರ್ಯಾಚರಣೆ ವೇಳೆ ಬಯಲಾಗಿದೆ. 2021-22ರಲ್ಲಿ 232 ದ್ವಿಚಕ್ರ ವಾಹನಗಳು, 424 ಕಾರು ಮಾಲೀಕರು ನಿಯಮ ಉಲ್ಲಂಘಿಸಿದ್ದರು. ಈ ಪೈಕಿ 226 ದ್ವಿಚಕ್ರ ವಾಹನಗಳು, 395 ಕಾರುಗಳು ನಗರ ವ್ಯಾಪ್ತಿಗೆ ಸೇರಿವೆ. 2025-26ರಲ್ಲಿ 164 ದ್ವಿಚಕ್ರ ವಾಹನ ಮಾಲೀಕರು, 2,278 ಕಾರು ಮಾಲೀಕರ ವಿರುದ್ಧ ಪ್ರಕರಣ ದಾಖಲಾಗಿತ್ತು. ಈ ವೇಳೆ ಇಲಾಖೆ 41.4 ಕೋಟಿ ರು. ತೆರಿಗೆ ಮತ್ತು ದಂಡ ಸಂಗ್ರಹಿಸಿತ್ತು. ಇದರಲ್ಲಿ ಬೆಂಗಳೂರು ವ್ಯಾಪ್ತಿಯಲ್ಲೆ 34.5 ಕೋಟಿ ರು. ಆದಾಯ ಹರಿದುಬಂದಿತ್ತು.

3 ಕೋಟಿಗೆ ಬೇಡಿಕೆ ಇಟ್ಟ ಮಹಿಳೆಯಿಂದ ತೇಜೋವಧೆ

ನಾಲ್ವರ ವಿರುದ್ಧ ಬಸವಜಯ ಸ್ವಾಮೀಜಿ ದೂರು

ವಿಜಯಪುರ: 'ಲೈಂಗಿಕ ಆರೋಪ ಹೊರಿಸಿರುವ ಬೆಂಗಳೂರು ಮೂಲದ ಮಹಿಳೆ ಸೇರಿದಂತೆ ನಾಲ್ವರು ನನ್ನ ಬಳಿ 3 ಕೋಟಿ ಹಣಕ್ಕೆ ಬೇಡಿಕೆ ಇಟ್ಟಿದ್ದು, ನೀಡದೇ ಇದ್ದರೆ ಮಾಧ್ಯಮ ಹಾಗೂ ಸಾಮಾಜಿಕ ಜಾಲತಾಣಗಳಲ್ಲಿ ಕೆಟ್ಟದಾಗಿ ಪ್ರಚಾರ ಮಾಡುತ್ತೇವೆ. ಅತ್ಯಾಚಾರದ ದೂರು ಹಾಕುತ್ತೇನೆ ಎಂದು ಬೆದರಿಕೆ ಹಾಕಿ, ನನ್ನ ತೇಜೋವಧೆ ಮಾಡುತ್ತಿದ್ದಾರೆ' ಎಂದು ಆರೋಪಿಸಿ ಕೂಡಲಸಂಗಮ ಪಂಚಮಸಾಲಿ ಪೀಠದ ಬಸವ ಜಯ ಮೃತ್ಯುಂಜಯ ಸ್ವಾಮೀಜಿ ಅವರು ವಿಜಯಪುರ ಗ್ರಾಮೀಣ ಪೊಲೀಸ್ ಠಾಣೆಯಲ್ಲಿ ಕಳೆದ ಶನಿವಾರ (ಏಪ್ರಿಲ್ 4) ದೂರು ದಾಖಲಿಸಿದ್ದಾರೆ.

ದೂರಿನಲ್ಲೇನಿದೆ?: ಎರಡ್ಮೂರು ವರ್ಷಗಳ ಹಿಂದೆ ಬೆಂಗಳೂರಿನ ಮಹಿಳೆಯೊಬ್ಬರು ತನ್ನ ಸಹೋದನರೊಂದಿಗೆ ನನ್ನನ್ನು ಭೇಟಿಯಾಗಿದ್ದಳು. ನಾನೂ ಲಿಂಗಾಯತ ಸಮಾಜದವಳಾಗಿದ್ದು, ಪಂಚಮಸಾಲಿ ಹೋರಾಟಕ್ಕೂ ಸಾಥ್ ನೀಡುವುದಾಗಿ ಹೇಳಿದ್ದರು. ತಾನೊಂದು ಫೌಂಡೇಷನ್ ಮೂಲಕ ಬಡ ಹಾಗೂ ಅನಾಥ ಮಕ್ಕಳನ್ನು ಸಾಕುತ್ತಿದ್ದೇನೆ, ಹಣ ನೀಡಬೇಕೆಂದು ಬೇಡಿಕೆ ಇಟ್ಟಿದ್ದಳು. ನಂತರ ಯಾರಾದರೂ ದಾನಿಗಳಿದ್ದರೆ ಸಹಾಯ ಮಾಡಿಸುವುದಾಗಿ ಹೇಳಿದ್ದೆ. ನಾನು ಹಣ ನೀಡದ ಕಾರಣ ರಾಜಕೀಯ ವ್ಯಕ್ತಿಗಳ ಪಿತೂರಿಯಿಂದ ನನ್ನ ತೇಜೋವಧೆ ಮಾಡಲು ಹಣಕ್ಕಾಗಿ ಪೀಡಿಸುತ್ತಿದ್ದಳು. ಆದರೂ ನಾನು ಹಣ ನೀಡದ ಕಾರಣ ನನ್ನ ಮೇಲೆ ಇಲ್ಲಸಲ್ಲದ ಆರೋಪ ಮಾಡಿ ಬ್ಲ್ಯಾಕ್‌ಮೇಲ್ ಮಾಡುತ್ತಿದ್ದಾಳೆ. ಕಳೆದ ಫೆಬ್ರವರಿ 11 ರಂದು ನಾನು ವಿಜಯಪುರ ತಾಲೂಕಿನ ಕಗ್ಗೋಡದಿಂದ ಬರುವಾಗ ವಾಹನ ಅಡ್ಡಗಟ್ಟಿ ಹಣಕ್ಕಾಗಿ ಬೆದರಿಸಿ ಬೇಡಿಕೆ ಇಟ್ಟರು. ಹಣ ನೀಡದ ಕಾರಣ ನನ್ನ ಕಾರಿನ ಗ್ಲಾಸಿಗೆ ಗುದ್ದಿ ಹಲ್ಲೆ ನಡೆಸಿದ್ದಾರೆ. ಈ ವೇಳೆ ಬೆಂಗಾವಲು ಸಿಬ್ಬಂದಿ ವಾತಾವರಣ ತಿಳಿಗೊಳಿಸಿದರು. ಬಳಿಕ ಕೆಲ ಮಾಧ್ಯಮ ಹಾಗೂ ಸಾಮಾಜಿಕ ಜಾಲತಾಣಗಳಲ್ಲಿ ನನ್ನ ಮೇಲೆ ಕೆಟ್ಟದಾಗಿ ಅಪಪ್ರಚಾರ ಮಾಡಿಸಿದ್ದರು. ಈ ಸಂಬಂಧ ಬೆಂಗಳೂರಿನ ಸಿಟಿ ಸಿವಿಲ್ ಕೋರ್ಟ್‌ನಲ್ಲಿ ಇದಕ್ಕೆ ತಡೆಯಾಜ್ಞೆಯನ್ನೂ ತರಲಾಗಿದೆ. ಇಷ್ಟರ ಹೊರತಾಗಿಯೂ ಖಾಸಗಿ ವಾಹಿನಿಯಲ್ಲಿ ನನ್ನ ವಿರುದ್ಧ ಅಪಪ್ರಚಾರ ಮಾಡಿಸಿದ್ದಾಳೆ ಎಂದು ದೂರಿನಲ್ಲಿ ಆರೋಪಿಸಿದ್ದಾರೆ.

ಸಾರಿಗೆ ನೌಕರರ ವೇತನ ಹೆಚ್ಚಳಕ್ಕೆ ಸಿದ್ಧತೆ

ಬೆಂಗಳೂರು: 4 ಸಾರಿಗೆ ನಿಗಮಗಳ ನೌಕರರ 26 ತಿಂಗಳ ಹಿಂಬಾಕಿ ಬಿಡುಗಡೆ ಮಾಡಲಾಗುವುದು ಹಾಗೂ ಶೇ.3 ಹಾಗೂ ಶೇ.5ರಷ್ಟು ವೇತನ ಹೆಚ್ಚಳದ ಸಂಬಂಧ ಮತ್ತೊಂದು ಸಭೆ ನಡೆಸಲಾಗುವುದು ಎಂದು ಕೆಎಸ್‌ಆರ್‌ಟಿಸಿ ವ್ಯವಸ್ಥಾಪಕ ನಿರ್ದೇಶಕ ಅಕ್ರಂ ಪಾಷಾ ತಿಳಿಸಿದರು.

ರಾಜ್ಯದ ನಾಲ್ಕು ಸಾರಿಗೆ ನಿಗಮಗಳ ನೌಕರರು 36 ತಿಂಗಳ ವೇತನ ಹಿಂಬಾಕಿ, ವೇತನ ಪರಿಷ್ಕರಣೆ ಆಗ್ರಹಿಸಿ ಮುಷ್ಕರ ನಡೆಸಿದ್ದರು. ಆದರಂತೆ ನಾಲ್ಕು ಸಾರಿಗೆ ನಿಮಗಳ ಕಾರ್ಮಿಕ ಸಂಘಟನೆಗಳು ಜಂಟಿ ಕ್ರಿಯಾ ಸಮಿತಿ ಮುಖಂಡರೊಂದಿಗೆ ಸೋಮವಾರ (ಏ.6) ಅಕ್ರಂ ಪಾಷಾ ಅವರು ವೇತನ ಹೆಚ್ಚಳ, ವೇತನ ಹಿಂಬಾಕಿ ಸೇರಿ ವಿವಿಧ ಬೇಡಿಕೆಗಳ ಕುರಿತು ಮಹತ್ವದ ಚರ್ಚೆ ನಡೆಸಿದ್ದರು.

ಹಿಂಬಾಕಿ ಬಿಡುಗಡೆ, ವೇತನ ಹೆಚ್ಚಳ ಕುರಿತು ಮತ್ತೆ ಸಭೆ: 2021ರ ಜ.1ರಿಂದ 2023ರ ಫೆ. 28ರವರೆಗೆ 26 ತಿಂಗಳ ವೇತನ ಹಿಂಬಾಕಿ ಬಿಡುಗಡೆ ಮಾಡಲಾಗುವುದು. ಮಾತ್ರವಲ್ಲದೇ 2025ರ ಏಪ್ರಿಲ್ 1ರಿಂದ ಅನ್ವಯವಾಗುವಂತೆ ಬಿಎಂಟಿಸಿ ನೌಕರರಿಗೆ ಶೇ.3 ಹಾಗೂ ಎನ್‌ಡಬ್ಲ್ಯೂಕೆಆರ್‌ಟಿಸಿ, ಕೆಎಸ್‌ಆರ್‌ಟಿಸಿ ಮತ್ತು ಕೆಕೆಆರ್‌ಟಿಸಿ ಸೇರಿ ಉಳಿದ ಮೂರು ನಿಗಮದ ನೌಕರರಿಗೆ ಶೇ.5ರಷ್ಟು ವೇತನ ಹೆಚ್ಚಳ ಮಾಡುವ ಬಗ್ಗೆ ಅಕ್ರಂ ಪಾಷಾ ಅವರು ಸಮಿತಿ ಮುಖಂಡರ ಮುಂದೆ ಪ್ರಸ್ತಾವನೆ ಇಟ್ಟಿದ್ದಾರೆ. ಇದರ ಕುರಿತು ಚರ್ಚಿಸಲು ಇದೇ ತಿಂಗಳ ಏಪ್ರಿಲ್ 17ರಂದು ದಿನಾಂಕ ನಿಗದಿ ಮಾಡಿದ್ದಾರೆ.

ಈ ಮೂಲಕ ಕೆಲವು ವರ್ಷಗಳಿಂದ ಹೋರಾಟ ನಡೆಸಿದ್ದ ಸಾರಿಗೆ ನೌಕರರಗೆ ಒಂದು ಹಂತಕ್ಕೆ ಜಯ ಸಿಕ್ಕಂತಾಗಿದೆ. ಸರಕಾರ ಈ ಹಿಂದೆ ಹಿಂಬಾಕಿ ಬಿಡುಗಡೆ ಕುರಿತು ಆದೇಶಿಸಿದ್ದು, ವ್ಯವಸ್ಥಾಪಕ ನಿರ್ದೇಶಕ ಅಕ್ರಂ ಪಾಷಾ ಮಾಹಿತಿ ನೀಡಿದ್ದು, ಅವರೇ ಹೇಳಿದಂತೆ 26 ತಿಂಗಳ ವೇತನ ಹಿಂಬಾಕಿ ಪಾವತಿಗೆ ಒಟ್ಟು 1271 ಕೋಟಿ ಹಣವನ್ನು ಬಿಡುಗಡೆ ಮಾಡಲಾಗುತ್ತಿದೆ. ನಂತರ ಉಳಿದ ವೇತನ ಹಿಂಬಾಕಿ ಪಾವತಿಸಲಾಗುವುದು ಎಂದರು ಭರವಸೆ ನೀಡಿದ್ದಾರೆ. ಅಕ್ರಂ ಪಾಷಾ ಅವರ ನಿರ್ಧಾರಕ್ಕೆ ಆಕ್ಷೇಪ ಎತ್ತಿದ ಸಮಿತಿ ಮುಖಂಡರು 26 ತಿಂಗಳ ವೇತನ ಹಿಂಬಾಕಿ ಜತೆಗೆ 2020 ಜನವರಿ 1ರಿಂದ ಡಿಸೆಂಬರ್ 31ರವರೆಗಿನ 12 ತಿಂಗಳದ್ದು ಸೇರಿ ಎಲ್ಲ ತಿಂಗಳ ವೇತನ ಹಿಂಬಾಕಿ ಪಾವತಿಸುವಂತೆ ಆಗ್ರಹಿಸಿದರು. ಇದರೊಂದಿಗೆ ವೇತನ ಹೆಚ್ಚಳವನ್ನು ಸಭೆಯಲ್ಲಿ ಪ್ರಕಟಿಸುವಂತೆ ಅವರು ಮನವಿ ಮಾಡಿದರು. ಮಾತ್ರವಲ್ಲದೇ ಹಿಂದಿನ ವರ್ಷ ಮುಷ್ಕರದ ವೇಳೆ ಪಾಲ್ಗೊಂಡಿದ್ದ ನೌಕರರ ಮೇಲೆ ಶಿಸ್ತು ಕ್ರಮ ಕೈಗೊಳ್ಳಲಾಗಿದೆ. ಆ ಶಿಸ್ತು ಕ್ರಮ ರದ್ದುಗೊಳಿಸುವುದು ಸೇರಿದಂತೆ ಕೆಲವು ಬೇಡಿಕೆಗಳನ್ನು ಅಧಿಕಾರಿಗಳ ಮುಂದಿಟ್ಟರು.

ಈಗಾಗಲೇ ತಿಳಿಸಿದಂತೆ ನಾಲ್ಕು ನಿಗಮಗಳ ನೌಕರರಿಗೆ ವೇತನ ಹೆಚ್ಚಳಕ್ಕೆ ಕ್ರಮ ವಹಿಸಲಾಗುವುದು. ಅದನ್ನು ಮತ್ತೊಮ್ಮೆ ನಿಮ್ಮೊಂದಿಗೆ ಚರ್ಚಿಸಿ ನಿರ್ಧಾರ ಪ್ರಕಟಿಸಲಾಗುವುದು. ಅಲ್ಲದೇ ಮುಷ್ಕರದ ವೇಳೆ ನಿಯಮ 23ರಡಿ ಮುಷ್ಕರ ನಿರತ ನೌಕರರ ಮೇಲೆ ಕೈಗೊಳ್ಳಲಾದ ಕ್ರಮವನ್ನು ನಿಯಮ 22ಕ್ಕೆ ಬದಲಾಯಿಸಲಾಗುವುದು. 26 ತಿಂಗಳ ಹಿಂಬಾಕಿ ಬಳಿಕ ಉಳಿದ ಬಾಕಿ ವೇತನ ಹಿಂಬಾಕಿಗೆ ಪಾವತಿಗೆ ಕ್ರಮ ಕೈಗೊಳ್ಳಲಾಗುವುದು ಎಂದು ಅವರು ಅಕ್ರಂ ಪಾಷಾ ತಿಳಿಸಿದರು.

ಕರ್ನಾಟಕ ನೀರಾವರಿ ನಿಗಮ ನಿಯಮಿತ
(ಕರ್ನಾಟಕ ಸರ್ಕಾರದ ಒಂದು ಉದ್ಯಮ)
ಕಾರ್ಯನಿರ್ವಾಹಕ ಅಭಿಯಂತರರು ಕನೀನಿನಿ ಘಬಕಾನಿ ವಿಭಾಗ ನಂ.5 ಕೌಜಲಗಿ

ಕ್ರ.ಸಂ:ಕನೀನಿನಿ/ಘಬಕಾನಿ/ವಿ-5/ಡಿಬಿ/ಟೆಂಡರ್/ಫೀಡರ್ ಚಾನಲ್/2026-27/18 ದಿನಾಂಕ:-06-04-2026

ಅಲ್ಪಾವಧಿ ಶೇಕಡಾವಾರು ಟೆಂಡರ್ ಪ್ರಕಟಣೆ
(ಕೆ.ಪಿ.ಪಿ-ಪ್ರೊಕ್ಯೂರಮೆಂಟ್ ಪೋರ್ಟಲ್‌ನಲ್ಲಿ)

ಕಾರ್ಯನಿರ್ವಾಹಕ ಅಭಿಯಂತರರು ಕನೀನಿನಿ ಘಬಕಾನಿ ವಿಭಾಗ ನಂ.5 ಕೌಜಲಗಿ ವಿಭಾಗ ಅಡಿಯಲ್ಲಿ ಅಲ್ಪಾವಧಿ ಶೇಕಡಾವಾರು ಟೆಂಡರ್‌ನ್ನು ಕೆ.ಪಿ.ಪಿ. ಪೋರ್ಟಲ್‌ನಲ್ಲಿ ನೋಂದಾಯಿತ ಅರ್ಹಗುತ್ತಿಗೆದಾರರಿಂದ (ದ್ವಿಲಕೋಟೆಯಲ್ಲಿ) ಸ್ಟ್ಯಾಂಡರ್ಡ ಟೆಂಡರ ಡಾಕ್ಯೂಮೆಂಟ್ ಲೆಕ್ಕ ಶೀರ್ಷಿಕೆ 4701 ರ ಅಡಿಯಲ್ಲಿ ಒಂದು (1) ಕಾಮಗಾರಿಗೆ ಗುತ್ತಿಗೆಯನ್ನು ಕರೆಯಲಾಗಿದ್ದು ಗುತ್ತಿಗೆಗೆ ಇಟ್ಟ ಅಂದಾಜು ಮೊತ್ತವು 336.87 ಲಕ್ಷಗಳು ಇದ್ದು ಮುಂಗಡ ಠೇವಣಿ ಮೊತ್ತವು 5,05,000.00 ರೂಗಳು ಇರುತ್ತದೆ. ಟೆಂಡರನ್ನು ಸ್ವೀಕರಿಸುವ ದಿನಾಂಕ:-06-04-2026 ರಿಂದ 18-04-2026 ರ ಸಂಜೆ 17.00 ಘಂಟೆಯವರೆಗೆ ಮತ್ತು ಟೆಂಡರನ್ನು ತೆರೆಯುವ ದಿನಾಂಕ:-21-04-2026 ರ ಮುಂಜಾನೆ 11.00 ಘಂಟೆ ನಂತರ. ಹೆಚ್ಚಿನ ಮಾಹಿತಿ ಬೇಕಾದಲ್ಲಿ ಗುತ್ತಿಗೆದಾರರು ಈ ಕೆಳಗೆ ಸಹಿ ಮಾಡಿದವರ ಕಚೇರಿಯಲ್ಲಿ ಹಾಗೂ ಅಂತರ್‌ಜಾಲದ ಮೂಲಕ ವೆಬ್‌ಸೈಟ್ ವಿಳಾಸ:- www.kppp. karnataka.gov.in ರಲ್ಲಿ ದಿನಾಂಕ:-06-04-2026 ರ ನಂತರ ಪಡೆಯಬಹುದು.

ಸಹಿ/-ಕಾರ್ಯನಿರ್ವಾಹಕ ಅಭಿಯಂತರರು
ಕನೀನಿನಿ ಘಬಕಾನಿ ವಿಭಾಗ ನಂ.5 ಕೌಜಲಗಿ.
DIPR/BGM/RO-NO-51/KSMCA/2026-27

ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿ, ಚನ್ನರಾಯಪಟ್ಟಣ ಬಿ.ಎಂ. ರೋಡ್, ಹಾಸನ ಜಿಲ್ಲೆ,
ಇ-ಮೇಲ್: apmccrpatna@rediffmail.com ದೂ:08176-252247
ಸಂಖ್ಯೆ: ಕೃಉಮಾಸ(ಚನ್ನರಾಯಪಟ್ಟಣ) 15 /2026-27 ದಿನಾಂಕ: 06/04/2026

ಇ-ಪ್ರೊಕ್ಯೂರ್ಮೆಂಟ್ ಟೆಂಡರ್ ಪ್ರಕಟಣೆ

ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿ, ಚನ್ನರಾಯಪಟ್ಟಣ 2025-26 ನೇ ಸಾಲಿನ ವಾರ್ಷಿಕ ಕ್ರಿಯಾ ಯೋಜನೆಯಲ್ಲಿ ಅನುಮೋದಿತ ಮುಖ್ಯ ಮಾರುಕಟ್ಟೆ ಪ್ರಾಂಗಣದಲ್ಲಿರುವ ಮಳಿಗೆಗಳ ಮುಂಭಾಗಕ್ಕೆ ಚರಂಡಿಯೊಂದಿಗೆ ಡೆಕ್‌ಸ್ಲಾಬ್ ನಿರ್ಮಿಸುವ ಕಾಮಗಾರಿಯ. (ಐಟಂವಾರು ಟೆಂಡರ್) ಟೆಂಡರಿಗಿಟ್ಟ ಮೊತ್ತ ರೂ. 10,53,073-30 ಹಾಗೂ ಇ.ಎಂ.ಡಿ ಮೊತ್ತ ರೂ.26,400-00 ಗಳ ವೆಚ್ಚಗಳಲ್ಲಿ ಲೋಕೋಪಯೋಗಿ ಇಲಾಖೆಯಲ್ಲಿ ಅರ್ಹ ಸಿವಿಲ್ ಗುತ್ತಿಗೆದಾರರಿಂದ KW-1 ರಂತೆ ದ್ವಿಲಕೋಟೆ ಪದ್ಧತಿಯಲ್ಲಿ ಟೆಂಡರ್ ಅಹ್ವಾನಿಸಲಾಗಿದೆ. ಕಾಮಗಾರಿಗಳ ಐಟಂವಾರು ಶೆಡ್ಯೂಲ್ ಹಾಗೂ ಟೆಂಡರ್ ದಾಖಲೆಗಳನ್ನು ಇ-ಪೋರ್ಟಲ್ನಲ್ಲಿ ಸಲ್ಲಿಸಲು ಕೊನೆಯ ದಿನಾಂಕ: 21/04/2026 ರಂದು: 16:00 ಗಂಟೆ, ತಾಂತ್ರಿಕ ಟೆಂಡರ್ ತೆರೆಯುವ ದಿನಾಂಕ: 23/04/2026 ರಂದು ಬೆಳಗ್ಗೆ 11:00 ಗಂಟೆ ಮತ್ತು ಆರ್ಥಿಕ ಟೆಂಡರ್ ತೆರೆಯುವ ದಿನಾಂಕ: 27/04/2026 ಬೆಳಗ್ಗೆ 11.00 ಗಂಟೆ. ಟೆಂಡರ್ ಅಪ್‌ಲೋಡಿಂಗ್ಗೆ ಸಂಬಂಧಿಸಿದಂತೆ ಇ- ಪೋರ್ಟಲ್ ಸಹಾಯಕ ದೂರವಾಣಿ ಸಂಖ್ಯೆ: 080-22485867 ಅಥವಾ 080-25501216 ಇವರನ್ನು ಸಂಪರ್ಕಿಸಬಹುದು. ಹೆಚ್ಚಿನ ಮಾಹಿತಿಯನ್ನು ಕಛೇರಿ ಹಾಗೂ ವೆಬ್ ಸೈಟ್https://kppp.karnataka.gov.inನಲ್ಲಿ ಪಡೆಯಬಹುದಾಗಿದೆ.

ಸಹಿ/- ಕಾರ್ಯದರ್ಶಿ, ಕೃ,ಉ,ಮಾ.ಸ, ಚನ್ನರಾಯಪಟ್ಟಣ
ಸಹಿ/-ಆಡಳಿತಾಧಿಕಾರಿ, ಕೃ,ಉ,ಮಾ.ಸ, ಚನ್ನರಾಯಪಟ್ಟಣ
ವಾಸಾಸಂಇ/ಹಿಸನಿ/ಹಾಸನ/19ಕೆಎಸ್ಎಂಸಿಎ/2026-27

ಕರ್ನಾಟಕ ಸರ್ಕಾರ
ಕಾರ್ಯನಿರ್ವಾಹಕ ಇಂಜಿನೀಯರರು, ಲೋಕೋಪಯೋಗಿ ಇಲಾಖೆ ವಿಭಾಗ ಕೊಪ್ಪಳ.
ಸಂ:ಕಾನಿಇಂ:ಲೋಇ:ವಿಕೊ:ಟೆಂ:KW-1&4:2026-27: 65 ದಿನಾಂಕ : 07-04-2026.

ಅಲ್ಪಾವಧಿ ಟೆಂಡರ್ ಪ್ರಕಟಣೆ

2025-26ನೇ ಸಾಲಿನ 4059-80-051-0-60-132 ಮುಖ್ಯಮಂತ್ರಿಯವರ ಮೂಲಸೌಕರ್ಯ ಅಭಿವೃದ್ಧಿ ಕಾರ್ಯಕ್ರಮ ಇತರೆ ಬಂಡವಾಳ ವೆಚ್ಚಗಳು ಯೋಜನೆ (ಸಿಎಂಐಡಿಪಿ), ಕಲ್ಯಾಣ ಕರ್ನಾಟಕ ಪ್ರದೇಶ ಅಭಿವೃದ್ಧಿ ಮಂಡಳಿಯ ಮ್ಯಾಕ್ರೋ ಸಾಮಾನ್ಯ ಮತ್ತು 3054-04-105-0-01-200 (ಯೋಜನೇತರ) ಜಿಲ್ಲಾ ಮುಖ್ಯ ರಸ್ತೆ ಸೇತುವೆ ನಿರ್ವಹಣೆ ಅಡಿಗಳಲ್ಲಿ ಮಂಜೂರಾದ ಕಾಮಗಾರಿಗಳಿಗೆ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ಆಧ್ಯಾದೇಶ 1999-2000ರ ಪ್ರಕಾರ ಪಾರದರ್ಶಕತೆ ಆ್ಯಕ್ಟ್ 2000ರ ನಿಯಮದಂತೆ, ಸ್ಟ್ಯಾಂಡರ್ಡ್ ಬಿಡ್ ಡಾಕೂಮೆಂಟ್ KW-1&4ರ ನಿಯಮಗಳನ್ವಯ ಅರ್ಹ ಗುತ್ತಿಗೆದಾರರಿಂದ ಟೆಂಡರ್‌ಗಳನ್ನು ಆಹ್ವಾನಿಸಲಾಗಿದೆ. ಅರ್ಹ ಗುತ್ತಿಗೆದಾರರು, ಕೆಪಿಪಿ ಪೋರ್ಟಲ್ http://kppp.karnataka.gov.in ಮುಖಾಂತರ ಭಾಗವಹಿಸಬಹುದು. ಒಟ್ಟು 5 ಕಾಮಗಾರಿಗಳಿಗೆ (**ವರ್ಕ್ ಇಂಡೆಂಟ್ ಸಂಖ್ಯೆ: 32558, 32559, 32560, 34093 & 33275**) ಟೆಂಡರ್ ಸ್ವೀಕರಿಸುವ ಅಂತಿಮ **ದಿನಾಂಕ: 16-04-2026 ಸಮಯ 12.30 ಗಂಟೆ,** ತಾಂತ್ರಿಕ ಬಿಡ್ ತೆರೆಯುವ **ದಿನಾಂಕ: 17-04-2026 ಸಮಯ 13.00 ಗಂಟೆ.** ಆರ್ಥಿಕ ಬಿಡ್ ತೆರೆಯುವ **ದಿನಾಂಕ: 21-04-2026 ಸಮಯ 11.00 ಗಂಟೆ.** ಕನಿಷ್ಠ ಅಂದಾಜು ಮೊತ್ತ **ರೂ. 5.00 ಲಕ್ಷ**ಗಳು ಹಾಗೂ ಗರಿಷ್ಠ ಅಂದಾಜು ಮೊತ್ತ **ರೂ. 500.00 ಲಕ್ಷ**ಗಳು ಇರುತ್ತದೆ. ಟೆಂಡರ್ ದಾಖಲೆಗಳನ್ನು ಸದರಿ ವೆಬ್‌ಸೈಟ್‌ನಲ್ಲಿಯ ದಾಖಲೆಯಿಂದ ಡೌನ್‌ಲೋಡ್ ಮಾಡಿಕೊಳ್ಳಬಹುದಾಗಿದೆ. ಇ.ಎಂ.ಡಿ, ಟೆಂಡರ್ ಪ್ರೊಸೆಸಿಂಗ್ ಶುಲ್ಕ, ಕಾಮಗಾರಿ ಪೂರ್ಣಗೊಳಿಸಲು ನಿಗದಿತ ಕಾಲಾವಧಿ, ಪ್ರೀಬಿಡ್ ಮೀಟಿಂಗ್ ದಿನಾಂಕ, ಟೆಂಡರ್ ಆಕ್ಷೇಪಣೆ/ಸ್ಪಷ್ಟೀಕರಣ, ಹಾಗೂ ಇತ್ಯಾದಿಗಳಿಗಾಗಿ ಹೆಚ್ಚಿನ ಮಾಹಿತಿಗಳನ್ನು ಕೆಲಸದ ವೇಳೆಯಲ್ಲಿ ಈ ಕಛೇರಿಯಿಂದ ಪಡೆಯಬಹುದು. ಕಾರಣಾಂತರಗಳಿಂದ ಮೇಲೆ ತಿಳಿಸಿದ ಟೆಂಡರ್ ದಿನಾಂಕಗಳು ಹಾಗೂ ಇತರೆ ಬದಲಾವಣೆಗಳಾದಲ್ಲಿ ಗುತ್ತಿಗೆದಾರರು ಕೆಪಿಪಿ ಪೋರ್ಟಲ್‌ನಲ್ಲಿ ನೋಡಿಕೊಳ್ಳಬಹುದು.

ಸಹಿ/- ಕಾರ್ಯನಿರ್ವಾಹಕ ಇಂಜಿನೀಯರು, ಲೋ.ಇ ವಿಭಾಗ, ಕೊಪ್ಪಳ
ವಾ.ಸಾ.ಸಂ.ಇ/ಕೊಪ್ಪಳ/11/ದೇಶಪಾಂಡೆಪಬ್ಲಿಸಿಟಿ/2026-27

ಕರ್ನಾಟಕ ಸರಕಾರ
ಪುರಸಭೆ ಕಾರ್ಯಾಲಯ, ಬಂಕಾಪುರ ಜಿಲ್ಲೆ॥ ಹಾವೇರಿ
E-mail : ka.bankapura.tmc@gmail.com Phone No : 08378-25123
ಕ್ರ.ಸಂ: ಪುಸಬ/ತಾಂ.ವಿ/ಎಸ್.ಎಫ್.ಸಿ ವಿಶೇಷ/ವಹಿ/2025-26 ದಿನಾಂಕ : 04-04-2026

ಟೆಂಡರ ಪ್ರಕಟಣೆ (ಇ-ಪ್ರೊಕ್ಯೂರ್‌ಮೆಂಟ್)

ಬಂಕಾಪುರ ಪುರಸಭೆ ವ್ಯಾಪ್ತಿಯ ಸನ 2022-23 ಸಾಲಿನ ಎಸ್.ಎಫ್.ಸಿ ವಿಶೇಷ ಅನುದಾನದಲ್ಲಿ ಕೈಗೊಳ್ಳಲು ಉದ್ದೇಶಿಸಿದ ಕಾಮಗಾರಿಗಳನ್ನು ಅನುಷ್ಠಾನಗೊಳಿಸುವ ಕುರಿತು ಕರ್ನಾಟಕ ಸಾರ್ವಜನಿಕ ಸಂಗ್ರಹಗಳಲ್ಲಿ ಪಾರದರ್ಶಕ ಅಧಿನಿಯಮ 1999 ಮತ್ತು ತಿದ್ದುಪಡಿ ಅಧಿನಿಯಮ 2000 ರ ಪ್ರಕಾರ ಲೋಕೋಪಯೋಗಿ ಇಲಾಖೆಯಲ್ಲಿ ಮತ್ತು ಇ-ಪ್ರೊಕ್ಯೂರ್‌ಮೆಂಟ್‌ನಲ್ಲಿ ನೋಂದಾಯಿತ ಅರ್ಹ ಗುತ್ತಿಗೆದಾರರಿಂದ ಸ್ಟ್ಯಾಂಡರ್ಡ್ ಟೆಂಡರ್ ಬಿಡ್ಡ್ ಡಾಕ್ಯೂಮೆಂಟ್ ನಿಬಂಧನೆಗೊಳಪಟ್ಟು ಟೆಂಡರ್‌ನ್ನು ಆಹ್ವಾನಿಸಲಾಗಿದೆ. ಇಚ್ಛೆಯುಳ್ಳ ಗುತ್ತಿಗೆದಾರರು https://kppp.karnataka.gov.in ಗೆ ನೇರವಾಗಿ ಲಾಗ್-ಇನ್ ಆಗಿ ಟೆಂಡರ್ ಸಲ್ಲಿಸಬಹುದಾಗಿರುತ್ತದೆ.
(1) ಗುತ್ತಿಗೆದಾರರು ನೇರವಾಗಿ http://kppp.karnataka.gov.in ಗೆ ಲಾಗ್-ಇನ್ ಆಗಿ ಟೆಂಡರ್ ಸಲ್ಲಿಸುವ ಕೊನೆಯ ದಿನಾಂಕ : **20-04-2026** ಸಮಯ ಸಾಯಂಕಾಲ 5-30 ಗಂಟೆವರೆಗೆ ಮಾತ್ರ. (2) ತಾಂತ್ರಿಕ ಬಿಡ್ಡ್ ತೆರೆಯುವ ದಿನಾಂಕ : **22-04-2026** ರಂದು 11-30 ಗಂಟೆಗೆ ಅಥವಾ ಮುಂದೆ ಸೂಚಿಸುವ ದಿನದಂದು.

ಅ. ನಂ.	ಟೆಂಡರ್ (ಇಂಡೆಂಟ್) ಸಂಖ್ಯೆ	ಅಂದಾಜು ಮೊತ್ತ (ರೂ. ಲಕ್ಷಗಳಲ್ಲಿ)	ಟೆಂಡರಿಗಿಟ್ಟ ಮೊತ್ತ (ರೂ. ಲಕ್ಷಗಳಲ್ಲಿ)	ಇ.ಎಂ.ಡಿ ಮೊತ್ತ (ರೂ. ಗಳಲ್ಲಿ)	ಗುತ್ತಿಗೆದಾರರ ದರ್ಜೆ	ಕಾಮಗಾರಿ ಅವಧಿ	ಮಿಸಲಾತಿ
ಸನ್ 2022-23 ಸಾಲಿನ ಎಸ್.ಎಫ್.ಸಿ ವಿಶೇಷ ಅನುದಾನ							
1	DMA/2025-26/OW/WORK_INDENT56840	100.00	84.71	169000.00	3ನೇ ದರ್ಜೆ ಹಾಗೂ ಮೇಲ್ಪಟ್ಟು	11 ತಿಂಗಳು	Others

ಹೆಚ್ಚಿನ ಮಾಹಿತಿಯನ್ನು ಪುರಸಭೆ ಕಛೇರಿ ವೇಳೆಯಲ್ಲಿ ಹಾಗೂ http://www.bankapurtown.mrc.gov.in ನಿಂದ ಪಡೆಯಬಹುದಾಗಿದೆ.

ಸಹಿ/- ಅಧ್ಯಕ್ಷರು, ಪುರಸಭೆ, ಬಂಕಾಪುರ **ಸಹಿ/- ಮುಖ್ಯಾಧಿಕಾರಿ, ಪುರಸಭೆ, ಬಂಕಾಪುರ**
ವಾಸಾಸಂಇ/ಹಾವೇರಿ/ಕೆಎಸ್ಎಂಸಿಎ/26/2026-27

ಕರ್ನಾಟಕ ಸರ್ಕಾರ
ಕಾರ್ಯಪಾಲಕ ಇಂಜಿನಿಯರವರ ಕಛೇರಿ, ಲೋಕೋಪಯೋಗಿ ಇಲಾಖೆ ವಿಭಾಗ, ಚಿತ್ರದುರ್ಗ.
ಸಂಖ್ಯೆ: ಕಾಇಂ:ಲೋವಿಚಿ:ಎಇ-2:ಟೆಂಡರ್-01:2026-27 ದಿನಾಂಕ: 07.04.2026

ಅಲ್ಪಾವಧಿ ಇ-ಟೆಂಡರ್ ಪ್ರಕಟಣೆ

ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ಅಧ್ಯಾದೇಶ 2000 ಹಾಗೂ ಆಕ್ಟ್ 2000 ರ ಪ್ರಕಾರ ಸ್ಟ್ಯಾಂಡರ್ಡ್ ಟೆಂಡರ್ ಡಾಕ್ಯುಮೆಂಟ್‌ನ ನಿಯಮಾವಳಿಗಳನ್ವಯ ಕರ್ನಾಟಕ ರಾಜ್ಯ ಸರ್ಕಾರದ ರಾಜ್ಯಪಾಲರ ಪರವಾಗಿ ಕಾರ್ಯಪಾಲಕ ಇಂಜಿನಿಯರು, ಲೋಕೋಪಯೋಗಿ ಇಲಾಖೆ ವಿಭಾಗ, ಚಿತ್ರದುರ್ಗ ಇವರಿಂದ ಕರ್ನಾಟಕ ಲೋಕೋಪಯೋಗಿ ಇಲಾಖೆಯಲ್ಲಿ ನೋಂದಾಯಿತರಾದ ಅರ್ಹ ಗುತ್ತಿಗೆದಾರರಿಂದ ಕೆಪಿಪಿ ಪೋರ್ಟಲ್ ಮುಖಾಂತರ ಈ ಕೆಳಕಂಡ ಕಾಮಗಾರಿಗೆ ದ್ವಿ ಲಕೋಟೆ ಪದ್ಧತಿಯಲ್ಲಿ ಟೆಂಡರ್‌ನ್ನು ಆಹ್ವಾನಿಸಲಾಗಿದೆ.
ಆಸಕ್ತ ಗುತ್ತಿಗೆದಾರರು ವೆಬ್‌ಸೈಟ್ kppp.karnataka.gov.in ನಲ್ಲಿ ಟೆಂಡರ್‌ಗಾಗಿ ವಿವರಗಳನ್ನು ಪಡೆದು ಭಾಗವಹಿಸಬಹುದು.
ಕಾಮಗಾರಿಯ ವಿವರ:- ಕೆಪಿಪಿ ಪೋರ್ಟಲ್ ಮೂಲಕ- ದ್ವಿ ಲಕೋಟೆ ಪದ್ಧತಿ:- ಲೆಕ್ಕ ಶೀರ್ಷಿಕೆ: 3054-04-337-1-10-200 ಜಿಲ್ಲಾ ಮುಖ್ಯ ಇತರೆ ರಸ್ತೆಗಳ ನಿರ್ವಹಣೆ (1) ಹೊಳಲ್ಕೆರೆ ತಾಲ್ಲೂಕಿನ [illegible] ಸಂಪರ್ಕಿಸುವ ರಸ್ತೆ ಮತ್ತು [illegible] ಕಿ.ಮೀ 0.00 ರಿಂದ ಕಿ.ಮೀ 2.55 ರ (ಕಡೂರು ತಾಲ್ಲೂಕು ಗಡಿ) ವರೆಗೆ ಅಭಿವೃದ್ಧಿ ಮತ್ತು ಡಾಂಬರೀಕರಣ (ವ.ಸಂ. 34940)/[illegible]
ಅಂದಾಜು ಮೊತ್ತ (ರೂ. ಲಕ್ಷಗಳಲ್ಲಿ):-120.00
ಟೆಂಡರ್ ದಿನಾಂಕಗಳು ಈ ಕೆಳಕಂಡಂತಿವೆ. ಟೆಂಡರ್ ಬಗ್ಗೆ ವಿಚಾರಿಸಲು/ಮಾಹಿತಿ ಪಡೆಯಲು ಕೊನೆಯ ದಿನಾಂಕ 13-04-2026 ಸಮಯ 17-30
ಟೆಂಡರ್ ಸಲ್ಲಿಸುವ ಅಂತಿಮ ದಿನಾಂಕ 15-04-2026 ಸಮಯ 16-00
ತಾಂತ್ರಿಕ ಬಿಡ್ ತೆರೆಯುವ ದಿನಾಂಕ ಮತ್ತು ವೇಳೆ 16-04-2026 ಸಮಯ 16-15
ಆರ್ಥಿಕ ಬಿಡ್ ತೆರೆಯುವ ದಿನಾಂಕ ಮತ್ತು ವೇಳೆ 18-04-2026 ಸಮಯ 11-00
ಹೆಚ್ಚಿನ ವಿವರಗಳಿಗೆ ಸದರಿ ಕಛೇರಿಯಿಂದ (ದೂರವಾಣಿ ಸಂಖ್ಯೆ 08194 222446) ಹಾಗೂ [illegible] ಸಹಾಯಕ ದೂರವಾಣಿ ಸಂಖ್ಯೆ 91 9240214000 ಮತ್ತು 91 9240214001 ರಿಂದ ಮಾಹಿತಿ ಪಡೆಯಬಹುದು.

DIPR/CTA/KSMCA/13/2026-27
ಸಹಿ/- ಕಾರ್ಯಪಾಲಕ ಅಭಿಯಂತರರು, ಲೋಕೋಪಯೋಗಿ ಇಲಾಖೆ ವಿಭಾಗ, ಚಿತ್ರದುರ್ಗ.

ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ
ಟಿ. ಚೌಡಯ್ಯ ರಸ್ತೆ, ಕುಮಾರ ಪಾರ್ಕ್ ಪಶ್ಚಿಮ, ಬೆಂಗಳೂರು - 560 020.
ನಂ: ಬೆಂಅಪ್ರಾ/ನಯೋಸ/CLU-480/65/2026-27(E-193290) ದಿನಾಂಕ: 07.04.2026

ಪ್ರಕಟಣೆ

ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961 ರ ಕಲಂ 14-A ರ ಅಡಿಯಲ್ಲಿ ಈ ಕೆಳಕಂಡ ಅರ್ಜಿದಾರರು ವ್ಯವಸಾಯ ವಲಯದಿಂದ ವಸತಿ ಉಪಯೋಗಕ್ಕೆ ಭೂಉಪಯೋಗ ಬದಲಾವಣೆ ಕೋರಿ ಅರ್ಜಿ ಸಲ್ಲಿಸಿರುತ್ತಾರೆ. ಭೂಉಪಯೋಗ ಬದಲಾವಣೆಯ ಪ್ರಸ್ತಾವನೆಯ ವಿವರಗಳು ಈ ಕೆಳಕಂಡಂತೆ ಇರುತ್ತದೆ. ಸದರಿ ಭೂಉಪಯೋಗ ಬದಲಾವಣೆ ಪ್ರಸ್ತಾವನೆ ಬಗ್ಗೆ ಯಾವುದೇ ಆಕ್ಷೇಪಣೆಗಳಿದ್ದರೆ, ಈ ಪ್ರಕಟಣೆ ಪ್ರಕಟವಾದ ದಿನಾಂಕದಿಂದ 15 ದಿವಸಗಳೊಳಗಾಗಿ ಆಕ್ಷೇಪಣೆಗಳನ್ನು ಲಿಖಿತವಾಗಿ ನಗರ ಯೋಜಕ ಸದಸ್ಯರು, ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ, ಬೆಂಗಳೂರು ಕಛೇರಿಗೆ ಸಲ್ಲಿಸಲು ತಿಳಿಸಲಾಗಿದೆ. ನಿಗದಿತ ಅವಧಿಯ ನಂತರ ಬರುವ ಯಾವುದೇ ಆಕ್ಷೇಪಣೆಗಳನ್ನು ಪರಿಗಣಿಸುವುದಿಲ್ಲ.

ಕ್ರ. ಸಂ.	ಅರ್ಜಿದಾರರ ಹೆಸರು	ತಾಲ್ಲೂಕು	ಹೋಬಳಿ	ಗ್ರಾಮದ ವಿವರ	ಸರ್ವೆ ನಂ.	ವಿಸ್ತೀರ್ಣ ಎ-ಗುಂ	ಪರಿಷ್ಕೃತ ಮಹಾಯೋಜನೆ 2015ರ ಪ್ರಕಾರ ಭೂಉಪಯೋಗ	ಬದಲಾವಣೆ ಕೋರಿರುವ ಭೂ ಉಪಯೋಗ
1	ಶ್ರೀ ಬಾಬುರೆಡ್ಡಿ ಮತ್ತು ಶ್ರೀ ಸಿ.ಆರ್. ವೆಂಕಟೇಶ್ ರೆಡ್ಡಿ	ಬೆಂಗಳೂರು ಪೂರ್ವ	ವರ್ತೂರು	ಸೂಲಿಕುಂಟೆ	28/2	0-08	ವ್ಯವಸಾಯ ವಲಯ	ವಸತಿ
					28/3	0-14.50		
					28/4	0-19.75		
					28/5	0-19.75		
					28/6	2-14		
					29-14	1-24		
					29/15	0-05		
					ಒಟ್ಟು	5-25		

ಷರಾ: ಅರ್ಜಿದಾರರು ಪ್ರಶ್ನಿತ ಜಮೀನುಗಳನ್ನು ವ್ಯವಸಾಯ ಉದ್ದೇಶಕ್ಕಾಗಿ ಬಳಸಲು ಸಾಧ್ಯವಿರುವುದಿಲ್ಲ. ನಮ್ಮ ಜಮೀನಿನ ಸುತ್ತಮುತ್ತ ವಾಸದ ಉದ್ದೇಶಕ್ಕಾಗಿ ಬೇಡಿಕೆ ಇದ್ದು, ಪ್ರಶ್ನಿತ ಜಮೀನಿನಲ್ಲಿ ಯೋಜಿತ ಬೆಳವಣಿಗೆಯ ಅಭಿವೃದ್ಧಿಪಡಿಸುವುದರಿಂದ ಸುತ್ತಮುತ್ತಲಿನ ನಿವಾಸಿಗಳಿಗೆ ಉದ್ಯೋಗಾವಕಾಶ ಕಲ್ಪಿಸಿದಂತಾಗುತ್ತದೆ. ಭೂ ಉಪಯೋಗ ಬದಲಾವಣೆಗೊಂಡ ನಂತರ ವಸತಿ ಉದ್ದೇಶಕ್ಕೆ ಸಕ್ಷಮ ಪ್ರಾಧಿಕಾರದಿಂದ ಅನುಮೋದನೆ ಪಡೆದು ಯೋಜನಾಬದ್ಧ ಅಭಿವೃದ್ಧಿ ಕಾರ್ಯಗಳನ್ನು ಕೈಗೊಳ್ಳುವುದರಿಂದ ಸ್ಥಳೀಯರಿಗೆ ಉದ್ಯೋಗಾವಕಾಶ ಸೃಷ್ಟಿಯಾಗಿರುತ್ತದೆ. ಸದರಿ ಪ್ರದೇಶದಲ್ಲಿ ಮೂಲಭೂತ ಸೌಕರ್ಯಗಳನ್ನು ಕಲ್ಪಿಸುವುದರಿಂದ ಸಾರ್ವಜನಿಕರಿಗೆ ಅನುಕೂಲವಾಗುತ್ತದೆ ಎಂಬ ಸಾರ್ವಜನಿಕ ಹಿತಾಸಕ್ತಿ ಅಂಶ ಅಡಗಿದೆ ಎಂದು ತಿಳಿಸುತ್ತಾ, ಪ್ರಶ್ನಿತ ಜಮೀನುಗಳನ್ನು 'ವ್ಯವಸಾಯ ವಲಯ' ದಿಂದ 'ವಸತಿ ಉಪಯೋಗಕ್ಕೆ' ಭೂಉಪಯೋಗ ಬದಲಾವಣೆ ಮಾಡಿಕೊಳ್ಳಲು ಇಚ್ಛಿಸಿರುವುದಾಗಿ ತಿಳಿಸಿರುತ್ತಾರೆ. ಸಹಾಯವಾಣಿ/ವಾಟ್ಸ್‌ಪ್: 9483166622 (24X7). @BDAOfficialGok

ಸಹಿ/- ನಗರ ಯೋಜಕ ಸದಸ್ಯರು, ಬೆಂಅಪ್ರಾ, ಬೆಂಗಳೂರು

ಸಮಾಚಾರ ಸಣ್ಣದಲ್ಲ

ಮಾದಿಗರ ದಾರಿ ತಪ್ಪಿಸುವ ಷಡ್ಯಂತ್ರ

ದಾವಣಗೆರೆ: ದಕ್ಷಿಣ ವಿಧಾನಸಭಾ ಕ್ಷೇತ್ರ, ಕಾಂಗ್ರೆಸ್ ಪಕ್ಷದ ಭದ್ರಕೋಟೆ. ಇದನ್ನು ಬೇಧಿಸಲು ಯಾರಿಂದಲೂ ಸಾಧ್ಯವಿಲ್ಲ ಎಂದು ಮಾಜಿ ಸಚಿವ ಎಚ್.ಆಂಜನೇಯ ಹೇಳಿದರು. ಕಾಂಗ್ರೆಸ್ ಅಭ್ಯರ್ಥಿ ಸಮರ್ಥ್ ಶಾಮನೂರು ಪರ ನಡೆದ ಪ್ರಚಾರ ಸಭೆಯಲ್ಲಿ ಮಾತನಾಡಿ, ಶಿವಶಂಕರಪ್ಪ ಅವರು ಸಂಸದ, ಶಾಸಕ, ಮಂತ್ರಿಯಾಗಿ ಕ್ಷೇತ್ರದ ಬಡ, ಶೋಷಿತ, ದುರ್ಬಲ, ಅಹಿಂದ ವರ್ಗದ ಪ್ರಗತಿಗೆ ಶ್ರಮಿಸಿದ್ದಾರೆ. ಮನೆ, ನಿವೇಶನ, ಭೂಮಿ ನೀಡುವ ಜತೆಗೆ ಕಲ್ಯಾಣ ಮಂಟಪ ಕಟ್ಟಿಸಿದ್ದಾರೆ. ಕೋವಿಡ್ ಸಂದರ್ಭದಲ್ಲಿ 10 ಕೋಟಿಗೂ ಹೆಚ್ಚು ವೆಚ್ಚ ಮಾಡಿ ಜನರಿಗೆ ಉಚಿತ ಲಸಿಕೆ ಹಾಕಿಸುವ ಮೂಲಕ ಮಾನವೀಯತೆ ಮೆರೆದಿದ್ದಾರೆ. ಮಾದಿಗ ಸಮುದಾಯಕ್ಕೆ ಹೆಚ್ಚಿನ ಸಹಕಾರ ನೀಡಿದ ಶಾಮನೂರು ಕುಟುಂಬದ ಕುಡಿ ಸಮರ್ಥ್ ಅವರನ್ನು ಗೆಲ್ಲಿಸಬೇಕು. ಪ್ರತಿ ಬೂತ್‌ಗಳಲ್ಲೂ ನೂರಕ್ಕೆ ನೂರು ಮತ ಕಾಂಗ್ರೆಸ್‌ಗೆ ನೀಡಬೇಕು ಎಂದರು.

ಬಿಜೆಪಿಯವರು ಸತ್ಯ ಯಾವತ್ತೂ ಹೇಳಿಲ್ಲ

ಬಾಗಲಕೋಟೆ: ಬಿಜೆಪಿ ಯಾವತ್ತೂ ಸತ್ಯ ಹೇಳಿಲ್ಲ. ಸುಳ್ಳನ್ನೇ ಸತ್ಯದಂತೆ ಬಿಂಬಿಸುತ್ತಾರೆ. ಅಭಿವೃದ್ಧಿಯಂತೂ ಮಾಡಿಯೇ ಇಲ್ಲ ಅಬಕಾರಿ ಸಚಿವ ಆರ್.ಬಿ.ತಿಮ್ಮಾಪುರ ವಾಗ್ದಾಳಿ ನಡೆಸಿದರು. ಸುದ್ದಿಗೋಷ್ಠಿಯಲ್ಲಿ ಮಾತನಾಡಿ, ಕಾಂಗ್ರೆಸ್ ಸರಕಾರದ ಕಾರ್ಯಕ್ರಮಗಳಿಗೆ ಜನರಿಂದ ಮೆಚ್ಚುಗೆ ವ್ಯಕ್ತವಾಗುತ್ತಿದೆ. ನಿರೀಕ್ಷೆಗೂ ಮೀರಿ ಲೀಡ್ ಸಿಗಲಿದೆ. ಜಾತಿ, ಧರ್ಮದ ಹೆಸರಿನಲ್ಲಿ ಕಾಂಗ್ರೆಸ್ ಯಾವತ್ತೂ ರಾಜಕೀಯ ಮಾಡಿಲ್ಲ. ಸರಕಾರಿ ಕಚೇರಿಗಳಲ್ಲಿ ಬಸವಣ್ಣನ ಭಾವಚಿತ್ರ ಕಡ್ಡಾಯ, ಅವರನ್ನು ರಾಜ್ಯದ ಸಾಂಸ್ಕೃತಿಕ ನಾಯಕ ಎಂದು ಘೋಷಣೆ ಮಾಡಿರುವುದು ಕಾಂಗ್ರೆಸ್. ಇದಕ್ಕೆ ಲಿಂಗಾಯತರೂ ಮೆಚ್ಚುಗೆ ವ್ಯಕ್ತಪಡಿಸುತ್ತಿದ್ದಾರೆ. ಎಲ್ಲ ಜಾತಿ, ಜನಾಂಗವನ್ನು ಕಾಂಗ್ರೆಸ್ ಗೌರವಿಸುತ್ತದೆ. ಗ್ಯಾರಂಟಿ ಯೋಜನೆಗಳಿಂದ ಬಡ ಕುಟುಂಬಗಳು ಆರ್ಥಿಕವಾಗಿ ಸಬಲೀಕರಣಗೊಂಡಿವೆ. ಬಾಗಲಕೋಟೆಗೆ ಅಭಿವೃದ್ಧಿ ಸರಕಾರ ಬದ್ಧವಾಗಿದೆ ಎಂದು ಹೇಳಿದರು.

ಈ ಚುನಾವಣೆ ರಾಜ್ಯ ರಾಜಕೀಯ ದಿಕ್ಸೂಚಿ



ಮಂಡ್ಯ: ಬಾಗಲಕೋಟೆ ಮತ್ತು ದಾವಣಗೆರೆಯಲ್ಲಿ ಎರಡೂ ಕಡೆ ಬಿಜೆಪಿ ಗೆಲ್ಲುವ ವಿಶ್ವಾಸ ಇದೆ. ಈ ಚುನಾವಣೆ ಫಲಿತಾಂಶ ರಾಜ್ಯ ರಾಜಕಾರಣಕ್ಕೆ ದಿಕ್ಸೂಚಿಯಾಗಲಿದೆ. ಬರುವಂತಹ ದಿನಗಳಲ್ಲಿ ರಾಜ್ಯ ಸರಕಾರದ ವಿರುದ್ಧ ಇರುವ ಜನರ ಅನಿಸಿಕೆ ಜನ ವಿರೋಧಿ ಅಲೆಯಾಗಿ ಮಾರ್ಪಡುತ್ತದೆ ಎಂದು ಸಂಸದ ಬಸವರಾಜ ಬೊಮ್ಮಾಯಿ ಹೇಳಿದರು. ಸುದ್ದಿಗಾರರೊಂದಿಗೆ ಮಾತನಾಡಿ, ಈಗ ರಾಜ್ಯ ಸರಕಾರಕ್ಕೆ ಮೂರು ವರ್ಷ ಆಗಿದೆ. ಇವರ ಬಂಡವಾಳ ಬಯಲಾಗಿದೆ. ಜನ ವಿರೋಧಿ ನೀತಿ ಅನುಸರಿಸುತ್ತಿದ್ದಾರೆ. ಎಲ್ಲ ಕಡೆ ವಿರೋಧ ಇದೆ. ಎರಡೂ ಕ್ಷೇತ್ರಗಳಲ್ಲಿ ಬಿಜೆಪಿ ಅಭ್ಯರ್ಥಿಗಳು ಗೆಲ್ಲುತ್ತಾರೆ ಎಂದು ಹೇಳಿದರು.

ಜೆಡಿಎಸ್ ಬೃಹತ್ ಸಮಾವೇಶ 11ಕ್ಕೆ

ಬೆಂಗಳೂರು: ರಾಜಧಾನಿಯಲ್ಲಿ ಜನತಾದಳ (ಜಾತ್ಯತೀತ) ಪಕ್ಷವನ್ನು ತಳ ಮಟ್ಟದಿಂದ ಬಲಪಡಿಸುವ ಉದ್ದೇಶದೊಂದಿಗೆ ಬರುವ ಏಪ್ರಿಲ್ 11ರಂದು ನಗರದಲ್ಲಿ ಬೃಹತ್ ಸಮಾವೇಶವನ್ನು ಆಯೋಜಿಸಲು ನಿರ್ಧರಿಸಲಾಗಿದೆ. ಗಾಂಧಿನಗರ ವಿಧಾನಸಭಾ ಕ್ಷೇತ್ರದ ಜೆಡಿಎಸ್ ಅಧ್ಯಕ್ಷ, ಆರ್.ಎಲ್.ಎನ್.ಮೂರ್ತಿ ಅವರು ಸುದ್ದಿಗಾರರೊಂದಿಗೆ ಮಾತನಾಡಿ, ಬೆಂಗಳೂರಿನ ಐದು ಹೊಸ ಮಹಾನಗರ ಪಾಲಿಕೆಗಳ ವ್ಯಾಪ್ತಿಯಲ್ಲಿ ಅಧಿಕಾರ ಹಿಡಿಯಲು ಪಕ್ಷವು ಗಂಭೀರ ಸಿದ್ಧತೆ ನಡೆಸುತ್ತಿದೆ ಎಂದು ತಿಳಿಸಿದರು. ಕರ್ನಾಟಕದಲ್ಲಿ ಎನ್‌ಡಿಎ ಮೈತ್ರಿಕೂಟದ ಭಾಗವಾಗಿರುವ ಜೆಡಿಎಸ್, ನಗರದ ಎಲ್ಲ 28 ವಿಧಾನಸಭಾ ಕ್ಷೇತ್ರಗಳಲ್ಲಿ ಕಾರ್ಯಕರ್ತರನ್ನು ಒಗ್ಗೂಡಿಸಲು ಈ ಸಮಾವೇಶವನ್ನು ವೇದಿಕೆಯನ್ನಾಗಿ ಬಳಸಿಕೊಳ್ಳಲಿದೆ. ಮಾಜಿ ಪ್ರಧಾನಿ ಎಚ್.ಡಿ.ದೇವೇಗೌಡರು ಮತ್ತು ಮಾಜಿ ಮುಖ್ಯಮಂತ್ರಿ ಎಚ್.ಡಿ.ಕುಮಾರಸ್ವಾಮಿ ಅವರ ಕಾಲದ ಅಭಿವೃದ್ಧಿ ಕಾರ್ಯಗಳನ್ನು ಮನೆಮನೆಗೆ ತಲುಪಿಸುವ ಜತೆಗೆ, ಸ್ಥಳೀಯ ಯುವ ಸಮೂಹ ಮತ್ತು ಮಹಿಳೆಯರಿಗೆ ನಾಯಕತ್ವದ ಅವಕಾಶಗಳನ್ನು ಒದಗಿಸುವುದು ಪಕ್ಷದ ಮುಖ್ಯ ಗುರಿಯಾಗಿದೆ. ರಾಷ್ಟ್ರೀಯ ಪಕ್ಷಗಳಿಗೆ ಪರ್ಯಾಯವಾಗಿ ಪ್ರಾದೇಶಿಕ ಶಕ್ತಿಯನ್ನು ಉಳಿಸಿಕೊಳ್ಳಲು ಈ ಸಮಾವೇಶವು ನಿರ್ಣಾಯಕವಾಗಲಿದೆ ಎಂದರು.

ದಾವಣಗೆರೆ ದಕ್ಷಿಣದಲ್ಲಿ 284 ಮತಗಟ್ಟೆಗಳಲ್ಲಿ ವೆಬ್‌ಕಾಸ್ಟಿಂಗ್, 76 ಅತಿಸೂಕ್ಷ್ಮ ಮತಗಟ್ಟೆ
ಬಾಗಲಕೋಟೆ ಕ್ಷೇತ್ರದ ಮತದಾನಕ್ಕೆ ಹೆಚ್ಚುವರಿ ಸೇರಿ ಒಟ್ಟು 1,564 ಸಿಬ್ಬಂದಿ ನೇಮಕ

ಉಪಚುನಾವಣೆ: ಮತದಾನಕ್ಕೆ ಸಕಲ ಸಿದ್ಧತೆ

ಬೆಂಗಳೂರು: ದಾವಣಗೆರೆ ದಕ್ಷಿಣ ಮತ್ತು ಬಾಗಲಕೋಟೆ ವಿಧಾನಸಭಾ ಕ್ಷೇತ್ರಗಳ ಉಪಚುನಾವಣೆಗೆ ಏ.9ರಂದು ಮತದಾನ ನಡೆಯಲಿದ್ದು, ಕ್ಷೇತ್ರ ವ್ಯಾಪ್ತಿಯ 284 ಮತಗಟ್ಟೆಗಳಲ್ಲಿ ಅಗತ್ಯ ಸಿದ್ಧತೆಗಳನ್ನು ಮಾಡಿಕೊಳ್ಳಲಾಗಿದೆ.

ಈ ಕುರಿತು ಮಾಹಿತಿ ನೀಡಿದ ದಾವಣಗೆರೆ ದಕ್ಷಿಣ ಕ್ಷೇತ್ರದ ಚುನಾವಣಾಧಿಕಾರಿ ಸಂತೋಷ್‌ಕುಮಾರ್, ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿ 234 ಮತಗಟ್ಟೆಗಳಿವೆ. ಉಳಿದ 50 ಮತಗಟ್ಟೆಗಳು ಗ್ರಾಮೀಣ ಪ್ರದೇಶದಲ್ಲಿವೆ. 76 ಅತಿಸೂಕ್ಷ್ಮ ಮತಗಟ್ಟೆಗಳನ್ನು ಗುರುತಿಸಲಾಗಿದೆ. ಮತಗಟ್ಟೆಗಳಲ್ಲಿ ಕುಡಿಯುವ ನೀರು, ವಿಶ್ರಾಂತಿ ಕೊಠಡಿ, ಶೌಚಾಲಯ ಸೇರಿದಂತೆ ಅಗತ್ಯ ಸಿದ್ಧತೆ ಮಾಡಿಕೊಂಡು ಪರಿಶೀಲಿಸಲಾಗಿದೆ. ಎಲ್ಲ ಮತಗಟ್ಟೆಗಳಲ್ಲಿ ವೆಬ್‌ಕಾಸ್ಟಿಂಗ್ ವ್ಯವಸ್ಥೆ ಮಾಡಲಾಗಿದೆ ಎಂದು ಮಾಹಿತಿ ನೀಡಿದರು.

ಕ್ಷೇತ್ರ ವ್ಯಾಪ್ತಿಯಲ್ಲಿ 2.31 ಲಕ್ಷ ಮತದಾರರಿದ್ದಾರೆ. ಅಂಗವಿಕಲ ಹಾಗೂ 80 ವರ್ಷ ಮೇಲ್ಪಟ್ಟ ಮತದಾರರು ಮನೆಯಿಂದಲೇ ಹಕ್ಕು ಚಲಾವಣೆ ಮಾಡುವ ಪ್ರಕ್ರಿಯೆ ಪೂರ್ಣಗೊಂಡಿದೆ. ಸಖಿ, ಅಂಗವಿಕಲ, ಯುವ ಮತಗಟ್ಟೆಗಳ ಮೂಲಕ ಮತದಾನ ಪ್ರಮಾಣ ಹೆಚ್ಚಳಕ್ಕೆ ಪ್ರಯತ್ನಿಸಲಾಗುತ್ತಿದೆ. ಎಲ್ಲ ಮತಗಟ್ಟೆಗಳಿಗೆ 586 ಬ್ಯಾಲೆಟ್ ಯುನಿಟ್, 284 ಕಂಟ್ರೋಲ್ ಯುನಿಟ್ ಹಾಗೂ 284 ವಿವಿಪ್ಯಾಟ್‌ಗಳನ್ನು ಒದಗಿಸಲಾಗಿದೆ. ಹೆಚ್ಚುವರಿ ವಿದ್ಯುನ್ಮಾನ ಮತಯಂತ್ರಗಳನ್ನು ಕಾಯ್ದಿರಿಸಲಾಗಿದೆ ಎಂದು ವಿವರಿಸಿದರು.

ಏ.9ರಂದು ನಸುಕಿನ 5.30ರಿಂದ ಅಣಕು ಮತದಾನ ಪ್ರಕ್ರಿಯೆ ಆರಂಭವಾಗಲಿದೆ. ಬೆಳಗ್ಗೆ 7ರಿಂದ ಸಂಜೆ 6 ಗಂಟೆಯವರೆಗೆ ಮತದಾನಕ್ಕೆ ಅವಕಾಶವಿದೆ. ಮತಗಟ್ಟೆಯ 200 ಮೀಟರ್ ಸುತ್ತ ನಿಷೇಧಾಜ್ಞೆ ಜಾರಿಗೊಳಿಸಲಾಗಿದೆ. ಸಂಜೆ 6 ಗಂಟೆಗೆ ಮತಗಟ್ಟೆಯ ಪರಿಮಿತಿಯೊಳಗೆ ಇರುವ ಮತದಾರರಿಗೆ ಟೋಕನ್ ನೀಡಲಾಗುತ್ತದೆ. ಮತಗಟ್ಟೆಯೊಳಗೆ ಸರತಿಯಲ್ಲಿ ಕಾಯುವ ಈ ಮತದಾರರಿಗೆ ಮಾತ್ರ ಹಕ್ಕು ಚಲಾವಣೆ ಮಾಡುವ ಅವಕಾಶ ನೀಡಲಾಗುತ್ತದೆ ಎಂದು ಸ್ಪಷ್ಟಪಡಿಸಿದರು.

ಡಿಆರ್‌ಆರ್ ಶಾಲೆಯಲ್ಲಿ ಮಸ್ಟರಿಂಗ್: ಮತಗಟ್ಟೆಗಳಿಗೆ ವಿದ್ಯುನ್ಮಾನ ಮತ ಯಂತ್ರಗಳನ್ನು ಕೊಂಡೊಯ್ಯುವ ಸಿಬ್ಬಂದಿಗೆ ಜವಾಬ್ದಾರಿ ಹಂಚಿಕೆ ಮಾಡುವ ಮಸ್ಟರಿಂಗ್ ಪ್ರಕ್ರಿಯೆ ನಗರದ ಪಿ.ಬಿ.ರಸ್ತೆಯ ಡಿಆರ್‌ಆರ್ ಶಾಲೆಯ ಆವರಣದಲ್ಲಿ ಏ.8ರಂದು ನಡೆಯಲಿದೆ.

ಮತಗಟ್ಟೆ ಅಧಿಕಾರಿ, ಸಹಾಯಕ ಮತಗಟ್ಟೆ ಅಧಿಕಾರಿ ಸೇರಿ 681 ಸಿಬ್ಬಂದಿಯನ್ನು ನಿಯೋಜಿಸಲಾಗಿದೆ. 60 ವೀಕ್ಷಕರು ಮತಗಟ್ಟೆಗಳ ಮೇಲೆ ನಿಗಾ ಇಡಲಿದ್ದಾರೆ. ಮತಯಂತ್ರಗಳ ಸಾಗಣೆಗೆ ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯ (ಕೆಎಸ್‌ಆರ್‌ಟಿಸಿ) 28 ಬಸ್, 39 ಮಿನಿ ಬಸ್ ಹಾಗೂ 5 ಜೀಪ್‌ಗಳನ್ನು ಬಳಸಲಾಗುತ್ತಿದೆ. ಡಿಮಸ್ಟರಿಂಗ್ ಪ್ರಕ್ರಿಯೆ ಪೂರ್ಣಗೊಂಡ ಬಳಿಕ ಶಾಲೆಯಲ್ಲಿ ತೆರೆದಿರುವ ಭದ್ರತಾ ಕೊಠಡಿಯಲ್ಲಿ ಮತಗಟ್ಟೆಗಳನ್ನು ಭದ್ರಪಡಿಸಲಾಗುತ್ತದೆ. ಮೇ 4ರಂದು ಮತ ಎಣಿಕೆ ನಡೆಯಲಿದೆ ಎಂದರು.

1,000 ಪೊಲೀಸ್ ನಿಯೋಜನೆ: ಮತದಾನದ ದಿನ ಭದ್ರತಾ ವ್ಯವಸ್ಥೆಯನ್ನು ಬಿಗಿಗೊಳಿಸಲಾಗಿದ್ದು, ಕೇಂದ್ರೀಯ ಸಶಸ್ತ್ರ ಪೊಲೀಸ್ ಪಡೆ (ಸಿಎಪಿಎಫ್) ಸೇರಿದಂತೆ 1,000 ಪೊಲೀಸರನ್ನು ನಿಯೋಜಿಸಲಾಗಿದೆ. ಮುಕ್ತ ಮತ್ತು ನ್ಯಾಯಸಮ್ಮತ ಚುನಾವಣೆಗೆ ಸಕಲ ಸಿದ್ಧತೆಗಳನ್ನು ಮಾಡಿಕೊಳ್ಳಲಾಗಿದೆ. ಸಿಎಪಿಎಫ್ ಸೇರಿ ಇತರ ಭದ್ರತಾ ಪಡೆಯ ಸಿಬ್ಬಂದಿಯನ್ನು ಕರ್ತವ್ಯಕ್ಕೆ ನಿಯೋಜಿಸಲಾಗಿದೆ. ಅತಿ ಸೂಕ್ಷ್ಮ ಮತಗಟ್ಟೆಗಳಿಗೆ ಹೆಚ್ಚುವರಿ ಪೊಲೀಸರು ಹಾಗೂ ಸಿಎಪಿಎಫ್ ಸಿಬ್ಬಂದಿ ಇರಲಿದ್ದಾರೆ ಎಂದು ಚುನಾವಣಾಧಿಕಾರಿ ಸಂತೋಷ್‌ಕುಮಾರ್ ತಿಳಿಸಿದರು.

ಸೀರೆ, ಕುಕ್ಕರ್ ವಿತರಣೆ: ದೂರು ಮತದಾರರಿಗೆ ಆಮಿಷವೊಡ್ಡುತ್ತಿರುವ ಕುರಿತು ಕೆಲ ದೂರುಗಳು ಬಂದಿವೆ. ಸೀರೆ, ಕುಕ್ಕರ್ ವಿತರಿಸುತ್ತಿರುವ ಬಗ್ಗೆ ಜನರು ಗಮನಕ್ಕೆ ತಂದಿದ್ದಾರೆ. ಈ ಕುರಿತು ಪರಿಶೀಲನೆ ಮಾಡಿ ದೂರು ದಾಖಲಿಸಿಕೊಳ್ಳಲಾಗುವುದು ಎಂದು ತಿಳಿಸಿದರು. ಬಹಿರಂಗ ಪ್ರಚಾರ ಅಂತ್ಯಗೊಂಡ ಬಳಿಕ ಸಾಮಾಜಿಕ ಜಾಲತಾಣಗಳ ಮೂಲಕವೂ ಮತಯಾಚನೆಗೆ ಅವಕಾಶವಿಲ್ಲ. ಫೇಸ್‌ಬುಕ್, ಎಕ್ಸ್, ಇನ್ಸ್ಟಾಗ್ರಾಂ ಸೇರಿ ಹಲವು ಜಾಲತಾಣಗಳ ಮೇಲೆ ಹೆಚ್ಚು ನಿಗಾ ಇಡಲಾಗಿದೆ. ನಕಲಿ ಖಾತೆ ತೆರೆದು ಮಾಹಿತಿ ಹಂಚಿಕೊಳ್ಳುವವರನ್ನು ಕೂಡ ಪತ್ತೆ ಮಾಡಲಾಗುತ್ತದೆ ಎಂದು ಎಚ್ಚರಿಕೆ ನೀಡಿದರು.

15.37 ಲಕ್ಷ ರು. ವಶ

ಉಪಚುನಾವಣಾ ಕಣದಲ್ಲಿ ದಾಖಲೆ ರಹಿತವಾಗಿ ಸಾಗಣೆ ಮಾಡುತ್ತಿದ್ದ 15.37 ಲಕ್ಷ ರು. ನಗದು ಹಾಗೂ 1.33 ಲಕ್ಷ ರು. ಮೌಲ್ಯದ 233 ಲೀಟರ್ ಮದ್ಯವನ್ನು ವಶಪಡಿಸಿಕೊಳ್ಳಲಾಗಿದೆ. ಕ್ಷೇತ್ರದಾದ್ಯಂತ 11 ಚೆಕ್‌ಪೋಸ್ಟ್‌ಗಳನ್ನು ತೆರೆಯಲಾಗಿದೆ. ವಿಚಕ್ಷಣಾ ದಳ, ಸಂಚಾರ ದಳ ಸೇರಿದಂತೆ ಹಲವು ತಂಡಗಳು ಕಾರ್ಯನಿರ್ವಹಿಸಿವೆ. ಬಹಿರಂಗ ಪ್ರಚಾರಕ್ಕೆ ತೆರೆಬಿದ್ದ ಬಳಿಕ ಮತದಾರರಿಗೆ ಆಮಿಷವೊಡ್ಡುವ ಸಾಧ್ಯತೆ ಇರುವುದರಿಂದ ಹೆಚ್ಚಿನ ನಿಗಾ ವಹಿಸಲಾಗಿದೆ ಎಂದು ಚುನಾವಣಾಧಿಕಾರಿ ಸಂತೋಷ್‌ಕುಮಾರ್ ವಿವರಿಸಿದರು.

09-04-2027
ಮತದಾನದ ದಿನಾಂಕ

284 ಒಟ್ಟು ಮತಗಟ್ಟೆಗಳು
76 ಅತಿಸೂಕ್ಷ್ಮ ಮತಗಟ್ಟೆಗಳು
2.31 ಲಕ್ಷ ಒಟ್ಟು ಮತದಾರರು
2,59,797 ಒಟ್ಟು ಮತದಾರರು

ಉಪಸಮರ

ಬಾಗಲಕೋಟೆ: ಚುನಾವಣಾ ಆಯೋಗದಿಂದ ತೀವ್ರ ನಿಗಾ

ಬಾಗಲಕೋಟೆ: ಬಾಗಲಕೋಟೆ ವಿಧಾನಸಭಾ ಉಪ ಚುನಾವಣೆಗೆ ಏ.9ರಂದು ಮತದಾನ ನಡೆಯಲಿದ್ದು, ಮತದಾನಕ್ಕೆ ಬೇಕಾಗುವ ಎಲ್ಲ ಸಿದ್ಧತೆಗಳನ್ನು ಮಾಡಿಕೊಳ್ಳಲಾಗಿದೆ ಎಂದು ಜಿಲ್ಲಾ ಚುನಾವಣಾಧಿಕಾರಿ ಸಂಗಪ್ಪ ಹೇಳಿದರು.

ಸುದ್ದಿಗೋಷ್ಠಿಯಲ್ಲಿ ಮಾತನಾಡಿ, 1,26,999 ಪುರುಷ ಮತ್ತು 1,32,775 ಮಹಿಳಾ ಮತದಾರರು ಹಾಗೂ 23 ಲಿಂಗತ್ವ ಅಲ್ಪಸಂಖ್ಯಾತರು ಸೇರಿ 2,59,797 ಮತದಾರರಿದ್ದಾರೆ. 385 ಸೇವಾ, 170 ಅಂಚೆ, 90 ಪಿಡಬ್ಲ್ಯುಡಿ ಮತದಾರರಿದ್ದಾರೆ. 322 ಮತಗಟ್ಟೆಗಳನ್ನು ಸ್ಥಾಪಿಸಲಾಗಿದೆ ಎಂದರು.

ಪ್ರತಿ ಮತಗಟ್ಟೆಗೆ ಒಬ್ಬ ಪ್ರಿಸೈಡಿಂಗ್ ಅಧಿಕಾರಿ ಹಾಗೂ ಮೂವರು ಪೋಲಿಂಗ್ ಅಧಿಕಾರಿಗಳನ್ನು ನೇಮಿಸಲಾಗಿದೆ. ಹೆಚ್ಚುವರಿ ಸಿಬ್ಬಂದಿ ಸೇರಿ 1,564 ಸಿಬ್ಬಂದಿ ನೇಮಕ ಮಾಡಲಾಗಿದೆ. ಇದನ್ನು ಹೊರತುಪಡಿಸಿ ಅಗತ್ಯಕ್ಕೆ ಅನುಗುಣವಾಗಿ ಮೈಕ್ರೊ ಅಬ್ಸರ್ವರ್ ಹಾಗೂ ಸಶಸ್ತ್ರ ಪಡೆಗಳನ್ನು ನಿಯೋಜಿಸಲಾಗಿದೆ. ಎಲ್ಲ ಮತಗಟ್ಟೆಗಳಲ್ಲಿ ವೆಬ್ ಕಾಸ್ಟಿಂಗ್ ವ್ಯವಸ್ಥೆ ಮಾಡಲಾಗಿದೆ. ಮತದಾರರನ್ನು ಪ್ರೋತ್ಸಾಹಿಸುವ ಉದ್ದೇಶದಿಂದ ಎರಡು ಪಿಂಕ್, ತಲಾ ಒಂದು ಯುವ, ಅಂಗವಿಕಲ, ಥೀಮ್ ಆಧಾರಿತ ಮತಗಟ್ಟೆಗಳನ್ನು ಸ್ಥಾಪಿಸಲಾಗಿದೆ ಎಂದು ತಿಳಿಸಿದರು.

ಮಾದರಿ ನೀತಿ ಸಂಹಿತೆ: ಯಾವುದೇ ಪಕ್ಷ ಅಥವಾ ಅಭ್ಯರ್ಥಿಯ ಅಸ್ತಿತ್ವದಲ್ಲಿರುವ ಭಿನ್ನಾಭಿಪ್ರಾಯಗಳನ್ನು ಉಲ್ಬಣಗೊಳಿಸುವ ಅಥವಾ ಪರಸ್ಪರ ದ್ವೇಷವನ್ನು ಉಂಟು ಮಾಡುವ, ವಿವಿಧ ಜಾತಿ, ಸಮುದಾಯಗಳ ನಡುವೆ ಧಾರ್ಮಿಕ, ಭಾಷಾವಾರು ಉದ್ವಿಗ್ನತೆ ಉಂಟು ಮಾಡುವ ಯಾವುದೇ ಚಟುವಟಿಕೆ ಮಾಡಬಾರದು ಎಂದರು.

1,26,999 ಪುರುಷ ಮತದಾರರು
1,32,775 ಮಹಿಳಾ ಮತದಾರರು
23 ಲಿಂಗತ್ವ ಅಲ್ಪಸಂಖ್ಯಾತರು
2,59,797 ಒಟ್ಟು ಮತದಾರರು
385 ಸೇವಾ ಮತದಾರರು
170 ಅಂಚೆ ಮತದಾರರು
90 ಪಿಡಬ್ಲ್ಯುಡಿ ಮತದಾರರು
322 ಮತಗಟ್ಟೆ ಸ್ಥಾಪನೆ

ಬಾಗಲಕೋಟೆಯಲ್ಲಿ ಜಿಲ್ಲಾ ಸ್ವೀಪ್ ಸಮಿತಿ ವತಿಯಿಂದ ಬೈಕ್ ರ್‍ಯಾಲಿ ಮೂಲಕ ಜಾಗೃತಿ ಮೂಡಿಸಲಾಯಿತು.

94 ಲಕ್ಷ ರು. ನಗದು ಜಪ್ತಿ

ನೀತಿ ಸಂಹಿತೆ ಜಾರಿಯಾದಾಗಿನಿಂದ 94.03 ಲಕ್ಷ ರು. ನಗದು ಜಪ್ತಿ ಮಾಡಲಾಗಿದೆ. ಅಬಕಾರಿ ಇಲಾಖೆಯಿಂದ 39.73 ಲಕ್ಷ ರು. ಮೌಲ್ಯದ 14,637.01 ಲೀಟರ್ ಮದ್ಯ, ಪೊಲೀಸ್ ಇಲಾಖೆಯಿಂದ 194 ಲೀಟರ್ ಮದ್ಯ, ಒಂಬತ್ತು ವಾಹನ ಜಪ್ತಿ ಮಾಡಿ, 21 ಪ್ರಕರಣಗಳನ್ನು ದಾಖಲಿಸಲಾಗಿದೆ. 1.20 ಲಕ್ಷ ರು. ಮೌಲ್ಯದ ಸೀರೆ ಜಪ್ತಿ ಮಾಡಲಾಗಿದೆ. ಮತದಾನದ ಪೂರ್ವ 72 ಗಂಟೆಗಳಲ್ಲಿ ಮತದಾರರನ್ನು ಪ್ರಭಾವಿಸುವಂತಹ ಉಡುಗೊರೆ, ಕಲ್ಯಾಣ ಮಂಟಪ, ಹಾಗೂ ಸಮುದಾಯ ಭವನಗಳಲ್ಲಿ ಉಚಿತ ಆಹಾರ ವಿತರಿಸುವ ಬಗ್ಗೆ ತೀವ್ರ ನಿಗಾ ವಹಿಸಲಾಗಿದೆ ಎಂದು ಜಿಲ್ಲಾ ಚುನಾವಣಾಧಿಕಾರಿ ಸಂಗಪ್ಪ ಹೇಳಿದರು.

ಖಂಡ್ರೆ, ಶಾಮನೂರು ಕುಟುಂಬದ ವಿರುದ್ಧ ಶಾಸಕ ಬಿ.ಪಿ.ಹರೀಶ್ ಟೀಕೆ
ಶ್ರೀಮಂತರ ಪಾಲಾದ ವೀರಶೈವ ಮಹಾಸಭಾ

ದಾವಣಗೆರೆ: ನಿನ್ನೆ ಅಖಿಲ ಭಾರತ ವೀರಶೈವ ಮಹಾಸಭಾದ ರಾಷ್ಟ್ರೀಯ ಅಧ್ಯಕ್ಷ ಈಶ್ವರ ಖಂಡ್ರೆ ಅವರು ವೀರಶೈವ ಸಮಾಜದ ಸಭೆ ನಡೆಸಿ ದಾವಣಗೆರೆಯ ಜನತೆಗೆ ಬಹಳಷ್ಟು ಸುಳ್ಳು ಮಾಹಿತಿ ನೀಡಿದ್ದಾರೆ ಎಂದು ಶಾಸಕ ಬಿ.ಪಿ.ಹರೀಶ್ ಆಕ್ಷೇಪಿಸಿದ್ದಾರೆ.

ಬಿಜೆಪಿ ಕಚೇರಿಯಲ್ಲಿ ಏರ್ಪಡಿಸಿದ ಸುದ್ದಿಗೋಷ್ಠಿಯಲ್ಲಿ ಮಾತನಾಡಿ, ಅಖಿಲ ಭಾರತ ವೀರಶೈವ ಮಹಾಸಭಾವು ದುಡ್ಡಿದ್ದಂತ, ಕೇವಲ ಕಾಂಗ್ರೆಸ್ ವೀರಶೈವರ ಹಾಗೂ ಶ್ರೀಮಂತರ ಪಾಲಾಗಿದೆ.

ಭ್ರಷ್ಟಾಚಾರ ಮಾಡಲು, ರಾಜಕೀಯ ಪಕ್ಷಗಳನ್ನು ಹೆದರಿಸಿ ಮಂತ್ರಿ ಸ್ಥಾನ ಪಡೆಯಲು ಈ ಮಹಾಸಭಾವನ್ನು ಇವರು ದುರುಪಯೋಗ ಪಡಿಸಿಕೊಂಡಿದ್ದಾರೆ. ಬಡ ವೀರಶೈವರಿಗೆ ಇವರ ಕೊಡುಗೆ ಏನೂ ಇಲ್ಲ ಎಂದು ಟೀಕಿಸಿದರು.

ಈಶ್ವರ ಖಂಡ್ರೆ ಅವರು ಬಹಳ ಮುಜುಗರದಿಂದ ಸುದ್ದಿಗೋಷ್ಠಿ ನಡೆಸಿದ್ದಾರೆ. ಅಭ್ಯರ್ಥಿ ಸಮರ್ಥ್ ಅವರ ತಂದೆಯ ಒಡೆತನದ ಸಕ್ಕರೆ ಕಾರ್ಖಾನೆ, ಡಿಸ್ಟಿಲರೀಸ್‌ನಿಂದ ಕೈಗಾರಿಕಾ ತ್ಯಾಜ್ಯವನ್ನು ಸರಿಯಾಗಿ ಸಂಸ್ಕರಿಸದೇ ನೇರವಾಗಿ ತುಂಗಭದ್ರಾ ನದಿಗೆ ಬಿಡಲಾಗುತ್ತಿದೆ. ಅರಣ್ಯ ಸಚಿವರಾದ ತಮ್ಮ ಅಡಿಯಲ್ಲೇ ಮಾಲಿನ್ಯ ನಿಯಂತ್ರಣ ಮಂಡಳಿಯೂ ಇದೆ. ಇಂತಹ ಅಭ್ಯರ್ಥಿ ಪರವಾಗಿ ತಾವು ಮಾತನಾಡಿದ್ದು ಸರಿಯೇ? ಎಂದು ಪ್ರಶ್ನಿಸಿದರು.

ರೈತರ ಜಮೀನಿನ ಬೆಳೆಗಳ ಮೇಲೆ ಹಾರುಬೂದಿ ಧೂಳು ಬೀಳುತ್ತಿದೆ. ಬಡ ರೈತರಿಗೆ ಅನ್ಯಾಯ ಮಾಡುತ್ತಿರುವ ಬಗ್ಗೆ ಸದನದಲ್ಲಿ ಪ್ರಶ್ನೆ ಎತ್ತಿದಾಗ ಖಂಡ್ರೆಯವರು ಸುಳ್ಳು ಮಾಹಿತಿ ಕೊಟ್ಟಿದ್ದರು. ಖಂಡ್ರೆಯವರೇ, ಮಲ್ಲಿಕಾರ್ಜುನ್ ಅವರ ದುರಾಡಳಿತ, ಕುಡಿಯುವ ನೀರಿನ ಮೇಲಿನ ದುಷ್ಪರಿಣಾಮ ನಿಮಗೆಲ್ಲ ಗೊತ್ತಿದೆ. ಎವಿಕೆ ಕಾಲೇಜು ಸ್ಥಾಪಿಸಿ ಯುವತಿಯರಿಗೆ ಶಿಕ್ಷಣ ಸಿಗುವಂತೆ ಮಾಡಿದ್ದಾಗಿ ಹೇಳಿದ್ದೀರಿ. ಖಂಡ್ರೆಯವರೇ, ಸುಳ್ಳು ಮಾಹಿತಿ ಕೊಡದಿರಿ. ದಾವಣಗೆರೆ ಶಿಕ್ಷಣ ಕ್ಷೇತ್ರದಲ್ಲಿ ಅಭಿವೃದ್ಧಿ ಆಗಲು ರಾಜನಳ್ಳಿ, ಅಜ್ಜಂಪುರ ಮನೆತನದವರು, ದಾನಿಗಳು ದೊಡ್ಡ ಕೊಡುಗೆ ನೀಡಿದ್ದಾರೆ. ಚಿಗಟೇರಿ ಆಸ್ಪತ್ರೆಯನ್ನು ಆ ಮನೆತನದವರ ಕೊಡುಗೆ ಮೂಲಕ ಸ್ಥಾಪಿಸಿದ್ದಾರೆ.

ಶಾಮನೂರು ಶಿವಶಂಕರಪ್ಪ ಅವರು ಆ ಕೊಡುಗೆ ನೀಡಿದ್ದಾಗಿ ಸುಳ್ಳು ಹೇಳಿದ್ದೀರಲ್ಲವೇ? ಎಂದು ಕೇಳಿದರು. ದಾವಣಗೆರೆಯಲ್ಲಿ ವೈದ್ಯಕೀಯ-ಎಂಜಿನಿಯರಿಂಗ್ ಕಾಲೇಜು, ಬಾಪೂಜಿ ವಿದ್ಯಾ ಸಂಸ್ಥೆ ಬಗ್ಗೆ ಜನಸಾಮಾನ್ಯರಿಗೆ ತಿಳಿದಿದೆ ಎಂದರು.

ವೀರಶೈವರು ಸಸ್ಯಾಹಾರಿಗಳು

ಶಾಮನೂರು ಶಿವಶಂಕರಪ್ಪ ಅವರ ಪುತ್ರ, ನೂರಾರು ಪ್ರಾಣಿಗಳಿಗೆ ಹಿಂಸೆ ಮಾಡಿ, ಅನೇಕ ಕೃಷ್ಣಮೃಗಗಳನ್ನು ಹಿಡಿದಿದ್ದಾರೆ. ಇಡೀ ಸಮಾಜವನ್ನು ಪ್ರತಿನಿಧಿಸುವ ಅಧ್ಯಕ್ಷರಾಗಿ ಅವರ ಮನೆಯಲ್ಲಿ ಶೇ.15ರಷ್ಟು ಸಸ್ಯಾಹಾರವನ್ನೂ ಸೇವಿಸಿಲ್ಲ. ಇದು ನಮ್ಮ ಸಂಸ್ಕೃತಿಯೇ? ಅದನ್ನು ನಾವು ಒಪ್ಪಿಕೊಳ್ಳಬೇಕೇ? ಅಖಿಲ ಭಾರತ ವೀರಶೈವ ಮಹಾಸಭಾದ ರಾಷ್ಟ್ರೀಯ ಅಧ್ಯಕ್ಷರಾಗಿ ಒಬ್ಬ ರಾಜಕಾರಣಿ ಇರಬಾರದು. ಇವರಿಂದ ವೀರಶೈವರಿಗೆ ನ್ಯಾಯ ನೀಡಲು ಸಾಧ್ಯವಾಗದು ಎಂದು ಶಾಸಕ ಬಿ.ಪಿ.ಹರೀಶ್ ತಿಳಿಸಿದರು.

ಸಾಮಾಜಿಕ ಜಾಲತಾಣದಲ್ಲಿ ವದಂತಿ, ಪ್ರಕರಣ ದಾಖಲು

ದಾವಣಗೆರೆ: ದಕ್ಷಿಣ ವಿಧಾನಸಭಾ ಕ್ಷೇತ್ರದ ಉಪ ಚುನಾವಣೆಯಲ್ಲಿ ಬಿಜೆಪಿ ಅಭ್ಯರ್ಥಿಯನ್ನು ಗೆಲ್ಲಿಸಬೇಕೆಂದು ತರಳಬಾಳು ಪೀಠದ ಶಿವಮೂರ್ತಿ ಶಿವಾಚಾರ್ಯ ಸ್ವಾಮೀಜಿ ಅವರು ತಿಳಿಸಿದ್ದಾಗಿ ಸಾಮಾಜಿಕ ಜಾಲತಾಣದಲ್ಲಿ ವದಂತಿ ಹಬ್ಬಿಸಿದ ವಿಚಾರಕ್ಕೆ ಸಂಬಂಧಿಸಿದಂತೆ ಇಲ್ಲಿನ ಸೈಬರ್ ಅಪರಾಧ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ. ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆಯ ಹಿರಿಯ ಸಹಾಯಕ ನಿರ್ದೇಶಕರು ನೀಡಿದ ದೂರಿನ ಅನ್ವಯ ಅಪರಿಚಿತರ ವಿರುದ್ಧ ಪ್ರಕರಣ ದಾಖಲಿಸಿ ಕೊಳ್ಳಲಿದೆ. 'ಬಿಜೆಪಿ ಅಭ್ಯರ್ಥಿ ಹಲವು ಬಾರಿ ಮಠಕ್ಕೆ ಬಂದಿದ್ದಾರೆ. ಅವರಿಗೆ ಅವಕಾಶ ದೊರೆತರೆ ಖಂಡಿತ ಒಬ್ಬ ಆದರ್ಶ ರಾಜಕಾರಣಿ ಆಗುತ್ತಾರೆ, ಅವರನ್ನು ಬೆಂಬಲಿಸಬೇಕು ಎಂಬುದು ಶ್ರೀ ಪೀಠದ ಆಶಯವಾಗಿರುತ್ತದೆ' ಎಂಬ ಬರಹ ಹಾಗೂ ಸ್ವಾಮೀಜಿಯ ಭಾವಚಿತ್ರವಿರುವ ಸುಳ್ಳು ಪ್ರಕಟಣೆಯನ್ನು ಸಾಮಾಜಿಕ ಜಾಲತಾಣ ದಲ್ಲಿ ಹರಿಬಿಡಲಾಗಿತ್ತು. ಸಾಮಾಜಿಕ ಜಾಲ ತಾಣದಲ್ಲಿ ವದಂತಿ ಹಬ್ಬಿಸಿದವರ ವಿರುದ್ಧ ಸೂಕ್ತ ಕಾನೂನು ಕ್ರಮ ಕೈಗೊಳ್ಳಬೇಕು ಎಂದು ಬಿಜೆಪಿ ಮುಖಂಡರು ಚುನಾವಣಾಧಿಕಾರಿಗೆ ದೂರು ನೀಡಿ ಒತ್ತಾಯಿಸಿದ್ದರು.

ಸ್ಪಷ್ಟನೆ: ಚುನಾವಣೆಯಲ್ಲಿ ತರಳಬಾಳು ಮಠವು ಯಾವುದೇ ವ್ಯಕ್ತಿಯ ಪರವಾಗಿಲ್ಲ. ಮಠವು ಈ ಹಿಂದಿನಿಂದ ನಡೆದುಕೊಂಡು ಬಂದಿರುವಂತೆ ಈ ಚುನಾವಣೆಯಲ್ಲೂ ತಟಸ್ಥ ನಿಲುವು ತಾಳಿದೆ. ಸಾಮಾಜಿಕ ಜಾಲತಾಣವನ್ನು ಸುಳ್ಳು ಸುದ್ದಿ ಹಬ್ಬಿಸಲು ದುರ್ಬಳಕೆ ಮಾಡಿಕೊಂಡಿರುವುದು ವಿಷಾದನೀಯ. ಜಾಲತಾಣದಲ್ಲಿನ ಈ ವಿಚಾರವನ್ನು ಕೂಡಲೇ ತೆಗೆದುಹಾಕಬೇಕು ಎಂದು ತರಳಬಾಳು ಮಠದ ಕಾರ್ಯದರ್ಶಿ ಪತ್ರಿಕಾ ಹೇಳಿಕೆ ನೀಡಿದ್ದರು. ಸುಳ್ಳು ಸುದ್ದಿಯನ್ನು ಹರಿಬಿಟ್ಟವರ ವಿರುದ್ಧ ಕ್ರಮಕ್ಕೆ ಒತ್ತಾಯಿಸಿ ಚುನಾವಣಾಧಿಕಾರಿಗೆ ದೂರು ನೀಡಿದ್ದರು.

ನಾಳೆ ಸರಕಾರಿ ನೌಕರರಿಗೆ ರಜೆ

ಬೆಂಗಳೂರು: ಬಾಗಲಕೋಟೆ ಮತ್ತು ದಾವಣಗೆರೆ ದಕ್ಷಿಣ ವಿಧಾನಸಭಾ ಉಪಚುನಾವಣೆ ಹಿನ್ನೆಲೆಯಲ್ಲಿ ಏಪ್ರಿಲ್ 9ರಂದು ಈ ಎರಡು ಕ್ಷೇತ್ರಗಳ ಸರಕಾರಿ ನೌಕರರಿಗೆ ಮತದಾನ ಮಾಡಲು ಅನುಕೂಲವಾಗಲು ರಜೆ ಘೋಷಿಸಲು ರಾಜ್ಯ ಸರಕಾರ ಆದೇಶ ಹೊರಡಿಸಿದೆ. ಈ ಬಗ್ಗೆ ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಇಲಾಖೆಯ ಸರಕಾರದ ಅಧೀನ ಕಾರ್ಯದರ್ಶಿ ಬಾಣದರಂಗಯ್ಯ ಎನ್.ಆರ್ ಆದೇಶ ಹೊರಡಿಸಿದ್ದಾರೆ. ಏಪ್ರಿಲ್ 9ರ ಗುರುವಾರದಂದು ಬಾಗಲಕೋಟೆ ಮತ್ತು ದಾವಣಗೆರೆ ದಕ್ಷಿಣ ವಿಧಾನಸಭಾ ಕ್ಷೇತ್ರಗಳ ಉಪ ಚುನಾವಣೆ ನಡೆಯಲಿದ್ದು, ಈ ವಿಧಾನಸಭಾ ಕ್ಷೇತ್ರಗಳ ವ್ಯಾಪ್ತಿಯಲ್ಲಿರುವ ಎಲ್ಲ ರಾಜ್ಯ ಸರಕಾರಿ ಕಚೇರಿಗಳಿಗೆ ಶಾಲಾ ಕಾಲೇಜುಗಳಿಗೆ (ಅನುದಾನಿತ ಶಿಕ್ಷಣ ಸಂಸ್ಥೆಗಳ ಒಳಗೊಂಡಂತೆ) ಹಾಗೂ ರಾಷ್ಟ್ರೀಕೃತ ಬ್ಯಾಂಕುಗಳು ಜೀವವಿಮಾ ನಿಗಮ, ಹಣಕಾಸು ಸಂಸ್ಥೆಗಳು ಹಾಗೂ ಇನ್ನಿತರ ಔದ್ಯಮಿಕ ಸಂಸ್ಥೆಗಳಲ್ಲಿ ಕಾಯಂ ಆಗಿ ಅಥವಾ ದಿನಗೂಲಿ ಮೇಲೆ ಕೆಲಸ ನಿರ್ವಹಿಸುತ್ತಿರುವ ಎಲ್ಲ ಅರ್ಹ ಮತದಾರರಿಗೆ ಸೀಮಿತವಾದಂತೆ ಹಾಗೂ ಮತದಾನ ಮಾಡಲು ಅನುಕೂಲವಾಗುವಂತೆ ಒಂದು ದಿನದ ವೇತನ ಸಹಿತ ರಜೆ ಮಂಜೂರು ಮಾಡಬೇಕು ಎಂದು ಸಂಬಂಧಪಟ್ಟ ಅಧಿಕಾರಿಗಳಿಗೆ ಸೂಚಿಸಲಾಗಿದೆ.

ದಾವಣಗೆರೆ: ರೋಡ್ ಶೋ ವೇಳೆ ಡಿಸಿಎಂ ಡಿಕೆಶಿ ಭರವಸೆ
ಗ್ಯಾರಂಟಿ ನಿಲ್ಲಲ್ಲ, ಆತಂಕ ಬೇಡ

ದಾವಣಗೆರೆ: ಈಗ ಬಿಜೆಪಿಯವರ ನಿಜವಾದ ಬಣ್ಣ ನಿಮಗೆ ಗೊತ್ತಾಗಿದೆ. ನಾವು ಬಡವರಿಗಾಗಿ ಕೊಡುವ ಐದು ಗ್ಯಾರಂಟಿಗಳ ಹಣ ಬಿಡುಗಡೆ ಮಾಡಬಾರದು ಎಂದು ಬಿಜೆಪಿಯವರು ಕೋರ್ಟ್‌ಗೆ ಹೋಗಿದ್ದಾರೆ. ಆದರೆ ಕೋರ್ಟ್‌ನಲ್ಲಿ ಅವರಿಗೆ ಸ್ಟೇ ಸಿಗಲಿಲ್ಲ ಎಂದು ಡಿಸಿಎಂ ಡಿ.ಕೆ.ಶಿವಕುಮಾರ್ ಹೇಳಿದರು.

ಮಂಗಳವಾರ ದಾವಣಗೆರೆ ದಕ್ಷಿಣ ಕ್ಷೇತ್ರದ ವ್ಯಾಪ್ತಿಯ ಮದೀನಾ ಸರ್ಕಲ್, ಅಜಾದ್ ನಗರ, ಭಾಷಾನಗರ, ಅಖ್ತರ್ ರಜಾ ಸರ್ಕಲ್‌ನಲ್ಲಿ ಆಯೋಜಿಸಿದ್ದ ಬೃಹತ್ ರೋಡ್ ಶೋನಲ್ಲಿ ಮಾತನಾಡಿ, ಈಗ ಗೃಹಲಕ್ಷ್ಮಿಯ ಹದಿಮೂರು ತಿಂಗಳ ಹಣ ಬಿಡುಗಡೆಯಾಗಬೇಕು. ಇದನ್ನು ಕೊಡಬಾರದು ಅಂತ ಅವರು ಕೋರ್ಟ್‌ಗೆ ಹೋಗಿದ್ದಾರೆ. ಅವರ ನಿಜವಾದ ಬಣ್ಣ ಈಗ ಬಯಲಾಗಿದೆ. ಆದರೆ ಕೋರ್ಟ್‌ನಲ್ಲಿ ಬರೀ ನೋಟಿಸ್ ಮಾತ್ರ ಕೊಟ್ಟಿದ್ದಾರೆ. ಇದೇನೂ ಹೊಸ ಸ್ಕೀಮ್ ಅಲ್ಲ, ಮೊದಲಿನಿಂದಲೂ ನಡೆದುಕೊಂಡು ಬಂದ ಸ್ಕೀಮ್ ಇದು. ಕಳೆದ ಎರಡು ವರ್ಷಗಳಿಂದ ಈ ಹಣ ಕೊಡುತ್ತಿದ್ದೇವೆ. ಇವತ್ತು ಯಾವುದೇ ಕಾರಣಕ್ಕೂ ನಾವು ಈ ಕಾರ್ಯಕ್ರಮ ಮತ್ತು ಹಣ ನಿಲ್ಲಿಸುವುದಿಲ್ಲ. ಇದು ನಿಮ್ಮ ಪಕ್ಷ ಮತ್ತು ನಿಮ್ಮ ಸರಕಾರ. ಇನ್ನೂ ನೂರು ಜನ್ಮ ಬಂದರೂ ಬಿಜೆಪಿಯವರಿಂದ ಈ ಹಣವನ್ನು ನಿಲ್ಲಿಸಲು ಸಾಧ್ಯವಿಲ್ಲ ಎಂದರು.

ಈ ಹಿಂದೆ ಇಂದಿರಾ ಗಾಂಧಿಯವರು ಓಲ್ಡ್ ಏಜ್ ಪೆನ್ಷನ್ ಕೊಟ್ಟರು, ಅದನ್ನು ನಿಲ್ಲಿಸಲು ಆಯ್ತಾ? ಮನಮೋಹನ್ ಸಿಂಗ್ ಸರಕಾರ ಮತ್ತು ಸಿದ್ದರಾಮಯ್ಯ ಸರಕಾರ ಅಕ್ಕಿ ಕೊಟ್ಟಿತು. ಅದನ್ನು ನಿಲ್ಲಿಸಲು ಬಿಜೆಪಿಯವರಿಂದ ಆಯ್ತಾ? ಏನನ್ನೂ ನಿಲ್ಲಿಸಲು ಸಾಧ್ಯವಿಲ್ಲ, ನಿಮ್ಮ ಬಸ್ಸನ್ನೂ ನಿಲ್ಲಿಸಲು ಸಾಧ್ಯವಿಲ್ಲ ಎಂದರು.

ದಾವಣಗೆರೆ ದಕ್ಷಿಣ ಕ್ಷೇತ್ರದ ವ್ಯಾಪ್ತಿಯಲ್ಲಿ ಮಂಗಳವಾರ ಕಾಂಗ್ರೆಸ್ ಮುಖಂಡರು ರೋಡ್ ಶೋ ನಡೆಸಿದರು. ಕ್ರಿಕೆಟ್ ಮಾಜಿ ಆಟಗಾರ ಹಾಗೂ ಕಾಂಗ್ರೆಸ್ ಮುಖಂಡ ಮಹಮದ್ ಅಜರುದ್ದೀನ್, ಸಚಿವ ಎಸ್.ಎಸ್.ಮಲ್ಲಿಕಾರ್ಜುನ, ಅಭ್ಯರ್ಥಿ ಸಮರ್ಥ ಇದ್ದರು.

ಹಿಂದುಳಿದ ವರ್ಗದ ಮುಂದುವರಿದ ನಾಯಕ ಸಿದ್ದರಾಮಯ್ಯ
ಬಡವರು-ಶ್ರೀಮಂತರ ಚುನಾವಣೆ

ಬೆಂಗಳೂರು: ಉಪಚುನಾವಣೆಯಲ್ಲಿ ಬಡವರು ಹಾಗೂ ಶ್ರೀಮಂತರ ನಡುವೆ ಸ್ಪರ್ಧೆ ನಡೆಯಲಿದೆ. ಇದರಲ್ಲಿ ಕಾಂಗ್ರೆಸ್ ಸೋತು ಮುಂದಿನ ರಾಜ್ಯದ ಭವಿಷ್ಯ ತೀರ್ಮಾನವಾಗಲಿದೆ ಎಂದು ಪ್ರತಿಪಕ್ಷ ನಾಯಕ ಆರ್.ಅಶೋಕ ಹೇಳಿದರು.

ಸುದ್ದಿಗೋಷ್ಠಿಯಲ್ಲಿ ಮಾತನಾಡಿ, ದಾವಣಗರೆ ಹಾಗೂ ಬಾಗಲಕೋಟೆಯಲ್ಲಿ ಬಡವರು ಮತ್ತು ಶ್ರೀಮಂತರ ನಡುವೆ ಚುನಾವಣೆ ನಡೆಯುತ್ತಿದೆ. ಬಡವರನ್ನೇ ಗೆಲ್ಲಿಸಿ ಎಂದು ಸಿಎಂ ಸಿದ್ದರಾಮಯ್ಯ ಹೇಳಿರುವುದರಿಂದ ಬಡ ಅಭ್ಯರ್ಥಿಗಳನ್ನು ಬಿಜೆಪಿಯಿಂದ ಕಣಕ್ಕಿಳಿಸಲಾಗಿದೆ. ದಾವಣಗರೆಯಲ್ಲಿ ಕಾಂಗ್ರೆಸ್ ಅಭ್ಯರ್ಥಿ ಗೆದ್ದರೆ ಮುಂದೆ ಮುಸ್ಲಿಮರಿಗೆ ಅವಕಾಶ ಸಿಗಲ್ಲ ಎಂದು ಗೊತ್ತಾಗಿ ಮುಸ್ಲಿಮರು ಕಾಂಗ್ರೆಸ್ ಪಕ್ಷ ವಿರೋಧಿಸುತ್ತಿದ್ದಾರೆ. ಸಚಿವ ಜಮೀರ್ ಅಹ್ಮದ್ ಕ್ಷೇತ್ರಕ್ಕೆ ಪ್ರಚಾರಕ್ಕೆ ಬಾರದೆ ಓಡಿದ್ದು, ಅವರ ಬಗ್ಗೆ ಭಿನ್ನಾಭಿಪ್ರಾಯವಿದೆ. ಹಿಂದುಳಿದ ವರ್ಗಗಳು ಒಂದಾಗಬೇಕೆಂದು ಹೇಳುವ ಸಿಎಂ ಸಿದ್ದರಾಮಯ್ಯನವರು ಒಂದು ಟಿಕೆಟ್ ಕೂಡ ಹಿಂದುಳಿದವರಿಗೆ ನೀಡಿಲ್ಲ ಎಂದರು.

ದಾವಣಗೆರೆಯಲ್ಲಿ ಸಾಮಾನ್ಯ ವ್ಯಕ್ತಿಗೆ ಬಿಜೆಪಿ ಟಿಕೆಟ್ ನೀಡಿದೆ. ಆದರೆ ಕಾಂಗ್ರೆಸ್ ಬಲಾಢ್ಯರಿಗೆ ಟಿಕೆಟ್ ನೀಡಿದೆ. ಬಾಗಲಕೋಟೆಯಲ್ಲಿ ಬಿಜೆಪಿ ಅಭ್ಯರ್ಥಿಯ ಬಗ್ಗೆ ಉತ್ತಮ ಅಭಿಪ್ರಾಯವಿದೆ. ಕಾಂಗ್ರೆಸ್ ಎರಡೂ ಕಡೆ ವಂಶಾಡಳಿತಕ್ಕೆ ಅವಕಾಶ ಕೊಟ್ಟಿದೆ. ಆದ್ದರಿಂದ ಎರಡೂ ಕಡೆ ಬಿಜೆಪಿಗೆ ಗೆಲ್ಲುವ ಅವಕಾಶವಿದೆ. ಕಾಂಗ್ರೆಸ್ ಮುಖಂಡರು ಬಾಗಲಕೋಟೆಯಲ್ಲಿ ರೌಡಿಸಂ ಮಾಡಿದ್ದು, ಆ ಬಗ್ಗೆ ದೂರು ಸಲ್ಲಿಕೆಯಾಗಿದೆ. ಸರಕಾರದ ಭ್ರಷ್ಟಾಚಾರ, ಗ್ಯಾರಂಟಿಗಳ ಅಸಮರ್ಪಕ ಜಾರಿಯಿಂದಾಗಿ ಜನವಿರೋಧಿ ಅಲೆ ಉಂಟಾಗಿದೆ. ಬಜೆಟ್ ಮಂಡನೆ ಬಳಿಕ ಎಲ್ಲಕ್ಕೂ ತೆರಿಗೆ ಹೇರುವ ಕೆಲಸ ಮಾಡುತ್ತಿದ್ದಾರೆ ಎಂದರು.

ರಾಜ್ಯದಲ್ಲಿ ಆಡಳಿತ ಕುಸಿದಿದೆ. ಯಾವುದೇ ಅಭಿವೃದ್ಧಿ ಯೋಜನೆ ನೀಡುತ್ತಿಲ್ಲ. ಸಿಎಂ ಕುರ್ಚಿಗಾಗಿ ಡಿ.ಕೆ.ಶಿವಕುಮಾರ್ ಹಾಗೂ ಸಿದ್ದರಾಮಯ್ಯ ಕಾದಾಡುತ್ತಿದ್ದಾರೆ. ಕೇರಳ ವಿಧಾನಸಭಾ ಚುನಾವಣೆ ಗೆಲ್ಲುವ ವಿಶ್ವಾಸವಿಲ್ಲದೆ ಸಿದ್ದರಾಮಯ್ಯ ಮರಳಿ ಬಂದಿದ್ದಾರೆ. ಈ ಉಪ ಚುನಾವಣೆ ಕಾಂಗ್ರೆಸ್‌ನ ಅಸಲಿ ಮುಖ ಬಯಲು ಮಾಡಲಿದೆ ಎಂದರು.

ಮುಂದುವರಿದ ನಾಯಕ

ಸಿದ್ದರಾಮಯ್ಯ ಈಗ ಹಿಂದುಳಿದವರ ನಾಯಕ ಅಲ್ಲ. ಅವರ ಬಟ್ಟೆ, ಶಾಲು, ಪೆನ್, ಇಡೀ ಜೀವನ ಶೈಲಿ ಮುಂದುವರಿದವರಂತೆ ಇದೆ. ಆದರೆ ಓಟಿಗೆ ಮಾತ್ರ ಹಿಂದುಳಿದವರು ಬೇಕು. ಆದ್ದರಿಂದ ಇವರು ಹಿಂದುಳಿದ ವರ್ಗದ ಮುಂದುವರಿದ ನಾಯಕ ಎಂದರು. ಡಿ.ಕೆ.ಶಿವಕುಮಾರ್‌ಗೆ ಪರ್ಮನೆಂಟ್ ಆಗಿ ಚೊಂಬು ಸಿಗಲಿದೆ. ಈಗಾಗಲೇ ರಾಜ್ಯವನ್ನು ಸಾಲದ ಕೂಪಕ್ಕೆ ತಳ್ಳಿದ್ದಾರೆ. ಇನ್ನು ಕುರ್ಚಿ ಕಾಳಗ ಮುಗಿಯುವವರೆಗೆ ಅಭಿವೃದ್ಧಿ ನಡೆಯಲ್ಲ ಎಂದರು.

ಸಂಪಾದಕೀಯ

ವಿನಾಶಕಾರಿ ಯುದ್ಧ ನಿಲ್ಲಲಿ

ಕೊಲ್ಲಿ ಯುದ್ಧ ಮತ್ತಷ್ಟು ವಿಕೋಪಕ್ಕೆ ತಿರುಗಿದೆ. ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ 'ಇರಾನಿನ ಇಡೀ ನಾಗರೀಕತೆಯೇ ಸರ್ವನಾಶವಾಗಲಿದೆ' ಎಂದು ಗುಡುಗಿದ್ದಾರೆ. ಇದು ಇರಾನಿನಲ್ಲಿ ಮತ್ತಷ್ಟು ಮಾರಣಹೋಮಕ್ಕೆ ನಾಂದಿ ಹಾಡುವ ಆತಂಕವನ್ನು ಸೃಷ್ಟಿಸಿದೆ. ಇಂಥ ವಿಪರೀತಗಳನ್ನು ತಡೆಯಬೇಕಾದ ಏಕೈಕ ಶಕ್ತಿಯೆಂದರೆ ಅದು ವಿಶ್ವಸಂಸ್ಥೆ. ಆದರೆ, ಅದೇಕೆ ಸುಮ್ಮನಿದೆ ?, ಅಮೆರಿಕದ ದಮನಕಾರಿ ನೀತಿಗೆ ಅದು ಲಗಾಮು ಹಾಕುತ್ತಿಲ್ಲವೇಕೆ ಎಂಬ ಪ್ರಶ್ನೆಗಳು ಸಹಜವಾಗಿಯೇ ಮೂಡಿವೆ. 'ಆಪರೇಷನ್ ಎಪಿಕ್ ಫ್ಯೂರಿ' ಎಂಬ ಹೆಸರಿನಲ್ಲಿ ಇಸ್ರೇಲ್ ಜೊತೆಗೂಡಿ ಅಮೆರಿಕ, ಇರಾನ್ ಮೇಲೆ ದಾಳಿ ನಡೆಸಿ ಇಂದಿಗೆ 40 ದಿನಗಳಾಗಿವೆ. ತನ್ನ ಸಾಮ್ರಾಜ್ಯಶಾಹಿ ನೀತಿಯ ಭಾಗವಾಗಿ ಅಮೆರಿಕವು ಇರಾನ್‌ನಲ್ಲಿರುವ ತೈಲ ಸಂಪತ್ತನ್ನು ವಶ ಮಾಡಿಕೊಳ್ಳಲು ಯುದ್ಧವೆಂಬ ವಿನಾಶಕಾರಿ ನಾಟಕವಾಡುತ್ತಿದೆ ಎಂಬುದು ರಹಸ್ಯವೇನೂ ಅಲ್ಲ. ಇರಾನ್‌ನ ಸರ್ವಾಧಿಕಾರಿ ಆಡಳಿತ ಅಲ್ಲಿನ ಪ್ರಜೆಗಳ ಹಕ್ಕನ್ನು ದಮನ ಮಾಡುತ್ತಿದೆ ಎಂಬ ಅಮೆರಿಕದ ವಾದವನ್ನು ಒಪ್ಪಿಕೊಂಡರೂ, ಅಲ್ಲಿ ಆಡಳಿತ ಬದಲಾವಣೆಯನ್ನು ಮಾಡಬೇಕಿರುವುದು ಸ್ಥಳೀಯ ಜನತೆ. ಇಂದಿನ ದಾಳಿ, ಪ್ರತಿ ದಾಳಿಗಳಲ್ಲಿ ಸಂತ್ರಸ್ತರಾಗುತ್ತಿವವರು ಕೊಲ್ಲಿ ರಾಷ್ಟ್ರದ ಜನತೆ. ಅಮೆರಿಕ ಇರಾನಿನ ಸೇನಾ ನೆಲೆಗಳ ಮೇಲೆ, ಅಲ್ಲಿನ ಶಸ್ತ್ರಾಗಾರಗಳ ಮೇಲೆ ದಾಳಿ ನಡೆಸಿದರೆ ಅದು ಯುದ್ಧ ತಂತ್ರದ ಭಾಗ ಎನ್ನಬಹುದು. ಆದರೆ ಅಲ್ಲಿನ ಸಮಗ್ರ ಮೂಲಸೌಕರ್ಯಗಳನ್ನು ನಾಶ ಮಾಡುತ್ತಿರುವುದು, ತೈಲಾಗಾರಗಳ ಮೇಲೆ ಬಾಂಬ್‌ಗಳನ್ನು ಸುರಿಯುವುತ್ತಿರುವುದು ಅಕ್ಷಮ್ಯ. ಈಗಲಾದರೂ ವಿಶ್ವಸಂಸ್ಥೆ ಯುದ್ಧದ ಅನಾಹುತಗಳ ಜಾಗತಿಕ ಮಟ್ಟದಲ್ಲಿ ಅಭಿಪ್ರಾಯ ರೂಪಿಸಬೇಕು. ಗಟ್ಟಿ ಧ್ವನಿಯಲ್ಲಿ ಯುದ್ಧದಾಹಿ ರಾಷ್ಟ್ರಗಳ ವಿಧ್ವಂಸಕಾರಿ ಕೃತ್ಯಗಳನ್ನು ಖಂಡಿಸಬೇಕು. ನೈಸರ್ಗಿಕ ವರದಾನವಾದ ಇಂಧನ ಯಾರದ್ದೋ ಹುಚ್ಚಾಟದಲ್ಲಿ ಈಗಲೇ ಖಾಲಿಯಾಗಬಾರದು. ಅದು ನಾಶವಾಗಬಾರದು. ನೈಸರ್ಗಿಕ ಕೊಡುಗೆಗಳ ಲಾಭ ಜಗತ್ತಿನ ಎಲ್ಲಾ ಜನರಿಗೂ ಸಿಗಬೇಕು. ಇನ್ನು ಎರಡನೆಯದ್ದು - ಅಮೆರಿಕ, ಇಸ್ರೇಲ್ ನಡೆಯಿಂದಾಗಿ ಜಗತ್ತಿಗೀಗ ತೃತೀಯ ಮಹಾಯುದ್ಧದ ಭೀತಿ ಆವರಿಸಿದೆ. ಅದನ್ನು ತಡೆಯುವುದು ಸಹ ವಿಶ್ವಸಂಸ್ಥೆಯ ಜವಾಬ್ದಾರಿಯಾಗಿದೆ.

ಸೊಂಪಾದಕೀಯ

ಪುರುಷ ಪ್ರಧಾನ ಅನ್ನೋದು ಎಷ್ಟು ಸರಿ?

ಸಾಮಾನ್ಯವಾಗಿ ನಮ್ಮ ಸಮಾಜದಲ್ಲಿ ಕೇಳಿಬರುವ ಮಾತಿನಂತೆ, ಸಿನಿಮಾ ಸಮಾಜದಲ್ಲೂ ಕೇಳಿಬರುವ ಮಾತು ಅಂದ್ರೆ, ಇಲ್ಲಿ ಎಲ್ಲವೂ ಪುರುಷ ಪ್ರಧಾನ ಅನ್ನೋದು. ಅದು ತಕ್ಕಮಟ್ಟಿಗೆ ನಿಜ ಕೂಡ. ಆದ್ರೆ ಷರತ್ತುಗಳು ಅನ್ವಯಿಸುತ್ತವೆ ಅನ್ನೋ ಮಾತನ್ನು ಈ ಸಂಪ್ರದಾಯದೊಂದಿಗೆ ಸೇರಿಸಲೇಬೇಕಾಗುತ್ತದೆ. ಅದಕ್ಕೂ ಕಾರಣಗಳು ಹಲವು. ಇಲ್ಲಿ ನಾಯಕರಿಗೆ ಸಿಕ್ಕಷ್ಟು ಸಂಭಾವನೆ ನಾಯಕಿಯರಿಗೆ ಸಿಗೋಲ್ಲ ಅನ್ನೋ ಮಾತಿದೆ. ಅದು ನಿಜ ಕೂಡಾ. ಅದಕ್ಕೆ ತಕ್ಕಂತೆ ಅವರಿಗೆ ಸಿಗೋ ಮರ್ಯಾದೆ ಕೂಡಾ ಇವರಿಗೆ ಸಿಗಲ್ಲ. ಆದರೆ ಕೆಲವೊಮ್ಮೆ ಇದು ನಾಯಕಿಯರಿಗೆ ವರದಾನ ಆಗಿರುವ ಉದಾಹರಣೆಗಳೂ ಉಂಟು. ಅದಕ್ಕೆ ಇಂಬು ಕೊಡುವಂತೆ ಇಲ್ಲಿ ಒಬ್ಬ ಸ್ಟಾರ್ ನಟನ ಸಿನಿಮಾದಲ್ಲಿ ಹೊಸ ನಟಿಯೊಬ್ಬಳಿಗೆ ಸುಲಭವಾಗಿ ಅವಕಾಶ ಸಿಗುತ್ತದೆ. ದೊಡ್ಡ ನಟನೊಂದಿಗೆ ಹಿರೋಯಿನ್ ಆಗಿ ನಟಿಸಲು ಹೊಸ ಹುಡುಗಿಯರಿಗೆ ಅವಕಾಶ ಸಿಗುತ್ತದೆ. ಆದರೆ ಅದೇ ಒಬ್ಬ ಸ್ಟಾರ್ ಹೀರೋಯಿನ್ ಜತೆ ಹೊಸ ಹುಡುಗನಿಗೆ ಹೀರೋ ಆಗೋ ಅವಕಾಶ ಸಿಗುತ್ತಾ ಅನ್ನೋದು ಪ್ರಶ್ನೆ. ಸಿಕ್ಕರೂ ನಾಯಕನ ಪಾತ್ರಕ್ಕೆ ಸ್ಕೋಪ್ ಇರಲ್ಲ, ಅದನ್ನು ಸ್ಟಾರ್ ನಟರು ಮಾಡಲ್ಲ ಅನ್ನೋ ಕಾರಣಕ್ಕೆ ಸಿಗಬಹುದು ಅಥವಾ ಯಾರೋ ದೊಡ್ಡ ಹೆಸರಿರುವ ಫ್ಯಾಮಿಲಿಯ ಹೀರೋಗೆ ಸಿಗಬಹುದು ಅಷ್ಟೇ. ಅಲ್ಲದೆ, ಒಂದು ಸಿನಿಮಾ ಸೋತರೆ ನಿರ್ಮಾಪಕರು ಅದರ ಸೋಲನ್ನು ನಾಯಕಿಯ ತಲೆಗೆ ಕಟ್ಟೋದಿಲ್ಲ. ಅದರಿಂದ ನಾಯಕಿಯ ಮುಂದಿನ ಸಿನಿಮಾ ಸಂಭಾವನೆ ಕೂಡಾ ತೀರಾ ಕಡಿಮೆ ಆಗೋದಿಲ್ಲ. ಆದರೆ ನಾಯಕನ ಪರಿಸ್ಥಿತಿ ಹಾಗಲ್ಲ. ಹಿಂದಿನ ಸಿನಿಮಾ ಗೆದ್ರೆ ಹಬ್ಬ, ಸೋತ್ರೆ ಮುಂದೈತೆ ಮಾರಿಹಬ್ಬ ಅನ್ನೋ ಪರಿಸ್ಥಿತಿ. ನಾಯಕಿಗೆ ಸಂಭಾವನೆ ಕಮ್ಮಿ ಸಿಕ್ರೂ, ಆಕೆ ಆ ಫ್ಲಾಪ್ ಸಿನಿಮಾದಲ್ಲಿ ನಟಿಸಿದ್ದಳು ಅನ್ನೋದು ಮೂರು ದಿನಕ್ಕೆ ಎಲ್ಲರಿಗೂ ಮರೆತುಹೋಗುತ್ತದೆ. ಆದೆ ನಾಯಕನಿಗೆ ಅದು ಜೀವನ ಪರ್ಯಂತ ಅವನೇ ಜವಾಬ್ದಾರಿ ಹೊತ್ತುಕೊಳ್ಳಬೇಕಾದ ಫ್ಲಾಪ್ ಸಿನಿಮಾ. ಅದರಿಂದ ಅವನ ಇಡೀ ಕೆರಿಯರ್‌ನಲ್ಲಿ ಏರುಪೇರಾಗುತ್ತದೆ. ನಿರ್ಮಾಪಕ ಈ ಸ್ಟಾರ್ ನಟನನ್ನು ಮುಂದಿನ ಸಿನಿಮಾಗೆ ಕಡಿಮೆ ದುಡ್ಡಿಗೆ ಕಾಲ್‌ಶೀಟ್ ಕೊಡು ಅಂತ ಕೇಳ್ತಾನೆ. ಆದರೆ ಅಪ್ಪಿ ತಪ್ಪಿ ಈ ಮಾತನ್ನ ಈತ ನಾಯಕಿಗೆ ಕೇಳೋದಿಲ್ಲ. ಬಾಕ್ಸ್ ಆಫೀಸ್‌ನಲ್ಲಿ ಇಂಥ ನಟನ ಫ್ಲಾಪ್ ಸಿನಿಮಾ ಅಂತಲೇ ಅದು ದಾಖಲಾಗುತ್ತದೆ. ಇಷ್ಟೆಲ್ಲಾ ಇರುವಾಗ ಸಿನಿಮಾರಂಗವನ್ನು ಪುರುಷ ಪ್ರಧಾನ ಅನ್ನೋದು ಸರಿನಾ? ಹೋಗ್ಲಿ ಬಿಡಿ.

ಸಂಪಾದಕರ ಸದ್ಯಶೋಧನೆ

ನಾಯಿಗೆ ತತ್ವಶಾಸ್ತ್ರ ಹೇಳುವುದು ಹೇಗೆ?

ಇತ್ತೀಚೆಗೆ ನಾನು ಆಂಥೋನಿ ಮೆಕ್‌ಗೋವನ್ ಬರೆದ How to Teach Philosophy to Your Dog: A Quirky Introduction to the Big Questions ಎಂಬ ಪುಸ್ತಕವನ್ನು ಓದುತ್ತಿದ್ದೆ. ಇದು ತತ್ವಶಾಸ್ತ್ರದಂಥ ಗಂಭೀರ ವಿಷಯವನ್ನು ಅತ್ಯಂತ ಸರಳವಾಗಿ ಮತ್ತು ಹಾಸ್ಯಭರಿತವಾಗಿ ಅರ್ಥೈಸುವ ವಿಶಿಷ್ಟ ಕೃತಿ. ತತ್ವಶಾಸ್ತ್ರ ಎಂದರೆ ಸಾಮಾನ್ಯವಾಗಿ ಎಲ್ಲರೂ ಕಷ್ಟದ ವಿಷಯ, ಕೇವಲ ವಿದ್ವಾಂಸರಿಗೆ ಮಾತ್ರ ಅರ್ಥವಾಗುವಂಥದ್ದು ಎಂದು ಭಾವಿಸುತ್ತಾರೆ. ಆದರೆ ಮೆಕ್‌ಗೋವನ್ ಈ ಕಲ್ಪನೆಯನ್ನು ಸುಳ್ಳುಮಾಡುತ್ತಾನೆ. ಅವನು ತನ್ನ ಸಾಕುನಾಯಿ 'ಮಾಂಟಿ' ಜತೆಗೆ ಲಂಡನ್‌ನ ಪಾರ್ಕ್‌ಗಳಲ್ಲಿ ವಾಕಿಂಗ್ ಮಾಡುವಾಗ ನಡೆಸುವ ಕಾಲ್ಪನಿಕ ಸಂಭಾಷಣೆಗಳ ಮೂಲಕ ಜಗತ್ತಿನ ಶ್ರೇಷ್ಠ ತತ್ವಜ್ಞಾನಿಗಳ ವಿಚಾರಗಳನ್ನು ಹಂಚಿಕೊಳ್ಳುತ್ತಾನೆ. ನಾಯಿಗೆ ತತ್ವಶಾಸ್ತ್ರ ಕಲಿಸುವುದು ಎಂದರೆ ಓದುಗರಿಗೆ ಅತ್ಯಂತ ಸುಲಭವಾಗಿ ವಿಷಯವನ್ನು ಮನವರಿಕೆ ಮಾಡಿಕೊಡುವುದು ಎಂದರ್ಥ. ಪುಸ್ತಕವು ಜೀವನದ ಮೂಲಭೂತ ಪ್ರಶ್ನೆಗಳನ್ನು ನಾಲ್ಕು ಪ್ರಮುಖ ಭಾಗಗಳಾಗಿ ವಿಂಗಡಿಸಿದೆ. ಮೊದಲನೆಯದು, ನೈತಿಕತೆ. 'ಒಳ್ಳೆಯದು ಎಂದರೆ ಏನು?', 'ನಾವು ಏಕೆ ಧರ್ಮವಾಗಿ ಬದುಕಬೇಕು?' ಎಂಬ ಪ್ರಶ್ನೆಗಳನ್ನು ಮಾಂಟಿ ತನ್ನ ನಾಯಿ ಜಗತ್ತಿನ ಉದಾಹರಣೆಗಳ ಮೂಲಕ (ಉದಾಹರಣೆಗೆ, ಇನ್ನೊಂದು ನಾಯಿಯ ಆಹಾರ ಕದಿಯುವುದು ಸರಿಯೇ?) ಚರ್ಚಿಸುತ್ತದೆ. ಎರಡನೆಯದು, ಅಸ್ತಿತ್ವವಾದ. ಬದುಕಿನ ಅರ್ಥವೇನು? ಸಾವು ಎಂದರೇನು? ಎಂಬ ಗಹನವಾದ ವಿಷಯಗಳನ್ನು ಸಾಕ್ರಟೀಸ್, ಪ್ಲೇಟೋ ಮತ್ತು ಅರಿಸ್ಟಾಟಲ್ ಅವರ ದೃಷ್ಟಿಕೋನದಲ್ಲಿ ವಿವರಿಸಲಾಗಿದೆ. ಮೂರನೆಯದು, ರಾಜಕೀಯ ತತ್ವಶಾಸ್ತ್ರ. ಸಮಾಜದಲ್ಲಿ ನ್ಯಾಯ ಮತ್ತು ಸಮಾನತೆ ಹೇಗಿರಬೇಕು ಎಂಬುದನ್ನು ನಾಯಿಗಳ ಹಿಂಡಿನ ನಡೆವಳಿಕೆಗೆ ಹೋಲಿಸಿ ಸರಳವಾಗಿ ವಿವರಿಸಲಾಗಿದೆ. ನಾಲ್ಕನೆಯದು, ದೇವರು ಮತ್ತು ಧರ್ಮ. ಬ್ರಹ್ಮಾಂಡದ ಸೃಷ್ಟಿ ಮತ್ತು ನಂಬಿಕೆಗಳ ಬಗ್ಗೆ ವೈಜ್ಞಾನಿಕ ಹಾಗೂ ತಾರ್ಕಿಕ ಚರ್ಚೆಗಳು ಇಲ್ಲಿವೆ. ಈ ಪುಸ್ತಕದಲ್ಲಿ ಲೇಖಕರು ಪಾಶ್ಚಾತ್ಯ ತತ್ವಶಾಸ್ತ್ರದ ದಿಗ್ಗಜರಾದ ಸಾಕ್ರಟೀಸ್, ಇಮ್ಯಾನ್ಯುಯೆಲ್ ಕಾಂಟ್, ಜಾನ್ ಸ್ಟುವರ್ಟ್ ಮಿಲ್, ಜಾನ್ ಸ್ಟುವರ್ಟ್ ಮಿಲ್, ಶೋಪೆನ್ಹೌರ್ ಮತ್ತು ನೀತ್ಸೆ ಪರಿಚಯಿಸುತ್ತಾರೆ. ಈ ಪುಸ್ತಕದ ವೈಶಿಷ್ಟ್ಯ ಅಂದ್ರೆ ಇದರಲ್ಲಿರುವ ವಿನೋದ. ಮಾಂಟಿ ಎಂಬ ನಾಯಿ ಕೇವಲ ಕೇಳುಗನಲ್ಲ, ಅದು ತನ್ನದೇ ಆದ 'ತರ್ಕ'ವನ್ನು ಮಂಡಿಸುತ್ತದೆ. ಉದಾಹರಣೆಗೆ, ಲೇಖಕರು 'ತ್ಯಾಗ'ದ ಬಗ್ಗೆ ಮಾತನಾಡುತ್ತಿದ್ದರೆ, ಮಾಂಟಿ 'ಒಂದು ಬಿಸ್ಕತ್ತು ತ್ಯಾಗ ಮಾಡುವುದು ಎಷ್ಟು ಕಷ್ಟ' ಎಂಬ ನೆಲೆಯಲ್ಲಿ ಯೋಚಿಸುತ್ತದೆ. ಈ ಹಾಸ್ಯವು ಓದುಗರಿಗೆ ವಿಷಯದ ಗಹನತೆ ತಿಳಿಯದಂತೆ ಜ್ಞಾನವನ್ನು ಹಂಚುತ್ತದೆ. ಈ ಪುಸ್ತಕದ ಯಶಸ್ಸು ಇರುವುದು ಅದರ ಕಥನ ಶೈಲಿಯಲ್ಲಿ. ಆಂಥೋನಿ ಒಬ್ಬ ಜ್ಞಾನಿ ಗುರುವಿನಂತೆ ಕಂಡರೆ, ಮಾಂಟಿ ಒಬ್ಬ ತುಂಟ ಮತ್ತು ವಾಸ್ತವವಾದಿ ಶಿಷ್ಯನಂತೆ ವರ್ತಿಸುತ್ತದೆ. ಮಾಂಟಿಗೆ ಅಮೂರ್ತ ಆಲೋಚನೆಗಳಿಗಿಂತ 'ಬಿಸ್ಕತ್ತು', 'ಪಾರ್ಕ್' ಮತ್ತು 'ನಿದ್ದೆ'ಯಂಥ ಪ್ರತ್ಯಕ್ಷ ವಿಷಯಗಳಲ್ಲೇ ಆಸಕ್ತಿ ಹೆಚ್ಚು. ಈ ಸಂಘರ್ಷದ ಮೂಲಕವೇ ಲೇಖಕರು 'ಮಾನವನ ತರ್ಕ' ಮತ್ತು 'ಜೈವಿಕ ಪ್ರೇರಣೆ'ಗಳ ನಡುವಿನ ವ್ಯತ್ಯಾಸವನ್ನು ಚರ್ಚಿಸುತ್ತಾರೆ. ನಾವು ನಿಯಂತ್ರಿಸಲಾಗದ ವಿಷಯಗಳ ಬಗ್ಗೆ ಚಿಂತಿಸುವುದನ್ನು ಬಿಟ್ಟು, ನಮ್ಮ ಪ್ರತಿಕ್ರಿಯೆಗಳನ್ನು ಹೇಗೆ ನಿಯಂತ್ರಿಸಬೇಕು ಎಂಬುದನ್ನು ಲೇಖಕ ವಿವರಿಸುತ್ತಾನೆ. ಮಾಂಟಿ ಮಳೆಯಲ್ಲಿ ನೆನೆಯುವಾಗ ಅಥವಾ ಬೇರೆ ನಾಯಿ ತನಗಿಂತ ಬಲಶಾಲಿಯಾಗಿರುವಾಗ ತೋರುವ ಅನಿವಾರ್ಯ ಒಪ್ಪಿಗೆಯನ್ನು ಇದಕ್ಕೆ ಹೋಲಿಸಲಾಗಿದೆ. ಒಂದು ಪ್ರಸಿದ್ಧ ತತ್ವವಾದ 'ಟ್ರಾಲಿ ಸಮಸ್ಯೆ'ಯನ್ನು ನಾಯಿಗಳ ಪ್ರಪಂಚಕ್ಕೆ ಅನ್ವಯಿಸಿ ವಿವರಿಸಲಾಗಿದೆ. ಅಂದರೆ, ಒಬ್ಬ ಮನುಷ್ಯನನ್ನು ಉಳಿಸಲು ಒಂದು ನಾಯಿಯನ್ನು ಬಲಿ ಕೊಡಬೇಕೆ? ಇಂಥ ಪ್ರಶ್ನೆಗಳ ಮೂಲಕ ನೈತಿಕತೆಯ ಆಳವನ್ನು ಅಳೆಯಲಾಗುತ್ತದೆ. ಈ ಕೃತಿ ಬದುಕಿನ ಬಗ್ಗೆ ಕುತೂಹಲವಿರುವ ಪ್ರತಿಯೊಬ್ಬರಿಗೂ ಒಂದು ಮಾರ್ಗದರ್ಶಿ. ಇದು ನಮಗೆ ಕಲಿಸುವುದು ಏನೆಂದರೆ, 'ತತ್ವಶಾಸ್ತ್ರ ಎಂದರೆ ಕೇವಲ ಗ್ರಂಥಾಲಯಗಳಲ್ಲಿ ಧೂಳು ಹಿಡಿಯುತ್ತಿರುವ ಪುಸ್ತಕಗಳಲ್ಲ, ಅದು ನಮ್ಮ ದೈನಂದಿನ ನಡೆವಳಿಕೆ ಮತ್ತು ಆಲೋಚನೆಗಳಲ್ಲಿ ಅಡಗಿರುವ ಸತ್ಯ.' ನಾಯಿಗಳು ಮನುಷ್ಯನ ಭಾಷೆಯನ್ನು ಬಳಸದಿದ್ದರೂ, ಭಾವನೆಗಳ ಮೂಲಕ ಸಂವಹನ ನಡೆಸುವ ರೀತಿ ಮನುಷ್ಯನ ಮಾತುಗಳಿಗಿಂತ ಎಷ್ಟು ಪ್ರಭಾವಶಾಲಿ ಎಂಬುದು ಇಲ್ಲಿನ ಪ್ರಮುಖ ಚರ್ಚೆ. 'ಸಾವು ಎಂದರೆ ಕೇವಲ ಅಂತ್ಯವಲ್ಲ, ಅದು ಜೀವನದ ಮೌಲ್ಯವನ್ನು ಹೆಚ್ಚಿಸುವ ಒಂದು ಕ್ಷಣ' ಎಂಬ ತತ್ವವನ್ನು ಲೇಖಕ ಮಾರ್ಮಿಕವಾಗಿ ವಿವರಿಸಿದ್ದಾನೆ.

ಕಮಲ ಮುಡಿಗೇರಿಸಲು ಸಜ್ಜಾಗಿದ್ದಾರಾ ರಾಘವ್ ಛಡ್ಡಾ?

ಮೊದಲೆಲ್ಲಾ ಪ್ರಧಾನಿ ನರೇಂದ್ರ ಮೋದಿ ಸೇರಿ ಕೇಂದ್ರ ಸರಕಾರದ ವಿರುದ್ಧ ಥರಹೇವಾರಿ ಟೀಕೆ ರಾಘವ್ ಛಡ್ಡಾ, ಈಗ ಅವುಗಳನ್ನೆಲ್ಲಾ ಸಾಮಾಜಿಕ ಜಾಲತಾಣಗಳಿಂದ ಅಳಿಸಿ ಹಾಕಿದ್ದಾರೆ. ಈಚಿನ ದಿನಗಳಲ್ಲಿ ಅವರು ಕೇಂದ್ರದ ವಿರುದ್ಧ ನೇರ ವಾಗ್ದಾಳಿ ನಡೆಸಿದ ಉದಾಹರಣೆಯೇ ಇಲ್ಲ. ಮುಂಬರುವ ಪಂಜಾಬ್ ಚುನಾವಣೆ ಹೊಸ್ತಿಲಲ್ಲಿ ಛಡ್ಡಾ ಬಿಜೆಪಿ ಸೇರುತ್ತಾರೆಂಬ ಅನುಮಾನಗಳನ್ನು ಇವು ಪುಷ್ಟೀಕರಿಸುತ್ತಿವೆ.

ಜನಪಥ
ರಾಘವಶರ್ಮ ನಿಡ್ಲೆ
vveditoped@gmail.com

Never outshine the master ಎಂಬ ಅಮೆರಿಕನ್ ಲೇಖಕ ರಾಬರ್ಟ್ ಗ್ರೀನ್ ಅವರ ಮಾತು ಈಗ ಬಹಳ ಚರ್ಚೆಯಲ್ಲಿದೆ. ಗ್ರೀನ್ ತನ್ನ The 48 Laws of Power ಪುಸ್ತಕದಲ್ಲಿ, ನಿಮ್ಮ ಮೇಲಿನ ಅಧಿಕಾರಿ ಅಥವಾ ನಾಯಕನನ್ನು ಮೀರಿದ ಸಾಮರ್ಥ್ಯ ಪ್ರದರ್ಶನ ಮಾಡಬೇಡಿ. ಮಾಡಿದರೆ ನಿಮ್ಮ ವೃತ್ತಿಜೀವನಕ್ಕೆ ಕಂಟಕವಿದೆ. ಸಾಮರ್ಥ್ಯ ಪ್ರದರ್ಶಿಸುವಾಗ ನಾಯಕನನ್ನು ಕೀಳರಿಮೆಗೆ ತಳ್ಳಬೇಡಿ. ಆತನಿಗೆ ಆತನೇ ಬುದ್ಧಿವಂತ ಎಂದು ಭಾವಿಸುವಂತೆ ಮಾಡುವುದು, ವೃತ್ತಿಜೀವನದಲ್ಲಿನ ಏಳಿಗೆಗೆ ಒಳ್ಳೆಯದು ಎನ್ನುತ್ತಾನೆ.

ರಾಜ್ಯಸಭೆ ಉಪನಾಯಕನ ಸ್ಥಾನದಿಂದ ಆಮ್ ಆದ್ಮಿ ಪಕ್ಷದ ನಾಯಕ ಅರವಿಂದ ಕೇಜ್ರಿವಾಲ್ ತಮ್ಮನ್ನು ವಜಾಗೊಳಿಸಿ, ಆ ಸ್ಥಾನಕ್ಕೆ ಅಶೋಕ್ ಮಿತ್ತಲ್‌ರನ್ನು ನೇಮಕ ಮಾಡಿದ ನಂತರ ರಾಘವ್ ಛಡ್ಡಾ ಅವರು Never outshine your master ಅಧ್ಯಾಯದ ಪುಟ ತಿರುವಿ ಹಾಕುತ್ತಿರುವ ತಮ್ಮ ಫೋಟೋವನ್ನು ಫೇಸ್‌ಬುಕ್‌ನಲ್ಲಿ ಹರಿಯಬಿಟ್ಟಿದ್ದಾರೆ. ಈ ಮೂಲಕ 'ಮಾಜಿ' ನಾಯಕ ಅರವಿಂದ ಕೇಜ್ರಿವಾಲ್, ತನ್ನ ಪ್ರತಿಭಾ ಪಾಂಡಿತ್ಯದ ಬಗ್ಗೆ ಅಸೂಯೆ, ಕೀಳರಿಮೆ ಹೊಂದಿ ತನ್ನನ್ನು ಹುದ್ದೆಯಿಂದ ವಜಾ ಮಾಡಿದ್ದಾರೆ ಎಂಬ ಅಭಿಪ್ರಾಯ ರೂಪಿಸುತ್ತಿದ್ದಾರೆ. ಪರಿಸ್ಥಿತಿಗೆ ಅನುಗುಣವಾಗಿ ಲಾಭ ಪಡೆಯುವ ಕಾರ್ಯತಂತ್ರ ಅನುಸರಿಸುವಲ್ಲಿ ಕೇಜ್ರಿವಾಲ್ ನಿಷ್ಣಾತ. ರಾಘವ್ ಛಡ್ಡಾರದ್ದು ಗುರುವಿಗೇ ತಿರುಮಂತ್ರ ಹಾಕುವ ನಡೆಯಂತೆ ಕಾಣುತ್ತಿದೆ.

ಸಾಮಾಜಿಕ ಹೋರಾಟಗಾರ ಅಣ್ಣಾ ಹಜಾರೆ ಹಾಗೂ ಕೇಜ್ರಿವಾಲರ ಜನಲೋಕಪಾಲ್ ಹೋರಾಟದಿಂದ ಪ್ರೇರಣೆಗೊಂಡ ಚಾರ್ಟೆಡ್ ಅಕೌಂಟೆಂಟ್ ರಾಘವ್ ಛಡ್ಡಾ, ಕೋಟಿಗಟ್ಟಲೆ ವೇತನ ಬಿಟ್ಟು ಕೇಜ್ರಿವಾಲರ ಆಮ್ ಆದ್ಮಿ ಪಕ್ಷ ಸೇರಿಕೊಂಡಿದ್ದರು, 2019ರಲ್ಲಿ ದಕ್ಷಿಣ ದೆಹಲಿ ಲೋಕಸಭೆ ಕ್ಷೇತ್ರದಿಂದ ಸ್ಪರ್ಧಿಸಿ, ಬಿಜೆಪಿಯ ರಮೇಶ್ ಬಿಧೂರಿ ವಿರುದ್ಧ ಸುಮಾರು 3 ಲಕ್ಷ ಮತಗಳಿಂದ ಸೋತರೂ, ಕೇಜ್ರಿವಾಲ್ ಜತೆಗಿನ ಗಳಸ್ಯ ಕಂಠಸ್ಯ ದಿಂದಾಗಿ ಪಕ್ಷದಲ್ಲಿ ಉನ್ನತ ಸ್ಥಾನದ ಗೌರವ ಉಳಿಸಿಕೊಂಡಿದ್ದರು. 2020ರ ವಿಧಾನಸಭೆ ಚುನಾವಣೆಯಲ್ಲಿ ದಿಲ್ಲಿಯ ರಾಜೇಂದರ್ ನಗರ್ ವಿಧಾನಸಭೆ ಕ್ಷೇತ್ರದಿಂದ ಶಾಸಕರಾಗಿ ಆಯ್ಕೆಯಾದ ಛಡ್ಡಾರನ್ನು ದಿಲ್ಲಿ ಜಲ ಮಂಡಳಿಯ ಉಪಾಧ್ಯಕ್ಷರನ್ನಾಗಿ ಕೇಜ್ರಿವಾಲ್ ನೇಮಿಸಿದ್ದರು. ಆಮ್ ಆದ್ಮಿ ಪಕ್ಷದ ಪ್ರಬಲ ಸಮರ್ಥಕನಾಗಿದ್ದ ಛಡ್ಡಾ, ಕೇಜ್ರಿವಾಲರ ಅತ್ಯಾಪ್ತರಲ್ಲಿ ಒಬ್ಬರಾಗಿದ್ದರು. 2021ರ ಪಂಜಾಬ್ ಚುನಾವಣೆ ಉಸ್ತುವಾರಿಯಾಗಿ, ಕೇಜ್ರಿವಾಲರೊಂದಿಗೆ ರಾಜ್ಯಾದ್ಯಂತ ಕಾಣಿಸಿಕೊಂಡ ಛಡ್ಡಾ, ಪಕ್ಷಕ್ಕೆ ಐತಿಹಾಸಿಕ ಗೆಲುವು ಕೊಡಿಸುವಲ್ಲಿ ಮಹತ್ವದ ಪಾತ್ರವಹಿಸಿದ್ದರು. ಈ ಸಾಧನೆಗಾಗಿ ಅವರಿಗೆ ರಾಜ್ಯಸಭೆ ಸದಸ್ಯತ್ವದ ಉಡುಗೊರೆಯನ್ನೂ ನೀಡಲಾಯ್ತು. ಆದರೆ, 2024ರಲ್ಲಿ ದಿಲ್ಲಿ ಅಬಕಾರಿ ಹಗರಣದ ಆರೋಪಿಯಾಗಿ ಅರವಿಂದ ಕೇಜ್ರಿವಾಲ್ ಜೈಲಿಗೆ ಹೋದ ನಂತರ ಲಂಡನ್‌ಗೆ ತೆರಳಿದ ರಾಘವ್ ಛಡ್ಡಾರಲ್ಲಿ ಬದಲಾವಣೆ ಕಾಣಲಾರಂಭಿಸಿತು. ಆಮ್ ಆದ್ಮಿ ಪಕ್ಷದ ಪ್ರಮುಖ ನಾಯಕರೆಲ್ಲರೂ ಜೈಲಿನಲ್ಲಿದ್ದು, ಪಕ್ಷ ಸಂಕಷ್ಟದಲ್ಲಿದ್ದಾಗ ಛಡ್ಡಾ ಲಂಡನ್ ವಾಸ್ತವ್ಯ ಮುಂದುವರಿಸಿದ್ದರು. ಕಣ್ಣಿನ ಶಸ್ತ್ರಚಿಕಿತ್ಸೆಯ ಕಾರಣ ನೀಡಿ ಮತ್ತಷ್ಟು ದಿನ ಅಲ್ಲೇ ಉಳಿದುಕೊಂಡರು. ಅಲ್ಲಿಂದ ಆರಂಭವಾದ ಆಪ್-ಛಡ್ಡಾ ನಡುವಿನ ಅಂತರ ನಿತ್ಯವೂ ಹೆಚ್ಚುತ್ತಾ ಸಾಗಿತು.

ಅಬಕಾರಿ ನೀತಿ ಹಗರಣದಲ್ಲಿ ಮನೀಶ್ ಸಿಸೋಡಿಯಾ, ಕೇಜ್ರಿವಾಲ್ ಸೇರಿ ಹಲವರು ಬಂಧನಕ್ಕೊಳಗಾದರೂ ಅವರಿಗೆ ನೈತಿಕ ಬೆಂಬಲ ನೀಡುವ ಅಥವಾ ಕೇಂದ್ರದ ವಿರುದ್ಧ ಪ್ರತಿಭಟಿಸುವ ಧೋರಣೆಯನ್ನು ಛಡ್ಡಾ ಪ್ರದರ್ಶಿಸಿರಲಿಲ್ಲ, ಸಾಮಾಜಿಕ ಜಾಲತಾಣದಲ್ಲೂ ಮೌನವಾಗಿದ್ದರಿಂದ ಕೇಜ್ರಿವಾಲ್-ಛಡ್ಡಾ ಮಧ್ಯೆ ಎಲ್ಲವೂ ಸರಿ ಇಲ್ಲ ಎನ್ನುವುದು ಸ್ಪಷ್ಟವಾಗಿತ್ತು. ಹೀಗಿದ್ದರೂ, ಛಡ್ಡಾ ಸಾಮರ್ಥ್ಯ, ಪ್ರತಿಭೆ ಅರಿತಿದ್ದ ಕೇಜ್ರಿವಾಲ್, ತಕ್ಷಣಕ್ಕೇ ಪಕ್ಷದಿಂದ ಕಿತ್ತುಹಾಕುವ ಸಾಹಸ ಮಾಡಲಿಲ್ಲ. ಕೆಲ ದಿನಗಳ ಹಿಂದೆ ಅಬಕಾರಿ ಹಗರಣದಿಂದ ಖುಲಾಸೆಗೊಂಡು ಜೈಲಿನಿಂದ ಹೊರಬಂದ ಮೇಲೂ ರಾಘವ್ ಛಡ್ಡಾ ಮಾತ್ರ ಕೇಜ್ರಿವಾಲ್ ನಿವಾಸಕ್ಕೆ ತೆರಳಲಿಲ್ಲ. ಸಾಮಾಜಿಕ ಜಾಲತಾಣದಲ್ಲಿ ಕೇಜ್ರಿವಾಲ್ ಜತೆಗಿದ್ದ ಚಿತ್ರವೊಂದನ್ನು ನಾಮಕಾವಸ್ಥೆ ಅಪ್ಲೋಡ್ ಮಾಡಿ ಸುಮ್ಮನಿದ್ದರು. ಕೇಜ್ರಿವಾಲ್ ಏರ್ಪಡಿಸಿದ್ದ ಪತ್ರಿಕಾಗೋಷ್ಠಿಯಲ್ಲೂ ಕಾಣಿಸಿಕೊಳ್ಳಲಿಲ್ಲ, ಛಡ್ಡಾ-ಕೇಜ್ರಿವಾಲ್ ಮುಸುಕಿನ ಗುದ್ದಾಟ ಮುಂದುವರಿದಿತ್ತು ಮತ್ತು ಸಂಬಂಧ ಮುರಿದುಬೀಳುವ ಲಕ್ಷಣ ಹೆಚ್ಚಿತ್ತು. ಕೇಜ್ರಿವಾಲರ ಕಾರ್ಯವೈಖರಿಯನ್ನು ಹತ್ತಿರದಿಂದ ಗಮನಿಸಿದವರಿಗೆ ಅವರೊಳಗೊಬ್ಬ ಸರ್ವಾಧಿಕಾರಿ ಇದ್ದಾನೆ ಎನ್ನುವುದು ಸ್ಪಷ್ಟವಾಗಿ ಗೋಚರಿಸಿರಬಹುದು. ಈ ಹಿಂದೆ ಯೋಗೇಂದ್ರ ಯಾದವ್, ಪ್ರಶಾಂತ್ ಭೂಷಣ್, ಮಾಯಾಂಕ್ ಗಾಂಧಿ, ಅಂಜಲಿ ದಮಾನಿಯಾ, ಕುಮಾರ್ ವಿಶ್ವಾಸ್, ಕೈಲಾಶ್ ಗೆಹ್ಲೋಟ್ ಸೇರಿದಂತೆ ಅನೇಕರು ಕೇಜ್ರಿವಾಲರ ತಾನೇ ಎಲ್ಲ ಎಂಬ ಧೋರಣೆ ಖಂಡಿಸಿಯೇ ಪಕ್ಷ ತೊರೆದವರು. ದಿಲ್ಲಿಯಲ್ಲಿ ಆಮ್ ಆದ್ಮಿ ಸರಕಾರವಿದ್ದಾಗ ದಿಲ್ಲಿ ಮಹಿಳಾ ಆಯೋಗದ ಅಧ್ಯಕ್ಷೆಯಾಗಿ ಗಮನಸೆಳೆದಿದ್ದ, ರಾಜ್ಯಸಭೆ ಹಾಲಿ ಸದಸ್ಯ, ಸ್ವಾತಿ ಮಲಿವಾಲ್ ಕೂಡ ಕೇಜ್ರಿವಾಲರೊಂದಿಗೆ ಮುನಿಸಿಕೊಂಡು ಆಪ್‌ನಿಂದ ದೂರವಾದರು. ರಾಘವ್ ಛಡ್ಡಾಗೂ ಇಂಥದ್ದೇ ಸಮಸ್ಯೆಗಳಾಗಿತ್ತೋ ಗೊತ್ತಿಲ್ಲ. ಅವರೇ ತಿಳಿಸಬೇಕು.

ರಾಘವ್ ಛಡ್ಡಾರನ್ನು ರಾಜ್ಯಸಭೆ ಉಪನಾಯಕನ ಸ್ಥಾನದಿಂದ ಆಮ್ ಆದ್ಮಿ ಪಕ್ಷ ವಜಾಗೊಳಿಸಿದ್ದು, ತೀರಾ ಅನಿರೀಕ್ಷಿತ ಬೆಳವಣಿಗೆ ಏನಲ್ಲ. ಕಳೆದೆರಡು ವರ್ಷಗಳಿಂದ ಕೇಜ್ರಿವಾಲ್ ಮತ್ತವರ ಪಕ್ಷದಿಂದ ಮಾನಸಿಕವಾಗಿ ದೂರವಾಗಿದ್ದ ಛಡ್ಡಾಗೆ, ಉಪನಾಯಕನ ಸ್ಥಾನ ಕಳೆದುಕೊಳ್ಳಲಿದ್ದೇನೆ ಎನ್ನುವುದೂ ಗೊತ್ತಿತ್ತು. ಕೇಜ್ರಿವಾಲರ ಗರಡಿಯಲ್ಲಿ ಪಳಗಿದ್ದ ಛಡ್ಡಾ, 'ಗಾಯಾಳಾಗಿರುವುದರಿಂದಲೇ ಘಾತಕನಾಗಿದ್ದೇನೆ' (ಘಾಯಲ್ ಹೂ, ಇಸ್ಲಿಯೇ ಘಾತಕ್ ಹೂ) ಎಂಬ ಸಿನಿಮಾ ಡೈಲಾಗ್ ಮೂಲಕ ಈಗ ಗುರುವಿಗೇ ಎಚ್ಚರಿಕೆ ನೀಡುತ್ತಿದ್ದಾರೆ.

ದಿಲ್ಲಿ ಅಬಕಾರಿ ಹಗರಣದಲ್ಲಿ ಸಂಜಯ್ ಸಿಂಗ್ ಜೈಲಿಗೆ ಹೋಗಿದ್ದರಿಂದ ರಾಘವ್ ಛಡ್ಡಾರನ್ನು ರಾಜ್ಯಸಭೆ ಉಪನಾಯಕನನ್ನಾಗಿ ಕೇಜ್ರಿವಾಲ್ ನೇಮಿಸಿದ್ದರು. ಜನಸಾಮಾನ್ಯ ಮತ್ತು ಮಧ್ಯಮ ವರ್ಗ ಎದುರಿಸುತ್ತಿರುವ ಹತ್ತು ಹಲವು ಸಮಸ್ಯೆಗಳನ್ನು ಪ್ರಸ್ತಾಪಿಸಿ ರಾಘವ್ ಛಡ್ಡಾ ಮಾಡುತ್ತಿದ್ದ ಭಾಷಣಗಳಿಗೆ ಸಾಮಾಜಿಕ ಜಾಲತಾಣಗಳಲ್ಲಿ ಭಾರೀ ಒಲವು ವ್ಯಕ್ತವಾಯಿತು. ಅವರ ಒಂದೊಂದು ವಿಡಿಯೋ ಈಗ ಲಕ್ಷೋಪಲಕ್ಷ ವೀಕ್ಷಣೆಗೆ ಒಳಗಾಗುತ್ತಿದೆ. ಆಮ್ ಆದ್ಮಿ ಪಕ್ಷದ ನೀಡಿದ ವೇದಿಕೆ ಬಳಸಿಕೊಂಡು ವೈಯಕ್ತಿಕ ವರ್ಚಸ್ಸು ವೃದ್ಧಿಸಿಕೊಂಡರು ಎಂದು ಆಪ್ ಮುಖಂಡರು ಆರೋಪ ಮಾಡುತ್ತಿದ್ದಾರೆ. ಪಕ್ಷದ ಜತೆ ಚರ್ಚಿಸದೆ ತಾನಿಚ್ಛಿಸಿದ ವಿಚಾರಗಳನ್ನು ಪ್ರಸ್ತಾಪಿಸುತ್ತಾ ತನ್ನ ಪಬ್ಲಿಕ್ ಇಮೇಜ್ ಹೆಚ್ಚಿಸಲು ಛಡ್ಡಾ ಮುಂದಾಗಿದ್ದರಿಂದ ಕೇಜ್ರಿವಾಲ್ ಸಹನೆಯಕಟ್ಟೆ ಒಡೆಯಿತು. ಪಕ್ಷ ಮುಂದು ಮಾಡಿದ ವಿಚಾರಗಳನ್ನು ಬದಿಗೆ ಸರಿಸಿ, ತಮ್ಮದೇ ನೆಲೆಯಲ್ಲಿ ಛಡ್ಡಾ ಶ್ರೀಸಾಮಾನ್ಯನನಿಗೆ ಸನಿಹ ವಾಗುತ್ತಿರುವುದು ಸಹಜವಾಗಿಯೇ ಆಪ್ ನಾಯಕರ ಕಣ್ಣು ಕೆಂಪಾಗಿಸಿತು. ಸಂಸತ್ತಿನಲ್ಲಿ ಕೇಂದ್ರ ಸರಕಾರದ ವಿರುದ್ಧ ಘೋಷಣೆ ಕೂಗುತ್ತಾ ವಿಪಕ್ಷ ನಾಯಕರು ಸಭಾತ್ಯಾಗ ಮಾಡಿದಾಗಲೂ ಛಡ್ಡಾ ಅವರೊಂದಿಗೆ ಗುರುತಿಸಿಕೊಳ್ಳಲಿಲ್ಲ. ಪ್ರಮುಖವಾಗಿ, ಟಿಎಂಸಿ ಸಂಸದರು ಮುಖ್ಯ ಚುನಾವಣಾ ಆಯುಕ್ತ ಜ್ಞಾನೇಶ್ ಕುಮಾರ್ ವಿರುದ್ಧ ಮಂಡಿಸಿದ ವಾಗ್ದಂಡನೆ (impeachment) ನಿರ್ಣಯಕ್ಕೆ ಆಮ್ ಆದ್ಮಿ ಪಕ್ಷ ಬೆಂಬಲ ನೀಡಿದರೂ, ರಾಘವ್ ಛಡ್ಡಾ ಅದಕ್ಕೆ ಸಹಿ ಹಾಕಲಿಲ್ಲ. ಸಹಿ ಹಾಕಿ ಎಂದು ನನ್ನನ್ನು ಯಾರೂ ಕೇಳಿಕೊಳ್ಳಲಿಲ್ಲ. ಹಾಗಾಗಿ ನಾನು ಸಹಿ ಹಾಕಲಿಲ್ಲ ಎನ್ನುವುದು ಛಡ್ಡಾ ಸಮರ್ಥನೆ.



ಈ ನಡುವೆ, ರಾಜ್ಯಸಭೆಯಲ್ಲಿನ ಭಾಷಣಗಳ ಮೂಲಕ ಛಡ್ಡಾ ಮಾತ್ರ ದೇಶದ ಗಮನಸೆಳೆಯುತ್ತಲೇ ಇದ್ದರು. ಮಧ್ಯಮ ವರ್ಗದ ಮೇಲಿನ ತೆರಿಗೆ ಹೊರೆ, ಡೇಟಾ ಅವಧಿ ಮುಕ್ತಾಯಗೊಳಿಸುವುದರಲ್ಲಿ ಟೆಲಿಕಾಂ ಕಂಪನಿಗಳ ವಂಚನೆ, ಪಿತೃತ್ವ ರಜೆ ಹಕ್ಕೆಂದು ಪರಿಗಣಿಸುವುದು, ವಿಮಾನ ನಿಲ್ದಾಣಗಳಲ್ಲಿ ಹೆಚ್ಚುವರಿ ಬ್ಯಾಗೇಜ್ ಶುಲ್ಕ, 1 ಕಪ್ ಚಹಾಕ್ಕೆ 200 ರೂ ದರ ವಿಧಿಸುವುದು, ಹಾಲಿನಲ್ಲಿ ಯೂರಿಯಾ ಮತ್ತು ಡಿಟರ್ಜೆಂಟ್‌ಗಳ ಕಲಬೆರಕೆ, ತರಕಾರಿಗಳಲ್ಲಿ ಆಕ್ಸಿಟೋಸಿನ್, ಪನೀರ್‌ನಲ್ಲಿ ಕಾಸ್ಟಿಕ್ ಸೋಡಾ, ಮಸಾಲೆ ಪದಾರ್ಥಗಳಲ್ಲಿ ಇಟ್ಟಿಗೆ ಅಥವಾ ಮರದ ಪುಡಿ, ನಕಲಿ ಜೇನುತುಪ್ಪ, ಕೋಳಿ ಮಾಂಸದಲ್ಲಿ ಸ್ಟೆರಾಯ್ಡ್‌ಗಳು ಮತ್ತು ಐಸ್ಕ್ರೀಮ್‌ನಲ್ಲಿ ಡಿಟರ್ಜೆಂಟ್..ಹೀಗೆ ಇಂಥಾ ವಂಚನೆಗಳಿಂದ ಜನ ರೋಸಿ ಹೋಗಿರುವಾಗ, ಅವುಗಳ ಬಗ್ಗೆ ರಾಘವ್ ಛಡ್ಡಾ ಮಾತನಾಡಲು ಶುರು ಮಾಡಿದ್ದು ಸಹಜವಾಗಿಯೇ ಮಧ್ಯಮ ವರ್ಗವನ್ನು ಬೆರಗುಗೊಳಿಸಿತು. ನಮ್ಮನ್ನು ಖಾಸಗಿ ಕಂಪನಿಗಳು, ಸರಕಾರಗಳು ಹೇಗೆ ವ್ಯವಸ್ಥಿತವಾಗಿ ವಂಚಿಸುತ್ತಿವೆ ಎಂದು ಅವರು ಎಳೆಎಳೆಯಾಗಿ ವಿವರಿಸುತ್ತಿದ್ದುದನ್ನು ಕಂಡು ಜನ ಚಪ್ಪಾಳೆ ತಟ್ಟಿದರು. ಅಷ್ಟಕ್ಕೂ ಜನಸಾಮಾನ್ಯರಿಗೆ ಬೇಕಾಗಿರುವುದೂ ಇದೇ ತಾನೇ? ತಮ್ಮ ಸಮಸ್ಯೆಗಳನ್ನು ಸಂಸತ್ತಿನಲ್ಲಿ ಪರಿಣಾಮಕಾರಿಯಾಗಿ ಚರ್ಚಿಸುವ ವ್ಯಕ್ತಿಗಳನ್ನೇ ಅವರು ಬಯಸುತ್ತಾರೆ. ಇದೇ ಕಾರಣಕ್ಕೆ ಛಡ್ಡಾ ಬಡ ಮತ್ತು ಮಧ್ಯಮ ವರ್ಗದವರ ಡಾರ್ಲಿಂಗ್ ಆಗಿಬಿಟ್ಟಿದ್ದರು. ಇನ್ನು ಸುಮ್ಮನಿದ್ದರೆ ನಮಗೆ ಉಳಿಗಾಲವಿಲ್ಲ ಎಂದು ಭಾವಿಸಿದ ಆಮ್ ಆದ್ಮಿ ಪಕ್ಷ ಅವರನ್ನು ರಾಜ್ಯಸಭೆ ಉಪನಾಯಕನ ಸ್ಥಾನದಿಂದ ಕಿತ್ತು ಹಾಕಿತು. ರಾಘವ್ ಛಡ್ಡಾ ಬೇರೆ ಪಕ್ಷದಲ್ಲಿದ್ದು ಪಕ್ಷದ ವಿಚಾರಧಾರೆಗಳಿಂದ ಅಂತರ ಕಾಯ್ದುಕೊಂಡಿದ್ದರೆ ಇದೇ ಪರಿಸ್ಥಿತಿ ಎದುರಿಸುತ್ತಿದ್ದರು. ಆದರೂ, ಶ್ರೀಸಾಮಾನ್ಯರ ಪಕ್ಷ ಎಂದು ಹೆಸರಿಟ್ಟುಕೊಂಡ ಪಕ್ಷ ಸಾಮಾನ್ಯನಿಗೆ ಸಂಬಂಧಿಸಿದ್ದನ್ನೇ ಮಾತನಾಡುವ ವ್ಯಕ್ತಿಯನ್ನು ವಜಾಗೊಳಿಸಿದ್ದೇಕೆ? ಹಾಗಿದ್ದರೆ ಅವರ ಮಾತುಗಳಲ್ಲಿ ಸತ್ಯಾಂಶವಿಲ್ಲವೇ ಎಂಬ ಪ್ರಶ್ನೆಗಳಿಗೆ ಆಪ್ ನಾಯಕರು - ಛಡ್ಡಾ ಬಿಜೆಪಿಯೊಂದಿಗೆ ಹೊಂದಾಣಿಕೆ ಮಾಡಿಕೊಂಡಿದ್ದಾರೆ ಎಂಬ ಉತ್ತರ ನೀಡುತ್ತಿದ್ದಾರೆ. ಅದು ನಿಜವೋ ಸುಳ್ಳೋ ಎಂಬುದಕ್ಕೆ ಕಾಲವೇ ಉತ್ತರ ನೀಡಲಿದೆ.

ರಾಜಕೀಯದಲ್ಲಿ ನರೇಟಿವ್‌ಗಳ ನಿರ್ವಹಣೆ ಬಹಳ ಮುಖ್ಯ. ನಿಮ್ಮನ್ನು ನೀವು ಸಮರ್ಥವಾಗಿ ಬಿಂಬಿಸಿಕೊಂಡರೆ ಅರ್ಧ ಯುದ್ಧ ಗೆದ್ದಂತೆ. ಸಾರ್ವಜನಿಕ ಗ್ರಹಿಕೆ ಕೆಲವೊಮ್ಮೆ ವಾಸ್ತವವನ್ನೂ ಬದಿಗೆ ಸರಿಸುತ್ತದೆ. ಈ battle of perception ನಲ್ಲಿ ರಾಘವ್ ಛಡ್ಡಾ ಸದ್ಯಕ್ಕೆ ಮುನ್ನಡೆಯಲ್ಲಿದ್ದಂತೆ ಕಾಣುತ್ತಿದೆ. ಆಮ್ ಆದ್ಮಿ ನಾಯಕರು ಎಷ್ಟೇ ಸಬೂಬು ಕೊಟ್ಟರೂ, ಚಡ್ಡಾರ ರಾಜ್ಯಸಭೆ ಭಾಷಣಗಳು ಅವರನ್ನು ರಾಜಕೀಯದಲ್ಲಿ ಮತ್ತೊಂದು ಹಂತಕ್ಕೆ ಕೊಂಡೊಯ್ಯುವ ಲಕ್ಷಣ ತೋರಿಸುತ್ತಿವೆ. ಪ್ರಧಾನಿ ನರೇಂದ್ರ ಮೋದಿ ಸೇರಿ ಕೇಂದ್ರ ಸರಕಾರದ ವಿರುದ್ಧ ಥರಹೇವಾರಿ ಟೀಕೆ ಮಾಡುತ್ತಿದ್ದ ರಾಘವ್ ಛಡ್ಡಾ, ಆ ಎಲ್ಲ ಟ್ವೀಟ್‌ಗಳನ್ನೆಲ್ಲಾ ಅಳಿಸಿ ಹಾಕಿದ್ದಾರೆ. ಈಚೆಗೆ ಪಿಎಂ ಮೋದಿ ಅಥವಾ ಬಿಜೆಪಿ ವಿರುದ್ಧ ನೇರ ವಾಗ್ದಾಳಿ ನಡೆಸಿದ ಉದಾಹರಣೆಯೂ ಇಲ್ಲ. ಮುಂಬರುವ ಪಂಜಾಬ್ ಚುನಾವಣೆ ಹೊಸ್ತಿಲಲ್ಲಿ ಛಡ್ಡಾ ಬಿಜೆಪಿ ಸೇರುತ್ತಾರೆಂಬ ಅನುಮಾನಗಳನ್ನು ಇವು ಪುಷ್ಟೀಕರಿಸುತ್ತಿವೆ. ರಾಘವ್ ಛಡ್ಡಾಗೆ ರಾಜ್ಯಸಭೆಯಲ್ಲಿ ಭಾಷಣ ಮಾಡಲು ಯಾವುದೇ ಅಡೆತಡೆಗಳಿರಲಿಲ್ಲ. ಯಾರೂ ನಿಯಂತ್ರಿಸುತ್ತಲೂ ಇರಲಿಲ್ಲ. ಆದರೆ, ಮುಂದೆ ಪರಿಸ್ಥಿತಿ ಹೀಗಿರಲಿಕ್ಕಿಲ್ಲ.

ದಿಲ್ಲಿಯಲ್ಲಿ ಜನಿಸಿದರೂ, ರಾಘವ್ ಛಡ್ಡಾ ಮೂಲ ಇರುವುದು ಪಂಜಾಬ್‌ನಲ್ಲಿ. ಪಂಜಾಬಿ ಹಿಂದೂ ಆಗಿರುವ ಛಡ್ಡಾ, ನನ್ನ ಆತ್ಮ, ಮಣ್ಣು ಪಂಜಾಬ್‌ನಲ್ಲಿದೆ ಎಂದು ಎಷ್ಟೋ ಬಾರಿ ಹೇಳಿದ್ದುಂಟು. ಬಿಜೆಪಿಗೆ ಪಂಜಾಬ್‌ನಲ್ಲಿ ಸಮರ್ಥ ನಾಯಕರಿಲ್ಲ. ಪಕ್ಷದ ಈಗಿನ ರಾಜ್ಯಾಧ್ಯಕ್ಷ ಸುನೀಲ್ ಜಾಖಡ್ ಕಾಂಗ್ರೆಸ್‌ನಿಂದ ಬಂದವರು ಮತ್ತು ಹಿರಿ ವಯಸ್ಸಿನವರು. ಪಂಜಾಬ್‌ನಲ್ಲಿ ಆಮ್ ಆದ್ಮಿ ಪಕ್ಷದ ಸ್ಥಾಪಕರಾಗಿದ್ದ, ಸುಪ್ರೀಂಕೋರ್ಟ್‌ನ ಹಿರಿಯ ವಕೀಲ ಹರ್ವಿಂದರ್ ಸಿಂಗ್ ಫೂಲ್ಕಾ (ಎಚ್.ಎಸ್.ಫೂಲ್ಕಾ) ಅವರು ಕೆಲ ದಿನಗಳ ಹಿಂದೆ ಬಿಜೆಪಿ ಸೇರ್ಪಡೆಯಾಗಿರುವ ಮಹತ್ವದ ಬೆಳವಣಿಗೆ ನಡೆದಿದೆ. ಸಿಖ್ ವಿರೋಧಿ ದಂಗೆಯ ಸಂತ್ರಸ್ತರ ಪರ ದಶಕಗಳ ಕಾಲ ಹೋರಾಟ ನಡೆಸಿದ್ದ ಎಚ್.ಎಸ್. ಫೂಲ್ಕಾ ಆಪ್ ಪಕ್ಷದಿಂದ ಪಂಜಾಬ್‌ನ ದಾಖಾ ವಿಧಾನಸಭೆ ಸದಸ್ಯರಾಗಿ, ವಿಪಕ್ಷ ನಾಯಕನಾಗಿಯೂ ಸೇವೆ ಸಲ್ಲಿಸಿದವರು. ಸಿಖ್ಖರು ಫೂಲ್ಕಾರನ್ನು ಅತ್ಯಂತ ಗೌರವದಿಂದ ಕಾಣುತ್ತಾರೆ. ಅವರ ಕಾನೂನು ಸೇವೆಗಳನ್ನು ಗುರುತಿಸಿ 2019ರಲ್ಲಿ ಪದ್ಮಶ್ರೀ ಪ್ರಶಸ್ತಿಯನ್ನೂ ನೀಡಲಾಗಿತ್ತು.

ಇದೀಗ, ಪಂಜಾಬ್ ಮೂಲದ ರಾಘವ್ ಛಡ್ಡಾರನ್ನೂ ಪಕ್ಷದತ್ತ ಸೆಳೆದುಕೊಳ್ಳಲು ಬಿಜೆಪಿ ಯತ್ನಿಸುತ್ತಿದೆ. ಬಿಜೆಪಿ ನಾಯಕರು ಆಮ್ ಆದ್ಮಿ ಪಕ್ಷವನ್ನು ಟೀಕಿಸುವ ಭರದಲ್ಲಿ ರಾಘವ್ ಛಡ್ಡಾರಿಗೆ ಪರೋಕ್ಷ ಬೆಂಬಲ ನೀಡುತ್ತಿರುವುದನ್ನು ಗಮನಿಸಿದರೆ ರಾಘವ್ ಛಡ್ಡಾ ಅವರ ಈ ಕಳೆದೊಂದೆರಡು ವರ್ಷಗಳ ರಾಜಕೀಯ ನಡೆಗಳು ಬಿಜೆಪಿ ಜತೆಗಿನ ಸುದೀರ್ಘ ಕಾರ್ಯತಂತ್ರದ ಭಾಗವೂ ಆಗಿರಬಹುದೇನೋ ಎಂಬ ಅನುಮಾನ ಮೂಡುತ್ತಿದೆ. Never outshine the master ಎನ್ನುತ್ತಾ ಕೇಜ್ರಿವಾಲರನ್ನೂ ಕೆಣಕುತ್ತಿರುವ ರಾಘವ್ ಛಡ್ಡಾಗೆ ಬಿಜೆಪಿಯಲ್ಲಿ ಕೇಜ್ರಿವಾಲರನ್ನೂ ಮೀರಿದ ಮಾಸ್ಟರ್‌ಗಳಿದ್ದಾರೆನ್ನುವುದು ಗೊತ್ತಿಲ್ಲದೇನಿಲ್ಲ, ಹಾಗಾಗಿ, ಅವರ ಮುಂದಿನ ನಡೆ ಕುತೂಹಲ ಹೆಚ್ಚಿಸಿದೆ.

ಸುಳ್ಳು ಪ್ರಪೊಗಾಂಡ ಚಿತ್ರಗಳ ಮಧ್ಯೆ ಧುರಂಧರನ ಪ್ರತಿಬಿಂಬ

ತೆರೆಯ ನೋಟ
ಡಾ. ಜಗದೀಶ ಮಾನೆ
vveditoped@gmail.com

ಧುರಂಧರ ಎನ್ನುವ ಸತ್ಯ ಘಟನೆಗಳ ಆಧಾರಿತವಾದ ಸಿನಿಮಾ ಜಗತ್ತಿನಾದ್ಯಂತ ಬಹಳ ದೊಡ್ಡದಾದ ಸದ್ದು ಮಾಡುತ್ತಿದೆ. ಅದು ಆರಂಭದಲ್ಲಿ ಸಣ್ಣ ಕಿಡಿಯಾಗಿ ಹೊತ್ತಿದ ಧುರಂಧರ ಇದೀಗ ಇಡೀ ಜಗತ್ತಿನಾದ್ಯಂತ ದೊಡ್ಡ ಜ್ವಾಲೆಗಳ ರೂಪದಲ್ಲಿ ಹಬ್ಬಿದೆ. ಈ ಚಿತ್ರವನ್ನು ಭಾರತೀಯ ಮಕ್ಕಳು, ಯುವಕರಿಂದ ಹಿಡಿದು ವೃದ್ಧರವರೆಗೂ ಪ್ರತಿಯೊಬ್ಬರೂ ನೋಡಲೇಬೇಕು. ಯಾಕೆಂದರೆ ಧುರಂಧರ ಕೇವಲ ಒಂದು ಸಿನಿಮಾ ಮಾತ್ರವಲ್ಲ, ಅದು ಭಾರತ ಕಂಡ ಐತಿಹಾಸಿಕ ಕರಾಳ ದಿನಗಳ ಚರಿತ್ರೆಯಾಗಿದೆ. ಜನರ ಭಾವನೆಗಳನ್ನು ಬಡಿದೆಬ್ಬಿಸಿ ಭಾರತದ ಅಖಂಡತೆಯನ್ನು ಎತ್ತಿ ಹಿಡಿಯುವ ಚಿತ್ರವಾಗಿದೆ. ಕೆಲವು ಸಿನಿಮಾಗಳು ನೋಡಿದ ಕ್ಷಣಕ್ಕೆ ಮುಗಿದು ಹೋಗುತ್ತವೆ; ಆದರೆ ಕೆಲವು ಸಿನಿಮಾಗಳು ಮನಸ್ಸಿನಲ್ಲಿ ಬೆಂಕಿ ಹಚ್ಚಿ, ಚಿಂತನೆಯತ್ತ ದಿಕ್ಕು ತೋರಿಸುತ್ತವೆ. ಅದೇ 'ಧುರಂಧರ್', ಈ ಚಿತ್ರದಲ್ಲಿನ ಪ್ರತಿ ದೃಶ್ಯಗಳು ಪ್ರೇಕ್ಷಕರ ಮನಸ್ಸಿನಲ್ಲಿ ಅನೇಕ ಪ್ರಶ್ನೆಗಳನ್ನು ಹುಟ್ಟುಹಾಕುತ್ತವೆ. ಮತ್ತು ಇವತ್ತಿನ ನಮ್ಮ ಯುವಜನತೆಗೆ ಬೇಕಾಗಿರುವುದು ಕೇವಲ ಯಶಸ್ಸಿನ ಕಥೆಗಳಷ್ಟೆ ಅಲ್ಲ; ಸೋಲಿನ ನಡುವೆ ಮತ್ತೆ ಎದ್ದೇಳುವಂತೆ ಶಕ್ತಿ ತುಂಬಬಲ್ಲ ಸ್ಫೂರ್ತಿಯ ಕಥನಗಳು. ಈ ಧುರಂಧರ್ ಅಂಥದ್ದೇ ಸಂದೇಶಗಳನ್ನು ನೀಡಿದೆ.

ಪಾಕಿಸ್ತಾನದ ಭೂಗತ ಜಗತ್ತು ನಮ್ಮ ಮಗ್ಗಲು ಮುಳ್ಳಾಗಿ ಕಾಡುತ್ತಿರುವಂತಹ ರೀತಿ ಮತ್ತು ಭಾರತದ ಮೇಲೆ ಪಾಕಿಸ್ತಾನದ ಐಎಸ್‌ಐನ ನಿರಂತರ ಅಟ್ಯಾಕ್‌ಗಳೆಲ್ಲವನ್ನೂ ಸವಾಲಾಗಿ ಸ್ವೀಕರಿಸಿದ ನಮ್ಮ ಬೇಹುಗಾರಿಕಾ 'ರಾ' ಸಂಸ್ಥೆಯ ಹಲವಾರು ಏಜೆಂಟ್‌ಗಳ ಬಲಿದಾನಗಳನ್ನು ಹೃದಯಕ್ಕೆ ತಾಕುವಂತೆ ತೋರಿಸಿದ್ದಾರೆ. ಇನ್ನು 1990ರ ದಶಕದಲ್ಲಿ ನಡೆದ ಕಾಶ್ಮೀರಿ ಪಂಡಿತರ ಮಾರಣ ಹೋಮದ ಗುರುತುಗಳು ಮತ್ತು 2014ಕ್ಕೂ ಮುಂಚಿನ ಐದಾರು ದಶಕಗಳ ರವರೆಗೆ ಘಟಿಸಿದ ಎಲ್ಲ ಘಟನೆಗಳು, ಭಾರತದಲ್ಲಿ ದೇಶವನ್ನು ತುಂಡರಿಸುವ ವಿದ್ಯಮಾನಗಳ ಬೇರುಗಳು ಮತ್ತು 2014 ರಿಂದ 2025ರವರೆಗಿನ ನರೇಂದ್ರ ಮೋದಿಯವರ ಆಡಳಿತದ ಅವಧಿಯಲ್ಲಿ ಭಾರತದಲ್ಲಿ ಆದಂತಹ ವಿದ್ಯಮಾನಗಳನ್ನು ಚಿತ್ರದ ಭಾಗ-2ರಲ್ಲಿ ಬಹಳ ಅದ್ಭುತವಾಗಿ ತೋರಿಸಿದ್ದಾರೆ.

ದೇಶಭಕ್ತರ ಮೈನವಿರೇಳಿಸುವ ಈ ಧುರಂಧರ ಚಿತ್ರವಂತೂ ಎಡಚರ ರಾಷ್ಟ್ರ ವಿರೋಧಿಗಳ ಎದೆಯಲ್ಲಿ ಮಾತ್ರ ನಡುಕ ಹುಟ್ಟಿಸಿದೆ ಬಿಟ್ಟಿಲ್ಲ. ಈ ಎಡಚರರ ಮನಸ್ಥಿತಿ ಹೇಗಿದೆ ಅಂದರೆ ಇವರಿಗೆಲ್ಲ ದೇಶದಲ್ಲಿ ರಾಷ್ಟ್ರಪ್ರೇಮ ಆಧಾರಿತವಾದ ಯಾವುದಾದರೊಂದು ಚಲನಚಿತ್ರ ಬಂತೆಂದರೆ ಸಾಕು, ಇವರ ಒಳಗೊಳಗೆ ಉರಿ ಶುರುವಾಗಿ ಆ ದೇಶ ವಿರೋಧಿ ಭಿಕಾರಿಗಳೆಲ್ಲರೂ ಒಟ್ಟಾಗಿ ಬೊಗಳೊದಕ್ಕೆ ಶುರುಮಾಡುತ್ತಾರೆ. ಉದಾಹರಣೆ 2014ರಲ್ಲಿ ಮೋದಿ ಅವರು ಈ ದೇಶದ ಪ್ರಧಾನಿ ಆದ ಸಂದರ್ಭದಲ್ಲಿ, ರಾಮ ಮಂದಿರ ಉದ್ಘಾಟನೆಯಾದಾಗ ಮತ್ತು ದೇಶಭಕ್ತಿ ಆಧಾರಿತ ತಾಸ್ಕೆಂಟ್ ಫೈಲ್, ಛಾವಾ, ಬಾಹುಬಲಿ, ಕೇರಳ ಫೈಲ್ಸ್ ಮತ್ತು ಕಾಶ್ಮೀರ್ ಫೈಲ್ಸ್‌ಗಳಂತಹ ಚಿತ್ರಗಳು ಬಿಡುಗಡೆಯಾದಾಗ ಮತ್ತು ಪಾಶ್ಚಾತ್ಯ ಅನೇಕ ರಾಷ್ಟ್ರಗಳಲ್ಲಿ ಹಿಂದೂ ದೇವಾಲಯಗಳು ತಲೆಎತ್ತಿನಿಂತ ಸಂದರ್ಭಗಳು, ಹೀಗೆ ಭಾರತದಲ್ಲಿ ಹಿಂದುತ್ವಕ್ಕೆ ಪೂರಕವಾದ ವಾತಾವರಣ ನಿರ್ಮಾಣ ಆದಾಗಲೆಲ್ಲ ಇಲ್ಲಿನ ಎಡಚರರೆಲ್ಲರೂ ಒಟ್ಟಾಗಿಸೇರಿಕೊಂಡು ಹೆಂಡ ಕುಡಿದ ಮಂಗನಂತೆ ವರ್ತಿಸಲು ಶುರುಮಾಡುತ್ತಾರೆ.

ಈ ಧುರಂಧರ ಸಿನಿಮಾಗಂತೂ ಇಡೀ ದೇಶದ ಯುವ ಜನತೆ ಬಹಳ ಅಟ್ಯಾಚ್ ಆಗಿದೆ. ಇದರಲ್ಲಿ ಪಾಕಿಸ್ತಾನದ ರಾಜಕೀಯಕ್ಕೆ ಇರುವ ಭೂಗತ ಜಗತ್ತಿನ ನಂಟು, ಭೂಗತ ಜಗತ್ತಿಗೆ ಐಎಸ್‌ಐನ ನಂಟು ಮತ್ತು ಭಾರತದ ಮೇಲಿನ ದ್ವೇಷದ ಧರ್ಮ ರಾಜಕಾರಣ ಹಾಗೂ ಭಾರತವನ್ನು ಕಾಡುತ್ತಿರುವ ಜಿಹಾದಿ ಮನಸ್ಥಿತಿಯ ಉಗ್ರವಾದ ಎಲ್ಲವನ್ನೂ ಅದ್ಭುತವಾಗಿ ತೋರಿಸಿದ್ದಾರೆ. 2016ರಲ್ಲಿ ಉತ್ತರ ಪ್ರದೇಶದ ವಿಧಾನಸಭಾ ಚುನಾವಣೆಗೂ ಕೆಲವೇ ದಿನಗಳ ಮೊದಲು ನೋಟ್‌ಬ್ಯಾನ್ ಮಾಡಿದ್ದು? ಉತ್ತರ ಪ್ರದೇಶದ ದುಷ್ಟ ರಾಜಕಾರಣಿ ಅತೀಕ್ ಅಹ್ಮದ್‌ನನ್ನು ಬಂಧಿಸಿ ಜೈಲಿಗೆ ಹಾಕಿದ ಕಾರಣಗಳು? ನಿವೃತ್ತರಾಗಿದ್ದ ಅಜಿತ್ ದೋವಲ್‌ರು ಪುನಃ ಅಧಿಕಾರದಲ್ಲಿ ಮುಂದಿವರಿಯಲು ಕಾರಣಗಳು? ಹೀಗೆ ನಮ್ಮೊಳಗಿನ ಈ ರೀತಿಯ ನೂರಾರು ಪ್ರಶ್ನೆಗಳಿಗೆಲ್ಲದಕ್ಕೂ ಈ ಸಿನಿಮಾದಲ್ಲಿ ಉತ್ತರ ಸಿಗುತ್ತದೆ. ಅದರಲ್ಲೂ ಪಾಕಿಸ್ತಾನದ ಮೋಸ್ಟ್ ವಾಂಟೆಡ್ ಉಗ್ರ ಕಮಾಂಡರ್‌ಗಳು ಅಪರಿಚಿತ ಗನ್‌ಮ್ಯಾನ್‌ಗಳಿಂದ ಹತ್ಯೆಯಾಗಿದ್ದಾರೆ. 1999ರಲ್ಲಿ ಐಸಿ814 ವಿಮಾನ ಅಪಹರಣದ ರುವಾರಿ ಶಾಹಿದ್ ಅಕುಂಡ್, ಪಠಾಣ್ ಕೋಟ್ ಏರ್ ಬೇಸ್ ಮೇಲೆ ದಾಳಿ ನಡೆಸಿದ ಶಾಹಿದ್ ಲತೀಫ್, ಜಲಂಧರ್ ಬಾಂಬ್ ಬ್ಲಾಸ್ಟ್, ಮಾಲೆಗಾಂವ್ ದಾಳಿ, ಪಾರ್ಲಿಮೆಂಟ್ ಅಟ್ಯಾಕ್, ಮುಂಬೈ ತಾಜ್ ಹೋಟೆಲ್ ಮೇಲಿನ ದಾಳಿ, ಉರಿ, ಪುಲ್ವಾಮಾ ಹಾಗೂ ಪಹಲ್ಗಾಮ್ ಮೇಲೆ ನಡೆದ ಅಟ್ಯಾಕ್‌ಗಳು ಹೀಗೆ ಒಟ್ಟಾರೆ ಈ ಎಲ್ಲ ದಾಳಿಗಳ ಹಿಂದಿರುವ ಪಾಕಿಸ್ತಾನದ ಸುಮಾರು 32ಕ್ಕೂ ಹೆಚ್ಚು ಜನ ಟಾಪ್‌ಲೆವೆಲ್ ಉಗ್ರರ ನಾಯಕರೆಲ್ಲರನ್ನೂ ಈ 2020 ರಿಂದ 2025ರ ಅವಧಿಯಲ್ಲೇ ಹತ್ಯೆಗೈಯಲಾಗಿದೆ. ಇದರಿಂದ ಕಂಗೆಟ್ಟ ಪಾಕಿಸ್ತಾನಕ್ಕೆ ಈ ಉಗ್ರ ಹತ್ಯೆಯ ಹಿಂದಿರುವವರನ್ನು

ಕಂಡು ಹಿಡಿಯುವುದಕ್ಕೆ ಇದುವರೆಗೂ ಸಾಧ್ಯವಾಗಿಲ್ಲ. ಈ ಹತಾಶೆಯಿಂದ ಆಫ್ಘಾನಿಸ್ತಾನದ ಮೇಲೆ ಅನುಮಾನಗೊಂಡ ಪಾಕಿಸ್ತಾನ ಅಲ್ಲಿನ 25 ಲಕ್ಷಕ್ಕೂ ಹೆಚ್ಚಿನ ಆಫ್ಘಾನಿಸ್ತಾನಿಗಳನ್ನು ದೇಶದಿಂದ ಹೊರದಬ್ಬಿದೆ. ಬಲೂಚಿಸ್ತಾನದ ಅನೇಕ ಹೆಣ್ಣುಮಕ್ಕಳ ಮೇಲೆ ಪಾಕಿಸ್ತಾನದ ಸೈನಿಕರು ನಿರಂತರವಾಗಿ ಅತ್ಯಾಚಾರ ಎಸಗಿ ಹತ್ಯೆಗೈದಿದ್ದಾರೆ. ಇದರಿಂದ ಬಲೂಚಿಗರ ಮೇಲಾಗುವ ದೌರ್ಜನ್ಯದ ಕಾರಣಕ್ಕಾಗಿಯೇ ಬಲೂಚ್‌ನಲ್ಲಿ 'ಬಲೂಚ್ ಲಿಬರೇಷನ್ ಆರ್ಮಿ' ಎಂಬ ಸಂಘಟನೆಯು ಹುಟ್ಟಿಕೊಂಡಿದೆ. ಇಂದು ಪಾಕಿಸ್ತಾನದಲ್ಲಿ ನಡೆಯುತ್ತಿರುವ ಟಾರ್ಗೆಟ್ ಕಿಲ್ಲಿಂಗ್‌ಗಳಲ್ಲಿ ಅಫ್ಘಾನ್ ಮತ್ತು ಬಲೂಚಿಗರ ಪಾತ್ರದ ಬಗ್ಗೆಯೂ ಈ ಸಿನಿಮಾದಲ್ಲಿ ಕಟ್ಟಿಕೊಡಲಾಗಿದೆ.

ಈ ಚಿತ್ರದಲ್ಲಿ ಅಗತ್ಯಕ್ಕಿಂತಲೂ ಹೆಚ್ಚಿನ ಕ್ರೌರ್ಯವನ್ನು ವೈಭವೀಕರಿಸಿದ್ದಾರೆ ಅಂತ ಕೆಲವರಿಗೆ ಅನಿಸಬಹುದು, ಆದರೆ ಭಯೋತ್ಪಾದನೆಯನ್ನು ಮೂಲ ವಸ್ತುವನ್ನಾಗಿ ಇಟ್ಟುಕೊಂಡ ಈ ಚಿತ್ರದಲ್ಲಿ ಪಾಕಿಸ್ತಾನಿ ಭಯೋತ್ಪಾದಕರು ಭಾರತದಲ್ಲಿ ಎಸಗಿರುವ ಕ್ರೌರ್ಯಗಳ ಪ್ರತಿಯಾಗಿ ಅದನ್ನು ಹೀಗೆ ತೋರಿಸದೆ ಹೋದರೆ ಅದು ನಮ್ಮ ಮನಸ್ಸುಗಳ ಮೇಲೆ ಪರಿಣಾಮ ಬೀರುವುದಕ್ಕೆ ಸಾಧ್ಯವಿಲ್ಲ, ಅಮಾಯಕರ ಮೇಲಿನ ದಾಳಿಗಳು, ಮಂದಿರ ಮಸೀದಿಗಳಲ್ಲಿ ನಡೆಸಿದ ಸ್ಫೋಟಗಳು, ಅಂಡರ್ ವರ್ಲ್ಡ್‌ನ ಕರಾಳತೆ, ಮುಸುಕು ದಾರಿಗಳ ಆರ್ಭಟ ಹೀಗೆ ಇದೆಲ್ಲವನ್ನು ಕಟ್ಟಿಕೊಡಬೇಕಾದರೆ ಅದಕ್ಕೆ ನೈಜತೆಯನ್ನು ತುಂಬುವ ನಿಟ್ಟಿನಲ್ಲಿ ಈ ರೀತಿಯ ಒಂದಿಷ್ಟು ವೈಭವೀಕರಣ ಅತ್ಯಗತ್ಯವಿದೆ. ಪಾಕಿಸ್ತಾನಿ ಭಯೋತ್ಪಾದಕರು ಭಾರತದಲ್ಲಿ ನಡೆಸಿದ ಕೃತ್ಯಗಳಿಗೆಲ್ಲ ಹೋಲಿಕೆ ಮಾಡಿ ನೋಡಿದರೆ ಈ ಚಿತ್ರದಲ್ಲಿ ತೋರಿಸಿದ ಕ್ರೌರ್ಯ ತುಂಬಾನೇ ಕಡಿಮೆ ಅಂತ ಅನಿಸುತ್ತದೆ.

ಈ ಚಿತ್ರದಲ್ಲಿ ಬರುವ ಇಕ್ಬಾಲ್ ಪಾಕಿಸ್ತಾನದ ಐಎಸ್‌ಐನಲ್ಲಿದ್ದ ಎಂಬುದು ಮುಂಬೈ ದಾಳಿಯ ರೂವಾರಿ ಡೇವಿಡ್ ಹೆಡ್ಲಿಯ ಇಂಟ್ರಾಗೇಶನ್‌ನಲ್ಲಿ ಮಾಹಿತಿ ಸಿಕ್ಕಿದೆ. ಈ ಡೇವಿಡ್ ಹೆಡ್ಲಿ ಅಮೆರಿಕ ಮೂಲದ ವ್ಯಕ್ತಿ ಮತ್ತು ಪಾಕ್ ಏಜೆಂಟ್ ಆಗಿದ್ದ. ಆತ ಭಾರತಕ್ಕೆ ಬಂದು ತಾಜ್ ಹೋಟೆಲ್ ಸೇರಿದಂತೆ ಭಾರತದ ಅನೇಕ ಪ್ರದೇಶಗಳ ಬಗ್ಗೆ ಮಾಹಿತಿ ಪಡೆದು ಅದನ್ನು ಪಾಕಿಸ್ತಾನದ ಐಎಸ್‌ಐಗೆ ನೀಡಿದ್ದ. ಈ ಹೆಡ್ಲಿಯಿಂದ ಭಾರತದ ಬಗೆಗಿನ ಮಾಹಿತಿಯನ್ನು ಪಡೆದುಕೊಂಡವನೇ ಐಎಸ್‌ಐ ಅಧಿಕಾರಿ ಇಕ್ಬಾಲ್. ಹಾಗಾಗಿ ನಿರ್ದೇಶಕ ಆದಿತ್ಯಧರ್ ಆ ಪಾತ್ರಕ್ಕೆ 'ಮೇಜರ್ ಇಕ್ಬಾಲ್' ಎಂಬ ಹೆಸರನ್ನು ಕೊಟ್ಟಿದ್ದಾರೆ. ಚಿತ್ರದ ಕಥಾ ನಾಯಕ ಹಮ್ಜಾ ಪಾಕಿಸ್ತಾನಕ್ಕೆ ಹೋಗುವುದಕ್ಕೂ ಮೊದಲು ಅಲ್ಲಿ ಭಾರತದ ಸಾಕಷ್ಟು ಏಜೆಂಟರು ಕೆಲಸಮಾಡುತ್ತಿದ್ದರು. ಜಮೀಲ್ ಜಮಾಲಿ 40 ವರ್ಷಗಳ ಹಿಂದೆ ನಾನಿಲ್ಲಿ ಬಂದೇ ಎಂಬುದಾಗಿ ಆ ಪಾತ್ರದಲ್ಲಿ ಸ್ವತಃ ತಾನೇ ಹೇಳಿಕೊಂಡಿದ್ದಾನೆ. ಇನ್ನು ಎಸ್ಪಿ ಪಾತ್ರದಲ್ಲಿ ನಟಿಸಿದ 'ಅಸ್ಲಂ ಚೌಧರಿ' ಲ್ಯಾರಿಯ ರೌಡಿ ಗ್ಯಾಂಗ್ ಗಳನ್ನು ಮಟ್ಟ ಹಾಕಲು ಆತ ಕೂಡಾ ನಿಜ ರೌಡಿಗಳಂತೆಯೇ ವರ್ತಿಸಿದ್ದ. ಹೀಗಂತ ಪಾಕಿಸ್ತಾನದ ಅನೇಕ ಮೀಡಿಯಾಗಳಲ್ಲಿ ದಾಖಲಾಗಿತ್ತು. ಈ ಅಸ್ಲಂ ಚೌಧರಿಯು 2014ರ ಸಂದರ್ಭದಲ್ಲಿ ಬಲೂಚಿಗಳ ಅಟ್ಯಾಕ್‌ನಲ್ಲಿ ಸಾವನ್ನಪ್ಪಿದ. ಅಸ್ಲಂ ಚೌಧರಿ ಪಾತ್ರದಲ್ಲಿ ಸಂಜಯ್ ದತ್ ಅದ್ಭುತವಾಗಿ ಜೀವಿಸಿದ್ದಾರೆ. ಇನ್ನು ಚಿತ್ರದ ನಾಯಕ ರಣವೀರಸಿಂಗ್ ಅವರಂತೂ ತಮ್ಮ ಕರಿಯರ್ ಗ್ರಾಫ್‌ನಲ್ಲಿ ತಾವು ನಟಿಸಿದ ಪ್ರತಿಯೊಂದು ಚಿತ್ರಗಳಲ್ಲೂ ಅದ್ಭುತವಾಗಿ ನಟಿಸಿದ್ದಾರೆ. ಆ ಪಾತ್ರದ ಶೇಡ್‌ಗಳನ್ನ ಗಮನಿಸಿದರೆ ಎಲ್ಲವೂ ನೈಜ ಅಂತ ಅನಿಸುತ್ತದೆ. ಬಾಜಿರಾವ್ ಮಸ್ತಾನಿಯಲ್ಲಿ ಡಿಟೋ ಬಾಜಿರಾವ್ ಪೇಶ್ವೆಯನ್ನೇ ನೋಡಿದಂತಾಗುತ್ತದೆ. ಪದ್ಮಾವತಿ ಚಿತ್ರದಲ್ಲಿ ಇವರೇ ನಿಜವಾದ ಖಿಲ್ಜಿ ಅಂತ ಅನಿಸುತ್ತದೆ. ಅದೇ ರೀತಿ ಈ ಧುರಂಧರ್‌ನಲ್ಲೂ ಆ ಪಾತ್ರ ಬಯಸಿದ್ದಕ್ಕಿಂತಲೂ ಹೆಚ್ಚಾಗಿಯೇ ಜೀವಿಸಿದ್ದಾರೆ. ಹೀಗಾಗಿ ಈ ಚಿತ್ರ ಗೆದ್ದಿದೆ.

ಈ ಚಿತ್ರದ ಯಶಸ್ಸನ್ನು ಅರಗಿಸಿಕೊಳ್ಳಲಾಗದ ಎಡಚರರೆಲ್ಲ 'ಧುರಂಧರ್' ಇದೊಂದು ಪ್ರೊಪಗಾಂಡ ಚಿತ್ರ ಅಂತ ಬೊಬ್ಬೆ ಹಾಕುತ್ತಿದ್ದಾರೆ. ಯಾಕೆಂದರೆ ಇಲ್ಲಿಯವರೆಗೂ ಸುಳ್ಳುಗಳನ್ನೇ ಸತ್ಯದ ರೀತಿಯಲ್ಲಿ ಬಿಂಬಿಸುತ್ತಾ ಬಂದಿರುವ ಎಡಚರರಿಗೀಗ ತಡೆದುಕೊಳ್ಳಲಾಗುತ್ತಿಲ್ಲ. ಈ ಹಿಂದೆ ಬಾಲಿವುಡ್‌ನ ಅನೇಕ ಚಿತ್ರಗಳಲ್ಲಿ ಹಿಂದುಗಳನ್ನು ಬಹಳ ಅಶ್ಲೀಲ ರೀತಿಯಲ್ಲಿ ಬಿಂಬಿಸಿದ್ದ ಅದೆಷ್ಟೋ ನಿರ್ದೇಶನಗಳಿವೆ. ಅವುಗಳಲ್ಲಿ ಅಮಾಯಕರನ್ನು ಕ್ರಿಶ್ಚನ್- ಮುಸಲ್ಮಾನರೇ ರಕ್ಷಿಸುವಂತೆ ಬಿಂಬಿಸಿ, ಹಿಂದೂಗಳನ್ನು ವಿಲನ್, ರೇಪಿಸ್ಟ್, ಮಂತ್ರವಾದಿಗಳ ರೀತಿ ಅನೇಕ ಚಿತ್ರಗಳಲ್ಲಿ ಬಿಂಬಿಸಿದ್ದಾರೆ. ಉದಾಹರಣೆ 'ಚಕ್ ದೇ ಇಂಡಿಯಾ' ಚಿತ್ರದಲ್ಲಿ 'ಶಾರುಖ್ ಖಾನ್' ಕೋಚ್ ಪಾತ್ರವನ್ನು ನಿರ್ವಹಿಸಿದ್ದು ಅದು ನೈಜ ಜೀವನದ ಚಿತ್ರದ ಕಥೆ. ಆ ನಿಜವಾದ ಕೋಚ್ 'ರಂಜನ್ ನೇಗಿ' ಎನ್ನುವ ಒಬ್ಬ ಹಿಂದೂ ಆಗಿದ್ದ. ಆದರೆ ಈ ಚಿತ್ರದಲ್ಲಿ ಆತನನ್ನು ಒಬ್ಬ ಮುಸ್ಲಿಂ ಕಬೀರನ ರೀತಿ ಬಿಂಬಿಸಿದ್ದಾರೆ. 'ಪಿಕೆ' ಚಿತ್ರದಲ್ಲಿ ಹಿಂದೂ ದೇವರನ್ನು ಬಹಳ ಅಸಹ್ಯವಾಗಿ ಚಿತ್ರಿಸಿದ್ದಾರೆ. 'ಫೈರ್' ಒಂದು 'ಉಪನ್ಯಾಸ' ಎಂಬ ಕಾದಂಬರಿ ಆಧಾರಿತ ಚಿತ್ರ ಬಂದಿತ್ತು. ಆ ಕಾದಂಬರಿಯಲ್ಲಿ 'ಬೇಗಂ ಜಾನ್' ಮತ್ತು 'ರಬ್ಬೊ' ಎನ್ನುವ ಎರಡು ಪಾತ್ರಗಳಿವೆ. ಆದರೆ ಚಿತ್ರದಲ್ಲಿ ಮಾತ್ರ ಅವರ ಹೆಸರುಗಳು ರಾಧಾ ಮತ್ತು ಸೀತಾ ಅಂತ ತೋರಿಸಲಾಗಿದೆ. ಇನ್ನು 'ಶೇರ್‌ನಿ' ಎನ್ನುವ ಚಿತ್ರ ಒಬ್ಬ ಲೇಡಿ ಆಫೀಸರ್ ಮತ್ತು ಕಾಡುಗಳ್ಳನ ನೈಜ ಜೀವನದ ಕಥೆ ಆಧಾರಿತವಾಗಿದೆ. ಆ ಮಹಿಳಾ ಅಧಿಕಾರಿಯ ನೈಜ ಹೆಸರು ಎಂ.ಕೆ. ಆಭರಣಾ, ಆ ಕಾಡುಗಳ್ಳ ಅಸ್ಗರ್ ಅಲಿ, ಆದರೆ ಚಲನಚಿತ್ರದಲ್ಲಿ ಮಾತ್ರ ಆಕೆಯನ್ನು ವಿದ್ಯಾ ವಿನ್ ಸೆಟ್ ಎನ್ನುವ ಕ್ರಿಶ್ಚಿಯನ್ ಪಾತ್ರದಲ್ಲಿ ಮತ್ತು ಅಸ್ಗರ್ ಅಲಿಯನ್ನು ರಂಜನ್ ರಾಜಕನಸು ಎನ್ನುವ ಹಿಂದೂ ಹೆಸರಲ್ಲಿ ತೋರಿಸಿದ್ದಾರೆ. 'ದಿವಾರ್' ಚಿತ್ರದಲ್ಲಿ ಅಮಿತಾ ಬಚ್ಚನ್ ತನ್ನ ಬಟ್ಟೆಯ ಮೇಲೆ '786' ಎಂಬ ಅಚ್ಚು ಹಾಕಿಸಿಕೊಂಡು ದೇವಸ್ಥಾನದ ಒಳಗಡೆ ನಿಂತು ತಾನು ದೇವರನ್ನ ನಂಬದಿರುವುದಾಗಿ ಹೇಳುತ್ತಾನೆ. 'ರಾಮ್ ತೇರಿ ಗಂಗಾ ಮೈಲಿ' ಚಿತ್ರದಲ್ಲಿ ಒಬ್ಬ ಪಂಡಿತ ತಾನು ರೇಪ್ ಮಾಡುವುದಕ್ಕೂ ಮುಂಚೆ 'ಓಂ ನಮಃ ಶಿವಾಯ' ಎಂಬ ಮಂತ್ರ ಹೇಳಿದ ರೀತಿಯಲ್ಲಿ ಬಿಂಬಿಸಿದ್ದಾರೆ. 'ಕುಚ್ ಕುಚ್ ಹೋತಾ ಹೈ' ಚಿತ್ರದಲ್ಲಿ ಶಾರುಖ್ ಖಾನ್ ಮತ್ತು ಕಾಜಲ್ ಇಬ್ಬರೂ ಹಿಂದೂ ಪಾತ್ರಗಳಲ್ಲಿ ನಟಿಸಿದ್ದಾರೆ. ಆದರೆ ಅವರ ಎಂಟು ವರ್ಷದ ಮಗಳು ಹಿಜಾಬ್ ಹಾಕಿ ನಮಾಜ್ ಮಾಡುವಂತೆ ತೋರಿಸಿದ್ದಾರೆ. ವಾಸ್ತವವಾಗಿ ಈ ಚಿತ್ರಗಳು ನೈಜ ಕರಾಚಿವುಡ್ ಪ್ರೊಪಗಾಂಡ. ಆದರೆ, ಈ ಎಡಚರರಿಗಂತೂ ಎಲ್ಲ ವಿಲನ್‌ಗಳು ಹಿಂದೂಗಳೇ ಆಗಿರಬೇಕು ಮತ್ತು ಎಲ್ಲ ಅನಿಷ್ಟಗಳಿಗೂ ಹಿಂದೂ ಧರ್ಮವೇ ಆಗಬೇಕು. ಈಗ ಇವರೆಲ್ಲ ಧುರಂಧರ್ ನೋಡಿ ಉರಿದುಕೊಳ್ಳುವುದನ್ನು ನೋಡುವುದಕ್ಕೂ ಒಂದು ರೀತಿಯ ಖುಷಿಯಾಗುತ್ತದೆ.

ಭಾರತದ ಒಳಗಿದ್ದುಕೊಂಡು ಪಾಕಿಸ್ತಾನಕ್ಕೆ ಸಪೋರ್ಟ್ ಮಾಡುವ ಕಿರಾತಕರು, ಮತ್ತು ಭಯೋತ್ಪಾದನೆ ಮೂಲಕ ಪೈಶಾಚಿಕ ಕೃತ್ಯವೆಸಗುವ ರಾಕ್ಷಸರ ಬೆನ್ನಿಗೆ ನಿಂತ ನಮ್ಮ ದುಷ್ಟ ರಾಜಕಾರಣಿಗಳು, ಅವರ ಷಡ್ಯಂತ್ರಗಳ ಬಗ್ಗೆ ಧುರಂಧರನಲ್ಲಿ ಬಹಳ ಅದ್ಭುತವಾಗಿ ತೋರಿಸಿದ್ದಾರೆ. ಉದಾಹರಣೆ 2016ರಲ್ಲಿ ಉತ್ತರ ಪ್ರದೇಶದ ವಿಧಾನಸಭೆ ಚುನಾವಣೆಯಲ್ಲಿ ಬಿಜೆಪಿಯನ್ನು ಸೋಲಿಸುವುದು, ಆ ಮೂಲಕ 2019ರಲ್ಲಿ ನರೇಂದ್ರ ಮೋದಿ ಎರಡನೇ ಬಾರಿ ಪ್ರಧಾನಮಂತ್ರಿ ಆಗುವುದನ್ನು ತಡೆಯುವುದು ಪಾಕಿಸ್ತಾನದ ಟಾರ್ಗೆಟ್ ಆಗಿತ್ತು. ಯಾಕೆಂದರೆ ಉತ್ತರ ಪ್ರದೇಶವನ್ನು ಗೆದ್ದವರೇ ದೇಶದ ಪ್ರಧಾನಿ ಆಗುತ್ತಾರೆ. ಹೀಗಾಗಿ ಬಿಜೆಪಿಯನ್ನು ಸೋಲಿಸಲು ಪಾಕಿಸ್ತಾನದಿಂದ ಸುಮಾರು 60,000ಕೋಟಿಯಷ್ಟು ನಕಲಿ ನೋಟುಗಳನ್ನು ನೇಪಾಳದ ಮೂಲಕ ಉತ್ತರ ಪ್ರದೇಶದ ಅತೀಖ್ ಅಹಮದ್‌ನಿಗೆ ತಲುಪಿಸುವ ಯೋಜನೆಯಾಗಿತ್ತು. ಈ ಸುದ್ದಿ ತಿಳಿದ ಭಾರತ ಸರಕಾರವು 2016ರಲ್ಲಿ ನೋಟ್‌ಬ್ಯಾನ್ ಮಾಡುತ್ತದೆ.

ಈ ಅತೀಖ್ ಅಹಮದ್ ಬಿಎಸ್‌ಪಿ ಪಕ್ಷದಲ್ಲಿದ್ದ ಬಳಿಕ ಸಮಾಜವಾದಿ ಪಕ್ಷಕ್ಕೆ ಶಿಫ್ಟ್ ಆಗಿ ಒಟ್ಟು ಮೂರು ಬಾರಿ ಎಂಎಲ್‌ಎ ಮತ್ತು ಒಂದು ಬಾರಿ ಎಂಪಿ ಆಗಿದ್ದ. ಪಾಕಿಸ್ತಾನದೊಂದಿಗೆ ನಿರಂತರ ನಂಟು ಹೊಂದಿದ ಈತ ಅಲ್ಲಿಂದ ನಕಲಿ ನೋಟುಗಳನ್ನು ತರಿಸಿಕೊಂಡು ತನ್ನ ಚುನಾವಣೆಗಳಲ್ಲಿ ಬಳಸಿಕೊಳ್ಳುತ್ತಿದ್ದ. ಮೇಲಾಗಿ ಈತನ ಮೇಲೆ ಸಾಕಷ್ಟು ಕೊಲೆ ಕೇಸುಗಳಿದ್ದವು. ಭಾರತದ ಅನ್ನ ತಿಂದು ಪಾಕಿಸ್ತಾನಕ್ಕೆ ನಿಯತ್ತಾಗಿದ್ದ ರಾಷ್ಟ್ರ ದ್ರೋಹಿ ಅತೀಖ್ ಅಹಮದ್‌ನನ್ನು 2017ರಲ್ಲಿ ಯೋಗಿ ಆದಿತ್ಯನಾಥ್ ಮುಖ್ಯಮಂತ್ರಿಯಾದ ಬಳಿಕ ಈತನನ್ನು ಬಂಧಿಸಲಾಯಿತು. ಬಳಿಕ 2023ರಲ್ಲಿ ಎಲ್ಲ ಮೀಡಿಯಾಗಳ ಮುಂದೆ ಎಲ್ಲರೂ ದಂಗಾಗುವ ರೀತಿಯಲ್ಲಿ ಈತನನ್ನು ಹತ್ಯೆ ಮಾಡಲಾಯಿತು. ಇಂತಹ ಲಜ್ಜೆಗೆಟ್ಟ ರಾಜಕಾರಣಿಗಳ ಕಾರಣಕ್ಕೆ ನಮ್ಮ ಹಲವಾರು 'ಸ್ಪೈ'ಗಳು ತಮ್ಮ ಪ್ರಾಣವನ್ನು ಕಳೆದುಕೊಂಡಿದ್ದಾರೆ. ಪುಣ್ಯಾತ್ಮ ಮುರಾರ್ಜಿ ದೇಸಾಯಿ ಪ್ರಧಾನಿ ಆಗಿದ್ದ ಸಂದರ್ಭದಲ್ಲಿ ಇಂದಿರಾಗಾಂಧಿಯ ಮೇಲಿನ ಸಿಟ್ಟಿನ ಕಾರಣಕ್ಕೆ ನಮ್ಮ ಗುಪ್ತಚರ 'ರಾ' ವ್ಯವಸ್ಥೆಯನ್ನೇ ಮೂಲೆಗುಂಪು ಮಾಡಿದ್ದ. ಆಗ ಪಾಕಿಸ್ತಾನದಲಿದ್ದು ಅಲ್ಲಿನ ನ್ಯೂಕ್ಲಿಯರ್ ಬಗೆಗಿನ ಮಾಹಿತಿಯನ್ನು ತಂದಿದ್ದ ನಮ್ಮ ಸ್ಪೈಗಳ ಕುರಿತಾದ ಎಲ್ಲ ವಿಷಯವನ್ನು ಲೀಕ್ ಮಾಡಿದರು. ಆ ಪರಿಣಾಮವಾಗಿ ಪಾಕಿಸ್ತಾನವು ನಮ್ಮ ನೂರಾರು 'ರಾ' ಏಜೆಂಟ್ ಗಳನ್ನು ಕಗ್ಗೊಲೆ ಮಾಡಿತ್ತು. ನಮ್ಮ ಮತ್ತೋರ್ವ ಪ್ರಧಾನಿ ಐ.ಕೆ. ಗುಜ್ರಾಲ್ ಅಂತೂ ಪಾಕಿಸ್ತಾನದಲ್ಲಿರುವ ಭಾರತೀಯ ಸ್ಪೈಗಳ ಬಗ್ಗೆ ಸಂಪೂರ್ಣ ಮಾಹಿತಿಯನ್ನೇ ಪಾಕ್ ಸರಕಾರಕ್ಕೆ ಕೊಟ್ಟಿದ್ದ. ಆದ್ದರಿಂದ ಪಾಕಿಸ್ತಾನ ಸಾವಿರಕ್ಕೂ ಹೆಚ್ಚು ಭಾರತದ ಸ್ಪೈಗಳನ್ನು ಹತ್ಯೆ ಮಾಡುತ್ತದೆ. ಈ ರೀತಿಯ ಹೇಡಿ ನಾಯಕರ ಕಾರಣದಿಂದ ಅಂದು ನಮ್ಮ 'ರಾ' ಗುಪ್ತಚರ ಸಂಸ್ಥೆ ನಲುಗಿಹೋಗಿತ್ತು. ಇಂದು ನಮ್ಮ ಗುಪ್ತಚರ ಸಂಸ್ಥೆಗೆ ಮೋದಿ, ಅಜಿತ್ ದೋವಲ್‌ರವರು ಬಹಳಷ್ಟು ಶಕ್ತಿತುಂಬಿದ್ದಾರೆ. 'ಧುರಂಧರ್' ಚಿತ್ರ ನೋಡಿದ ಮೇಲೆ ಪ್ರೇಕ್ಷಕರು ಥಿಯೇಟರ್‌ನಿಂದ ಕೇವಲ ಮನರಂಜನೆಯನ್ನು ಪಡೆದು ಮಾತ್ರ ಹೊರಬರುವುದಿಲ್ಲ. ಬದಲಿಗೆ 'ನಾನೂ ನನ್ನ ಬದುಕಿನ ಧುರಂಧರನಾಗಬೇಕು' ಎಂಬ ಮನೋಭಾವದ ಜತೆಗೆ ದೇಶದ ಬಗ್ಗೆ, ವೀರರ ಬಗ್ಗೆ ಗೌರವ, ಮತ್ತು ರಾಷ್ಟ್ರದ ಸುರಕ್ಷತೆಯ ಬಗ್ಗೆ ಹೊಸದಾದ ಚಿಂತನೆಯನ್ನು ಹೊತ್ತ ನಾಗರಿಕರಾಗಿ ಹೊರಬರುತ್ತಾರೆ.

ಭಟ್ಟರ್ ಸ್ಕಾಚ್

- **ಭವ್ಯಶ್ರೀ ಚಂದ್ರು, ತುಮಕೂರು**
ಭಟ್ರೇ, ಒಬ್ಬ ಎಡಿಟರ್‌ಗೆ ಯಾವಾಗ ಹೆಚ್ಚು ಸಂತೋಷ ಸಿಗುತ್ತದೆ ?
- **ಲೇಖಕರು ಕಳುಹಿಸಿದ ಲೇಖನದಲ್ಲಿ ಅಲ್ಪವಿರಾಮ, ಪೂರ್ಣ ವಿರಾಮ ಸರಿಯಾದ ಜಾಗದಲ್ಲಿ ಇರುವುದನ್ನು ಕಂಡಾಗ!**

- **ರವಿಶಂಕರ ಕೆ.ಜಿ., ಬೆಂಗಳೂರು**
ಭಟ್ರೇ, ನೀವು ಬ್ರಾಡ್ ಮೈಂಡೆಡ್ ಅಂತಾರಲ್ಲ?
- **ಬ್ರಾಡ್ ಮೈಂಡೆಡ್ ಎಂಬುದು ಗೊತ್ತಿಲ್ಲ, ಆದ್ರೆ ಅಬ್ರಾಡ್ ಮೈಂಡೆಡ್ ಅಂತೂ ಹೌದು !**

- **ಕರುಣಾಕರ ಮಡಿವಾಳ, ಶಿರಸಿ**
ಭಟ್ರೇ, ಡಿವೋರ್ಸ್ ಲಾಯರ್ ಯಾಕೆ ಮದುವೆಗಳಲ್ಲಿ ನಗ್ತಾ ಇರ್ತಾರೆ?
- **ಇನ್ನೊಬ್ಬ ಹೊಸ ಕಸ್ಟಮರ್ ಸಿಕ್ಕಿದ್ನಲ್ಲ ಅನ್ನೋ ಖುಷಿಗೆ!**

- **ವಿನೋದ ಪಾಟೀಲ, ಮಲ್ಲೇಶ್ವರ**
ಭಟ್ರೇ, ಕೆಲಸಕ್ಕೆ ಸೇರುವ ಮುನ್ನ ಇರುವ ಅನುಭವ ಏನು?
- **ಕೆಲಸ ಮಾಡದೇ ಹೇಗೆ ತಪ್ಪಿಸಿಕೊಳ್ಳಬೇಕು ಎಂಬುದು!**

- **ರವಿ ಹಿರೇಮಠ, ಬೆಳಗಾವಿ**
ಭಟ್ರೇ, ಹೋಟೆಲ್‌ಗೆ ಹೋದಾಗ ಮೆನು ಕಾರ್ಡ್ ಯಾಕೆ ಪೂರ್ತಿ ಓದುತ್ತೇವೆ?
- **ಕೊನೆಗೆ ಆರ್ಡರ್ ಮಾಡೋದು ಮಸಾಲ ದೋಸೆ ಅಂತ ಗೊತ್ತಿದ್ದರೂ, ಬೇರೆ ಐಟಂಗಳ ಬೆಲೆ ನೋಡಿ ನಮಗೆ ನಾವೇ ಸಮಾಧಾನ ಮಾಡಿಕೊಳ್ಳೋಕೆ!**

- **ಜಯಂತ ಶರ್ಮ, ಹಲಸೂರು**
ಭಟ್ರೇ, ಆಫೀಸ್ ಮೀಟಿಂಗ್‌ಗಳು ಯಾಕೆ ಅಷ್ಟು ಉದ್ದ ಇರುತ್ತವೆ?
- **ಕೆಲಸ ಮಾಡದೆ ಟೈಮ್ ಪಾಸ್ ಮಾಡೋದಕ್ಕೆ ಇದಕ್ಕಿಂತ ಅಧಿಕೃತವಾದ ದಾರಿ ಬೇರೆ ಇಲ್ಲವಲ್ಲ!**

- **ಲಕ್ಷ್ಮಣ ಕೊಡಸರ, ಸಿದ್ದಾಪುರ**
ಭಟ್ರೇ, ಗೋಡೆಗಳು ಯಾಕೆ ಪರಸ್ಪರ ಮಾತನಾಡುವುದಿಲ್ಲ?
- **ಯಾಕಂದ್ರೆ, ಅವುಗಳ ಮಧ್ಯೆ ಯಾವಾಗಲೂ ಒಂದಲ್ಲ ಒಂದು 'ಅಡ್ಡಗೋಡೆ' ಇದ್ದೇ ಇರುತ್ತದೆ!**

- **ಚಂದನ್, ಬೆಂಗಳೂರು**
ಭಟ್ರೇ, ಗಡಿಯಾರದಲ್ಲಿ ಮುಳ್ಳುಗಳು ಯಾಕೆ ಯಾವಾಗಲೂ ಓಡುತ್ತಲೇ ಇರುತ್ತವೆ?
- **ಒಂದು ಕಡೆ ನಿಂತರೆ ಎಲ್ಲಿ ಜನ ಅವುಗಳನ್ನು 'ಸೇಲ್' ಹಾಕಿಸಿ ಮಾರಾಟ ಮಾಡಿಬಿಡುತ್ತಾರೋ ಅನ್ನೋ ಭಯಕ್ಕೆ!**

ನಮ್ಮ ಬದುಕನ್ನೂ ಕೃತಕವಾಗಿಸಿದ ಕೃತಕ ಬುದ್ಧಿಮತ್ತೆ !

ಲೋಕಮತ

ಲೋಕೇಶ್ ಕಾಯರ್ಗ
vveditoped@gmail.com

ಯಾರಿಗೂ ಯಾರುಂಟು ಎರವಿನ ಸಂಸಾರ ನೀರ ಮೇಲಣ ಗುಳ್ಳೆ ನಿಜವಲ್ಲ ಹರಿಯೇ !

ಅಂದು ಪುರಂದರದಾಸರು ಹಾಡಿದ್ದನ್ನು ಇಂದು ಖಾಸಗಿ ಕಂಪನಿಯಲ್ಲಿ ಕೆಲಸ ಮಾಡುವ ಉದ್ಯೋಗಿಗಳ ಪರಿಸ್ಥಿತಿಗೆ ಹೋಲಿಸಬಹುದು. ಅದರಲ್ಲೂ ಎರವಲು ಆಧಾರದಲ್ಲಿ (contract basis) ಕೆಲಸ ಮಾಡುವ ಕಾರ್ಪೊರೇಟ್ ಉದ್ಯೋಗಿಗಳ ವಿಚಾರದಲ್ಲಿ ದಾಸರ ಮಾತು ಪದೇ ಪದೆ ನಿಜವಾಗುತ್ತಿದೆ. ಕೃತಕ ಬುದ್ಧಿಮತ್ತೆ, ಆಟೋಮೇಶನ್, ಆರ್ಥಿಕ ಹಿಂಜರಿತದ ನೆಪದಲ್ಲಿ ಪಿಂಕ್ ಸ್ಲಿಪ್ ಪಡೆದು ಪ್ರತಿ ತಿಂಗಳು ಮನೆಗೆ ಮರಳುತ್ತಿರುವ ಸಾವಿರಾರು ಲಕ್ಷಾಂತರ ಐಟಿ ಉದ್ಯೋಗಿಗಳಂತು ಗೊತ್ತಿದ್ದೋ, ಗೊತ್ತಿಲ್ಲದೆಯೋ ದಾಸರ ಮಾತುಗಳನ್ನು ಮೆಲುಕು ಹಾಕುತ್ತಿದ್ದಾರೆ.

ಭಾರತದ ಅದರಲ್ಲೂ ಕರ್ನಾಟಕದ ಮಧ್ಯಮ ವರ್ಗದ ಜನರ ಕನಸುಗಳಿಗೆ ರೆಕ್ಕೆ ನೀಡಿದ್ದ ಐಟಿ ಕ್ಷೇತ್ರದಲ್ಲಿ ಇಂದು ಕೃತಕ ಬುದ್ಧಿಮತ್ತೆಯೆಂಬ ಸುನಾಮಿ ಅಲ್ಲೋಲ ಕಲ್ಲೋಲವನ್ನೇ ಸೃಷ್ಟಿಸಿದೆ. ಇದರ ಜತೆಗೆ ಡೊನಾಲ್ಡ್ ಟ್ರಂಪ್ ಹುಚ್ಚು ಆಡಳಿತಗಾರನ ಹೊಸ ವಲಸೆ ನೀತಿ, ಯುದ್ಧದಾಹ ಮತ್ತು ವಿಸ್ತರಣಾವಾದಿ ಮನಸ್ಥಿತಿ ಇಡೀ ಜಗತ್ತನ್ನು ಕತ್ತಲೆಯ ಕೂಪದತ್ತ ತಳ್ಳುತ್ತಿದೆ. ಅಮೆರಿಕ ಮಾತ್ರವಲ್ಲ ಇಡೀ ಜಗತ್ತಿನ ಕಾರ್ಪೊರೇಟ್ ವಲಯ ಈ ಸರಣಿ ದಾಳಿಗಳಿಂದ ತತ್ತರಿಸಿದೆ. ಅಂತಿಮವಾಗಿ ಈ ಸ್ಥಿತ್ಯಂತರಗಳು ನಮ್ಮೆಲ್ಲರ ಬದುಕನ್ನೂ ತಟ್ಟಿವೆ.

ಅಂತಾರಾಷ್ಟ್ರೀಯ ಟೆಕ್ ದೈತ್ಯ ಒರಾಕಲ್ ಜಾಗತಿಕವಾಗಿ 30,000 ಉದ್ಯೋಗಿಗಳನ್ನು ವಜಾಗೊಳಿಸಲು ನಿರ್ಧರಿಸಿರುವುದು ಕೇವಲ ಒಂದು ಕಂಪನಿಯ ಆರ್ಥಿಕ ಶಿಸ್ತಿನ ಕ್ರಮವಲ್ಲ; ಬದಲಾಗಿ ಇದು ಮುಂಬರುವ ಆರ್ಥಿಕ ಸುನಾಮಿಯ ಮುನ್ಸೂಚನೆ. ಈ ಒಂದು ಕಂಪನಿಯ ನಿರ್ಧಾರದಿಂದ ಭಾರತವೊಂದರಲ್ಲೇ 12,000 ಮಂದಿ ಬೀದಿಪಾಲಾಗಿದ್ದಾರೆ. ಐಟಿ ವಲಯದಿಂದ ಬಂದಿರುವ 2026ರ ಆರಂಭಿಕ ವರದಿಗಳು ಬೆಚ್ಚಿಬೀಳಿಸುವಂತಿವೆ. ಕಳೆದ ಮೂರು ತಿಂಗಳುಗಳಲ್ಲಿ 90 ಸಾವಿರಕ್ಕೂ ಹೆಚ್ಚು ಟೆಕ್ಕಿಗಳು ಕೆಲಸ ಕಳೆದುಕೊಂಡಿದ್ದಾರೆ. ಪ್ರತಿದಿನ ಸರಾಸರಿ 936 ಮಂದಿ ತಮ್ಮ ಉದ್ಯೋಗದ ಗುರುತಿನ ಚೀಟಿಯನ್ನು ಕಚೇರಿಯಲ್ಲೇ ಬಿಟ್ಟು ಹೊರಬರುತ್ತಿದ್ದಾರೆ.

ಈ ಲೇ ಆಫ್ ಐಟಿ ಉದ್ಯೋಗಕ್ಕಷ್ಟೇ ಸೀಮಿತವಾಗಿಲ್ಲ. ಎಲ್ಲ ಕ್ಷೇತ್ರಗಳಲ್ಲೂ 'ಲೇ ಆಫ್ ನೀತಿ' ಸಾಮಾನ್ಯವಾಗಿದೆ. ಕೇವಲ ಮೂರೂವರೆ ದಶಕಗಳ ಹಿಂದೆ ಒಬ್ಬ ವ್ಯಕ್ತಿಗೆ ಉದ್ಯೋಗ ಸಿಕ್ಕಿತೆಂದರೆ ಆತನ ಬದುಕಿಗೆ ಶಾಶ್ವತ ಆಸರೆ ಸಿಕ್ಕಿದೆ ಎಂದು ಅರ್ಥೈಸಲಾಗುತ್ತಿತ್ತು. ಬಿಗಿಯಾದ ಕಾರ್ಮಿಕ ಕಾನೂನುಗಳು ಉದ್ಯೋಗಿಗಳ ಪರವಾಗಿದ್ದವು.

ಸರಕಾರಿ ಉದ್ಯೋಗದಂತೆ ಖಾಸಗಿ ವಲಯದಲ್ಲೂ 'ಉದ್ಯೋಗ ಭದ್ರ' ಎಂಬ ಭಾವನೆ ಇತ್ತು. ಆದರೆ ಜಾಗತೀಕರಣದ ಬಳಿಕ ಉದ್ಯೋಗದ ಸ್ವರೂಪ ಬದಲಾಗಿದೆ. ಖಾಸಗಿರಂಗದ ಉದ್ಯೋಗಿಗಳು ಅತ್ತ ಕಾರ್ಮಿಕನೂ ಅಲ್ಲದ, ಮ್ಯಾನೇಜ್ ಮೆಂಟ್‌ನ ಭಾಗವೂ ಅಲ್ಲದ ತ್ರಿಶಂಕು ಸ್ಥಿತಿಯಲ್ಲಿದ್ದಾರೆ. ಬಹುರಾಷ್ಟ್ರೀಯ ಕಂಪನಿಗಳು ನಮ್ಮ ಕಾರ್ಮಿಕ ಕಾನೂನುಗಳನ್ನು ಪಾಲಿಸುವುದು ಬಿಡಿ, ಈ ನೆಲದ ಸರಕಾರಗಳನ್ನೇ ಲೆಕ್ಕಿಸುವುದಿಲ್ಲ. ಕಾರ್ಪೊರೇಟ್ ಜಗತ್ತಿನ 'ಹೈರ್ ಅಂಡ್ ಫೈರ್' ಎಂಬ ಕರುಣೆಯಿಲ್ಲದ ನೀತಿಗೆ ನಮ್ಮ ಯುವ ಸಮೂಹವೂ ಒಗ್ಗಿಕೊಂಡಿದೆ.

ಒರಾಕಲ್ ಆಗಲಿ, ಮೈಕ್ರೋಸಾಫ್ಟ್ ಆಗಲಿ, ನಮ್ಮದೇ ನೆಲದ ಇನ್ಫೋಸಿಸ್ ಅಥವಾ ಟಿಸಿಎಸ್ ಆಗಲಿ ರಾತ್ರೋರಾತ್ರಿ ಸಾವಿರಾರು ಉದ್ಯೋಗಿಗಳನ್ನು ಮನೆಗೆ ಕಳುಹಿಸಿದರೆ ಸರಕಾರ ಮೂಕ ಪ್ರೇಕ್ಷಕನಾಗಿ ನೋಡುವುದರ ಹೊರತು ಬೇರೇನೂ ಮಾಡಲಾಗದು. ಈ ಕಂಪನಿಗಳೂ ಅಷ್ಟೇ, ಜಗತ್ತಿನ ಯಾವುದೋ ಮೂಲೆಯಲ್ಲಿ ನಡೆಯುವ ವಿದ್ಯಮಾನಗಳು, ತಾಂತ್ರಿಕ ಜಗತ್ತಿನ ಆವಿಷ್ಕಾರಗಳು ಕಂಪನಿಯ ಭವಿಷ್ಯವನ್ನು ಉಜ್ವಲಗೊಳಿಸಬಹುದು, ಇಲ್ಲವೇ ಮಂಕಾಗಿಸಬಹುದು.



ಅದರಲ್ಲೂ ಅಮೆರಿಕದಲ್ಲಿ ನಡೆಯುವ ಪ್ರತಿಯೊಂದು ಬೆಳವಣಿಗೆಯೂ ಭಾರತದ ಐಟಿ ಕಂಪನಿಗಳ ಪಾಲಿಗೆ ನಿರ್ಣಾಯಕ ಎನಿಸುತ್ತವೆ.

ಅಮೆರಿಕದಲ್ಲಿ ಡೊನಾಲ್ಡ್ ಟ್ರಂಪ್ ಎರಡನೇ ಬಾರಿ ಅಧಿಕಾರಕ್ಕೆ ಬಂದಾಗ ಬಹುತೇಕ ಭಾರತೀಯ ಐಟಿ ಉದ್ಯೋಗಿಗಳು ಸಂಭ್ರಮಿಸಿದ್ದರು. ಪ್ರಧಾನಿ ನರೇಂದ್ರ ಮೋದಿ ಅವರ 'ಆಪ್ತ ಗೆಳೆಯ' ಭಾರತೀಯ ಉದ್ಯೋಗಿಗಳ ಪರ ನಿಲುವು ಹೊಂದಬಹುದು. ಗ್ರೀನ್ ಕಾರ್ಡ್ ವೀಸಾ ಸುಲಭವಾಗಿ ಸಿಗಬಹುದೆಂದು ಯೋಚಿಸಿದವರಿಗೆ ಆಘಾತ ಕಾದಿತ್ತು. ತನ್ನ ಎರಡನೇ ಅವಧಿಯಲ್ಲಿ 'ಆಕ್ರಮಣಕಾರಿ ರಾಷ್ಟ್ರೀಯವಾದಿ ನೀತಿ' ಪ್ರದರ್ಶಿಸುತ್ತಿರುವ ಟ್ರಂಪ್, ಜಗತ್ತನ್ನು ಮೂರನೇ ಮಹಾಯುದ್ಧಕ್ಕೆ ತಳ್ಳಲು ಹೊರಟ ಮತ್ತೊಬ್ಬ ಹಿಟ್ಲರ್‌ನಂತೆ ಕಾಣುತ್ತಿದ್ದಾರೆ.

ಅಮೆರಿಕವು ವಿಶ್ವದ ಅತಿದೊಡ್ಡ ಆರ್ಥಿಕ ಶಕ್ತಿಯಾಗಿರುವುದರಿಂದ, ಅಲ್ಲಿನ ಆಂತರಿಕ ನೀತಿಗಳು ಜಾಗತಿಕ ಉದ್ಯೋಗ ಮಾರುಕಟ್ಟೆಯನ್ನು ನಿರ್ಧರಿಸುತ್ತವೆ. ಅಮೆರಿಕದ ಪರಿಷ್ಕೃತ ವಲಸೆ ನೀತಿಗಳು, ಮುಖ್ಯವಾಗಿ ಹೆಚ್-1ಬಿ (ಎ-1ಆ) ವೀಸಾ ನಿಯಮಗಳ ಬಿಗಿಗೊಳಿಸುವಿಕೆ ಭಾರತೀಯ ಐಟಿ ವೃತ್ತಿಪರರಿಗೆ ದೊಡ್ಡ ಹೊಡೆತ ನೀಡಿದೆ. 'ಅಮೆರಿಕನ್ನರಿಗೇ ಉದ್ಯೋಗ' ಎಂಬ ಟ್ರಂಪ್ ಧೋರಣೆಯಿಂದ ಹೊರಗುತ್ತಿಗೆ ಪ್ರಕ್ರಿಯೆ ಕಠಿಣವಾಗಿದೆ. ಹೊಸ ಸುಂಕ ನೀತಿ, ಕೃತಕ ಬುದ್ಧಿಮತ್ತೆ ಮತ್ತು ಆಟೋಮೇಶನ್ ಬಿರುಗಾಳಿಗೆ ದೈತ್ಯ ಕಂಪನಿಗಳ ಲಾಭಾಂಶ ಕುಸಿಯತೊಡಗಿದೆ. ಈ ಕಂಪನಿಗಳು ವೆಚ್ಚ ಕಡಿತಕ್ಕಾಗಿ ತಮ್ಮದೇ ಉದ್ಯೋಗಿಗಳನ್ನು ಕೆಲಸದಿಂದ ತೆಗೆದುಹಾಕುವ ಅನಿವಾರ್ಯತೆಗೆ ಸಿಲುಕಿವೆ.

ಇದರೊಂದಿಗೆ ಇರಾನ್‌ನ ತೈಲ ಸಂಪತ್ತಿನ ಮೇಲೆ ಕಣ್ಣಿಟ್ಟು ಟ್ರಂಪ್ ಆರಂಭಿಸಿದ ಕೊಲ್ಲಿ ಯುದ್ಧ, ಅಮೆರಿಕದ ನಿಯಂತ್ರಣಕ್ಕೂ ಸಿಗದೆ ಮುಂದುವರಿಯುತ್ತಿದೆ. ಕಚ್ಚಾ ತೈಲ ಬೆಲೆ ಏರಿಕೆಯು ಭಾರತದ ಆರ್ಥಿಕತೆಯ ಮೇಲೆ ನೇರ ಪರಿಣಾ ಬೀರಿದೆ. ಸಾರಿಗೆ, ಉತ್ಪಾದನೆ ಮತ್ತು ಸೇವಾ ವಲಯಗಳ ವೆಚ್ಚ ದುಪ್ಪಟ್ಟಾಗಿದೆ. ಯುದ್ಧ ಪೀಡಿತ ಪ್ರದೇಶಗಳಲ್ಲಿ ಹೂಡಿಕೆ ಮಾಡಿದ್ದ ಕಂಪನಿಗಳು ನಷ್ಟ ಅನುಭವಿಸಿ ಉದ್ಯೋಗಿಗಳನ್ನು ಮನೆಗೆ ಕಳುಹಿಸುತ್ತಿವೆ. ಕೊಲ್ಲಿ ರಾಷ್ಟ್ರಗಳಲ್ಲಿ ಕೆಲಸ ಮಾಡುತ್ತಿದ್ದ ನಾಲ್ಕು ಲಕ್ಷಕ್ಕೂ ಭಾರತೀಯರು ಉದ್ಯೋಗ ಕಳೆದುಕೊಂಡು ತಾಯ್ನಾಡಿಗೆ ಮರಳಿದ್ದಾರೆ.

ಕೊಲ್ಲಿ ಯುದ್ಧವು ಮತ್ತೊಮ್ಮೆ ಕೋವಿಡ್ ಕಾಲದ ದುಸ್ಥಿತಿಯನ್ನು ತರುವ ಎಲ್ಲ ಲಕ್ಷಣಗಳು ಕಾಣುತ್ತಿವೆ.

ಇನ್ಫೋಸಿಸ್, ಟಿಸಿಎಸ್, ವಿಪ್ರೋದಂತಹ ದೈತ್ಯ ಕಂಪನಿಗಳಿಂದ ಹಿಡಿದು ನವೋದ್ಯಮಗಳವರೆಗೆ ಎಲ್ಲೆಡೆ ಕಡಿತದ ಪರ್ವ ಶುರುವಾಗಿದೆ. ಬೆಂಗಳೂರು, ಹೈದರಾಬಾದ್, ಪುಣೆಯಂತಹ ನಗರಗಳಲ್ಲಿ ದುಡಿಯುತ್ತಿರುವ ಲಕ್ಷಾಂತರ ಯುವಕ, ಯುವತಿಯರಲ್ಲಿ ಭವಿಷ್ಯದ ಬಗ್ಗೆ ಅನಿಶ್ಚಿತತೆ ಕಾಡುತ್ತಿದೆ. ಈ ನಡುವೆ ನಿನ್ನೆ, ಮೊನ್ನೆವರೆಗೆ ಕೈ ತುಂಬಾ ವೇತನ ಪಡೆಯುತ್ತಿದ್ದವರು ರಾತ್ರೋರಾತ್ರಿ ಕೆಲಸ ಕಳೆದುಕೊಂಡು ಮನೆಯಲ್ಲಿ ಕುಳಿತಿದ್ದಾರೆ. ತಮ್ಮ ಸಂಸಾರ, ಮನೆ ಸಾಲ, ಕಾರು ಸಾಲಗಳ ಕಂತು ಕಟ್ಟಲಾಗದೆ ಮಧ್ಯಮ ವರ್ಗದ ಸಾವಿರಾರು ಕುಟುಬಗಳು ಅಕ್ಷರಶ: ಬೀದಿಗೆ ಬಿದ್ದಿವೆ.

ಉದ್ಯೋಗ ಕಳೆದುಕೊಳ್ಳುವುದು ಕೇವಲ ಆರ್ಥಿಕ ನಷ್ಟವಲ್ಲ, ಅದು ವ್ಯಕ್ತಿಯ ಆತ್ಮವಿಶ್ವಾಸವನ್ನೇ ಕುಗ್ಗಿಸುತ್ತದೆ. ಭಾರತದಂತಹ ದೇಶದಲ್ಲಿ ಉದ್ಯೋಗವು ಸಾಮಾಜಿಕ ಗೌರವದ ಸಂಕೇತವೂ ಹೌದು. ಇದ್ದಕ್ಕಿದ್ದಂತೆ ಕೆಲಸ ಹೋದಾಗ ಯುವಜನತೆ ಖಿನ್ನತೆಗೆ ಒಳಗಾಗುತ್ತಿದ್ದಾರೆ. ಇದು ಕೌಟುಂಬಿಕ ಕಲಹ ಮತ್ತು ಸಾಮಾಜಿಕ ಅಸ್ಥಿರತೆಗೂ ಕಾರಣವಾಗುತ್ತಿದೆ. ದಶಕಗಳ ಕಾಲ ಒಂದು ಸಂಸ್ಥೆಗೆ ತನ್ನ ಶಕ್ತಿ, ಸಮಯ ಮತ್ತು ಬುದ್ಧಿವಂತಿಕೆಯನ್ನು ಧಾರೆ ಎರೆದ ಅನುಭವಿ ಉದ್ಯೋಗಿ ಏಕಾಏಕಿ ಬೀದಿಗೆ ಬಿದ್ದಾಗ, ಅದು ಕೇವಲ ಆ ವ್ಯಕ್ತಿಯ ಆರ್ಥಿಕ ಕುಸಿತವಲ್ಲ, ಬದಲಿಗೆ ಒಂದು ಸಾಮಾಜಿಕ ಮತ್ತು ಮಾನಸಿಕ ದುರಂತ. ಅಮೆರಿಕದ ಕಂಪನಿಯಲ್ಲಿ ಕೆಲಸ ಕಳೆದುಕೊಂಡು ಬೆಂಗಳೂರಿಗೆ ಮರಳಿದ್ದ ಟೆಕ್ಕಿ ಕುಟುಂಬ ಆತ್ಮಹತ್ಯೆಗೆ ಶರಣಾದ ಇತ್ತೀಚಿನ ಘಟನೆ ನಮ್ಮ ಮುಂದಿರುವ ಸಣ್ಣ ಉದಾಹರಣೆ.

ಭಾರತೀಯ ಐಟಿ ವಲಯದಲ್ಲಿ ಸುಮಾರು 60 ಲಕ್ಷ ಮಂದಿ ನೇರ ಉದ್ಯೋಗಗಳಲ್ಲಿದ್ದಾರೆ. ಅಮೆರಿಕವೊಂದರಲ್ಲೇ ಸುಮಾರು 10 ರಿಂದ 12 ಲಕ್ಷ ಭಾರತೀಯ ಐಟಿ ವೃತ್ತಿಪರರು ದುಡಿಯುತ್ತಿದ್ದಾರೆ. ತಜ್ಞರ ಪ್ರಕಾರ, ಐಟಿ ವಲಯದಲ್ಲಿ ಸೃಷ್ಟಿಯಾಗುವ ಪ್ರತಿ ಒಂದು ನೇರ ಉದ್ಯೋಗವು ಸುಮಾರು 3 ರಿಂದ 4 ಪರೋಕ್ಷ ಉದ್ಯೋಗಗಳನ್ನು ಸೃಷ್ಟಿಸುತ್ತದೆ. ಈ ಲೆಕ್ಕಾಚಾರದಂತೆ ಭಾರತದಲ್ಲಿ ಸುಮಾರು 1.5 ಕೋಟಿಯಿಂದ 2 ಕೋಟಿ ಜನರು ಪರೋಕ್ಷವಾಗಿ ಐಟಿ ವಲಯವನ್ನು ಅವಲಂಬಿಸಿದ್ದಾರೆ. ಅಂದರೆ ಮೂರರಿಂದ ನಾಲ್ಕು ಕೋಟಿ ಕುಟುಂಬಗಳು ನೇರವಾಗಿ ಐಟಿ ವಲಯವನ್ನು ಆಶ್ರಯಿಸಿವೆ. ಇಲ್ಲಿ ನಡೆಯುವ ಸಣ್ಣ ಬದಲಾವಣೆ ಕೂಡ ದೇಶದ ಸಾಮಾಜಿಕ ವ್ಯವಸ್ಥೆಯ ಮೇಲೆ ದೊಡ್ಡ ಪರಿಣಾಮ ಬೀರುತ್ತದೆ.

ಕೋವಿಡ್ ನಂತರದಲ್ಲಿ ಸುಮಾರು 7 ಲಕ್ಷದಿಂದ 8 ಲಕ್ಷಕ್ಕೂ ಅಧಿಕ ಐಟಿ ಉದ್ಯೋಗಿಗಳು ಕೆಲಸ ಕಳೆದುಕೊಂಡಿದ್ದಾರೆ. ಜಾಗತಿಕವಾಗಿ ನಡೆಯುವ ಪ್ರತಿ ಲೇ-ಆಫ್‌ನಲ್ಲೂ ಸುಮಾರು ಶೇ. 15ರಿಂದ ಶೇ. 20ರಷ್ಟು ಭಾರತೀಯರೇ ಇರುತ್ತಾರೆ ಎಂದು ಅಂದಾಜಿಸಲಾಗಿದೆ. ಭಾರತದ ಒಳಗಿನ ಐಟಿ ಕಂಪನಿಗಳು ಮತ್ತು ಸ್ಟಾರ್ಟ್‌ಅಪ್‌ಗಳಲ್ಲಿ ಕಳೆದ 5 ವರ್ಷಗಳಲ್ಲಿ ಸುಮಾರು 1.5 ಲಕ್ಷದಿಂದ 2 ಲಕ್ಷ ಮಂದಿ ನೇರವಾಗಿ ಕೆಲಸ ಕಳೆದುಕೊಂಡಿದ್ದಾರೆ.

ಭಾರತದ ಒಟ್ಟು ಐಟಿ ಉದ್ಯೋಗಿಗಳಲ್ಲಿ ಸುಮಾರು ಮೂರನೇ ಒಂದರಷ್ಟು ಮಂದಿ ಬೆಂಗಳೂರಿನಲ್ಲಿದ್ದಾರೆ. ಹೀಗಾಗಿ, ಕೆಲಸ ಕಳೆದುಕೊಂಡವರಲ್ಲಿ ಕರ್ನಾಟಕದವರೇ ಸಿಂಹಪಾಲು. ಇತ್ತೀಚಿನ ವರದಿಗಳ ಪ್ರಕಾರ, ಕಳೆದ 5 ವರ್ಷಗಳಲ್ಲಿ ಕರ್ನಾಟಕದಲ್ಲಿ ಸುಮಾರು 5,000ಕ್ಕೂ ಹೆಚ್ಚು ಐಟಿ ಕಂಪನಿಗಳು ಬಾಗಿಲು ಮುಚ್ಚಿವೆ. ಕೆಲಸ ಕಳೆದುಕೊಂಡವರಲ್ಲಿ 10-15 ವರ್ಷ ಅನುಭವವಿರುವವರು ಹೆಚ್ಚು ಸಂತ್ರಸ್ತರಾಗಿದ್ದಾರೆ.

ಜಾಗತಿಕ ವಿದ್ಯಮಾನಗಳು ನಮ್ಮ ನಿಯಂತ್ರಣದಲ್ಲಿ ಇಲ್ಲದಿರಬಹುದು, ಆದರೆ ನಮ್ಮ ಆರ್ಥಿಕ ನೀತಿಗಳು ನಮ್ಮ ನಿರ್ಧಾರ. 'ಹೈರ್ ಅಂಡ್ ಫೈರ್' ಎಂಬುದು ಕಂಪನಿಗಳ ಲಾಭಕ್ಕೆ ಪೂರಕವಾಗಿರಬಹುದು, ಆದರೆ ಅದು ಮಾನವೀಯತೆಯ ದೃಷ್ಟಿಯಿಂದ ಮಾರಕ. ಕೃತಕ ಬುದ್ಧಿಮತ್ತೆ ಮತ್ತು ಆಟೊಮೇಷನ್‌ನ ಅಬ್ಬರದ ನಡುವೆ ಮಾನವ ಸಂಪನ್ಮೂಲವನ್ನು ಕೇವಲ 'ವೆಚ್ಚ' ಎಂದು ಪರಿಗಣಿಸುವ ಕಂಪನಿಗಳ ಧೋರಣೆಯೂ ಬದಲಾಗಬೇಕಿದೆ. ಸರಕಾರ, ಕಾರ್ಪೊರೇಟ್ ಕಂಪನಿಗಳು ಮನಬಂದಂತೆ ಉದ್ಯೋಗಿಗಳನ್ನು ತೆಗೆಯದಂತೆ ಕಟ್ಟುನಿಟ್ಟಾದ ಕಾರ್ಮಿಕ ಕಾನೂನುಗಳನ್ನು ಜಾರಿಗೆ ತರಬೇಕು.

ಹೂಡಿಕೆಯನ್ನು ಆಕರ್ಷಿಸುವುದಷ್ಟೇ ಸರಕಾರದ ಕೆಲಸವಲ್ಲ. ಕೆಲಸ ಕಳೆದುಕೊಂಡ ನುರಿತ ಉದ್ಯೋಗಿಗಳಿಗೆ ಮರು-ತರಬೇತಿ ನೀಡುವ ಮತ್ತು ಅವರ ಹಿತರಕ್ಷಣೆ ಮಾಡುವ ನೀತಿಗಳನ್ನು ರೂಪಿಸಬೇಕಿದೆ. ಉದ್ಯೋಗ ಕಳೆದುಕೊಂಡವರಿಗೆ ಸಾಂತ್ವನ ಹೇಳುವ, ನಿರುದ್ಯೋಗ ಭತ್ಯೆ ಅಥವಾ ಪರ್ಯಾಯ ವ್ಯವಸ್ಥೆ ಕಲ್ಪಿಸುವತ್ತ ನಮ್ಮ ಸರಕಾರಗಳು ಯೋಚಿಸಬೇಕಾಗಿದೆ.

ಮಕ್ಕಳು ಡ್ರಗ್ಸ್ ಚಟಕ್ಕೆ ಬಲಿಯಾಗದಂತೆ ತಡೆಯುವುದು ಹೇಗೆ?

ನಾಶದ ನೋಟ

ಡಾ. ನಾಗರಾಜ ಶೆಣೈ
vveditoped@gmail.com

ಅದು 90ರ ದಶಕದ ಕಾಲ. ನಾನು ಕಲಿಸುತ್ತಿದ್ದ ಆ ಎಂಜಿನಿಯರಿಂಗ್ ಕಾಲೇಜಿನಲ್ಲಿ ದೇಶದ ಎಲ್ಲ ಮೂಲೆಗಳಿಂದ ಬಂದ ವಿದ್ಯಾರ್ಥಿಗಳು ಕಲಿಯುತ್ತಿದ್ದರು. ಅಲ್ಲಿ ವಿದ್ಯಾರ್ಥಿಗಳ ವರ್ತನೆ ಮತ್ತು ಹವ್ಯಾಸಗಳ ಬಗ್ಗೆ, ಚಟಗಳ ಬಗ್ಗೆ ನಾವು ತೀವ್ರ ನಿಗಾವಹಿಸುತ್ತಿದ್ದೆವು. ಅಂಥ ಸಮಯದಲ್ಲಿ ನಮಗೊಂದು ಆಘಾತಕಾರಿ ಮಾಹಿತಿ ಬಂದಿತ್ತು. ನಮ್ಮ ಒಬ್ಬ ವಿದ್ಯಾರ್ಥಿ ಡ್ರಗ್ಸ್‌ನ ಚಟಕ್ಕೆ ದಾಸನಾಗಿದ್ದ. ಆ ಸಮಯದಲ್ಲಿ ಇದೊಂದು ಅಪರೂಪದಲ್ಲಿ 'ಅಪರೂಪದ' ಸಂಗತಿಯಾಗಿತ್ತು. ಏಕೆಂದರೆ ಆಗ ತೀರಾ ಕೆಲವು ವಿದ್ಯಾರ್ಥಿಗಳು, ಬೀಡಿ ಸಿಗರೇಟುಗಳನ್ನು, ಅದೂ ಸಹ ಕದ್ದು ಮುಚ್ಚಿ ಸೇದಿಕೊಂಡು ಕಾಲೇಜಿಗೆ ಬರುತ್ತಿದ್ದರು. ಆದರೂ ಶಿಕ್ಷಕರೊಂದಿಗೆ ಮಾತನಾಡುವಾಗ ಅದರ ವಾಸನೆ ಬಂದರೆ ಅವರಿಗೆ ಹಿಗ್ಗಾಮುಗ್ಗಾ ಬೈದು ಛೀಮಾರಿ ಹಾಕುತ್ತಿದ್ದೆವು. ಹೀಗಾಗಿ ಅವರೂ ಜಾಣತನ ತೋರಿ, ನಮ್ಮೊಂದಿಗೆ ಮಾತಾಡಲು ಬರುವಾಗ, ಘಾಟು ವಾಸನೆಯ ಪಾನ್ ಮಸಾಲಗಳನ್ನು ಬಾಯಲ್ಲಿ ಹಾಕಿಕೊಂಡು ಬರುತ್ತಿದ್ದರು. ಇಂಥ ಸಮಯದಲ್ಲಿ ವಿದ್ಯಾರ್ಥಿಯೊಬ್ಬ ಏಕಾಏಕಿ ಡ್ರಗ್ಸ್ ಚಟಕ್ಕೆ ಬಿದ್ದಿದ್ದಾನೆಂದರೆ ನಮಗೆ ನಿಜಕ್ಕೂ ಆತಂಕವಾಗಿತ್ತು. ವಿದ್ಯಾರ್ಥಿಯನ್ನು ಕರೆದು ವಿಚಾರಿಸಿದರೆ ಆತ ಸುಮ್ಮನೆ ತಲೆ ತಗ್ಗಿಸಿ ನಿಂತನೇ ವಿನಃ ಅವನಿಂದ ಏನೂ ಮಾಹಿತಿ ಸಿಗಲಿಲ್ಲ. ಇದೊಂದು ಗಂಭೀರ ಸ್ವರೂಪದ ಪ್ರಕರಣವಾಗಿರುವುದರಿಂದ ಮುಂದಿನ ಕ್ರಮಕ್ಕೆ ಮುಂದಾಗಲು ಅವನ ತಂದೆಯನ್ನು ಟೆಲಿಗ್ರಾಂ ಮೆಸೇಜ್ ಮೂಲಕ ಕರೆಸಿ ಮಾಹಿತಿ ನೀಡುವ ಮತ್ತು ವಿಚಾರಿಸುವ ನಿರ್ಧಾರ ಮಾಡಲಾಯಿತು. ನಮ್ಮೆಲ್ಲರ ಉದ್ದೇಶ ಇಂಥದೊಂದು ಪ್ರಕರಣ ಇನ್ನೆಂದೂ ಕಾಲೇಜಿನಲ್ಲಿ ಮರುಕಳಿಸದಂತೆ ನೋಡಿಕೊಳ್ಳುವುದಾಗಿತ್ತು. ಅದರಂತೆ ಕಲ್ಕತ್ತಾದಿಂದ ಅವನ ತಂದೆ ಇಲ್ಲಿ ಬಂದು ನಮ್ಮನ್ನು ಭೇಟಿಯಾದರು. ಪಶ್ಚಿಮ ಬಂಗಾಳದಲ್ಲಿ ಅವರೊಬ್ಬ ದೊಡ್ಡ ಬಿಜಿನೆಸ್‌ಮ್ಯಾನ್ ಆಗಿದ್ದರು. ಅವರಿಂದ ಅವರ ಮಗನ ಬಗ್ಗೆ ಅನೇಕ ಮಾಹಿತಿಗಳನ್ನು ವಿಚಾರಿಸಿ ತಿಳಿದುಕೊಂಡೆವು. ಆದರೂ ಆತನು ಚಟಕ್ಕೆ ಅಂಟಿಕೊಂಡಿದುದರ ನಿಖರವಾದ ಕಾರಣವು ತಿಳಿಯಲಿಲ್ಲ.

ಆಗಲೇ ನಾನವರಿಗೆ ಒಂದು ಪ್ರಶ್ನೆ ಕೇಳಿದೆ, ನಿಮ್ಮ ಮಗನಿಗೆ ಪ್ರತಿ ತಿಂಗಳು ಖರ್ಚಿಗೆ ಅಂತ ಎಷ್ಟು ಹಣ ಕಳುಹಿಸಿ ಕೊಡುತ್ತೀರಿ? ಆಗೆಲ್ಲ ಇಂಟರ್‌ನೆಟ್ ಬ್ಯಾಂಕಿಂಗ್‌ಗಳು ಇರಲಿಲ್ಲ, ಮೊಬೈಲ್‌ಫೋನು ಸಹ ಬಂದಿರಲಿಲ್ಲ. ಅವರು ಹೇಳಿದರು. ಪ್ರತಿ ತಿಂಗಳು ಅಂತೇನೂ ನಾನು ಕಳಿಸುವುದಿಲ್ಲ. ನನ್ನ ವ್ಯವಹಾರಕ್ಕಾಗಿ ಸದಾ ಓಡಾಡುತ್ತಿರುತ್ತೇನೆ. ಅವನಿಗೆ ಹಣ ಬೇಕಾದಾಗ ನನ್ನನ್ನು ಸಂಪರ್ಕಿಸುವುದು ಕಷ್ಟ. ಹೀಗಾಗಿ ಒಂದೇ ಸಲ ನಾನು ಹಣವನ್ನು ಅವನ ಅಕೌಂಟಿಗೆ ಜಮಾ ಮಾಡಿರುತ್ತೇನೆ. ಅದು ಖಾಲಿಯಾಗತೊಡಗಿದಾಗ ಅವನು ನನಗೆ ಕಾಗದ ಬರೆದು ತಿಳಿಸಿದರೆ ಮತ್ತೆ ಡಿಡಿ ಕಳಿಸಿ ಕೊಡುತ್ತೇನೆ. ಸರಿ, ಹಾಗಾದರೆ ಕಳೆದ ಸಲ ಎಷ್ಟು ಹಣ ಕಳಿಸಿದ್ದೀರಿ? ಸಾಬ್, ದೋ ಲಾಖ್ ರುಪಿಯಾ (2 ಲಕ್ಷ ರೂಪಾಯಿ) ನಾವೆಲ್ಲ ಅಕ್ಷರಶಃ ಬೆಚ್ಚಿಬಿದ್ದೆವು. ನಮ್ಮಲ್ಲಿ ಆಗ ಯಾವ ಪ್ರೊಫೆಸರ್ ಸಂಬಳವೂ 10,000 ರೂಪಾಯಿ ಮೀರಿರಲಿಲ್ಲ, ಅಂದರೆ ನಮಗೆಲ್ಲ, ಹೆಂಡತಿ ಮಕ್ಕಳ ಸಹಿತದ ಕುಟುಂಬ ಸಾಕಲು ಬೇಕಾಗುವ ಹಣದ 20 ಪಟ್ಟು ಹಣ ವಿದ್ಯಾರ್ಥಿಯೊಬ್ಬನ ಖಾತೆಯಲ್ಲಿ ಬಂದು ಕೂತಿತ್ತು. ಅದರ ಅರ್ಥ, ಅವನ ಅಗತ್ಯದ ಅದೆಷ್ಟೋ ಪಾಲು ಹೆಚ್ಚಿನ ಹಣ, ಅವನ ಯಾವುದೇ ಶ್ರಮವೂ ಇಲ್ಲದೆ, ಅಷ್ಟು ಹಣವಿತ್ತು. ಹಾಗಿದ್ದ ಮೇಲೆ ಅದು ಡ್ರಗ್ಸ್‌ನಂತಹ ವ್ಯಸನಗಳಿಗಲ್ಲದೆ ಇನ್ಯಾವುದಕ್ಕೆ ಖರ್ಚಾದೀತು? ಈ ಘಟನೆ ನನಗೆ ವಾಸ್ತವದ ಪರಿಚಯ ಮಾಡಿಸಿತು. ಎಲ್ಲ ದುಶ್ಚಟಗಳ ಮೂಲ ಮಕ್ಕಳಿಗೆ ನಾವು ಪ್ರಶ್ನಿಸದೆ, ಲೆಕ್ಕ ಕೇಳದೆ, ಅನಿಯಂತ್ರಿತವಾಗಿ ನೀಡುವ ಹಣದಲ್ಲಿದೆ. ಹಣವೇ ಎಲ್ಲ ದುರಭ್ಯಾಸಗಳತ್ತ ಮಕ್ಕಳನ್ನು ಸೆಳೆಯುತ್ತದೆ. ಹೀಗಾಗಿ ತಂದೆ ತಾಯಿಯಂದಿರು ಅನುಸರಿಸಬೇಕಾದ ಮೊಟ್ಟಮೊದಲ ನಿಯಮವೆಂದರೆ ಮಕ್ಕಳಿಗೆ ನೀಡುವ ಹಣದ ಮೇಲಿನ ಸಂಪೂರ್ಣ ನಿಯಂತ್ರಣ. ಮೇಲಿನ ಘಟನೆ ಆಗಿನ ಸ್ಥಿತಿಯಾದರೆ ಈಗಲೂ ಪರಿಸ್ಥಿತಿ ತೀರಾ ಭಿನ್ನವಾಗಿಯೇನಿಲ್ಲ, ಈಗ ಬಯಸಿದಾಗ ಕ್ಷಣಾರ್ಧದಲ್ಲಿ ಮಕ್ಕಳಿಗೆ ಹಣ ಕಳಿಸುವ ವ್ಯವಸ್ಥೆ ಇರುವಾಗಲೂ ಸಹ, ಅನೇಕ ತಂದೆ ತಾಯಂದಿರು ಅಗತ್ಯಕ್ಕಿಂತ ಬಹಳ ಹೆಚ್ಚು ಹಣವನ್ನು ಮಕ್ಕಳ ಅಕೌಂಟುಗಳಲ್ಲಿ ತುಂಬಿರುತ್ತಾರೆ. ತಾವು ಓದುವಾಗ ದುಡ್ಡಿಲ್ಲದೆ ಪಟ್ಟ ಸಂಕಟಗಳನ್ನು ನೆನೆಸಿಕೊಂಡು, ತಮ್ಮ ಮಕ್ಕಳಿಗೆ ಆ ಕಷ್ಟಗಳು ಇರಬಾರದೆಂದೋ, ನಾವು ಇಷ್ಟೆಲ್ಲ ಹಣ ಸಂಪಾದನೆ ಮಾಡುತ್ತಿರುವುದು ಇನ್ಯಾರಿಗೆಂದೋ, ಮಕ್ಕಳೊಂದಿಗೆ ಸಮಯ ಕಳೆಯಲಾಗದ ಅಸಹಾಯಕತೆಯ ಅಪರಾಧಿಭಾವದಿಂದ ಹೊರಬರಲೋ, ಮಕ್ಕಳಿಗೆ ತಮ್ಮ ಪ್ರೀತಿಯನ್ನು ವ್ಯಕ್ತಪಡಿಸುವ ವಿಧಾನವಾಗಿಯೋ, ಅವರ ಜೇಬುಗಳನ್ನು ಅಗತ್ಯಕ್ಕಿಂತ ಹೆಚ್ಚು ಹಣದಿಂದ ತುಂಬಿರುತ್ತಾರೆ. ಇಂಥ ಮಕ್ಕಳನ್ನು ನೋಡಿದ ಅವರ ಕೆಲವು ಮಧ್ಯಮ ವರ್ಗದ ಅಥವಾ ಕೆಳ ವರ್ಗದ ಸಹಪಾಠಿಗಳು ಸಹ ತಮ್ಮ ಮನೆಗಳಲ್ಲಿ ಪುಸ್ತಕಗಳಿಗೆ, ಉಪಕರಣಗಳಿಗೆ, ಲ್ಯಾಬ್‌ಗಳಿಗೆ, ಪ್ರಾಜೆಕ್ಟ್‌ಗಳಿಗೆ, ಸ್ಪೆಷಲ್ ಕೋರ್ಸುಗಳಿಗೆ, ಅಂತೆಲ್ಲ ದೊಡ್ಡದೊಂದು ಪಟ್ಟಿ ಕೊಟ್ಟು ತಮ್ಮ ಮನೆಗಳಿಂದ ದುಡ್ಡು ತೆಗೆದುಕೊಳ್ಳುತ್ತಾರೆ. ಎಲ್ಲ ತಂದೆ ತಾಯಿಯಂದಿರು ಒಂದು ಮಾತನ್ನು ನೆನಪಿಡಬೇಕು ಕಡಿಮೆ ಹಣ ಯಾರನ್ನೂ ಕೆಡಿಸಿಲ್ಲ; ಆದರೆ ಅತಿಯಾದ ಹಣ ಬಹಳಷ್ಟು ವಿದ್ಯಾರ್ಥಿ ಗಳನ್ನು ಹಾಳು ಮಾಡಿದೆ. ಈ ಸಂದರ್ಭದಲ್ಲಿ ಒಂದು ವಿಶೇಷ ಘಟನೆ ನೆನಪಿಗೆ ಬರುತ್ತದೆ. ಜೆನಿಫರ್ ಕೇಪ್ರಿಯಾಟಿ ಎಂಬಾಕೆ ಟೆನ್ನಿಸ್ ಆಟದಲ್ಲಿ ಒಮ್ಮೆ ಅಮೆರಿಕದ ಭವಿಷ್ಯದ ಭರವಸೆ ಎಂದು ಶ್ಲಾಘಿಸಲ್ಪಟ್ಟವಳು. ಮಹಾನ್ ಟೆನ್ನಿಸ್ ಆಟಗಾರ್ತಿ ಮಾರ್ಟಿನಾ ನವ್ರಾಟಿಲೋವಗೆ ಸಂದರ್ಶನ ಒಂದರಲ್ಲಿ ನಿಮ್ಮ ದೃಷ್ಟಿಯಲ್ಲಿ ಮುಂದಿನ ಮಾರ್ಟಿನಾ ನವ್ರಾಟಿಲೋವ ಯಾರು ಎಂಬ ಪ್ರಶ್ನೆಗೆ ಆಕೆ ನೀಡಿದ ಉತ್ತರ ಜೆನಿಫರ್ ಕೇಪ್ರಿಯಾಟಿ. 14ನೇ ವಯಸ್ಸಿಗೆ ವೃತ್ತಿಪರ ಆಟಗಾರ್ತಿಯಾದ ಆಕೆ ಮುಂದೆ ಎಳೆಯ ವಯಸ್ಸಿನಲ್ಲೇ ಅನೇಕ ದಿಗ್ಗಜರನ್ನು ಸೋಲಿಸಿ, ಟೂರ್ನಮೆಂಟ್‌ಗಳನ್ನು ಗೆದ್ದು ಮಿಲಿಯನ್ ಗಟ್ಟಲೆ ಹಣ ಸಂಪಾದಿಸಿ ದಳು. ನಂತರ ಅಚಾನಕ್ಕಾಗಿ ಆಕೆ ಒಂದೊಂದೇ ಪೊಲೀಸ್ ಪ್ರಕರಣ ಗಳಲ್ಲಿ ದಾಖಲಾದಳು. ತಪ್ಪು ದಾರಿಯ ಸ್ನೇಹಿತರ ಜತೆಗೂಡಿ ಆಕೆ ಡ್ರಗ್ಸ್ ಚಟಕ್ಕೆ ಬಲಿಯಾದಳು. ಅಂಗಡಿಗಳ ಕಳ್ಳತನದಂತಹ ಚಟುವಟಿಕೆಗಳಲ್ಲಿ ಸಿಕ್ಕಿಬಿದ್ದಳು. ಕಡೆಯಲ್ಲಿ ಪೊಲೀಸರಿಂದ ಬಂಧನಕ್ಕೂ ಒಳಗಾದಳು.

ಆಗ ಟೆನಿಸ್‌ನ ಮತ್ತೊಬ್ಬ ಮಹಾನ್ ತಾರೆ ಜಾನ್ ಮೆಕೆನ್ರೋ ಈಕೆಯನ್ನು ಉಲ್ಲೇಖಿಸಿ ಹೇಳಿದ್ದರು, ವೃತ್ತಿಪರ ಟೆನಿಸ್ ಪ್ರವೇಶಕ್ಕೆ ಕನಿಷ್ಠ ವಯಸ್ಸು ನಿಗದಿಪಡಿಸಬೇಕು. ತೀರಾ ಚಿಕ್ಕವರಿಗೆ ಇಲ್ಲಿ ಪ್ರವೇಶ ವಿರಬಾರದು. ಆದರೆ, ಸ್ವತಃ ಜಾನ್ ಮೆಕೆನ್ರೋ ತಮ್ಮ ಮುಂಗೋಪಿ ಮತ್ತು ಜಗಳಗಂಟ ವ್ಯಕ್ತಿತ್ವದಿಂದಾಗಿ ಬ್ಯಾಡ್ ಬಾಯ್ ಎಂಬ ಕುಖ್ಯಾತಿಯನ್ನು ಪಡೆದಿದ್ದರು. ಹೀಗಾಗಿ ಅವರ ಮಾತನ್ನು ಯಾರು ಗಂಭೀರವಾಗಿ ಪರಿಗಣಿಸಲೇ ಇಲ್ಲ. ಆದರೆ, ಅವರು ತಮ್ಮ ಮಾತಿಗೆ ಕೊಟ್ಟ ವಿವರಣೆ ಗಮನಾರ್ಹವಾಗಿತ್ತು. ಹೊರಗೆ ಒಂದು ನೂರು ಡಾಲರುಗಳಿಸುವುದು ಎಷ್ಟು ಕಷ್ಟ ಎಂಬುದರ ಪರಿವೆಯೇ ಇಲ್ಲದವರ ಕೈಗೆ ಮಿಲಿಯನ್‌ಗಟ್ಟಲೆ ಡಾಲರ್ ಬಂದರೆ ಇನ್ನೇನಾಗುತ್ತದೆ?

ಇದನ್ನು ನಮ್ಮ ತಂದೆ ತಾಯಿಯರು ಗಮನಿಸಬೇಕು. ಮೇಲಿನ ಉದಾಹರಣೆ, ಸ್ವಂತ ಪರಿಶ್ರಮದ ಹಣದ ಕುರಿತಾದದ್ದು. ಆದರೆ ಮಕ್ಕಳಿಗೆ ನೀವು ನಿಮ್ಮ ಪ್ರೀತಿಯನ್ನು ವ್ಯಕ್ತಪಡಿಸಲು ವರ್ಷಗಟ್ಟಲೆಯ ನಿಮ್ಮ ಕಠಿಣ ಪರಿಶ್ರಮದ ಹಣವನ್ನು ಹಾಗೆ ಎತ್ತಿಕೊಡುತ್ತೀರಿ. ಆದರೆ ಅವರಿಗೆ ಆ ಹಣದ ಬೆಲೆಯ ಪರಿವೆಯೇ ಇರುವುದಿಲ್ಲ. ಚಿಕ್ಕವರಿದ್ದಾಗ ಐಸ್ ಕ್ರೀಮ್ ಚಾಕಲೇಟ್‌ಗಳನ್ನು ಖರೀದಿಸಿದಷ್ಟೇ ಸಹಜವಾಗಿ ಅವರು ಡ್ರಗ್ಸ್ ನಂತಹ ದುಶ್ಚಟಗಳನ್ನು ಖರೀದಿಸುತ್ತಾರೆ.

ಡ್ರಗ್ಸ್ ನ ಚಟ ನಮ್ಮ ವಿದ್ಯಾರ್ಥಿಗಳ ಹಣ, ಸಮಯ, ಶೈಕ್ಷಣಿಕ ಜೀವನವಷ್ಟೇ ಅಲ್ಲ, ಅವರ ದೈಹಿಕ ಆರೋಗ್ಯ, ಮಾನಸಿಕ ಸ್ಥಿತಿ ಎಲ್ಲವನ್ನು ಇನ್ನಿಲ್ಲದಷ್ಟು ಹಾಳುಮಾಡುತ್ತದೆ. ಅಷ್ಟೇ ಅಲ್ಲ, ಅವರ ಪ್ರತಿಷ್ಠೆ, ಭವಿಷ್ಯ ಮತ್ತು ಒಟ್ಟಾರೆ ಜೀವನಕ್ಕೆ ಅತ್ಯಂತ ಮಾರಕ. ಕೆಲವೊಂದು ಪ್ರಕರಣಗಳಲ್ಲಂತೂ ಇದು ಆತ್ಮಹತ್ಯೆಗಿಂತಲೂ ಭಯಾನಕ! ಆತ್ಮಹತ್ಯೆ ಒಂದೇ ಸಲಕ್ಕೆ ಕೊಂದು ಹಾಕಿದರೆ ಈ ಅಭ್ಯಾಸ ವ್ಯಕ್ತಿಯನ್ನು ಇಂಚಿಂಚಾಗಿ ಸಾಯಿಸುತ್ತ ಹೋಗುತ್ತದೆ. ಹೀಗಾಗಿ, ಒಂದು ಕ್ಷಣದ ಆನಂದಕ್ಕಾಗಿ, ಕುತೂಹಲಕ್ಕಾಗಿ, ಯಾರೂ ನಿಮ್ಮ ಜೀವನವನ್ನು ಈ ಅಭ್ಯಾಸಕ್ಕೆ ಬಲಿಗೊಡಬೇಡಿ.

ಹಿಂದೊಮ್ಮೆ ಅತ್ಯಂತ ಅಪರೂಪವಾಗಿದ್ದ, ಕೇವಲ 'ಪ್ರತಿಷ್ಠಿತ' ಕಾಲೇಜುಗಳಿಗೆ ಮಾತ್ರ ಮೀಸಲಾಗಿದ್ದ ಡ್ರಗ್ಸ್‌ನ ಈ ಪಿಡುಗು ಈಗ ಎಲ್ಲ ಸಾಮಾನ್ಯ ವಿದ್ಯಾಸಂಸ್ಥೆಗಳಿಗೂ ಕಾಲಿಟ್ಟಿದೆ. ಚಟಗಳಲ್ಲಿ ಅತ್ಯಂತ ಘಾತಕವಾಗಿರುವ ಈ ಡ್ರಗ್ಸ್‌ನ ಅಭ್ಯಾಸ ವ್ಯಕ್ತಿಯನ್ನು ಒಂದು ಜೀವಂತ ಶವವನ್ನಾಗಿ ಮಾರ್ಪಡಿಸಬಲ್ಲದು! ಈ ಚಟದ ಸುಳಿಯೊಳಗೆ ಸಾಮಾನ್ಯವಾಗಿ ಒಬ್ಬ ವಿದ್ಯಾರ್ಥಿಯನ್ನು ಅವರ ಪರಿಚಯದವರ ಮೂಲಕ ಮೋಜಿಗಾಗಿ ಮತ್ತು ಮೊದಮೊದಲು ಉಚಿತವಾಗಿ ಎಳೆದು ತರಲಾಗುತ್ತದೆ. ವಿದ್ಯಾರ್ಥಿಗಳೂ ಸಹ, ಆರಂಭದಲ್ಲಿ ಇದರೊಳಗಡೆ ಕುತೂಹಲಕ್ಕಾಗಿ ಅಥವಾ ಸ್ನೇಹಿತರ ಬಲವಂತಕ್ಕಾಗಿ ಪ್ರವೇಶಿಸುತ್ತಾರೆ. ಆದರೆ, ತದನಂತರ ಅದರೊಳಗಡೆಯಿಂದ ಹೊರಬರುವ ದಾರಿ ಕಾಣದೆ ಅಲ್ಲಿಯೇ ಬಂಧಿಯಾಗುತ್ತಾರೆ.

ಡ್ರಗ್ಸ್ ನಂತಹ ದುಶ್ಚಟ ತಡೆಯಲು ಉಪಾಯವೇನು? ಅದು ತುಂಬ ಸರಳ. ಪೋಷಕರು ಅಗತ್ಯ ಮೀರಿ ಯಾವುದೇ ಹಣವನ್ನು ಮಕ್ಕಳಿಗೆ ಕೊಡಬೇಡಿ. ಇದನ್ನು ಮಕ್ಕಳೆಡೆಗೆ ಅಪನಂಬಿಕೆಯಂತೆಯೋ, ಅವಮಾನದಂತೆಯೋ ಯೋಚಿಸಲು ಹೋಗಲೇಬೇಡಿ. ಅಂತಹ ಯೋಚನೆ ನಿಮ್ಮ ತಲೆಯಲ್ಲಿ ಸಣ್ಣಗೆ ಸುಳಿದರೂ ಸಾಕು, ಅದು ನಿಮ್ಮ ಮುಖಭಾವದಲ್ಲಿ, ನಿಮ್ಮ ಮಾತಿನಲ್ಲಿ, ವ್ಯಕ್ತವಾಗುತ್ತದೆ.

ಹಿಂದಿನ ತಲೆಮಾರುಗಳಲ್ಲಿ ಡ್ರಗ್ಸ್ ಇಷ್ಟೊಂದು ವ್ಯಾಪಕವಾಗಿ ಇಲ್ಲದಿರುವುದಕ್ಕೆ ಕಾರಣ, ಆಗ ತಂದೆ ತಾಯಿಗಳು ಮಕ್ಕಳಿಗೆ ಅನಿರ್ಬಂಧಿತವಾಗಿ ಹಣ ನೀಡುತ್ತಿಲ್ಲದೆ ಇದ್ದುದು ಒಂದು ಕಾರಣವಾದರೆ, ಆಗಿನ ಶಿಕ್ಷಕ ಸಮುದಾಯ ತಪ್ಪು ದಾರಿ ತುಳಿದ ವಿದ್ಯಾರ್ಥಿಗಳಿಗೆ ನಿರ್ದಾಕ್ಷಿಣ್ಯವಾಗಿ ಕಠಿಣ ದಂಡ ಪ್ರಯೋಗ ಮಾಡುತ್ತಿದ್ದದ್ದು ಅದಕ್ಕಿಂತ ಪ್ರಮುಖ ಕಾರಣವಾಗಿತ್ತು. ತಂದೆ ತಾಯಿಗಳಿಗಿಂತ ಹೆಚ್ಚಾಗಿದ್ದ ಶಿಕ್ಷಕರೆಡೆಗಿನ ಆ ಭಯ, ಕ್ಲಾಸಿನ ಒಳಗಷ್ಟೇ ಅಲ್ಲ, ಹೊರಗೂ ಕೂಡ, ವಿದ್ಯಾರ್ಥಿಗಳ ಸಮೂಹವನ್ನು ದಾರಿ ತಪ್ಪದಂತೆ ನೋಡಿಕೊಳ್ಳುತ್ತಿತ್ತು. ಆದರೆ, ಸದ್ಯದ ಕಾಲದಲ್ಲಿ, ಸರಿಯೋ-ತಪ್ಪೋ, ಶಿಕ್ಷಕರಿಂದ ಆ ಶಿಕ್ಷೆಯ ಅಧಿಕಾರವನ್ನೇ ನಾವು ಕಿತ್ತು ಹಾಕಿ, ಗುರು-ಶಿಷ್ಯರ ಸಂಬಂಧವನ್ನು ಪಾಠ ನಡೆಯುವ ಆ ಒಂದು ಗಂಟೆಯ ಮಟ್ಟಿಗೆ ಮಾತ್ರ ಸೀಮಿತಗೊಳಿಸಿಬಿಟ್ಟಿದ್ದೇವೆ.

ಇನ್ನು ಪೋಷಕರ ಪಾತ್ರದ ಬಗ್ಗೆ ನೋಡುವುದಾದರೆ, ಬಹುತೇಕ ಸಂದರ್ಭಗಳಲ್ಲಿ, ಮಕ್ಕಳಿಗೆ ಅತಿಯಾದ ಹಣ ನೀಡುವ ಸಿರಿವಂತ ತಂದೆ ತಾಯಂದಿರು, ಮಕ್ಕಳ ಚಟುವಟಿಕೆಗಳ ಕುರಿತಾದ ಚರ್ಚೆಯನ್ನು ಅವರೊಂದಿಗೆ ಮಾಡಲು ಸಮಯಾಭಾವದ ಸಮಸ್ಯೆಯಲ್ಲಿರುತ್ತಾರೆ. ಅಂಥ ಎಷ್ಟೋ ಜನ ತಂದೆ ತಾಯಂದಿರಿಗೆ ತಮ್ಮ ಮಕ್ಕಳು ಯಾವ ಕೋರ್ಸುಗಳಲ್ಲಿ, ತರಗತಿಗಳಲ್ಲಿ, ಅಷ್ಟೇ ಏಕೆ ಕೆಲವರಿಗೆ ಯಾವ ಕಾಲೇಜಿನಲ್ಲಿ ತಮ್ಮ ಮಕ್ಕಳು ಓದುತ್ತಿದ್ದಾರೆ ಎಂಬುದೂ ಗೊತ್ತಿರುವುದಿಲ್ಲ, ಇಂಥ ಪರಿಸ್ಥಿತಿಯಲ್ಲಿ ಮಕ್ಕಳು ತಮ್ಮ ಹತಾಶಭಾವದಿಂದ ಹೊರಬರಲು, ಏಕಾಂಗಿತನವ ನೀಗಿಸಲು, ಗೆಳೆಯರ ಶೋಧದಲ್ಲಿ, ಈ ತಪ್ಪುದಾರಿಯ ಜನರ ಜಾಲಕ್ಕೆ ಬೀಳುತ್ತಾರೆ.

ನೀವು ಮಾಡಬೇಕಾದುದೇನು? ಕನಿಷ್ಠ ವಾರದಲ್ಲಿ ಒಂದು ಸಲವಾದರೂ ಮಕ್ಕಳನ್ನು ಕೂರಿಸಿಕೊಂಡು ಅವರ ಶಾಲೆ ಕಾಲೇಜುಗಳ ಕುರಿತು ಚರ್ಚಿಸಿರಿ. ಚರ್ಚೆ ಎಂದರೆ ಅವರು ಗಳಿಸಿದ ಮಾರ್ಕುಗಳ ಕುರಿತಾಗಿಯೇ ಇರಬೇಕಂತೇನಿಲ್ಲ, ಅದು ಬಹು ಅಪರೂಪದ ಪ್ರಶ್ನೆ ಆಗಿರಲಿ. ಉಳಿದಂತೆ, ಯಾವ ಯಾವ ಟೀಚರು ಯಾವ್ಯಾವ ವಿಷಯ ತೆಗೆದುಕೊಳ್ಳುತ್ತಾರೆ? ಯಾರು ಎಲ್ಲಕ್ಕಿಂತ ಚೆನ್ನಾಗಿ ಕಲಿಸುತ್ತಾರೆ? ಯಾರು ಕಲಿಸಿದ್ದು ನಿನಗೆ ಅರ್ಥವಾಗುತ್ತಿಲ್ಲ? ಯಾವ ವಿಷಯ ನಿನಗೆ ತುಂಬಾ ಇಷ್ಟ? ಯಾರು ನಿಮ್ಮ ಕ್ಲಾಸಿನಲ್ಲಿ ಪಠ್ಯೇತರ ಚಟುವಟಿಕೆಗಳಲ್ಲಿ ಮುಂಚೂಣಿಯಲ್ಲಿದ್ದಾರೆ? ಯಾರು ಅತಿ ಹೆಚ್ಚು ತುಂಟತನ ಮಾಡುತ್ತಾರೆ? ಇಂಥ ಪ್ರಶ್ನೆಗಳನ್ನು ಇಟ್ಟುಕೊಂಡು ನಿಮ್ಮ ಮಕ್ಕಳೊಂದಿಗೆ ನೀವು ಗಂಟೆಗಟ್ಟಲೆ ಮಾತನಾಡಬಹುದು. ಈ ಮಾತುಕತೆಗಳಲ್ಲಿಯೇ ನೀವು ಅವರಿಂದ ಅವರ ಅತ್ಯಂತ ಆಪ್ತ ಮಿತ್ರಬಳಗದ ಬಗ್ಗೆ, ಅವರ ಹವ್ಯಾಸಗಳ ಬಗ್ಗೆ, ತಿಳಿದುಕೊಳ್ಳಬಹುದು. ಇವೆಲ್ಲವುಗಳ ಮೂಲಕ ನೀವು ಬೆಳೆಸಿಕೊಳ್ಳುವ ಆಪ್ತತೆ, ಅವರನ್ನು ಕದ್ದು ಮುಚ್ಚಿ ಬೆಳೆಸಿಕೊಳ್ಳುವ ದುಶ್ಚಟಗಳಿಂದ ದೂರವಿರಿಸುತ್ತದೆ. ವಾರಕೊಮ್ಮೆಯೂ ನಿಮ್ಮ ಮಕ್ಕಳಿಗಾಗಿ ಸಮಯ ಕೊಡಲಾರದಷ್ಟು ಬ್ಯುಸಿಯಾಗಬೇಡಿ. ನಿಮ್ಮ ನಿತ್ಯಕಾರ್ಯಗಳು, ಉದ್ಯೋಗಗಳ ಹೊರತಾದ ಇಂಥ ಮಾತುಕತೆ ನಿಮಗೂ ಒಂದು ನೆಮ್ಮದಿ ನೀಡುತ್ತದೆ. ಪ್ರಯತ್ನಿಸಿ!

ಆಧುನಿಕ ಕಾಲದಲ್ಲಿ ನಮ್ಮ ಮಕ್ಕಳನ್ನು ಡ್ರಗ್ಸ್ ಚಟದತ್ತ ಸೆಳೆಯುತ್ತಿರುವ ಅತಿ ದೊಡ್ಡ ಪ್ರಭಾವಿಗಳೆಂದರೆ ಪಾಪ್ ಗಾಯಕರು, ವಿಶೇಷವಾಗಿ ಕೆಲ ವಿದೇಶಿ ಇಂಗ್ಲೀಷ್ ಪಾಪ್ ಗಾಯಕರು. ತಮ್ಮೆಲ್ಲಾ ಗಾಯನದಲ್ಲಿ ನೇರವಾಗಿ ಅಥವಾ ಪರೋಕ್ಷವಾಗಿ ಅವರು ತಮ್ಮ ಮೆಚ್ಚಿನ ಡ್ರಗ್ಸ್‌ನ್ನು ತಮ್ಮ ಅಭಿಮಾನಿಗಳಿಗೆ ವೈಭವದ, ಸುಖದ, ಸ್ವಾತಂತ್ರ್ಯದ, ಅತ್ಯುನ್ನತ ಸ್ಥಿತಿ ಎಂಬಂತೆ ಬಿಂಬಿಸುತ್ತಾರೆ. ಡ್ರಗ್ಸ್‌ಗಳಿಗೆ ಅವರು ಅನೇಕ ಕೋಡ್ ವರ್ಡ್ಸ್‌ಗಳನ್ನು (ಪಾಟ್, ಗ್ರಾಸ್ ಇತ್ಯಾದಿ) ಉಪಯೋಗಿಸುತ್ತಾರೆ. ಅವರ ಕೋಟ್ಯಂತರ ಅಭಿಮಾನಿಗಳು ಅಂಧರಾಗಿ ಅವರನ್ನು ಅನುಸರಿಸುತ್ತಾರೆ. ಯಾರು ಯಾವ ಗಾಯಕರ ಅಭಿಮಾನಿಯೋ ಅವರು ಆ ಡ್ರಗ್ಸ್‌ನ ದಾಸರು. ನಮ್ಮ ಸಿನಿಮಾಗಳ ಹಾಡುಗಳಲ್ಲಿ ಒಂದು ಸಾಲು ಅಶ್ಲೀಲವೆನಿಸಿದರೆ ಅದರ ವಿರುದ್ಧ ಊರೆಲ್ಲಾ ಸೇರಿ ಗಲಾಟೆ ಮಾಡುವ, ಕೋರ್ಟು, ಕಚೇರಿ, ಸೆನ್ಸಾರ್ ಮಂಡಳಿ, ಮಹಿಳಾ ಆಯೋಗಗಳನ್ನೆಲ್ಲ ಸಂಪರ್ಕಿಸುವ ನಮ್ಮ ನಾಡಿನ ಗಣ್ಯರು ಮತ್ತು ಹೋರಾಟಗಾರರು, ಇಂಥ ಗಾಯಕರ, ಈ ಸಂಸ್ಕೃತಿಯ ವಿರುದ್ಧ ದನಿಯತ್ತದೆ ಇರುವುದು ನನಗೆ ಸೋಜಿಗವೆನಿಸುತ್ತದೆ.

ಈ ಹಿನ್ನೆಲೆಯಲ್ಲಿ ನಮ್ಮ ಮಕ್ಕಳು ಯಾವುದೇ ಡ್ರಗ್ಸ್‌ನ ಪ್ರಭಾವಕ್ಕೆ ಒಳಗಾಗದೆ ಇರಲು ನಾವು ಅವರ ಹವ್ಯಾಸಗಳತ್ತ ನೋಡುವುದು ಅತ್ಯವಶ್ಯಕ. ಇತ್ತೀಚೆಗೆ ಈ ಡ್ರಗ್ಸ್‌ನ ರಾಕೆಟ್‌ಗಳು ದೇಶದ ಮೂಲೆ ಮೂಲೆಯಲ್ಲಿ ತಮ್ಮ ಕಬಂಧ ಬಾಹುಗಳನ್ನು ಚಾಚುತ್ತಿವೆ. ಈ ಕಾಲದ ಪೋಷಕರು ತಮ್ಮ ಮಕ್ಕಳಿಗೆ ನೀಡುತ್ತಿರುವ ಅತಿಯಾದ ಹಣ, ಅನಗತ್ಯ ಖಾಸಗಿತನ ಮತ್ತು ಅನಿಯಂತ್ರಿತ ಸ್ವಾತಂತ್ರ್ಯ ಈ ಪಿಡುಗಿಗೆ ವರದಾನವಾಗಿ ಪರಿಣಮಿಸಿದೆ. ಅನೇಕ ಸಲ ಡ್ರಗ್ಸ್‌ನ ರಾಕೆಟ್‌ಗಳು ವಿದ್ಯಾರ್ಥಿಗಳಲ್ಲೇ ಒಬ್ಬನನ್ನು ತಮ್ಮ ಪ್ರತಿನಿಧಿಯನ್ನಾಗಿ ನೇಮಿಸಿ ತಮ್ಮ ವ್ಯವಹಾರವನ್ನು ಆರಂಭಿಸುತ್ತಾರೆ. ಕಾಲಕಾಲಕ್ಕೆ ಈ ಪಿಡುಗಿನ ವಿರುದ್ಧ ಜಾಗೃತಿ ಮೂಡಿಸುವ ಕಾರ್ಯಕ್ರಮಗಳನ್ನು ನಮ್ಮೆಲ್ಲಾ ವಿದ್ಯಾಸಂಸ್ಥೆಗಳಲ್ಲಿ ಆಯೋಜಿಸುವ ಕೆಲಸ ಆಗಬೇಕು. ಎಲ್ಲರೂ ಒಟ್ಟಾಗಿ ದನಿಯೆತ್ತಿ ಈ ಪಿಡುಗನ್ನು ನಮ್ಮ ವಿದ್ಯಾಸಂಸ್ಥೆಗಳ ಪರಿಸರದಿಂದ ಮೂಲೋಚ್ಚಾಟನೆ ಮಾಡುವ ಕಾರ್ಯ ನಡೆಯಬೇಕು. ಈ ಡ್ರಗ್ಸ್ ಎಂಬ ಪಿಡುಗಿನ ಜಾಲಗಳು ಈಗ ಅನಿಯಂತ್ರಿತವಾಗಿ, ವ್ಯಾಪಕವಾಗಿ, ಬೆಳೆದಿವೆ. ಅದನ್ನು ನಿಯಂತ್ರಿಸುವುದು ನಮ್ಮ ನಿಮ್ಮ ಕೈಗಳಲ್ಲಿಲ್ಲ. ನಾವು ಊರಿಗೆ ಬೇಲಿ ಹಾಕಲು ಅಸಮರ್ಥರು. ಆದರೆ, ನಮ್ಮ ನಮ್ಮ ಮನೆಗಳಿಗೆ ಬೇಲಿಯನ್ನು ಖಂಡಿತ ಹಾಕಬಹುದು!

ಒದುಗರ ಒಣಿ

ಒದುಗರನ್ನು ಬಿಟ್ಟು ಇಲ್ಲಿ ಯಾರಿಗೂ ಪ್ರವೇಶವಿಲ್ಲ

ಗುಜರಾತ್ ಜನರು ಅನಕ್ಷರಸ್ಥರಾ?

ಕಾಂಗ್ರೆಸ್ ಅಧ್ಯಕ್ಷ ಶ್ರೀ ಮಲ್ಲಿಕಾರ್ಜುನ ಖರ್ಗೆ ಅವರು ಕೇರಳದಲ್ಲಿ ಚುನಾವಣೆ ಪ್ರಚಾರ ಸಭೆಯಲ್ಲಿ ಮೇಲಿನ ಮಾತಿನ ಆಣಿ ಮುತ್ತುಗಳನ್ನು ಉದುರಿಸಿದ್ದಾರೆ. ಅಂದರೆ ಅವರ ಪ್ರಕಾರ ಕಾಂಗ್ರೆಸ್‌ನ ಆರಾಧ್ಯದೈವ ಮಹಾತ್ಮ ಗಾಂಧಿ, ಭಾರತದ ವಿವಿಧ ರಾಜ್ಯಗಳನ್ನು ಒಟ್ಟುಗೂಡಿಸಿದ ಮಹಾನ್ ರಾಜಕಾರಣಿ ಶ್ರೀ ಸರದಾರ್ ವಲ್ಲಭ ಭಾಯ್ ಪಟೇಲ್, ಮುಂತಾದ ಆ ರಾಜ್ಯದ ಸ್ವತಂತ್ರ ಹೋರಾಟಗಾರರು ಎಲ್ಲ ಅನಕ್ಷರಸ್ಥರು. ಅವರದೇ ಪಕ್ಷದ ಆ ರಾಜ್ಯದ ಹಿಂದಿನ ಮುಖ್ಯ ಮಂತ್ರಿ, ಮಂತ್ರಿ ಮಹೋದಯರು ಎಲ್ಲ ಅನಕ್ಷರಸ್ತರು. ಏಕೆಂದರೆ

ಅವರೆಲ್ಲಾ ಗುಜರಾತಿಗಳು. ಪ್ರಧಾನಿ ಶ್ರೀ ಮೋದಿ, ಗೃಹಮಂತ್ರಿ ಶ್ರೀ ಷಾ, ಅವರುಗಳನ್ನು ಹೀಯಾಳಿಸಲು ಹೋಗಿ ಶ್ರೀ ಖರ್ಗೆ ಅವರು ಗುಜರಾತ್ ರಾಜ್ಯದ ಜನರನ್ನು, ಅದರಲ್ಲೂ ತಮ್ಮ ಹಿಂದಿನ ಮಹಾನ್ ನಾಯಕರನ್ನು ಸೇರಿಸಿ ಅವಮಾನ ಮಾಡಿದ್ದಾರೆ. ಹೀಗೆ ರಾಜ್ಯ ರಾಜ್ಯದ ಜನರ ಮಧ್ಯೆ ದ್ವೇಷ ಹರಡುತ್ತಿರುವ ನಾಯಕರ ಮನಃ ಸ್ಥಿತಿಗೆ ಏನುಹೇಳಬೇಕೋ ಗೊತ್ತಿಲ್ಲ. ಆಯಾ ರಾಜ್ಯದ ಜನರೇ ಆ ನಾಯಕರಿಗೆ ಹೇಗೆ ಬುದ್ದಿ ಕಲಿಸಬೇಕೆಂದು ತೀರ್ಮಾನ ಮಾಡಲಿ. ಇನ್ನು ಶ್ರೀ ಪಿಣರಾಯ ವಿಜಯನ್ ಬಗ್ಗೆಯೂ ಸಲ್ಲದ ಮಾತನಾಡಿದ್ದಾರೆ. ಆದರೆ, ತಮಗೆ ರಾಷ್ಟ್ರೀಯ ಚುನಾವಣೆ ಸಮಯದಲ್ಲಿ ಇಂಡಿ ಒಕ್ಕೂಟಕ್ಕೆ ಶ್ರೀ ವಿಜಯನ್ ಹಾಗೂ ಅವರ ಪಕ್ಷದ ಬೆಂಬಲ ಬೇಕಾದಾಗ ಅವರು ಶ್ರೀ ಮೋದಿ ಅವರ ನಿಯಂತ್ರಣದಲ್ಲಿದ್ದದ್ದು ಮರೆತು ಹೋಯಿತೇ? ಇಂತಹ ಹೇಳಿಕೆ ಕೊಡುತ್ತಿರುವ ನಾಯಕರಿಗೆ ವಯಸ್ಸಿನಿಂದಾಗಿ ಅರಳು ಮರಳೋ ಅಥವಾ ಸೋಲಿನ ಮೇಲೆ ಸೋಲಿನಿಂದಾಗಿ ಹತಾಷೆ ಮನೋಭಾವವೋ ಆ ದೇವರಿಗೂ ಗೊತ್ತಿರಲಿಕ್ಕಿಲ್ಲ.

- ಮುಕುಂದ, ದಾವಣಗೆರೆ.

ತಂತ್ರಜ್ಞಾನ ದಿಗ್ಗಜ ಒರಾಕಲ್

ಸೇರಿದಂತೆ ಇನ್ನಿತರ ದೇಶಗಳಲ್ಲಿ ಕೆಲಸ ಮಾಡುತ್ತಿದ್ದ ತನ್ನ 30,000ಕ್ಕೂ ಅಧಿಕ ಉದ್ಯೋಗಿಗಳನ್ನು ಕೇವಲ ಒಂದೇ ಒಂದು ಇಮೇಲ್ ಮೂಲಕ ವಜಾಗೊಳಿಸಿರುವ ವರದಿ ಮಾಧ್ಯಮಗಳಲ್ಲಿ ಪ್ರಕಟವಾಗಿದೆ. ಅನೇಕ ಐಟಿ-ಬಿಟಿ ಕಂಪನಿಗಳು, ಸಾಫ್ಟ್‌ವೇರ್ ಕಂಪನಿಗಳು ಹಾಗೂ ಇನ್ನಿತರ ಉನ್ನತ ತಂತ್ರಜ್ಞಾನದ ಕಂಪನಿಗಳು ಕೃತಕ ಬುದ್ಧಿಮತ್ತೆ (Artificial Intelligence) ಗೆ ಶರಣಾಗಿರುವುದರಿಂದ ಇಂತಹ ಉದ್ಯೋಗ ಕಡಿತ ಸಾಮಾನ್ಯವಾಗಿದೆ. ಪ್ರಾರಂಭದಲ್ಲಿ ಕೃತಕ ಬುದ್ಧಿಮತ್ತೆಯಿಂದ ಉದ್ಯೋಗಗಳ ಕಡಿತ ಇಲ್ಲ ಎಂಬ ಭರವಸೆಯನ್ನು ಅನೇಕ ದೇಶಗಳು ನೀಡಿ, ಕೃತಕ ಬುದ್ಧಿಮತ್ತೆಗೆ ರತ್ನ ಕಂಬಳಿ ಹಾಸಿದ್ದವು. ಆದರೆ, ಒರಾಕಲ್ ಕಂಪನಿಯ ನಡೆಯಿಂದ ಈ ಭರವಸೆ ಹುಸಿಯಾಗಿದೆ. ಕೃತಕ ಬುದ್ಧಿಮತ್ತೆಯಿಂದ ಹಲವಾರು ಪ್ರಯೋಜನಗಳು ಇರಬಹುದು. ಆದರೆ, ಉದ್ಯೋಗ ಕಡಿತದಂತಹ ಉಗ್ರ ಕ್ರಮ ಲಕ್ಷಾಂತರ ಉದ್ಯೋಗಿಗಳ ಪಾಲಿಗೆ ಕಂಟಕಪ್ರಾಯವಾಗಿದೆ. ಬಹುತೇಕ ಐಟಿ-ಬಿಟಿ ಕಂಪನಿಗಳ ಉದ್ಯೋಗಿಗಳಿಗೆ ಉದ್ಯೋಗ ಭದ್ರತೆಯೇ ಇಲ್ಲವಾಗಿದೆ. ಕೆಲವು ತಿಂಗಳ ಹಿಂದೆ, ದೇಶದ ರಾಜಧಾನಿ ನವದೆಹಲಿಯಲ್ಲಿ ಕೃತಕ ಬುದ್ಧಿಮತ್ತೆಯ ಶೃಂಗ ಸಮ್ಮೇಳನ ನಡೆಯಿತು. ಈ ಕ್ಷೇತ್ರದಲ್ಲಿ ಲಕ್ಷಾಂತರ ಕೋಟಿ ಹಣವನ್ನು ಹೂಡಲು ನೂರಾರು ದೇಶಗಳು ನಾ ಮುಂದು ತಾ ಮುಂದೆ ಎಂದು ಕೈಕಟ್ಟಿ ನಿಂತದ್ದು ಒಂದು ವಿಪರ್ಯಾಸವೇ ಸರಿ. ಲಕ್ಷಾಂತರ ಉದ್ಯೋಗಗಳನ್ನೇ ನುಂಗುವಂತಹ ಕೃತಕ ಬುದ್ಧಿಮತ್ತೆಗೆ ಜೋತು ಬೀಳುವ ಮುನ್ನ ಸಂಬಂಧಪಟ್ಟ ದೇಶಗಳು ಮತ್ತೊಮ್ಮೆ ಪರ್ಯಾಲೋಚನೆ ನಡೆಸುವುದು ಒಳ್ಳೆಯದು.

- ಕೆ.ವಿ.ವಾಸು, ಮೈಸೂರು.

ಒಂದು ವಿಶಿಷ್ಟ ಮದುವೆ ಸಮಾರಂಭ!

ಇತ್ತೀಚೆಗೆ ನನ್ನ ಆತ್ಮೀಯ ದಂಪತಿಗಳ ಮಗಳ ಮದುವೆ ಸಮಾರಂಭ ಬೆಚ್ಚನೆಯ ಆತ್ಮೀಯ ವಾತಾವರಣದಲ್ಲಿ ಜರುಗಿತು. ಕರ್ಕಶ ಡಿಜೆ ಹಾವಳಿ ಇಲ್ಲ. ಆಡಂಬರದ ಬಣ್ಣ ಬಣ್ಣದ ಅಲಂಕಾರ ಇಲ್ಲ. ದೊಡ್ಡ ಸ್ಕ್ರೀನ್ ಮೇಲೆ ಪ್ರಿ-ವೆಡ್ಡಿಂಗ್ ಚಿತ್ರ, ವಿಡಿಯೋ ಪ್ರದರ್ಶನ ಇಲ್ಲ. ಉಡುಗೊರೆ, ಪರತ ಆಹೇರಿ ಜಂಜಾಟ ಇಲ್ಲ. ತಿಳಿಯದ ಪಂಜಾಬಿ ಹಾಡುಗಳು, ಬಾರಾತಿಗಳ ಡಾನ್ಸ್ ಇಲ್ಲ. ಕೇಕ್ ಕತ್ತರಿಸುವ ಅಸಂಬದ್ಧ ಆಚರಣೆ ಇಲ್ಲ! ಎಲ್ಲವೂ ಸರಳ, ಶಾಂತ, ನಿರಾಡಂಬರ! ಕಾರು, ಆಭರಣ, ಉಡುಪುಗಳ ಶ್ರೀಮಂತಿಕೆಯ ಪ್ರದರ್ಶನ ಇಲ್ಲ. ಚಂದದ ಪಾರಂಪರಿಕ ಹೂವಿನ ಅಲಂಕಾರದ ಮಂಟಪ. ಹಿನ್ನೆಲೆಯಲ್ಲಿ ಹಳೆಯ ಸುಮಧುರ ಕನ್ನಡ ಹಾಡುಗಳ ವಾದ್ಯ ಸಂಗೀತ, ಮಂದವಾಗಿ. ವಿಧಿವತ್ತಾಗಿ ವಿವಾಹ ಪದ್ಧತಿಗಳ ಆಚರಣೆ ಕೆಲವೇ ಆಹ್ವಾನಿತರ ಸಮ್ಮುಖದಲ್ಲಿ. ಮೂಹೂರ್ತ ಸಮಯದಲ್ಲಿ ಸುಶ್ರಾವ್ಯವಾಗಿ ನಾದಸ್ವರ. ರುಚಿಕಟ್ಟಾದ ಶುದ್ಧ ದೇಸಿ ಬಾಳೆಲೆ ಊಟ-ಉಪಹಾರ. ವಧುವಿನ ತಂದೆಯ ಸಹಪಾಠಿಗಳ, ದೇಶ-ವಿದೇಶಗಳ ಮಿತ್ರರ ಸಮಾಗಮದ ಸಂಭ್ರಮ. ಬಹಳ ದಿನಗಳ ನಂತರ ಒಟ್ಟಾರೆ ಒಂದು ಅನನ್ಯ ಅನುಭವದ ಒದಗಿಸಿದ ಚಂದದ ಲಗ್ನ.

- ಶರದ್ ದೇಶಪಾಂಡೆ, ಹುಬ್ಬಳ್ಳಿ.

ಅಮಾನವೀಯ ನಿಯಮಗಳು ಮತ್ತು ಸಮಾಜದ ಕ್ರೌರ್ಯ

ನಗರಗಳಲ್ಲಿ ನಮ್ಮ ನಡುವೆ ಓಡಾಡುವ ಡೆಲಿವರಿ ಹುಡುಗರು ಮನುಷ್ಯರಲ್ಲವೇ? ಬಹುಮಹಡಿ ಕಟ್ಟಡಗಳಲ್ಲಿ ಶ್ರೀಮಂತರು ಡೆಲಿವರಿ ಬಾಯ್ಸ್‌ಗೆ ಲಿಫ್ಟ್ ನಿಷೇಧ ಎಂಬ ಬೋರ್ಡ್‌ಗಳನ್ನು ಹಾಕುವುದು ನಮ್ಮ ಸಮಾಜದ ಜಾತಿವಾದಿ ಮತ್ತು ವರ್ಗಭೇದದ ವಿಕೃತ ಮನಸ್ಥಿತಿಯನ್ನು ತೋರಿಸುತ್ತದೆ. ಒಂದೆಡೆ ಕಟ್ಟಡದ ಮಾಲೀಕರ ಅಮಾನವೀಯ ನಿಯಮಗಳು ಇನ್ನೊಂದೆಡೆ ಹೇಗಾದರೂ ಮಾಡಿ ಮೇಲೆ ಬನ್ನಿ ಎಂದು ಹಠ ಹಿಡಿಯುವ ಕಲ್ಲುಹೃದಯದ ಗ್ರಾಹಕರು. ಹಸಿದವನಿಗೆ ಅನ್ನ ನೀಡುವವನನ್ನು ಕೇವಲ ನೂರು ರೂಪಾಯಿಗಾಗಿ ಮೆಟ್ಟಿಲು ಹತ್ತಿಸುವುದು ಯಾವ ನ್ಯಾಯ? ಇದು ಕೇವಲ ದಂಡದ ವಿಷಯವಲ್ಲ ಅವರ ಘನತೆಯನ್ನು ಕಾಲಡಿಯಲ್ಲಿ ಹಾಕಿ ತುಳಿಯುವ ಕ್ರೌರ್ಯ. ನಾವು ತಾಂತ್ರಿಕವಾಗಿ ಮುಂದುವರಿದಿರಬಹುದು ಆದರೆ ಸಾಂಸ್ಕೃತಿಕವಾಗಿ ಅಧಃಪತನ ಹೊಂದುತ್ತಿದ್ದೇವೆ. ಇಂತಹ ಶೋಷಣೆಯ ವಿರುದ್ಧ ಧ್ವನಿ ಎತ್ತದಿದ್ದರೆ, ನಾವು ನಾಗರಿಕ ಸಮಾಜ ಎಂದು ಕರೆದುಕೊಳ್ಳಲು ಅನರ್ಹರು. ಇಂದೇ ಈ ಅಮಾನವೀಯ ಲಿಫ್ಟ್ ಸಂಸ್ಕೃತಿ ಅಂತ್ಯವಾಗಲಿ.

- ಡಾ. ವಿಜಯಕುಮಾರ ಎಚ್.ಕೆ., ರಾಯಚೂರು.

ಒದುಗರ ಒಣಿಗೆ ಭೇಟಿ ಕೊಡಿ
ನಿಮ್ಮ ಅಭಿಪ್ರಾಯಗಳನ್ನು vveditoped@gmail.comಗೆ ಮೇಲ್ ಮಾಡಬಹುದು ಅಥವಾ ಕಚೇರಿಯ ವಿಳಾಸಕ್ಕೆ ಕಳುಹಿಸಬಹುದು

ಅಚ್ಚುಕಟ್ಟು ಪ್ರದೇಶ
RNI: KARKAN/2016/67914
VISHVAVANI, Printed & Published by: VISHWESHWAR BHAT, On behalf of Vishwakshara Media Private Ltd., No.1687, Nisarga Serenity, Complex Road, Near Raghavendra Swamy Temple, BEML Layout, 5th Stage, Rajarajeshwarinagar, Bangalore.560098. PH: 6362393988/6362393942
Printed MNS Printers PVT.Ltd,345/4,Bhatrahalli,Near KR Puram RTO, Old Madras Road,Bengalore 560049
Editor-in Chief : Vishweshwar Bhat. ಪ್ರಧಾನ ಸಂಪಾದಕ: ವಿಶ್ವೇಶ್ವರ ಭಟ್
CopyRight: Vishwakshara Media Private Ltd. All rights reserved. Reproduction in any manner electronic or otherwise, in whole or in part, without prior written permission is prohibited.
ನಮ್ಮ ಆವೃತ್ತಿಗಳು: ಬೆಂಗಳೂರು, ಹುಬ್ಬಳ್ಳಿ ಮಂಗಳೂರು, ಬೆಳಗಾವಿ ಕಲಬುರಗಿ, ದಾವಣಗೆರೆ
Vol:11, Issue:82

ಸಮಾಚಾರ ಸಣ್ಣದಲ್ಲ

ವಿಮಾನಯಾನ ಕ್ಷೇತ್ರಕ್ಕೆ ₹2,500 ಕೋಟಿ ನಷ್ಟ

ದೆಹಲಿ: ಇರಾನ್ ವಿರುದ್ಧ ಅಮೆರಿಕ-ಇಸ್ರೇಲ್ ಯುದ್ಧಕ್ಕೆ 39 ದಿನಗಳಾಗಿವೆ. ಈ ಯುದ್ಧದಿಂದ ಭಾರತದ ವಿಮಾನಯಾನ ಕ್ಷೇತ್ರಕ್ಕೆ 2,500 ಕೋಟಿ ರು. ನಷ್ಟವಾಗಿದೆ. ವಿಮಾನದ ಇಂಧನ ತೈಲ ಬೆಲೆ ಏರಿಕೆ, ಗಲ್ಫ್ ದೇಶಗಳಿಗೆ ವಿಮಾನ ಸಂಚಾರ ಸ್ಥಗಿತ, ಅಲ್ಲದೇ, ಈ ದೇಶಗಳ ವಾಯುಪ್ರದೇಶ ಬಂದ್ ಆಗಿರುವುದರಿಂದ ಯೂರೋಪ್ ದೇಶಗಳಿಗೆ ಬಳಸಿಕೊಂಡು ಹೋಗಬೇಕಾದ ಪರಿಸ್ಥಿತಿ ಮತ್ತಿತರ ಕಾರಣಗಳಿಂದಾಗಿ ಭಾರತದ ವಿಮಾನಯಾನ ಉದ್ಯಮ ಸಂಕಷ್ಟಕ್ಕೀಡಾಗಿದೆ. ಬೇಸಿಗೆ ರಜೆ ಕಾಲದ ವೇಳಾಪಟ್ಟಿ ಪ್ರಕಾರ ಇಂಡಿಗೊ ವಿಮಾನಯಾನ ಸಂಸ್ಥೆಗೆ ನಿತ್ಯವೂ 310 ಅಂತಾರಾಷ್ಟ್ರೀಯ ವಿಮಾನಗಳ ಸಂಚಾರಕ್ಕೆ ಅನುಮೋದನೆಯಿದೆ. ಆದರೆ ಇರಾನ್ ಯುದ್ಧದ ಕಾರಣ ಸಂಸ್ಥೆಯ ಒಟ್ಟು ಸಾಮರ್ಥ್ಯದ ಶೇ.40ರಷ್ಟು ವಿಮಾನಗಳ ಸಂಚಾರವೇ ಅಸಾಧ್ಯವಾಗಿದೆ. ಭಾರತದ ಎಲ್ಲಾ ವಿಮಾನಯಾನ ಸಂಸ್ಥೆಗಳಿಂದ ಗಲ್ಫ್ ದೇಶಗಳಿಗೆ ನಿತ್ಯ ಸಂಚರಿಸಬೇಕಿದ್ದ 115 ವಿಮಾನ ಮತ್ತು ಕಾಮನ್ವೆಲ್ತ್ ದೇಶಗಳಿಗೆ ಹೋಗಬೇಕಿದ್ದ 10 ವಿಮಾನಗಳು ರದ್ದಾಗಿವೆ. ಪರಿಣಾಮ ಭಾರತದ ವಿಮಾನಯಾನ ಉದ್ಯಮ ನಷ್ಟಕ್ಕೀಡಾಗಿದೆ.

ಬಾಂಗ್ಲಾ ಮಾಜಿ ಸ್ಪೀಕರ್ ಶಿರಿನ್ ಶರ್ಮಿನ್ ಬಂಧನ

ಢಾಕಾ: ಬಾಂಗ್ಲಾದೇಶದ ಸಂಸತ್ತಿನ ಮಾಜಿ ಸ್ಪೀಕರ್ ಶಿರಿನ್ ಶರ್ಮಿನ್ ಚೌಧರಿ ಅವರನ್ನು ಢಾಕಾ

ಮೆಟ್ರೊಪಾಲಿಟನ್ ಪೊಲೀಸ್ ಪತ್ತೇದಾರಿ ವಿಭಾಗ ಮಂಗಳವಾರ ಬಂಧಿಸಿದೆ. ವಿದ್ಯಾರ್ಥಿ ಚಳವಳಿಗೆ ಸಂಬಂಧಿಸಿ ದಾಖಲಾಗಿದ್ದ ಪ್ರಕರಣದಲ್ಲಿ ಶಿರಿನ್‌ರನ್ನು ಅವರ ಢಾಕಾದ ಧನ್ ಮಂಡಿಯ 8/ಎ ರಸ್ತೆಯಲ್ಲಿನ ನಿವಾಸದಲ್ಲಿ ಬಂಧಿಸಲಾಗಿದೆ ಎಂದು ಪತ್ತೇದಾರಿ ವಿಭಾಗದ ಹೆಚ್ಚುವರಿ ಕಮಿಷನರ್ ಮೊಹಮ್ಮದ್ ಶಫೀಕುಲ್ ಇಸ್ಲಾಂ ಹೇಳಿದ್ದಾರೆ. ಬಾಂಗ್ಲಾದೇಶದ ಮೊದಲ ಮಹಿಳಾ ಸ್ಪೀಕರ್ ಎನಿಸಿಕೊಂಡಿದ್ದ ಶಿರಿನ್, 2013-25ರವರೆಗೆ ಆ ಹುದ್ದೆಯಲ್ಲಿ ಕಾರ್ಯನಿರ್ವಹಿಸಿದ್ದರು. 2025ರ ಆ.5ರಂದು ಪ್ರಧಾನಿ ಶೇಖ್ ಹಸೀನಾ ಸರಕಾರ ಪತನಗೊಂಡ 27 ದಿನಗಳ ನಂತರ ಶಿರಿನ್ ರಾಜೀನಾಮೆ ನೀಡಿದ್ದರು.

ಕೇರಳದ 2 ದೇಗುಲಕ್ಕೆ ಅನಂತ ಭೇಟಿ-ದೇಣಿಗೆ

ತಿರುವನಂತಪುರಂ: ರಿಲಯನ್ಸ್ ಇಂಡಸ್ಟ್ರೀಸ್‌ನ ಕಾರ್ಯನಿರ್ವಾಹಕ ನಿರ್ದೇಶಕ ಅನಂತ್ ಅಂಬಾನಿ ಕೇರಳದ ರಾಜರಾಜೇಶ್ವರಂ ಮತ್ತು ಗುರುವಾಯೂರು ದೇವಾಲಯಗಳಿಗೆ ಇತ್ತೀಚೆಗೆ ಭೇಟಿ ನೀಡಿದ್ದರು. ಈ ವೇಳೆ ಅವರು ದೇವಾಲಯಗಳ ಅಭಿವೃದ್ಧಿ ಹಾಗೂ ಪ್ರಾಣಿಗಳ ರಕ್ಷಣೆಗಾಗಿ 18 ಕೋಟಿ ರು. ದೇಣಿಗೆ ನೀಡುವುದಾಗಿ ಪ್ರಕಟಿಸಿದ್ದಾರೆ. ಎರಡೂ ದೇವಾಲಯಗಳಲ್ಲಿ ಆನೆಗಳನ್ನು ಸಾಕಲಾಗುತ್ತಿದ್ದು, ಧಾರ್ಮಿಕ ವಿಧಿವಿಧಾನಗಳಿಗೆ ಬಳಸಿಕೊಳ್ಳಲಾಗುತ್ತಿದೆ. ಕೇರಳದ ಅತ್ಯಂತ ಪುರಾತನ ರಾಜರಾಜೇಶ್ವರಂ ದೇವಾಲಯದ ಜೀರ್ಣೋದ್ಧಾರ ಕಾರ್ಯಗಳಿಗೆ 3 ಕೋಟಿ ರು. ಚೆಕ್‌ಅನ್ನು ದೇವಾಲಯದ ಮಂಡಳಿಗೆ ಹಸ್ತಾಂತರಿಸಿದರು. ಅಲ್ಲದೇ, 200 ವರ್ಷಗಳಿಂದ ದುಃಸ್ಥಿತಿಯಲ್ಲಿದ್ದ ದೇಗುಲದ ಐತಿಹಾಸಿಕ 'ಪೂರ್ವ ಗೋಪುರ'ದ ಪುನರ್ನಿರ್ಮಾಣ ಮತ್ತು ದೇವಾಲಯ ಆವರಣದಲ್ಲಿ ವಾಹನ ನಿಲುಗಡೆ ಮೊದಲಾದ ಮೂಲಸೌಕರ್ಯ ಅಭಿವೃದ್ಧಿಗಾಗಿ 12 ಕೋಟಿ ರು. ನೀಡುವುದಾಗಿ ಹೇಳಿದರು. ಜತೆಗೆ ಗುರುವಾಯೂರು ದೇವಾಲಯ ಟ್ರಸ್ಟ್‌ಗೆ 3 ಕೋಟಿ ರು. ದೇಣಿಗೆ ನೀಡಿದರು.

ರಾಜ್ಯಗಳಿಗೆ 5 ಕಿಲೊ ಸಿಲಿಂಡರ್ ದ್ವಿಗುಣ

ದೆಹಲಿ: ವಲಸೆ ಕಾರ್ಮಿಕರಿಗೆ ಅನುಕೂಲವಾಗಲಿ ಎಂಬ ಕಾರಣಕ್ಕೆ ರಾಜ್ಯಗಳು ಮತ್ತು ಕೇಂದ್ರಾಡಳಿತ ಪ್ರದೇಶಗಳಿಗೆ 5 ಕೆಜಿ ಎಲ್‌ಪಿಜಿ ಸಿಲಿಂಡರ್‌ಗಳ

ಹಂಚಿಕೆಯನ್ನು ದ್ವಿಗುಣಗೊಳಿಸುವುದಾಗಿ ಕೇಂದ್ರ ಸರಕಾರ ಹೇಳಿದೆ. ಗೃಹ ಬಳಕೆಯ 14.2 ಕಿಲೊ ಅಡುಗೆ ಅನಿಲ ಸಿಲಿಂಡರ್ ಸಂಪರ್ಕ ಪಡೆಯಲು ವಿಳಾಸದ ಪುರಾವೆ ಮತ್ತಿತರ ದಾಖಲೆಗಳು ಅಗತ್ಯ. ಆದರೆ ವಲಸೆ ಕಾರ್ಮಿಕರಿಂದ ಈ ದಾಖಲೆಗಳನ್ನು ಹೊಂದಿಸುವುದು ಕಷ್ಟ. ಹಾಗಾಗಿಯೇ ವಲಸೆ ಕಾರ್ಮಿಕರಿಗೆ ಸುಲಭದಲ್ಲಿ ಅಡುಗೆ ಅನಿಲ ಸಿಗುವಂತಾಗಲಿ ಎಂಬ ಕಾರಣಕ್ಕೆ 5 ಕಿಲೊ ಗಾತ್ರದ ಎಲ್‌ಪಿಜಿ ಸಿಲಿಂಡರ್ 'ಚೋಟು'ವನ್ನು ಪೆಟ್ರೋಲಿಯಂ ಕಂಪನಿಗಳು ಪರಿಚಯಿಸಿವೆ. ಯಾವುದಾದರೊಂದು ಗುರುತಿನ ಚೀಟಿ ತೋರಿಸಿ 5 ಕೆಜಿ ಸಿಲಿಂಡರ್ ಖರೀದಿಸಬಹುದು. ಮಾ.2-3ರಂದು ವಲಸೆ ಕಾರ್ಮಿಕರಿಗೆ ನೀಡಲಾಗಿರುವ 5 ಕಿಲೊ ಎಲ್‌ಪಿಜಿ ಸಿಲಿಂಡರ್‌ಗಳ ಸಂಖ್ಯೆ ಆಧರಿಸಿ ರಾಜ್ಯಗಳಿಗೆ ಏಪ್ರಿಲ್‌ನಲ್ಲಿ ಸಿಲಿಂಡರ್ ಹಂಚಿಕೆಯಲ್ಲಿ ಹೆಚ್ಚಳ ಮಾಡಲಾಗುವುದು ಎಂದು ಕೇಂದ್ರ ತಿಳಿಸಿದೆ.

{ ರಾಜನಾಥ್ ಸಿಂಗ್ } ರಕ್ಷಣಾ ಸಚಿವ

ಪಾಕಿಸ್ತಾನದ ಸಚಿವರು(ಆಸಿಫ್ ಖ್ವಾಜಾ) ಪದೇ ಪದೇ ಪ್ರಚೋದನಾಕಾರಿ ಹೇಳಿಕೆಗಳನ್ನು ನೀಡಬಾರದು. 55 ವರ್ಷಗಳ ಹಿಂದೆ(1971) ಪಾಕಿಸ್ತಾನ 2 ಭಾಗವಾದಾಗ ಅದರ ಪರಿಣಾಮಗಳನ್ನು ಅವರೂ ಅನುಭವಿಸಿದ್ದಾರೆ. ಈಗ ಅವರು ಮತ್ತೆ ಪಶ್ಚಿಮ ಬಂಗಾಳ, ಕೋಲ್ಕತ್ತ ಮೇಲೆ ಕಣ್ಣು ಹಾಕಲು ಯತ್ನಿಸಿದರೆ, ಈ ಬಾರಿ ಪಾಕಿಸ್ತಾನ ಎಷ್ಟು ಹೋಳಾಗುತ್ತದೆಯೋ ದೇವರಿಗೇ ಗೊತ್ತು.

ಮತದಾರರು 7.66 ಕೋಟಿ | ಮೊದಲು 63.66 ಲಕ್ಷ, ಮರು ಪರಿಶೀಲನೆಯಲ್ಲಿ 27.16 ಲಕ್ಷ ಹೆಸರು ರದ್ದು

ಪ.ಬಂಗಾಳ ಎಸ್‌ಐಆರ್: 91 ಲಕ್ಷ ಮತದಾರರ ಹೆಸರು ರದ್ದು

ಕೋಲ್ಕತ್ತ: ಪಶ್ಚಿಮ ಬಂಗಾಳದಲ್ಲಿ ಈ ಮೊದಲೇ 2025ರ ನವೆಂಬರ್‌ನಲ್ಲಿ ನಡೆದಿದ್ದ ಮತದಾರರ ಪಟ್ಟಿಯ 'ವಿಶೇಷ ತೀವ್ರ ಪರಿಷ್ಕರಣೆ'(ಎಸ್‌ಐಆರ್) ಪ್ರಕ್ರಿಯೆ ಕಡೆಗೂ ಪೂರ್ಣಗೊಂಡಿದ್ದು, ಒಟ್ಟು 91 ಲಕ್ಷ ಅನರ್ಹ ಮತದಾರರ ಹೆಸರುಗಳನ್ನು ಮತದಾರರ ಪಟ್ಟಿಯಿಂದ ತೆಗೆದುಹಾಕಲಾಗಿದೆ ಎಂಬ ಮಾಹಿತಿಯನ್ನು ಕೇಂದ್ರ ಚುನಾವಣಾ ಆಯೋಗ ಮಂಗಳವಾರ ಪ್ರಕಟಿಸಿದೆ. ಈ ಪರಿಷ್ಕರಣೆಯ ನಂತರ ರಾಜ್ಯದಲ್ಲಿರುವ ಒಟ್ಟಾರೆ ಮತದಾರರ ಸಂಖ್ಯೆಯನ್ನು ಆಯೋಗ ಇನ್ನೂ ಪ್ರಕಟಿಸಿಲ್ಲ.

ಈ ಹಿಂದೆ ನವೆಂಬರ್‌ನಲ್ಲಿ ಆರಂಭವಾದ ಎಸ್‌ಐಆರ್ ಪ್ರಕ್ರಿಯೆಯ ಬಳಿಕ ಫೆ.28ರಂದು ಪ್ರಾಥಮಿಕ ಅಂಕಿ ಅಂಶ ಪ್ರಕಟಿಸಿದ್ದು, ರಾಜ್ಯದಲ್ಲಿನ ಒಟ್ಟು 7.66 ಕೋಟಿ ಮತದಾರರ ಪಟ್ಟಿಯಿಂದ 63.66 ಲಕ್ಷ ಹೆಸರುಗಳನ್ನು(ಶೇ.8.3) ತೆಗೆಯಲಾಗಿತ್ತು. ಬಳಿಕ ಪಟ್ಟಿಯಲ್ಲಿನ ಮತದಾರರ ಸಂಖ್ಯೆ 7.03ಕ್ಕೆ ಇಳಿಕೆಯಾಗಿತ್ತು.

ಅಷ್ಟಲ್ಲದೇ, ಒಟ್ಟಾರೆ 7.03 ಕೋಟಿ ಮತದಾರರ ಪಟ್ಟಿಯಲ್ಲಿಯು 60.06 ಲಕ್ಷ ಹೆಸರುಗಳು ವಿಚಾರಣೆ ಹಂತದಲ್ಲಿದ್ದು, ಮತ್ತೊಮ್ಮೆ ಪರಿಶೀಲನೆಗೆ ಒಳಗಾಗಲಿವೆ ಎಂದೂ ಆಯೋಗ ಹೇಳಿತ್ತು.

ನಂತರ ಸುಪ್ರೀಂ ಕೋರ್ಟ್ ನಿರ್ದೇಶನದ ಮೇರೆಗೆ ನ್ಯಾಯಾಂಗದ ಅಧಿಕಾರಿಗಳ ಮೇಲುಸ್ತುವಾರಿಯಲ್ಲಿ ಮರು ಪರಿಶೀಲನೆ ನಡೆಸಿದ ಬಳಿಕ, 60.06 ಲಕ್ಷ ಹೆಸರುಗಳಲ್ಲಿ ಮತ್ತೆ 27.16 ಲಕ್ಷ ಹೆಸರುಗಳನ್ನೂ ಮತದಾರರ ಪಟ್ಟಿಯಿಂದ ಅಳಿಸಿ ಹಾಕಲಾಗಿದೆ. ದಾಖಲೆಗಳ ಮೂಲಕ ದೃಢಪಟ್ಟ 32.68 ಲಕ್ಷ ಹೆಸರುಗಳನ್ನು ಮತದಾರರ ಅಂತಿಮ ಪಟ್ಟಿಯಲ್ಲಿಯೇ ಉಳಿಸಿಕೊಳ್ಳಲಾಗಿದೆ.

ಇದಿಷ್ಟು ಪ್ರಕ್ರಿಯೆಗಳ ಬಳಿಕ ಪಶ್ಚಿಮ ಬಂಗಾಳ ರಾಜ್ಯದಲ್ಲಿನ 'ಎಸ್‌ಐಆರ್' ಪ್ರಕ್ರಿಯೆಯಲ್ಲಿ ಮತದಾರರ ಪಟ್ಟಿಯಿಂದ ತೆಗೆದುಹಾಕಲಾದ ಹೆಸರುಗಳ ಒಟ್ಟು ಸಂಖ್ಯೆ 90.83 ಲಕ್ಷಕ್ಕೆ ಏರಿಕೆಯಾಗಿದೆ.

ಹೊಸ ಸೇರ್ಪಡೆಗೆ ಅವಕಾಶ ಇಲ್ಲ

ಇ-ಸಹಿ ಪ್ರಕ್ರಿಯೆ ಬಾಕಿಯಾಗಿರುವುದರಿಂದ ರಾಜ್ಯದ ಮತದಾರರ ಪಟ್ಟಿಗೆ ಹೊಸದಾಗಿ ಯಾರ ಹೆಸರನ್ನೂ ಸೇರಿಸುವ ಪ್ರಕ್ರಿಯೆ ನಡೆಸಲಾಗುವುದಿಲ್ಲ ಎಂದೂ ಅಧಿಕಾರಿಗಳು ಸ್ಪಷ್ಟಪಡಿಸಿದ್ದಾರೆ.ಮತದಾರರ ಪಟ್ಟಿಗೆ ಸಂಬಂಧಿಸಿ ಮತ್ತೆ ಏನಾದರೂ ಬದಲಾವಣೆಗಳು ಆಗುವುದಿದ್ದರೆ ಅದೇನಿದ್ದರೂ ಸುಪ್ರೀಂ ಕೋರ್ಟ್ ನಿರ್ದೇಶನದ ಮೇರೆಗಷ್ಟೇ ನಡೆಯಲಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.ಪಶ್ಚಿಮ ಬಂಗಾಳದ ಎಸ್‌ಐಆರ್ ಪ್ರಕ್ರಿಯೆಯನ್ನು ಪ್ರಶ್ನಿಸಿದ್ದ ಅರ್ಜಿಗಳ ವಿಚಾರಣೆ ಏ.13ರಂದು ಸುಪ್ರೀಂಕೋರ್ಟ್‌ನಲ್ಲಿ ನಡೆಯಲಿದೆ.

59.84 ಲಕ್ಷ ಅರ್ಜಿ ಮಾಹಿತಿ ಪ್ರಕಟ

ಚುನಾವಣಾ ಆಯೋಗ ಮರು ಪರಿಶೀಲನೆಗೆ ಮೀಸಲಿಟ್ಟ 60.06 ಲಕ್ಷ ಪ್ರಕರಣಗಳಲ್ಲಿ 59.84 ಲಕ್ಷ ಪ್ರಕರಣಗಳ ಮಾಹಿತಿಗಳನ್ನು ಸಾರ್ವಜನಿಕವಾಗಿ ಪ್ರಕಟಿಸಲಾಗಿದೆ. ಉಳಿದ 22,163 ಹೆಸರುಗಳು ಮರು ಪರಿಶೀಲನಾ ಪ್ರಕ್ರಿಯೆಗೆ ಒಳಗಾದರೂ ಇ-ಸಹಿ ಬಾಕಿ ಇರುವುದರಿಂದ ಪ್ರಕಟಣೆಗೆ ಪರಿಗಣಿಸಲಾಗಿಲ್ಲ. ಇ-ಸಹಿ ಪ್ರಕ್ರಿಯೆ ಪೂರ್ಣಗೊಂಡ ಬಳಿಕ ರಾಜ್ಯದಲ್ಲಿನ ಒಟ್ಟಾರೆ ಮತದಾರರ ಸಂಖ್ಯೆ ಮತ್ತು ರದ್ದಾದ ಹೆಸರುಗಳ ಸಂಖ್ಯೆಯಲ್ಲಿ ಮತ್ತೆ ಬದಲಾವಣೆ ಆಗಬಹುದಾಗಿದೆ ಎಂದು ಚುನಾವಣಾ ಆಯೋಗದ ಅಧಿಕಾರಿಗಳು ಮಂಗಳವಾರ ತಿಳಿಸಿದ್ದಾರೆ.ನ್ಯಾಯಾಂಗದ ಅಧಿಕಾರಿಗಳ ಮೇಲುಸ್ತುವಾರಿಯಲ್ಲಿ ನಡೆದ ಈ ಪರಿಷ್ಕರಣೆಯನ್ನು ಹಂತ ಹಂತವಾಗಿ ಮತ್ತು ಪಾರದರ್ಶಕವಾಗಿ ನಡೆಸಲಾಗಿದೆ. ಅಲ್ಲದೇ, ಜಿಲ್ಲಾವಾರು ಮಾಹಿತಿಯನ್ನೂ ಸಾರ್ವಜನಿಕವಾಗಿ ಪ್ರಕಟಿಸಲಾಗಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಪೂರಕ ಪಟ್ಟಿ ಪ್ರಕಾರ ಮತದಾನ

ಪಶ್ಚಿಮ ಬಂಗಾಳದ ಮತದಾರರ ಪಟ್ಟಿಯ ಅಂತಿಮ ಪೂರಕ ಪಟ್ಟಿಯನ್ನು ಪ್ರಕಟಿಸಿದ ನಂತರ, ಪಶ್ಚಿಮ ಬಂಗಾಳ ವಿಧಾನಸಭಾ ಚುನಾವಣೆಯ ಮೊದಲ ಹಂತದ ಮತದಾರರ ಪಟ್ಟಿಯನ್ನು ನಿಯಮಾನುಸಾರ ಸ್ಥಗಿತಗೊಳಿಸಲಾಗಿದೆ. ರಾಜ್ಯದ 294 ಕ್ಷೇತ್ರಗಳಲ್ಲಿ 152 ಕ್ಷೇತ್ರಗಳಲ್ಲಿ ಏಪ್ರಿಲ್ 23ರಂದು ಮತದಾನ ನಡೆಯಲಿದೆ. ಉಳಿದ 142 ಕ್ಷೇತ್ರಗಳಲ್ಲಿ ಏಪ್ರಿಲ್ 29ರಂದು ಮತದಾನ ನಡೆಯಲಿದೆ. ಎರಡನೇ ಹಂತದ ಪಟ್ಟಿಯನ್ನು ಏಪ್ರಿಲ್ 9ರಂದು ಸ್ಥಗಿತಗೊಳಿಸಲಾಗುತ್ತದೆ.

ಕುನೊ ಆಚೆ ಆಫ್ರಿಕಾ ಚೀತಾಗೆ ಕಲ್ಲೆಸೆದು ಓಡಿಸಿದ ವೃದ್ಧ ರೈತ

ಭೋಪಾಲ್: ಭಾರತದಲ್ಲಿ ನಾಶವಾಗಿ ಹೋಗಿದ್ದ ಚುಕ್ಕಿ ಚೀತಾಗಳ ಪುನರುತ್ಥಾನಕ್ಕಾಗಿ ಆಫ್ರಿಕಾ ಖಂಡದ ದೇಶಗಳಿಂದ ಚೀತಾಗಳನ್ನು ಭಾರತ ಸರಕಾರ ಆಮದು ಮಾಡಿಕೊಂಡು ಮಧ್ಯಪ್ರದೇಶದ ಕುನೋ ರಾಷ್ಟ್ರೀಯ ಜೈವಿಕ ಉದ್ಯಾನವನದಲ್ಲಿ ಬೆಳೆಸುತ್ತಿದೆ. ಆ ಯೋಜನೆ ಬಹುತೇಕ ಯಶಸ್ವಿಯಾಗಿದ್ದು, ಭಾರತದಲ್ಲಿಯೂ ಅವುಗಳ ಸಂತತಿ ಹೆಚ್ಚಲಾರಂಭಿಸಿದೆ.

ಅವೇ ಚೀತಾಗಳು ಈಗ ಕುನೋ ರಾಷ್ಟ್ರೀಯ ಉದ್ಯಾನವನದ ಆಚೆಗೂ ಬಂದು ಸಮೀಪದ ಹಳ್ಳಿಗಳಲ್ಲಿ ಕಾಣಿಸಿಕೊಳ್ಳಲಾರಂಭಿಸಿವೆ. ಅತ್ಯಂತ ವೇಗದ ಚಲನೆಯ ಕಾರಣಕ್ಕೆ ಬಹಳ ಹೆಸರುವಾಸಿಯಾಗಿರುವ ಆಫ್ರಿಕಾ ಚೀತಾಗಳು ಈಗ ಹಳ್ಳಿಗಳಲ್ಲಿ ಕಾಣಿಸಿಕೊಳ್ಳುತ್ತಿರುವುದರಿಂದ ಈ ಭಾಗದ ರೈತರು ಜೀವ ಕೈಯಲ್ಲಿ ಹಿಡಿದು ಓಡಾಡುವಂತಾಗಿದೆ. ಇತ್ತೀಚೆಗೆ ಕುನೋ ಉದ್ಯಾನ ಸಮೀಪದ ಮೊರೆನಾ ಜಿಲ್ಲೆಯ ಸುಮಾರಿಗೆ ಅರ್ಟೆ ಗ್ರಾಮ ಪಂಚಾಯತ್ ವ್ಯಾಪ್ತಿಯ ಮದನ್ಪುರ ಗ್ರಾಮದಲ್ಲಿ ಅದಾಗಲೇ ಫಸಲು ಕೊಯ್ಲು ಆಗಿರುವ ಕೃಷಿ ಭೂಮಿಯಲ್ಲಿ ವೃದ್ಧ ರೈತರೊಬ್ಬರು ಶನಿವಾರ ಸಂಜೆ 4 ಗಂಟೆಯಲ್ಲಿ ಎಮ್ಮೆಗಳನ್ನು ಮೇಯಿಸುತ್ತಿದ್ದಾಗ ದೊಡ್ಡ ಗಾತ್ರದ ವಯಸ್ಕ ಆಫ್ರಿಕಾ ಚೀತಾವೊಂದು ಅಲ್ಲಿಗೆ ಬಂದಿದೆ. ಅಲ್ಲಿ ಮೇಯುತ್ತಿದ್ದ 5-6 ಎಮ್ಮೆಗಳ ಬಳಿ ಎಡತಾಕಿದೆ. ಚೀತಾ ಸಮೀಪಕ್ಕೆ ಬಂದು ನಿಂತರೂ ಎಮ್ಮೆಗಳೂ ಭಯಪಟ್ಟಿಲ್ಲ. ಓಡಿ ಹೋಗಲೂ ಯತ್ನಿಸಿಲ್ಲ. ಒಮ್ಮೆ ತಲೆಎತ್ತಿ ಚೀತಾದತ್ತ ನೋಡಿ ಮತ್ತೆ ಹುಲ್ಲು ಮೇಯುವುದನ್ನು ಮುಂದುವರಿಸಿವೆ.

ಮೊದಲಿಗೆ ಚೀತಾ ಓಡಾಟವನ್ನು ಸುಮ್ಮನೆ ನೋಡುತ್ತಾ ನಿಂತಿದ್ದ ವೃದ್ಧರೈತ, ಚೀತಾ ಎಮ್ಮೆಗಳ ಬಳಿ ತೆರಳುತ್ತಿದ್ದಂತೆಯೇ ಅದರತ್ತ ದಾಪುಗಾಲು ಹಾಕಿಕೊಂಡು ಹೋಗಿದ್ದಾರೆ. ಅಲ್ಲೇ ಬಿದ್ದಿದ್ದ ಕಲ್ಲನ್ನು ಎತ್ತಿಕೊಂಡು ಚೀತಾದತ್ತ ಎಸೆದು ಕೂಗು ಹಾಕಿ ಗದರಿಸಿದ್ದಾರೆ. ಚೀತಾ ಅಷ್ಟಕ್ಕೇ ಹೆದರಿ ಓಡಿಹೋಗಿದೆ. ಸಂಭಾವ್ಯ ದಾಳಿ ತಪ್ಪಿದೆ.

ಉತ್ತಮ ಬೆಳವಣಿಗೆ: ಕುನೋ ಅಧಿಕಾರಿ

ಅರ್ಟೆ ಗ್ರಾಮದ ಈ ಘಟನೆ ಹಿಂದಿನದಕ್ಕೆ ವ್ಯತಿರಿಕ್ತವಾಗಿದೆ. 2025ರಲ್ಲಿ ಶಿಯೋಪುರ್ ಜಿಲ್ಲೆಯಲ್ಲಿ ಹೆಣ್ಣು ಚಿರತೆ ಜ್ವಾಲಾ ಮತ್ತು ಅದರ ಮರಿಗಳು ಕುನೋ ಉದ್ಯಾನದಿಂದಾಚೆ ಬಂದು ಕರುವೊಂದನ್ನು ಗುರಿಯಾಗಿಸಿ ದಾಳಿ ಮಾಡಲೆತ್ನಿಸಿದ್ದಾಗ ಗ್ರಾಮಸ್ಥರು ತೀರಾ ಆಕ್ರಮಣಕಾರಿಯಾಗಿ ಪ್ರತಿಕ್ರಿಯಿಸಿದ್ದರು. ಈಗ ಪರಿಸ್ಥಿತಿ ಬದಲಾಗಿದೆ. ಗ್ರಾಮದ ಜನರೂ ಆಫ್ರಿಕಾ ಚೀತಾಗಳ ಬಗ್ಗೆ ಸೌಮ್ಯವಾಗಿ ವರ್ತಿಸುತ್ತಿದ್ದಾರೆ. ಚೀತಾ ಜತೆ ಹೇಗೆ ವರ್ತಿಸಬೇಕು ಎಂಬುದನ್ನು ಸ್ಥಳೀಯರು ಕಲಿತಿದ್ದಾರೆ. ಸ್ವಲ್ಪ ಕೂಗು ಹಾಕಿ ಎಚ್ಚರಿಕೆ ನೀಡಿದರೆ ಸಾಕು. ಚೀತಾ ಓಡಿಹೋಗುತ್ತದೆ ಎಂಬುದು ಅವರಿಗೂ ತಿಳಿಯುತ್ತಿದೆ ಎಂದು ಕುನೋ ರಾಷ್ಟ್ರೀಯ ಉದ್ಯಾನದ ಹಿರಿಯ ಅಧಿಕಾರಿಯೊಬ್ಬರು ಪ್ರತಿಕ್ರಿಯಿಸಿದ್ದಾರೆ.

ಈ ಘಟನೆಯ ವಿಡಿಯೊ ಜಾಲತಾಣದಲ್ಲಿ ವೈರಲ್ ಆಗಿದೆ. ವೃದ್ಧ ರೈತ ಬೀದಿನಾಯಿಯನ್ನು ಕಲ್ಲೆಸೆದು ಓಡಿಸಿದಷ್ಟೇ ಸಹಜವಾಗಿ ಆಫ್ರಿಕಾ ಚೀತಾವನ್ನು ಕಲ್ಲೆತ್ತಿ ಒಗೆದು ಓಡಿಸಿರುವ ದೃಶ್ಯ ಅಚ್ಚರಿ ಎನಿಸಿದರೂ ಅಷ್ಟೇ ಆಘಾತಕಾರಿಯೂ ಆಗಿದೆ. ಅದೃಷ್ಟಕ್ಕೆ ಚೀತಾ ಓಡಿಹೋಗಿರುವುದು ಸಮಾಧಾನ ತರುತ್ತದೆ.

ರಾಜಸ್ಥಾನದ ಜೈಪುರ ಪೊಲೀಸರ ಯಶಸ್ವಿ ಕಾರ್ಯಾಚರಣೆ: ಡಿಜಿಎಫ್‌ಟಿ ವೆಬ್ ಹ್ಯಾಕರ್ಸ್ ಪತ್ತೆ

400 ಕಂಪನಿಗಳಿಗೆ 400 ಕೋಟಿ ರು. ವಂಚಿಸಿದ್ದ ಐವರ ಬಂಧನ

ಜೈಪುರ: ವಿದೇಶಿ ವ್ಯಾಪಾರ ಮಹಾ ನಿರ್ದೇಶನಾಲಯ(ಡಿಜಿಎಫ್‌ಟಿ) ವೆಬ್‌ಸೈಟ್ ಅನ್ನು ಹ್ಯಾಕ್ ಮಾಡಿ ದೇಶಾದ್ಯಂತದ 400 ಕಂಪನಿಗಳ ನಿರ್ದೇಶಕರುಗಳ ಪ್ರೊಫೈಲ್‌ಗಳನ್ನೆಲ್ಲಾ ಬದಲಿಸಿದ್ದ ಸೈಬರ್ ವಂಚಕರ ಜಾಲವನ್ನು ರಾಜಸ್ಥಾನ ಪೊಲೀಸರು ಬಯಲಿಗೆಳೆದಿದ್ದಾರೆ.

ದುಬೈ ನಂಟು ಹೊಂದಿರುವ ಸೈಬರ್ ವಂಚಕರು ನಡೆಸಿರುವ ಈ 'ಡಿಜಿಎಫ್‌ಟಿ-ಐಸಿಇಜಿಎಟಿಇ ಸ್ಕ್ರಿಪ್ ಹಗರಣ'ದಿಂದಾಗಿ ದೇಶಾದ್ಯಂತದ 400 ಕಂಪನಿಗಳಿಗೆ ಕೋಟ್ಯಂತರ ರು. ನಷ್ಟವಾಗಿದೆ. ಪ್ರತಿ ಕಂಪನಿಯಿಂದ 1 ಎಕ್ಸ್‌ಪೋರ್ಟ್ ಸ್ಕ್ರಿಪ್ಸ್ ಎಗರಿಸಿ ತಲಾ 1 ಕೋಟಿ ರು.ಗೆ ಮಾರಾಟ ಮಾಡಿ 400 ಕೋಟಿ ರು. ವಂಚಿಸಿದ್ದಾರೆ. ದುಬೈನಿಂದಲೇ ನಡೆಸುತ್ತಿದ್ದ ಈ ಸಂಘಟಿತ ಸೈಬರ್ ವಂಚಕರ ಜಾಲವನ್ನು ಬಯಲಿಗೆಳೆದು ಐವರು ಹ್ಯಾಕರ್‌ಗಳನ್ನು ಬಂಧಿಸಲಾಗಿದೆ ಎಂದು ಜೈಪುರ ಪೊಲೀಸ್ ಆಯುಕ್ತರ ಕಚೇರಿ ಅಧಿಕಾರಿಗಳು ಮಂಗಳವಾರ ಸುದ್ದಿಗೋಷ್ಠಿಯಲ್ಲಿ ವಿವರಿಸಿದ್ದಾರೆ.

ಸೈಬರ್ ವಂಚಕರ ಈ ಜಾಲ 400ಕ್ಕೂ ಹೆಚ್ಚು ಕಂಪನಿಗಳ ವೆಬ್ ತಾಣಗಳಿಗೂ ಪ್ರವೇಶಿಸಿ ಕಂಪನಿಗಳ ನಿರ್ದೇಶಕರ ಹುದ್ದೆ, ಕಂಪನಿಯಲ್ಲಿ ಮಾಹಿತಿ ಸೇರಿದಂತೆ ಹಲವು ಮಾಹಿತಿಗಳನ್ನು ಅತಿ ಕುಶಲತೆಯಿಂದ ಬದಲಿಸಿದ್ದಾರೆ. ಸೈಬರ್ ವಂಚಕರು ನಕಲಿ ಆಧಾರ್ ಕಾರ್ಡ್ ಮತ್ತು ಪ್ಯಾನ್ ಕಾರ್ಡ್‌ಗಳನ್ನು ಬಳಸಿ ಡಿಜಿಟಲ್ ಸಿಗ್ನೇಚರ್ ಪ್ರಮಾಣಪತ್ರಗಳನ್ನೂ ಸಂಪಾದಿಸಿದ್ದಾರೆ. ಇದೆಲ್ಲದರ ಪರಿಣಾಮವಾಗಿ 400 ಕಂಪನಿಗಳಿಗೆ ದೊಡ್ಡ ಮಟ್ಟದಲ್ಲಿ ನಷ್ಟ ಉಂಟಾಗಿದೆ ಎಂದು ಜೈಪುರ ಪೊಲೀಸ್ ಆಯುಕ್ತ ಹೇಳಿದ್ದಾರೆ.

ಕಂಪನಿಯ ನಿರ್ದೇಶಕರು ಅಥವಾ ರಫ್ತುದಾರರ ಡಿಜಿಟಲ್

ಗುರುತನ್ನು ಪರಿಶೀಲಿಸಲು ಸಾಮಾನ್ಯವಾಗಿ ಬಳಸಲಾಗುವ ಈ ಪ್ರಮಾಣಪತ್ರಗಳನ್ನು ನಂತರ ಸುರಕ್ಷಿತ ಐಸಿಇಜಿಎಟಿಎ ಪೋರ್ಟಲ್ಗೆ ಅನಧಿಕೃತ ಪ್ರವೇಶವನ್ನು ಪಡೆಯಲು ದುರುಪಯೋಗ ಪಡಿಸಿಕೊಂಡಿದ್ದಾರೆ. ಒಳಗೆ ಪ್ರವೇಶಿಸಿದ ನಂತರ, ಹ್ಯಾಕರ್‌ಗಳು ರಫ್ತುದಾರರ ಖಾತೆಗಳನ್ನು ಭೇದಿಸಿ, ಡ್ಯೂಟಿ ಕ್ರೆಡಿಟ್ ಸ್ಕ್ರಿಪ್ಸ್ ಎಗರಿಸಿ ಮೋಸದ ಖಾತೆಗಳಿಗೆ ವರ್ಗಾಯಿಸಿ, ನಂತರ ಅದನ್ನು ನಗದು ರೂಪದಲ್ಲಿ ಪಡೆದುಕೊಂಡಿದ್ದಾರೆ ಎಂದು ವಿವರ ನೀಡಿದ್ದಾರೆ.

13 ವಂಚಕರ ಗುರುತು ಪತ್ತೆ: ಸದ್ಯ ಐವರ ಸೆರೆ

ಈ ವಂಚನೆ ಜಾಲದ ಬಗ್ಗೆ ಮೊದಲಿಗೆ ಮರುಧರ್ ಕ್ವಾರ್ಟ್ಜ್ ಸರ್ಫೇಸಸ್ ಪ್ರೈ.ಲಿ.ನ ನಿರ್ದೇಶಕ ಸೌರಭ್ ಬಾಫ್ನಾ ಎಂಬವರು ದೂರು ನೀಡಿದರು. 2025ರ ಡಿ.17ರ ನಂತರ ಬಾಫ್ನಾ ಅವರು ಲಾಗಿನ್ ಆಗದೇ ಇದ್ದರೂ ಅವರ ಐಇಸಿ ಐಡಿಯಿಂದ 17.88 ಲಕ್ಷ ರು. ಮೌಲ್ಯದ 5 ಸ್ಕ್ರಿಪ್‌ಗಳನ್ನು ವರ್ಗಾಯಿಸಲಾಗಿತ್ತು. ದೂರು ಆಧರಿಸಿ ತನಿಖೆ ನಡೆಸಿದಾಗ ಈ ಬೃಹತ್ ಸೈಬರ್ ವಂಚನೆ ಜಾಲ ಬೆಳಕಿಗೆ ಬಂದಿದೆ. ಈ ಸೈಬರ್ ವಂಚಕರ ಜಾಲ ಜೋಧ್‌ಪುರ ಮತ್ತು ಪಾಲಿ ಸೇರಿದಂತೆ ಹಲವು ನಗರಳಿಗೆ ವ್ಯಾಪಿಸಿದ್ದು, ಒಟ್ಟು 13 ಸೈಬರ್ ವಂಚಕರನ್ನು ಈ ಜಾಲದಲ್ಲಿ ಗುರುತಿಸಲಾಗಿದೆ. ಸದ್ಯ ಜೋಧ್ಪುರದ ಸುಲ್ತಾನ್ ಖಾನ್, ನಂದಕಿಶೋರ್, ಅಶೋಕ್ ಕುಮಾರ್ ಭಂಡಾರಿ, ಪ್ರಮೋದ್ ಖತ್ರಿ ಮತ್ತು ಪಾಲಿಯ ನಿರ್ಮಲ್ ಸೋನಿ ಎಂಬವರನ್ನು ಬಂಧಿಸಲಾಗಿದೆ ಎಂದು ವಿಶೇಷ ಪೊಲೀಸ್ ಆಯುಕ್ತ ಓಂ ಪ್ರಕಾಶ್ ವಿವರ ನೀಡಿದ್ದಾರೆ.

ವಿದೇಶಾಂಗ ಕಾರ್ಯದರ್ಶಿ ಮಿಸ್ರಿ ಅಮೆರಿಕ ಪ್ರವಾಸ

ದೆಹಲಿ: ಅಮೆರಿಕ-ಇಸ್ರೇಲ್ ಜಂಟಿಯಾಗಿ ಫೆ.28ರಿಂದಲೂ (39 ದಿನಗಳಿಂದ) ಇರಾನ್ ಮೇಲೆ ಯುದ್ಧ ನಡೆಸುತ್ತಿದ್ದು, ಪಶ್ಚಿಮ ಏಷ್ಯಾ ಭಾಗದಲ್ಲಿ ತೀರಾ ಉದ್ವಿಗ್ನತೆ ನೆಲೆಸಿರುವ ಸಂದರ್ಭದಲ್ಲೇ ಭಾರತದ ವಿದೇಶಾಂಗ ಕಾರ್ಯದರ್ಶಿ ವಿಕ್ರಂ ಮಿಸ್ರಿ ಅವರು 3 ದಿನಗಳ ಅಮೆರಿಕ ಪ್ರವಾಸ ಕೈಗೊಳ್ಳುತ್ತಿದ್ದಾರೆ.

ಬುಧವಾರ ಪ್ರಯಾಣ ಆರಂಭಿಸಿ ಏ.10ರವರೆಗೆ ಅಮೆರಿಕದಲ್ಲಿರಲಿದ್ದಾರೆ. ಈ ವೇಳೆ ಭಾರತ-ಅಮೆರಿಕ ದ್ವಿಪಕ್ಷೀಯ ಸಂಬಂಧಗಳ ಸದ್ಯದ ಪರಿಸ್ಥಿತಿಯನ್ನು ಪರಿಶೀಲಿಸುವುದರ ಜತೆಗೆ, ವ್ಯಾಪಾರ, ರಕ್ಷಣಾ ಸಹಕಾರ, ವಿಜ್ಞಾನ ಮತ್ತು ತಂತ್ರಜ್ಞಾನ ಸೇರಿದಂತೆ ಪ್ರಮುಖ ವಿಷಯಗಳ ಕುರಿತು ಚರ್ಚೆ ನಡೆಸಲಿದ್ದಾರೆ. ಪಶ್ಚಿಮ ಏಷ್ಯಾದಲ್ಲಿನ ಪ್ರಸಕ್ತ ಉದ್ವಿಗ್ನತೆ, ಇಂಡೋ-ಪೆಸಿಫಿಕ್ ವಲಯದ ಪರಿಸ್ಥಿತಿ, ಜಾಗತಿಕ ಆರ್ಥಿಕ ಸ್ಥಿತಿ ಕುರಿತೂ ಚರ್ಚೆ ನಡೆಯಲಿದೆ ಎಂದು ವಿದೇಶಾಂಗ ವ್ಯವಹಾರಗಳ ಸಚಿವಾಲಯ ಮಂಗಳವಾರ ಸುದ್ದಿಸಂಸ್ಥೆಗೆ ಮಾಹಿತಿ ನೀಡಿದೆ.

ಭಾರತದ ಮೇಲೆ ಅಮೆರಿಕ ವಿಧಿಸಿದ್ದ ಪ್ರತಿಸುಂಕ, ಆಮದು ತೆರಿಗೆಗಳ ವಿಚಾರವಾಗಿ ಗೊಂದಲ ಉಂಟಾಗಿತ್ತು. ಈ ಬಾರಿಯ ಭೇಟಿ ವೇಳೆ ಎರಡೂ ದೇಶಗಳ ವಿದೇಶಾಂಗ ಕಾರ್ಯದರ್ಶಿಗಳು ಮತ್ತು ವಾಣಿಜ್ಯ ಸಚಿವಾಲಯದ ಅಧಿಕಾರಿಗಳು ದ್ವಿಪಕ್ಷೀಯ ವ್ಯಾಪಾರ ಒಪ್ಪಂದದ ಮುಂದಿನ ಹೆಜ್ಜೆಗಳ ಕುರಿತು ಚರ್ಚಿಸುವ ಸಾಧ್ಯತೆಯೂ ಇದೆ ಎನ್ನಲಾಗಿದೆ.

ಅಖಂಡ ಭಾರತ: ಯುಎಇಗೆ ಎಚ್ಚರಿಕೆ

ಇಸ್ಲಾಮಾಬಾದ್: 'ಯುನೈಟೆಡ್ ಅರಬ್ ಎಮಿರೇಟ್ಸ್(ಯುಎಇ) ಮುಂದೊಂದು ದಿನ ಅಖಂಡ ಭಾರತ ಆಗಿಬಿಡುವ ಅಪಾಯವಿದೆ, ಈಗಲೇ ಎಚ್ಚೆತ್ತುಕೊಳ್ಳಿ' ಎಂದು ಪಾಕಿಸ್ತಾನದ ಸಂಸದ ಮುಶಾಹಿದ್

ಹುಸೇನ್ ಮಂಗಳವಾರ ಹೇಳಿ ದ್ದಾರೆ. ಯುಎಇ ಮೊದಲು ತನ್ನ ಆಂತರಿಕ ವಿಚಾ ರದತ್ತ ಗಮನ ಹರಿಸಬೇಕು. ಆ ದೇಶದ ಒಟ್ಟು ಜನಸಂಖ್ಯೆ 1 ಕೋಟಿ ಇದೆ. ಅದರಲ್ಲಿ ಶೇ.43ರಷ್ಟು(43 ಲಕ್ಷ) ಭಾರತದವರೇ ಇದ್ದಾರೆ. ಮುಂದೊಂದು ದಿನ 'ಅಖಂಡ ಭಾರತ' ಆಗಿಬಿಡುವ ಅಪಾಯವನ್ನು ಈಗಲೇ ಯುಎಇ ಗಮನಿಸಬೇಕು ಎಂದು ಹುಸೇನ್ ಎಚ್ಚರಿಸಿದ್ದಾರೆ.ತಮ್ಮ ಮೇಲೆ ಇರಾನ್ ಯುದ್ಧ ಮಾಡುತ್ತಿದ್ದರೂ ಇತ್ತೀಚೆಗೆ ಮಾಡಿಕೊಂಡ ಒಪ್ಪಂದದಂತೆ ಯುಎಇ ನೆರವಿಗೆ ಪಾಕಿಸ್ತಾನ ಬಾರದೇ ಇರುವುದಕ್ಕೆ 'ಯುಎಇ' ಸಿಟ್ಟಾಗಿದೆ. ಹಾಗಾಗಿ ಈ ಮೊದಲು ಪಾಕ್‌ಗೆ ಕಷ್ಟದ ಕಾಲದಲ್ಲಿ ಸಾಲವಾಗಿ ಕೊಟ್ಟಿದ್ದ 350 ಕೋಟಿ ಡಾಲರ್ ಹಣವನ್ನು ವಾಪಸ್ ಮಾಡುವಂತೆ ಕೇಳುತ್ತಿದೆ. ಅದಕ್ಕೆ ಪಾಕ್‌ನ ಸಂಸದ ಹುಸೇನ್ 'ನಾವೀಗ ಅಸಹಾಯಕರು' ಎಂದು ಪ್ರತಿಕ್ರಿಯಿಸಿದ್ದಾರೆ.

'ಪಶ್ಚಿಮ ಏಷ್ಯಾದಲ್ಲಿನ ಬಿಕ್ಕಟ್ಟಿನ ಈ ಸಂದರ್ಭದಲ್ಲಿ ಯುಎಇ ನೆರವಿಗೆ ಪಾಕ್ ಹೋಗಬೇಕಿತ್ತು. ಆದರೆ, ಅದೀಗ ಸಾಧ್ಯವಾಗುತ್ತಿಲ್ಲ. ನಾವು ಸದ್ಯ ಆರ್ಥಿಕವಾಗಿ ಬಹಳ ಕಷ್ಟದಲ್ಲಿದ್ದೇವೆ. ನೀವು ನೆರೆಯ ಸೋದರ ದೇಶ ಕಷ್ಟದಲ್ಲಿದೆ ಎಂಬ ಕಾರಣಕ್ಕೆ ನೆರವಾಗಲು ಕೊಟ್ಟ ಹಣವನ್ನು ಈಗ ಕೇಳುವುದು ಎಷ್ಟು ಸರಿ? ನಮ್ಮಿಂದ ಈಗ ಹಣ ವಾಪಸ್ ಮಾಡಲಾಗುತ್ತಿಲ್ಲ. ನಾವು ಬಹಳ ಅಸಹಾಯಕರಾಗಿದ್ದೇವೆ' ಎಂದು ಪ್ರತಿಕ್ರಿಯಿಸಿದ್ದಾರೆ.

ಆದರೆ, ಪಾಕ್ ಕೂಡಾ ಯುಎಇಗೆ ಆರಂಭ ಕಾಲದಲ್ಲಿ ದೇಶ ನಿರ್ಮಾಣ ಕಾರ್ಯದಲ್ಲಿ ನೆರವಾಗಿದೆ, ಅವರ ಸೇನೆಗೆ ಪಾಕ್ ತರಬೇತಿ ನೀಡಿದೆ. ಅದನ್ನು ಯುಎಇ ಮರೆಯಬಾರದು ಎಂದೂ ಹುಸೇನ್ 'ದುನ್ಯಾ ನ್ಯೂಸ್'ಗೆ ನೀಡಿದ ಸಂದರ್ಶನದಲ್ಲಿ ಹೇಳಿದ್ದಾರೆ.

ಬಾಂಬ್‌ಗೆ 2 ಮಕ್ಕಳು ಬಲಿ: ಮಣಿಪುರ ಕೆರಳಿ ಕೆಂಡ

ಮೊಯಿರಾಂಗ್ ಪೊಲೀಸ್ ಠಾಣೆಯ ಮುಂದೆ ಬೆಂಕಿ ಹಚ್ಚಿದ ಉದ್ರಿಕ್ತ ಗುಂಪು.

ಮಹಿಳೆಯರು, ಮಕ್ಕಳೂ ರಸ್ತೆಗಿಳಿದು ಪ್ರತಿಭಟನೆ ನಡೆಸಿದರು.

ಇಂಫಾಲ: ಮಣಿಪುರ ರಾಜ್ಯದ ಬಿಷ್ಣುಪುರ ಜಿಲ್ಲೆಯಲ್ಲಿ ಮೋಯಿರಾಂಗ್ ಟ್ರೊಂಗ್ಲಾವೊಬಿ ಪ್ರದೇಶದ ಮನೆಯೊಂದರ ಮೇಲೆ ಉಗ್ರರು ಮಂಗಳವಾರ ನಸುಕಿನಲ್ಲಿ ಬಾಂಬ್ ದಾಳಿ ನಡೆಸಿದ್ದು, ಮನೆಯಲ್ಲಿದ್ದ ಇಬ್ಬರು ಮಕ್ಕಳು ಮೃತಪಟ್ಟು, ತಾಯಿ ಗಂಭೀರವಾಗಿ ಗಾಯಗೊಂಡಿದ್ದಾರೆ. ಉಗ್ರರ ಬಾಂಬ್ ದಾಳಿಗೆ ಆರು ತಿಂಗಳ ಹೆಣ್ಣು ಹಸುಗೂಸು ಮತ್ತು 5 ವರ್ಷದ ಬಾಲಕ ಸ್ಥಳದಲ್ಲೇ ಮೃತಪಟ್ಟಿದ್ದಾರೆ. ಗಂಭೀರವಾಗಿ ಗಾಯಗೊಂಡಿರುವ ಬಾಣಂ ತಿಯನ್ನು ತಕ್ಷಣವೇ ಸಮೀಪದ ಆಸ್ಪತ್ರೆಗೆ ದಾಖಲಿಸಿ ಚಿಕಿತ್ಸೆ ನೀಡಲಾಗುತ್ತಿದೆ ಎಂದು ಸ್ಥಳೀಯ ಅಧಿಕಾರಿಗಳು ಸುದ್ದಿಸಂಸ್ಥೆಗೆ ಮಾಹಿತಿ ನೀಡಿದ್ದಾರೆ.ಮಕ್ಕಳ ಸಾವಿನ ಸುದ್ದಿ ಕೇಳಿ ಆಕ್ರೋಶಗೊಂಡ ಸ್ಥಳೀಯರು, ಬಳಿಕ ಗುಂಪಾಗಿ ತೆರಳಿ ಪೆಟ್ರೋಲ್ ಬಂಕ್ ಬಳಿಯಿದ್ದ ಒಂದು ಟ್ರಕ್, 2 ತೈಲ ಟ್ಯಾಂಕರ್‌ಗಳಿಗೆ ಬೆಂಕಿ ಹಚ್ಚಿದ್ದಾರೆ. ಮೋಯಿರಾಂಗ್ ಪೊಲೀಸ್ ಠಾಣೆ ಮುಂದೆ ಟಯರ್‌ಗಳನ್ನು ಸುಟ್ಟು, ಪೊಲೀಸ್ ಚೌಕಿ ಧ್ವಂಸಗೊಳಿಸಿ ಆಕ್ರೋಶ ವ್ಯಕ್ತಪಡಿಸಿದ್ದಾರೆ. ಯುವಕರು ರಸ್ತೆ ತಡೆ ನಡೆಸಿದ್ದಾರೆ. ಪ್ರದೇಶದಲ್ಲಿ ಉದ್ವಿಗ್ನತೆ ಉಂಟಾಗಿದ್ದು, ಹೆಚ್ಚಿನ ಪ್ರಮಾಣದಲ್ಲಿ ಭದ್ರತಾ ಪಡೆ ನಿಯೋಜಿಸಲಾಗಿದೆ. ಮೈಥೇಯಿ ಮತ್ತು ಕುಕಿ ಸಮುದಾಯದ ನಡುವಿನ ತಿಕ್ಕಾಟ ಮತ್ತೆ ಹಿಂಸಾಚಾರಕ್ಕೆ ಕಾರಣವಾಗಿದೆ. ಕುಕಿ ಶಸಸ್ತ್ರ ಗುಂಪು 5 ತಿಂಗಳು ಶಿಶು ಮತ್ತು 5 ವರ್ಷದ ಮಗನ ಜತೆ ತಾಯಿ ಮಲಗಿದ್ದ ವೇಳೆ ಮನೆಗೆ ಬಾಂಬ್ ಎಸೆದಿದೆ. 2 ಮಕ್ಕಳ ಸಾವಿನ ಬಳಿಕ ಆಕ್ರೋಶಗೊಂಡ ಮೈಥೇ ಯಿ ಜನಾಂಗದ ಗುಂಪು 5 ಜಿಲ್ಲೆಗಳಲ್ಲಿ ಹಿಂಸಾಚಾರ ಆರಂಭಿಸಿದೆ. ಮಹಿಳೆಯರು, ಮಕ್ಕಳೂ ರಸ್ತೆಗಿಳಿದು ಪ್ರತಿಭಟನೆ ನಡೆಸಲಾರಂಭಿಸಿದ್ದಾರೆ. ಪರಿ ಣಾಮ 5 ಜಿಲ್ಲೆಗಳಲ್ಲಿಯೂ ಪ್ರಕ್ಷುಬ್ಧ ವಾತಾವರಣ ನಿರ್ಮಾಣಗೊಂಡಿದ್ದು, ಇಂಟರ್ನೆಟ್ ಕಡಿತ ಮಾಡ ಲಾಗಿದೆ.

ಸಿಆರ್‌ಪಿಎಫ್ ಗೋಲಿಬಾರ್: 2 ಸಾವು

ಸಿಆರ್‌ಪಿಎಫ್ ಮತ್ತು ಭದ್ರತಾ ಪಡೆಗಳ ಶಿಬಿರದ ಮೇಲೆ ದಾಳಿ ಮಾಡಲು ಉದ್ರಿಕ್ತ ಗುಂಪು ಮುಂದಾಗಿತ್ತು. ಗುಂಪನ್ನು ತಡೆದು ಚದುರಿಸಲು ಸಿಆರ್‌ಪಿಎಫ್ ಯೋಧರು ಗುಂಡಿನ ದಾಳಿ ನಡೆಸಿದ್ದರಿಂದ ಉದ್ರಿಕ್ತ ಗುಂಪಿನಲ್ಲಿದ್ದ ಇಬ್ಬರು ಮೃತಪಟ್ಟಿದ್ದಾರೆ ಎಂದು ವರದಿಯಾಗಿದೆ.

'ಮಿ.ಚೀಫ್ ಸೆಕ್ರೆಟರಿ ನಿಮ್ಮ ಸಮಸ್ಯೆ ಏನು?' ಸಿಜೆಐ ಪೀಠ ತರಾಟೆ | ಮಾಲ್ಡಾದಲ್ಲಿ ಅಧಿಕಾರಿಗಳಿಗೆ ದಿಗ್ಬಂಧನ ಘಟನೆ

ಸಿಜೆಐ ಕರೆಯನ್ನೂ ಸ್ವೀಕರಿಸದ ಪ.ಬಂ. ಮುಖ್ಯ ಕಾರ್ಯದರ್ಶಿ

ದೆಹಲಿ: ಮತದಾರರ ಪಟ್ಟಿಯ ಮರು ಪರಿಶೀಲನೆ ಸಂಬಂಧ ಪಶ್ಚಿಮ ಬಂಗಾಳದ ಮಾಲ್ಡಾ ಜಿಲ್ಲೆಗೆ ಏ.1ರಂದು ತೆರಳಿದ್ದ ನ್ಯಾಯಾಂಗದ ಅಧಿಕಾರಿಗಳನ್ನು 9 ಗಂಟೆಗಳ ಕಾಲ ಕೂಡಿಹಾಕಿ ನೀರು-ಆಹಾರ-ಶೌಚಾಲಯ ಸೌಲಭ್ಯ ಸಿಗದಂತೆ ಮಾಡಿ ಹಿಂಸಿಸಿದ್ದ, ಸಾವಿರಾರು ಜನರನ್ನು ಸೇರಿಸಿ ಗದ್ದಲವೆಬ್ಬಿಸಿ ಜೀವಭಯ ಹುಟ್ಟು ಹಾಕಿದ್ದ ಘಟನೆ ಸಂಬಂಧ ಸುಪ್ರೀಂ ಕೋರ್ಟ್ 'ಸುಮೊಟೊ' (ಸ್ವಯಂ ಪ್ರೇರಿತ) ದೂರು ದಾಖಲಿಸಿ ಕೊಂಡು ಸೋಮವಾರ ವಿಚಾರಣೆ ನಡೆಸಿತು. ಸುಮೊಟೊ ಪ್ರಕರಣದ ವಿಚಾರಣೆ ವೇಳೆ ಪಶ್ಚಿಮ ಬಂಗಾಳದ ಮುಖ್ಯ ಕಾರ್ಯದರ್ಶಿ, ರಾಜ್ಯದ ಪೊಲೀಸ್ ಮಹಾ ನಿರ್ದೇಶಕ(ಡಿಜಿಪಿ) ಇಬ್ಬರೂ ನಡೆದುಕೊಂಡ ರೀತಿಯ ಬಗ್ಗೆ ಸುಪ್ರೀಂ ಕೋರ್ಟ್ ಮುಖ್ಯ ನ್ಯಾಯಮೂರ್ತಿ ಸೂರ್ಯಕಾಂತ್ ಅವರ ನೇತೃತ್ವದ ಪೀಠ ಕಿಡಿಕಾರಿತು.'ಮಿ.ಚೀಫ್ ಸೆಕ್ರೆಟರಿ ನಿಮ್ಮ ಸಮಸ್ಯೆ ಏನು? ಮಾಲ್ಡಾ ಘಟನೆ ದಿನ ಸುಪ್ರೀಂ ಕೋರ್ಟ್‌ನ ಮುಖ್ಯ ನ್ಯಾಯಮೂರ್ತಿಗಳೇ ಕರೆ ಮಾಡಿದ್ದರೂ ಕರೆ ಸ್ವೀಕರಿಸಲಿಲ್ಲವೇಕೆ?' ಎಂದು ಮುಖ್ಯ ನ್ಯಾಯಮೂರ್ತಿ ಸೂರ್ಯಕಾಂತ್ ಅವರೇ ಪ್ರಶ್ನೆ ಮಾಡಿದರು.ಅದಕ್ಕೆ ಮುಖ್ಯ ಕಾರ್ಯದರ್ಶಿ 'ಅಂತಹ ಯಾವುದೇ ಕರೆ ನನ್ನ ಮೊಬೈಲ್‌ಗಾಗಲೀ, ಮನೆಯ ಲ್ಯಾಂಡ್‌ಲೈನ್‌ಗಾಗಲೀ ಬಂದಿಲ್ಲ. ಅಂದು ಬೆಳಗ್ಗೆಯಿಂದ ಸಂಜೆವರೆಗೂ ಕೋಲ್ಕತ್ತದಿಂದ ಯಾವುದೇ ಅಧಿಕಾರಿಯೂ ಮಾಲ್ಡಾ ವಿಚಾರವಾಗಿ ಕರೆ ಮಾಡಿಲ್ಲ. ಅದರಲ್ಲೂ ಮಧ್ಯಾಹ್ನ 2ರಿಂದ ಸಂಜೆ 4.30ರವರೆಗೂ ನಾನು ವಿಮಾನದಲ್ಲಿ ಪ್ರಯಾಣಿಸುತ್ತಿದ್ದೆ. ಮಾಲ್ಡಾ ಘಟನೆ ಬಗೆಗೂ ಯಾವುದೇ ಮಾಹಿತಿ ತಮಗೆ ಬಂದಿಲ್ಲ' ಎಂದು ಉತ್ತರಿಸಿದರು.

ಆಗ ನ್ಯಾಯಮೂರ್ತಿ ಜೋಯ್‌ಮಲ್ಯ ಬಾಗ್ಚಿ ಅವರು, 'ಮಾನ್ಯ ಕಾರ್ಯದರ್ಶಿಗಳು ತಮ್ಮ ಮೊಬೈಲ್ ನಂಬರ್ ಮತ್ತು ಇತರೆ ಸಂಪರ್ಕ ಸಾಧನಗಳ ಸಂಖ್ಯೆಗಳನ್ನು ಸುಪ್ರೀಂ ಕೋರ್ಟ್ ಮತ್ತು ಕೋಲ್ಕತ್ತ ಹೈಕೋರ್ಟ್ ಮುಖ್ಯ ನ್ಯಾಯಮೂರ್ತಿಗಳಿಗೆ ನೀಡಿದರೆ ಬಹಳ ದೊಡ್ಡ ಉಪಕಾರವಾಗುತ್ತದೆ' ಎಂದು ವ್ಯಂಗ್ಯದ ದಾಟಿಯಲ್ಲಿ ಹೇಳಿದರು.ಒಂದು ರಾಜ್ಯದ ಮುಖ್ಯ ಕಾರ್ಯದರ್ಶಿ ಆಗಿರುವವರು ಅವರ ರಾಜ್ಯದ ಹೈಕೋರ್ಟ್‌ನ ಮುಖ್ಯ ನ್ಯಾಯಮೂರ್ತಿಗಳಿಗಾಗಲೀ ಅಥವಾ ಹೈಕೋರ್ಟ್‌ನ ಆಡಳಿತ ವ್ಯವಸ್ಥೆಗಾಗಲೀ ಸಂಪರ್ಕಕ್ಕೂ ಸಿಗದಂತೆ ಇರುವುದು ನಿಜಕ್ಕೂ ದೊಡ್ಡ ದೌರ್ಭಾಗ್ಯವೇ ಸರಿ. ಒಂದಿಡೀ ರಾಜ್ಯದ ಆಡಳಿತ ನಡೆಸಬೇಕಾದವರು ಹೀಗೆ ಉನ್ನತ ಹುದ್ದೆಯಲ್ಲಿರುವವ ಸಂಪರ್ಕಕ್ಕೂ ಸಿಗದಂತಾದರೆ ಹೇಗೆ? ಎಂದೂ ನ್ಯಾ.ಬಾಗ್ಚಿ ಪ್ರಶ್ನೆ ಮಾಡಿದರು. ನಿಮ್ಮ ಈ ಧೋರಣೆಯನ್ನು ಬದಲಿಸಿಕೊಳ್ಳಿ. ಪ್ರಮುಖರಿಗಾದರೂ ಸುಲಭವಾಗಿ ಸಂಪರ್ಕಕ್ಕೆ ಸಿಗುವಷ್ಟು ಸ್ವಲ್ಪವಾದರೂ ತಗ್ಗಿಬಗ್ಗಿ ನಡೆಯಿರಿ ಎಂದು ಮಾತಿನಲ್ಲೇ ಕುಟುಕಿದರು. ದುಶ್ಯಂತ್ ನರಿಯಾಲ ಅವರು ಪ್ರಸ್ತುತ ಪಶ್ಚಿಮ ಬಂಗಾಳದ ಮುಖ್ಯ ಕಾರ್ಯದರ್ಶಿ ಹುದ್ದೆಯಲ್ಲಿದ್ದಾರೆ. ಚುನಾವಣಾ ಆಯೋಗದ ನಿರ್ದೇಶನದ ಮೇರೆಗೆ ಮಾ.16ರಂದು ಅವರ ನೇಮಕವಾಗಿದೆ. ಸಿದ್ದನಾಥ್ ಗುಪ್ತಾ ಕೂಡಾ ಚುನಾವಣಾ ಆಯೋಗದ ಸೂಚನೆ ಮೇರೆಗೆ ಡಿಜಿಪಿ ಹುದ್ದೆಗೆ ನೇಮಕಗೊಂಡಿದ್ದಾರೆ.

ಕ್ಷಮಾಪಣಾ ಪತ್ರಕ್ಕೆ ಸೂಚನೆ

ಪಶ್ಚಿಮ ಬಂಗಾಳದ ಮುಖ್ಯ ಕಾರ್ಯದರ್ಶಿ, ಕೋಲ್ಕತ್ತ ಹೈಕೋರ್ಟ್‌ನ ಮುಖ್ಯ ನ್ಯಾಯಮೂರ್ತಿಗಳ ಸಂಪರ್ಕಕ್ಕೂ ಸಿಗದೆ, ಅವರ ಕರೆಯನ್ನೂ ಸ್ವೀಕರಿಸದೇ ಇರುವುದು ತಪ್ಪು.ಈ ತಪ್ಪಿಗಾಗಿ ತಕ್ಷಣವೇ ಕೋಲ್ಕತ್ತ ಹೈಕೋರ್ಟ್ ಮುಖ್ಯ ನ್ಯಾಯಮೂರ್ತಿಗೆ ಲಿಖಿತ ತಪ್ಪೊಪ್ಪಿಗೆ ಪತ್ರ ಬರೆದು ಕ್ಷಮೆ ಕೋರಬೇಕು ಎಂದೂ ಸುಪ್ರೀಂ ಕೋರ್ಟ್ ನಿರ್ದೇಶನ ನೀಡಿದೆ.

ರಾಜಧಾನಿ ಅಮರಾವತಿ: ಕೇಂದ್ರ ಅಧಿಸೂಚನೆ

ಅಮರಾವತಿ: ಆಂಧ್ರಪ್ರದೇಶ ರಾಜ್ಯ 2014ರಲ್ಲಿ ವಿಭಜನೆಯಾಗಿ ತೆಲಂಗಾಣ ರಾಜ್ಯ ರಚನೆಯಾಗಿ ದಶಕಗಳೇ ಕಳೆದಿವೆ. ಕಡೆಗೂ ಆಂಧ್ರಪ್ರದೇಶಕ್ಕೆ ರಾಜಧಾನಿ ನಗರವಾಗಿ 'ಅಮರಾವತಿ'ಯನ್ನು ಗುರುತಿಸಿ ಘೋಷಿಸಲಾಗಿದೆ.
ಅಮರಾವತಿ ನಗರಕ್ಕೆ ರಾಜಧಾನಿ ಸ್ಥಾನಮಾನ 2024ರ ಜೂ.2ರಿಂದಲೇ ಪೂರ್ವಾನ್ವಯ ಜಾರಿಗೆ ಬಂದಿದೆ.

ಆಂಧ್ರಪ್ರದೇಶ ಮರು ಸಂಘಟನೆ (ತಿದ್ದುಪಡಿ) ಮಸೂದೆ-2026ಕ್ಕೆ ರಾಷ್ಟ್ರಪತಿ ದ್ರೌಪದಿ ಅವರು ಅಂಕಿತ ಹಾಕಿದ್ದಾರೆ. ಆಂಧ್ರಪ್ರದೇಶದ ರಾಜಧಾನಿ 'ಅಮರಾವತಿ' ಎಂಬ ಅಧಿಸೂಚನೆಯೂ ಕೇಂದ್ರದ ಕಾನೂನು ಮತ್ತು ನ್ಯಾಯಾಂಗ ಸಚಿವಾಲಯದಿಂದ ಸೋಮವಾರ ಸಂಜೆ ಹೊರಬಿದ್ದಿದೆ.

ಈ ಅಧಿಸೂಚನೆಯನ್ನು ಆಂಧ್ರ ಸಿಎಂ ನಾರಾ ಚಂದ್ರಬಾಬು ನಾಯ್ಡು ಅವರು ಮಂಗಳವಾರ ತಮ್ಮ 'ಎಕ್ಸ್' ಖಾತೆಯಲ್ಲಿ ಹಂಚಿಕೊಂಡಿದ್ದಾರೆ. ರಾಜಧಾನಿ ಕನಸು ಈಡೇರಿಸುವ ಆಂಧ್ರಪ್ರದೇಶ ಮರುಸಂಘಟನೆ (ತಿದ್ದುಪಡಿ) ಕಾಯಿದೆ-2026ಕ್ಕೆ ಅಂಕಿತ ಹಾಕಿದ್ದಕ್ಕೆ ರಾಷ್ಟ್ರಪತಿ ದ್ರೌಪದಿ ಮುರ್ಮು, ಪ್ರಧಾನಿ ನರೇಂದ್ರ ಮೋದಿ ಮತ್ತು ಕೇಂದ್ರ ಸರಕಾರಕ್ಕೆ ಕೃತಜ್ಞತೆ ಸಲ್ಲಿಸಿದ್ದಾರೆ.



MINISTRY OF LAW AND JUSTICE
(Legislative Department)

New Delhi, the 6th April, 2026/Chaitra 16, 1948 (Saka)

The Following Act of Parliament received the assent of the President on the 6th April, 2026 and is hereby published for general information:—

THE ANDHRA PRADESH REORGANISATION (AMENDMENT) ACT, 2026

No. 7 OF 2026

[*6th April*, 2026.]

An Act further to amend the Andhra Pradesh Reorganisation Act, 2014.

BE it enacted by Parliament in the Seventy-seventh Year of the Republic of India as follows:—

1. (*1*) This Act may be called the Andhra Pradesh Reorganisation (Amendment) Act, 2026.
(*2*) It shall be deemed to have come into force on the 2nd day of June, 2024.

ಆಂಧ್ರ ವಿಭಜನೆ ಬಳಿಕ ರಾಜಧಾನಿ ನಗರದ ಬಗ್ಗೆ ಹಲವು ಗೊಂದಲಗಳಿದ್ದವು. ವೈ.ಎಸ್. ಜಗನ್ಮೋಹನ್ ರೆಡ್ಡಿ ಆಡಳಿತಾವಧಿಯಲ್ಲಿ 3 ರಾಜಧಾನಿ ನಗರಗಳ ಪ್ರಸ್ತಾವನೆಯಾಗಿತ್ತು. ಆದರೆ, ಅದನ್ನು ಕೇಂದ್ರ ಸರಕಾರ ತಿರಸ್ಕರಿಸಿತ್ತು.

ಆಂಧ್ರ ವಿಧಾನಸಭೆ ಅಧಿವೇಶನದಲ್ಲಿ ಮಾ.28ರಂದು ನಿರ್ಣಯ ಅಂಗೀಕರಿಸಲಾಗಿತ್ತು. ತಿದ್ದುಪಡಿ ವಿಧೇಯಕ ಕುರಿತು ಏ.1-2ರಂದು ಲೋಕಸಭೆ ಮತ್ತು ರಾಜ್ಯಸಭೆಯಲ್ಲಿ 260 ನಿಮಿಷಗಳ ಚರ್ಚೆ ನಡೆಸಿ ಧ್ವನಿಮತದ ಮೂಲಕ ಅಂಗೀಕರಿಸಲಾಗಿದೆ.

ಸಮಾಚಾರ ಸಣ್ಣದಲ್ಲ

ಮಲ್ಲಿಕಾರ್ಜುನ್ ಖರ್ಗೆ ಬಂಧಿಸುವಂತೆ ದೂರು

ಬೆಂಗಳೂರು: ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ್ ಖರ್ಗೆ ವಿರುದ್ಧ ರಾಜ್ಯ ಪೊಲೀಸ್ ಮಹಾ ನಿರ್ದೇಶಕರಿಗೆ ರಾಜ್ಯ ಬಿಜೆಪಿ ದೂರು ನೀಡಿದ್ದು ಕೂಡಲೇ ಬಂಧಿಸಬೇಕೆಂದು ಆಗ್ರಹಿಸಿದ್ದಾರೆ. ಶಾಸಕರಾದ ಎಸ್.ಮುನಿರಾಜು ಹಾಗೂ ಸಿ.ಕೆ. ರಾಮಮೂರ್ತಿ ನೇತೃತ್ವದ ನಿಯೋಗ ರಾಜ್ಯ ಪೊಲೀಸ್ ಪ್ರಧಾನ ಕಚೇರಿಗೆ ತೆರಳಿ ಡಿಜಿಪಿ ಡಾ. ಎಂ. ಸಲೀಂಗೆ ದೂರು ನೀಡಿದೆ. ಮಲ್ಲಿಕಾರ್ಜುನ್ ಖರ್ಗೆ ಅವರು ಹತ್ಯೆ ಮಾಡುವಂತೆ ಪ್ರಚೋದನಾಕಾರಿ ಭಾಷಣ ಮಾಡಿದ್ದಾರೆ. ಹೀಗಾಗಿ ಕೂಡಲೇ ಅವರನ್ನು ಬಂಧಿಸುವಂತೆ ದೂರು ನೀಡಲಾಗಿದೆ.

ಹಲವು ಸೆಕ್ಷನ್‌ಗಳ ಉಲ್ಲೇಖ: ಮಲ್ಲಿಕಾರ್ಜುನ ಖರ್ಗೆ ವಿರುದ್ಧ ಹಾಕಬಹುದಾದ ಹಲವು ಸೆಕ್ಷನ್‌ಗಳನ್ನು ಉಲ್ಲೇಖಿಸಿದೆ. ಸೆಕ್ಷನ್ 299 (ಹಳೆಯ ಕಾನೂನಿಗೆ ಬದಲಾಗಿ) ಧಾರ್ಮಿಕ ಭಾವನೆಗಳನ್ನು ಉದ್ದೇಶಪೂರ್ವಕವಾಗಿ ಅವಮಾನಿಸುವ ಅಥವಾ ಧರ್ಮದ ಅಪಮಾನ ಮಾಡುವ ಕೃತ್ಯಗಳು ಎಂದು ದೂರಿನಲ್ಲಿ ಉಲ್ಲೇಖಿಸಿ ಸ್ವಯಂ ಪ್ರೇರಿತ ದೂರು ದಾಖಲಿಸಬೇಕು. 2022ರಲ್ಲಿ ಸುಪ್ರೀಂಕೋರ್ಟ್ ಆದೇಶದಂತೆ ದ್ವೇಷ ಭಾಷಣ ಪ್ರಕರಣಗಳಲ್ಲಿ ಪೊಲೀಸರು ಸ್ವಯಂ ಪ್ರೇರಿತ ದೂರು ದಾಖಲಿಸಬೇಕು. ದ್ವೇಷ ಭಾಷಣಗಳ ವಿರುದ್ಧ ಕ್ರಮ ತೆಗೆದುಕೊಳ್ಳುವಂತೆ, ಸರಕಾರ ಮತ್ತು ಪೊಲೀಸ್ ಇಲಾಖೆಯನ್ನು ಒತ್ತಾಯಿಸಲಾಗಿದೆ. ಸರಕಾರಿ ಅಧಿಕಾರಿಗಳು ಮತ್ತು ಪೊಲೀಸರು ದ್ವೇಷ ಭಾಷಣಗಳನ್ನು ಗಂಭೀರವಾಗಿ ಪರಿಗಣಿಸಿ, ಸ್ವಯಂ ಕ್ರಮ ತೆಗೆದು ಕೊಳ್ಳಬೇಕು ಎಂದು ಬಿಜೆಪಿ ತನ್ನ ದೂರಿನಲ್ಲಿ ಹೇಳಿದ್ದು, ಈ ಕೂಡಲೇ ಖರ್ಗೆಯವರನ್ನು ಬಂಧಿಸುವಂತೆ ದೂರಿನಲ್ಲಿ ತಿಳಿಸಿದ್ದಾರೆ.

ಅಸ್ಸಾಂ ಪ್ರಚಾರದ ವೇಳೆ ಖರ್ಗೆ ಹೇಳಿದ್ದೇನು?: ಅಸ್ಸಾಂನ ನಿಲಾಂಬಜಾರ್‌ನಲ್ಲಿ ಭಾನುವಾರ ನಡೆದ ಸಾರ್ವಜನಿಕ ಚುನಾವಣಾ ಪ್ರಚಾರ ಸಭೆಯಲ್ಲಿ ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ವಿವಾದಾತ್ಮಕ ಹೇಳಿಕೆ ನೀಡಿದ್ದರು. ಪ್ರಾರ್ಥನೆಯ ಸಮಯದಲ್ಲೂ ಕಾಣಿಸಿಕೊಳ್ಳುವ ವಿಷಕಾರಿ ಹಾವನ್ನು ಕೊಲ್ಲಬೇಕು ಎಂದು ಕುರಾನ್ ಹೇಳುತ್ತದೆ ಎಂದಿದ್ದರು.

ಸಿಎಂ, ಡಿಸಿಎಂ, ಸುರ್ಜೇವಾಲ ಕಡೆಯಿಂದ ಜಂಟಿ ಹೇಳಿಕೆ ಬಿಡುಗಡೆ

ಇಂಧನ ಸಮಸ್ಯೆಗೆ ಕೇಂದ್ರದ ವೈಫಲ್ಯ ಕಾರಣ

ವಿಶ್ವವಾಣಿ ಸುದ್ದಿಮನೆ ಬೆಂಗಳೂರು

ಇಡೀ ದೇಶದಲ್ಲಿ ಉದ್ಭವಿಸಿರುವ ಇಂಧನ ಸಮಸ್ಯೆ ಹಾಗೂ ಕರ್ನಾಟಕದ ಐದು ಲಕ್ಷಕ್ಕೂ ಹೆಚ್ಚು ಆಟೋ ಚಾಲಕರ ಕುಟುಂಬಗಳು ಬೀದಿಗೆ ಬರಲು ಕೇಂದ್ರ ಸರಕಾರದ ವೈಫಲ್ಯವೇ ಕಾರಣ ಎಂದು ಬಿಜೆಪಿ ಸರಕಾರದ ವಿರುದ್ಧ ಕಾಂಗ್ರೆಸ್ ನಾಯಕರು ಕಿಡಿಕಾರಿದ್ದಾರೆ.

ಈ ಬಗ್ಗೆ ಜಂಟಿ ಹೇಳಿಕೆ ಬಿಡುಗಡೆ ಮಾಡಿರುವ ರಾಜ್ಯ ಕಾಂಗ್ರೆಸ್ ಉಸ್ತುವಾರಿ ರಣದೀಪ್ ಸಿಂಗ್ ಸುರ್ಜೇವಾಲ, ಮುಖ್ಯಮಂತ್ರಿ ಸಿದ್ದರಾಮಯ್ಯ ಹಾಗೂ ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್, ಮೋದಿ ಸರಕಾರದ ಎಲ್‌ಪಿಜಿ ಮತ್ತು ಇಂಧನ ವ್ಯವಸ್ಥೆಯ ಅಸಮರ್ಥ ನಿರ್ವಹಣೆಯಿಂದಾಗಿ ರಾಜ್ಯಾದ್ಯಂತ ಜೀವನೋಪಾಯವನ್ನು ನಾಶಪಡಿಸಿದೆ. ಇದು ಕೇವಲ ನೀತಿಯ ವೈಫಲ್ಯವಲ್ಲ, ಬದಲಿಗೆ ಕೇಂದ್ರ ಬಿಜೆಪಿ ಸರಕಾರದ ಉದಾಸೀನತೆ, ಅಹಂಕಾರ ಮತ್ತು ಸಂಪೂರ್ಣ ಆಡಳಿತಾತ್ಮಕ ದುರಂತಕ್ಕೆ ಸಾಕ್ಷಿಯಾಗಿದೆ ಎಂದು ವಾಗ್ದಾಳಿ ನಡೆಸಿದ್ದಾರೆ.

ಕರ್ನಾಟಕದ ಬಿಜೆಪಿ–ಜೆಡಿಎಸ್‌ನ ಕೇಂದ್ರ ಸಚಿವರುಗಳು ಅಧಿಕಾರವನ್ನು ಆನಂದದಿಂದ ಅನುಭವಿಸುತ್ತಿದ್ದಾರೆ. ಜನಸಾಮಾನ್ಯರ ಈ ಪರಿಸ್ಥಿತಿಗೆ ಅವರು ಉತ್ತರದಾಯಿಯಾಗಿರಬೇಕು ಅಥವಾ ತಮ್ಮ ಸಚಿವ ಸ್ಥಾನಗಳಿಗೆ ರಾಜೀನಾಮೆ ನೀಡಬೇಕು. ಉಪಚುನಾವಣೆಗೆ ಮತ ಕೇಳುವ ಮೊದಲು ಕಾಂಗ್ರೆಸ್ ಕೇಳುತ್ತಿರುವ ಪ್ರಶ್ನೆಗಳಿಗೆ ಉತ್ತರಿಸಲಿ ಎಂದು ಪ್ರಶ್ನಿಸಿದ್ದಾರೆ.

ಕೆಲವೇ ವಾರಗಳಲ್ಲಿ ಶೇ.106ರಷ್ಟು ಬೆಲೆ ಏರಿಕೆಯ ಆಘಾತವಾಗಿದೆ. ಮಾರ್ಚ್ 2026 ರಲ್ಲಿ ಆಟೋ ಗ್ಯಾಸ್/ಎಲ್‌ಪಿಜಿ ಲೀಟರ್‌ಗೆ 58 ರಿಂದ 61 ಇತ್ತು. ಇಂದು ಅದು 105 ರಿಂದ 120 ಕ್ಕೆ ಏರಿಕೆಯಾಗಿದ್ದು, ಕೆಲವೇ ವಾರಗಳಲ್ಲಿ ಶೇ.106ರಷ್ಟು ಬೆಲೆ ಏರಿಕೆಯಾಗಿದೆ. ಸಿಎನ್‌ಜಿ ಆಟೋಗಳೂ ಸಹ ಕರ್ನಾಟಕದಾದ್ಯಂತ ತೀವ್ರ ಕೊರತೆ ಎದುರಿಸುತ್ತಿವೆ. ಬೆಲೆ ಏರಿಕೆ ಮತ್ತು ಕೊರತೆಯಿಂದ ಆಟೋ ಚಾಲಕರು ಕಂಗಾಲಾಗಿದ್ದಾರೆ. ಇಷ್ಟಾದರೂ ಬಿಜೆಪಿ ನಾಯಕರು ಬಾಯಿಗೆ ಬೀಗ ಹಾಕಿಕೊಂಡಿದ್ದಾರೆ. ಇದು ಕೇವಲ ಹಣದುಬ್ಬರವಲ್ಲ, ಶ್ರಮಿಕ ವರ್ಗದ ಮೇಲೆ ನಡೆಸುತ್ತಿರುವ ಆರ್ಥಿಕ ದೌರ್ಜನ್ಯ ಎಂದು ಟೀಕಿಸಿದ್ದಾರೆ.

ಕೃತಕ ಅಭಾವ, ನೈಜ ಸಂಕಷ್ಟ: ಬೆಂಗಳೂರಿನಲ್ಲಿ 60 ರಿಂದ 70 ಎಲ್‌ಪಿಜಿ, ಸಿಎನ್‌ಜಿ ಕೇಂದ್ರಗಳಿದ್ದವು. ಆದರೀಗ ಕೇವಲ 10 ರಿಂದ 15 ಮಾತ್ರ ಕಾರ್ಯನಿರ್ವಹಿಸುತ್ತಿವೆ. ಅಂದರೆ ಸುಮಾರು ಶೇ.80ರಷ್ಟು ನಿಲ್ದಾಣಗಳು ಬಂದಾಗಿವೆ. ನಗರದಲ್ಲಿ ಟೋಟಲ್ ಗ್ಯಾಸ್ ತನ್ನ ಎಲ್ಲಾ ಕೇಂದ್ರಗಳನ್ನು ಮುಚ್ಚಿದೆ. ದೈನಂದಿನ ಪೂರೈಕೆಯು 12,000 ಲೀಟರ್‌ನಿಂದ 6,000 ಲೀಟರ್‌ಗೆ ಕುಸಿದಿದೆ. ಇನ್ನು ಪ್ರತಿ ವಾಹನಕ್ಕೆ 400 ನಷ್ಟು ಮಾತ್ರ ಇಂಧನ ಅನಿಲ ವಿತರಿಸಲಾಗುತ್ತಿದೆ. ಆಟೋ ಚಾಲಕರು ಬೆಳಿಗ್ಗೆ 5 ಗಂಟೆಯಿಂದ ಮೂರು ಕಿಲೋಮೀಟರ್ ಉದ್ದದ ಸಾಲಿನಲ್ಲಿ ನಿಂತರೂ ಖಾಲಿ ಕೈಯಲ್ಲಿ ಮರಳುತ್ತಿದ್ದಾರೆ. ಆಟೋ ಚಾಲಕರು ಸರದಿ ಸಾಲಿನಲ್ಲಿ ಕಳೆಯುವ ಪ್ರತಿಯೊಂದು ಗಂಟೆಯೂ ಅವರ ಕುಟುಂಬದ ಅನ್ನವನ್ನು ಕಸಿಯುತ್ತಿದೆ ಎಂದು ಕೇಂದ್ರದ ವಿರುದ್ಧ ಕಿಡಿ ಕಾರಿದ್ದಾರೆ.

ಉಪಚುನಾವಣೆಯಲ್ಲಿ ಪ್ರತಿಧ್ವನಿಸಲಿದೆ ಬಿಕ್ಕಟ್ಟು

ಇದು ಕೇವಲ ಇಂಧನದ ಬಿಕ್ಕಟ್ಟಲ್ಲ, ಇದು ಕೋಟ್ಯಂತರ ಜನರ ಬದುಕಿನ ತುರ್ತು ಪರಿಸ್ಥಿತಿ. ಕರ್ನಾಟಕದ ಶ್ರಮಿಕ ವರ್ಗವು ಹತಾಶೆಗೆ ನೂಕಿ ಮೋದಿ ಸರ್ಕಾರ ಮೂಕ ಪ್ರೇಕ್ಷಕನಂತೆ ನೋಡುತ್ತಿದೆ. ಪ್ರತಿ ಖಾಲಿ ಎಲ್‌ಪಿಜಿ ಸಿಲಿಂಡರ್ ಒಂದು ಕುಟುಂಬವನ್ನು ಹಸಿವಿನ ಕೂಪಕ್ಕೆ ನೂಕುತ್ತಿದೆ. ಇಂಧನಕ್ಕಾಗಿ ನಿಂತಿರುವ ಪ್ರತಿ ಸರತಿ ಸಾಲು ಕೇಂದ್ರ ಸರಕಾರದ ವೈಫಲ್ಯದ ಸಂಕೇತವಾಗಿದೆ. ಪ್ರತಿದಿನದ ನಷ್ಟವು ಮೋದಿ ಸರಕಾರದ ನಿರ್ಲಕ್ಷದ ದುಷ್ಪರಿಣಾಮ. ಕರ್ನಾಟಕದ ಜನರು ಈ ದ್ರೋಹವನ್ನು ಕ್ಷಮಿಸುವುದಿಲ್ಲ. ಮೋದಿ ಸರಕಾರದ ಮೌನವು ದಾವಣಗೆರೆ ದಕ್ಷಿಣ ಮತ್ತು ಬಾಗಲಕೋಟೆ ಉಪಚುನಾವಣೆಗಳಲ್ಲಿ ಹಾಗೂ ಇತರ ರಾಜ್ಯಗಳ ಚುನಾವಣೆಗಳಲ್ಲಿ ಅವರ ಸೋಲಿನಲ್ಲಿ ಪ್ರತಿಧ್ವನಿಸಲಿದೆ.

ಜಂಟಿ ಹೇಳಿಕೆಯಲ್ಲಿರುವ ಪ್ರಮುಖಾಂಶ

- ಕರ್ನಾಟಕದಲ್ಲಿ 5 ಲಕ್ಷಕ್ಕೂ ಹೆಚ್ಚು ಆಟೋಗಳಿದ್ದು, ಇವು ಸಾಮಾನ್ಯ ಜನರ ಸಂಚಾರದ ಬೆನ್ನೆಲುಬಾಗಿದೆ. ಈ ಆಟೋ ಚಾಲಕರು ಕಾರ್ಪೊರೇಟ್ ಸಂಸ್ಥೆಗಳಲ್ಲ, ದಿನಗೂಲಿ ನೌಕರರು. ಪ್ರತಿ ನಿತ್ಯ, ಪ್ರತಿ ಬಾಡಿಗೆಯ ಸಂಪಾದನೆ ಮೇಲೆ ಅವರ ಜೀವನ ಅವಲಂಬಿತವಾಗಿದೆ. ರಾಜ್ಯದಲ್ಲಿ ಅರ್ಧದಷ್ಟು ಆಟೋಗಳು ರಸ್ತೆಗೆ ಇಳಿಯುತ್ತಿಲ್ಲ.
- ಮೋದಿ ಸರಕಾರ ಪೆಟ್ರೋಲ್‌ಗೆ ಬದಲಾಗಿ ಎಂಬ ಪುಕ್ಕಟೆ ಸಲಹೆ ಅಜ್ಞಾನ ಮತ್ತು ಕ್ರೌರ್ಯದಿಂದ ಕೂಡಿದೆ. ಈಗಾಗಲೇ ಅನೇಕ ಆಟೋಗಳು ಪೆಟ್ರೋಲ್‌ನಿಂದ ಗ್ಯಾಸ್‌ಗೆ ಬದಲಾಗಿವೆ ಮತ್ತು ಪೆಟ್ರೋಲ್ ಬೆಲೆ ಏರಿಕೆಯಿಂದಾಗಿ ಅದು ದುಬಾರಿಯಾಗಿದೆ.

ಗ್ಯಾಸ್ ಎಮರ್ಜೆನ್ಸಿ; ಕರ್ನಾಟಕ ಬಂದ್ ಎಚ್ಚರಿಕೆ

ಬೆಂಗಳೂರು: ರಾಜ್ಯದಲ್ಲಿ ಆಟೋ ಗ್ಯಾಸ್ ಅಭಾವವು ದಿನದಿಂದ ದಿನಕ್ಕೆ ತೀವ್ರ ಸ್ವರೂಪವನ್ನು ಪಡೆದುಕೊಳ್ಳುತ್ತಿದ್ದು, ಗ್ಯಾಸ್‌ಗಾಗಿ ಎಲ್‌ಪಿಜಿ ಬಂಕ್‌ಗಳ ಮುಂದೆ ಕಿ.ಮೀಗಟ್ಟಲೆ ಸರತಿಯಲ್ಲಿ ಕಾಯುವಂತಾಗಿದೆ.

ಈ ಹಿನ್ನೆಲೆ ಗ್ಯಾಸ್ ಸಮಸ್ಯೆಯನ್ನು ಬಗೆಹರಿಸದಿದ್ದರೆ ಕರ್ನಾಟಕ ಬಂದ್ ಮಾಡುವುದಾಗಿ ಆಟೋ ಸಂಘಟನೆಗಳು ಸರಕಾರಕ್ಕೆ ಎಚ್ಚರಿಕೆ ನೀಡಿದೆ. ಗಿರಿನಗರ, ಹೆಬ್ಬಾಳ, ಸಾರಕ್ಕಿ, ಸಜ್ಜನ್ ರಾವ್ ಸರ್ಕಲ್ ಸೇರಿದಂತೆ ರಾಜ್ಯದ ಹಲವೆಡೆ ಆಟೋ ಚಾಲಕರು ಇಡೀ ದಿನ ದುಡಿಮೆ ಬಿಟ್ಟು ಗ್ಯಾಸ್‌ಗಾಗಿ ಕಾಯುತ್ತಿದ್ದಾರೆ. ಸೋಮವಾರವಷ್ಟೇ ಆಹಾರ ಸಚಿವ ಕೆ ಎಚ್ ಮುನಿಯಪ್ಪ ಅವರ ನಿವಾಸಕ್ಕೆ ಮುತ್ತಿಗೆ ಹಾಕಲು ಯತ್ನಿಸಿದ್ದ ಚಾಲಕರು ಸರಕಾರದ ವಿರುದ್ಧ ಆಕ್ರೋಶ ಹೊರಹಾಕಿದ್ದರು.

ಸಚಿವ ಮುನಿಯಪ್ಪ ಭರವಸೆ ಮತ್ತು ಕೇಂದ್ರಕ್ಕೆ ಪತ್ರ

ಚಾಲಕರ ಅಹವಾಲು ಆಲಿಸಿದ ಸಚಿವ ಕೆ.ಎಚ್. ಮುನಿಯಪ್ಪ, ಏಪ್ರಿಲ್ 10ರಂದು ಸಭೆ ನಡೆಸಿ ಸಮಸ್ಯೆ ಇತ್ಯರ್ಥಪಡಿಸುವುದಾಗಿ ಭರವಸೆ ನೀಡಿದ್ದಾರೆ. ಅಲ್ಲದೆ, ಕೇಂದ್ರ ಸಚಿವ ಹರ್ದೀಪ್ ಸಿಂಗ್ ಪುರಿ ಅವರಿಗೆ ಪತ್ರ ಬರೆದಿರುವ ಮುನಿಯಪ್ಪ, ಕರ್ನಾಟಕದಲ್ಲಿ ಎಲ್‌ಪಿಜಿ ಅಭಾವ ತೀವ್ರವಾಗಿದೆ. ಕೆಲವು ಖಾಸಗಿ ವಿತರಣಾ ಕೇಂದ್ರಗಳು ಹೆಚ್ಚಿನ ದರ ವಸೂಲಿ ಮಾಡುತ್ತಿವೆ. ನಿಗದಿತ ದರದಲ್ಲೇ ಗ್ಯಾಸ್ ಪೂರೈಕೆಯಾಗುವಂತೆ ಕ್ರಮ ಕೈಗೊಳ್ಳಿ ಎಂದು ಮನವಿ ಮಾಡಿದ್ದಾರೆ. ಈ ಬಗ್ಗೆ ಪ್ರತಿಕ್ರಿಯಿಸಿರುವ ಸಿಎಂ ಸಿದ್ದರಾಮಯ್ಯ, ಗ್ಯಾಸ್ ಸಿಲಿಂಡರ್ ಒದಗಿಸುವುದು ಪ್ರಧಾನಿ ಮೋದಿ ಅವರ ಜವಾಬ್ದಾರಿ. ಗ್ಯಾಸ್ ಸಿಗದೆ ಜನರು ತೊಂದರೆ ಅನುಭವಿಸುತ್ತಿದ್ದಾರೆ ಎಂದು ಕೇಂದ್ರದ ವಿರುದ್ಧ ವಾಗ್ದಾಳಿ ನಡೆಸಿದ್ದಾರೆ.

ನಮಗೆ ತಕ್ಷಣ ಪರಿಹಾರ ಸಿಗದಿದ್ದರೆ ಪ್ರತಿಭಟನೆ ತೀವ್ರಗೊಳಿಸುತ್ತೇವೆ ಎಂದು ಪೀಸ್ ಆಟೋ ಸಂಘಟನೆಯ ಅಧ್ಯಕ್ಷ ರಘು ಎಚ್ಚರಿಕೆ ನೀಡಿದ್ದಾರೆ. ಅಲ್ಲದೆ, ಏಪ್ರಿಲ್ 9 ಗುರುವಾರದಂದು ಕರಾಳ ದಿನ' ಆಚರಿಸಿ, ಆಟೋಗಳಿಗೆ ಕಪ್ಪು ಬಾವುಟ ಕಟ್ಟಿ ಪ್ರತಿಭಟಿಸಲು ನಿರ್ಧರಿಸಲಾಗಿದೆ. ಪರಿಸ್ಥಿತಿ ಹೀಗೆಯೇ ಮುಂದುವರಿದರೆ ರಾಜ್ಯಾದ್ಯಂತ ಬಂದ್ ನಡೆಸುವುದಾಗಿ ಎಚ್ಚರಿಕೆ ನೀಡಿದ್ದಾರೆ.

- ವಾಣಿಜ್ಯ ಎಲ್‌ಪಿಜಿ ಬೆಲೆ ಗಗನಕ್ಕೆ - ಹೋಟೆಲ್, ಸಣ್ಣ ವ್ಯಾಪಾರಿಗಳು ಕಂಗಾಲು. ಇದು 'ಮೋದಿ-ನಿರ್ಮಿತ' ವಿಪತ್ತು!
- ವಾಣಿಜ್ಯ ಸಿಲಿಂಡರ್ ಬೆಲೆ 200 ರು. ಏರಿಕೆಯಾಗಿದ್ದು, ಒಂದು ಸಿಲಿಂಡರ್ ಬೆಲೆ 2,000 ದಾಟಿದೆ. ಪ್ರಸ್ತುತ ಒಂದು ಸಿಲಿಂಡರ್ ಬೆಲೆ 2,161 ಆಗಿದ್ದು, ಕಾಳಸಂತೆಯಲ್ಲಿ ಒಂದು ಸಿಲಿಂಡರ್ 6,000 ರು.ಗೆ ಮಾರಾಟವಾಗುತ್ತಿದೆ.
- ಇಂಧನ ಅನಿಲ ಪೂರೈಕೆ ಎದುರಾಗಿರುವ ಕೊರತೆ ಬಗ್ಗೆ ಹಾಕಲಾಗಿರುವ ಫಲಕಗಳನ್ನು ಒಎಂಸಿಗಳು ನಿರ್ಲಕ್ಷಿಸಿರುವುದು ಕೇಂದ್ರ ಬಿಜೆಪಿ ಸರಕಾರದ ಆಡಳಿತ ಕುಸಿತಕ್ಕೆ ಸಾಕ್ಷಿಯಾಗಿದೆ.

ದಕ್ಷಿಣ ರಾಜ್ಯಗಳಲ್ಲಿ ಕ್ಷೇತ್ರಗಳ ಸಂಖ್ಯೆ ಕಡಿಮೆಯಾಗುವ ಸಾಧ್ಯತೆ
ಕೇಂದ್ರದ ಆದಾಯ ಹಂಚಿಕೆಯಲ್ಲೂ ಪಾಲು ಕುಗ್ಗಬಹುದು

ಕ್ಷೇತ್ರ ವಿಂಗಡಣೆಯಿಂದ ದಕ್ಷಿಣ ರಾಜ್ಯಗಳಿಗೆ ನಷ್ಟ

ಬೆಂಗಳೂರು: ಲೋಕಸಭಾ ಹಾಗೂ ವಿಧಾನಸಭಾ ಕ್ಷೇತ್ರಗಳ ಮರುವಿಂಗಡಣೆ ಪ್ರಕ್ರಿಯೆಯಿಂದ ದಕ್ಷಿಣ ಭಾರತದ ರಾಜ್ಯಗಳಿಗೆ ರಾಜಕೀಯ ಪ್ರತಿನಿಧಿತ್ವ ಮಾತ್ರವಲ್ಲ, ಆರ್ಥಿಕ ಹಾನಿಯೂ ಉಂಟಾಗಲಿದೆ ಎಂದು ಬಮೂಲ್ ಅಧ್ಯಕ್ಷ ಡಿ.ಕೆ.ಸುರೇಶ್ ತಿಳಿಸಿದರು.

ಈ ಕುರಿತು ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ದಕ್ಷಿಣ ರಾಜ್ಯಗಳಲ್ಲಿ ಕ್ಷೇತ್ರಗಳ ಸಂಖ್ಯೆ ಕಡಿಮೆಯಾಗುವ ಸಾಧ್ಯತೆ ಇದೆ. ಇದರ ಪರಿಣಾಮವಾಗಿ ಕೇಂದ್ರದ ಆದಾಯ ಹಂಚಿಕೆಯಲ್ಲಿ ನಮ್ಮ ಪಾಲು ಕುಗ್ಗಬಹುದು. ನಾವು ಕೊಡುವ ತೆರಿಗೆ ಹಣ ಉತ್ತರ ರಾಜ್ಯಗಳಿಗೆ ವರ್ಗಾವಣೆಯಾಗುವ ಪರಿಸ್ಥಿತಿ ಉಂಟಾಗಬಹುದು. ಪ್ರಧಾನಿ ನರೇಂದ್ರ ಮೋದಿ ಅವರು ಕ್ಷೇತ್ರ ಮರುವಿಂಗಡಣೆಯಿಂದ ಯಾರಿಗೂ ನಷ್ಟವಾಗುವುದಿಲ್ಲ ಎಂಬ ವಿಚಾರವನ್ನು ನಾವು ಹಿಂದಿನಿಂದಲೂ ಕೇಳಿದ್ದೇವೆ. ಇದರಿಂದ ದಕ್ಷಿಣ ರಾಜ್ಯಗಳಿಗೆ ಅನ್ಯಾಯವಾಗಲಿದೆ. ಎಲ್ಲ ರಾಜ್ಯಗಳು ಎಚ್ಚರವಾಗಬೇಕು. ಇಲ್ಲದಿದ್ದರೆ ಜನರು ಪರ್ಯಾಯ ಮಾರ್ಗಗಳನ್ನು ಆಲೋಚಿಸುವ ಪರಿಸ್ಥಿತಿ ಎದುರಾಗಬಹುದು ಎಂದರು.

ಏ. 16ರಿಂದ ವಿಶೇಷ ಲೋಕಸಭಾ ಅಧಿವೇಶನ ನಡೆಯಲಿದೆ. ಸರಕಾರ ಯಾವ ರೀತಿಯಲ್ಲಿ ಬಿಲ್ ಮಂಡಿಸುತ್ತದೆ ಎಂಬುದನ್ನು ಗಮನಿಸಬೇಕು. ದಕ್ಷಿಣದ ಸಂಪನ್ಮೂಲಗಳನ್ನು ಉತ್ತರಕ್ಕೆ ವರ್ಗಾಯಿಸುವ ಪ್ರಯತ್ನವಾಗಬಹುದು. 2011ರ ಜನಗಣತಿಯ ಆಧಾರದ ಮೇಲೆ ಮರುವಿಂಗಡಣೆ ಮಾಡಬಹುದು ಎಂಬ ಆತಂಕವಿದೆ. ಅಂದು ಬೆಂಗಳೂರಿನ ಜನಸಂಖ್ಯೆ 60–70 ಲಕ್ಷವಿತ್ತು, ಈಗ 1.40 ಕೋಟಿಗೂ ಹೆಚ್ಚು. ಕರ್ನಾಟಕದ ಜನಸಂಖ್ಯೆಯೂ 5 ಕೋಟಿಯಿಂದ 7 ಕೋಟಿಗೂ ಮೀರಿದೆ. ಈ ಬದಲಾವಣೆಗಳನ್ನು ಲೆಕ್ಕಿಸದೇ ವಿಂಗಡಣೆ ಮಾಡಿದರೆ ಅನೇಕ ಆರ್ಥಿಕ ಹಾಗೂ ಆಡಳಿತಾತ್ಮಕ ಸವಾಲುಗಳು ಎದುರಾಗುತ್ತವೆ ಎಂದರು.

ಒಬ್ಬ ಸಾವು, ನಾಲ್ವರಿಗೆ ಗಾಯ, ಇತರೆ ವಾಹನಗಳಿಗೆ ಹಾನಿ

ಪನಾಮ ಸೇತುವೆ ಮೇಲೆ 3 ಇಂಧನ ಟ್ಯಾಂಕರ್ ಭಸ್ಮ

ಪನಾಮ ಸಿಟಿ: ಅಮೆರಿಕದ ಪನಾಮ ನಗರದ ಪಶ್ಚಿಮ ಭಾಗದಲ್ಲಿ ಇರುವ ಬಾಲ್ಬೋವಾ ನಗರದ 'ಲಾ ಬೊಕಾ' ಪ್ರದೇಶದಲ್ಲಿ, ಪನಾಮ ಕಾಲುವೆಯ ಪೆಸಿಫಿಕ್ ಪ್ರವೇಶ ದ್ವಾರದಲ್ಲಿನ 'ಬ್ರಿಡ್ಜ್ ಆಫ್ ದಿ ಅಮೆರಿಕಾಸ್' ದೊಡ್ಡ ಸೇತುವೆಯ ಕೆಳಗಿರುವ ಇಂಧನ ಸಂಗ್ರಹಾಗಾರದಲ್ಲಿ ಭಾರೀ ಸ್ಫೋಟವಾಗಿದ್ದು, ಒಬ್ಬರು ಸಾವಿಗೀಡಾಗಿದ್ದಾರೆ, ನಾಲ್ವರು ಗಾಯಗೊಂಡಿದ್ದಾರೆ.

ಸೇತುವೆ ಕೆಳಗಿರುವ ಇಂಧನ ಸಂಗ್ರಹಾಗಾರಕ್ಕೆ ಬಂದಿದ್ದ ಒಂದು ಇಂಧನ ಟ್ಯಾಂಕರ್ ಟ್ರಕ್‌ನಲ್ಲಿ ಬೆಂಕಿ ಕಾಣಿಸಿಕೊಂಡು ಏಕಾಏಕಿ ಸ್ಫೋಟಗೊಂಡಿದೆ. ಪರಿಣಾಮ ಪಕ್ಕದಲ್ಲೇ ಇದ್ದ ಎರಡು ಇಂಧನ ಸಂಗ್ರಹಾಗಾರಗಳಿಗೂ ಬೆಂಕಿ ತಗುಲಿದೆ. ಇಂಧನ ಸಾಗಣೆ ಟ್ಯಾಂಕರ್ ಮತ್ತು 2 ಸಂಗ್ರಹಾಗಾರಗಳು ಒಟ್ಟಿಗೇ ಹೊತ್ತಿ ಧಗಧಗನೆ ಉರಿದಿವೆ. ದೊಡ್ಡ ಬೆಂಕಿಯ ಉಂಡೆ ಆಕಾಶದೆತ್ತರಕ್ಕೆ ಚಿಮ್ಮಿ ಸೇತುವೆಯನ್ನೂ ಮುಟ್ಟಿದೆ.

ಇಂಧನ ಟ್ರಕ್ ಚಾಲಕ ವರ್ಗದವರಲ್ಲಿ ಒಬ್ಬರು ಸಾವಿಗೀಡಾಗಿದ್ದಾರೆ. ಉಳಿದ ಇಬ್ಬರು ಜೀವಂತ ಪಾರಾದರೂ ಅವರಿಗೆ 2 ಡಿಗ್ರಿಗಳಷ್ಟು ತೀವ್ರತೆಯ ಸುಟ್ಟ ಗಾಯಗಳಾಗಿವೆ. ಬೆಂಕಿ ನಂದಿಸಲು ಮುಂದಾಗಿದ್ದ ಅಗ್ನಿಶಾಮಕ ದಳದ ಇಬ್ಬರು ಸಿಬ್ಬಂದಿಗೂ ಸುಟ್ಟ ಗಾಯಗಳಾಗಿವೆ. ನಾಲ್ವರು ಗಾಯಾಳುಗಳನ್ನು ತಕ್ಷಣವೇ ಸಮೀಪದ ಆಸ್ಪತ್ರೆಗೆ ದಾಖಲಿಸಲಾಗಿದೆ ಎಂದು ಸ್ಥಳೀಯ ಪೊಲೀಸ್ ಅಧಿಕಾರಿಗಳು ತಿಳಿಸಿದ್ದಾರೆ.

ಬೆಂಕಿಯ ಜ್ವಾಲೆ ಸೇತುವೆಯ ಮೇಲ್ಭಾಗದವರೆಗೂ ಚಿಮ್ಮಿದೆ. ಆಗ ಸೇತುವೆ ಮೇಲೆ ಸಾಗುತ್ತಿದ್ದ ಒಂದು ಕಂಟೇನರ್ ಟ್ರಕ್, ಒಂದು ವ್ಯಾನ್, 4 ಕಾರುಗಳು ಮತ್ತು ಒಂದು ಮೋಟಾರ್ ಬೈಕ್ ಬೆಂಕಿಯ ಉಂಡೆಯ ಪಕ್ಕದಲ್ಲೇ ಸಾಗಿದರೂ, ಥಟ್ಟನೆ ವೇಗ ಹೆಚ್ಚಿಸಿಕೊಂಡು ಮುಂದೆ ಸಾಗಿ ಪವಾಡ ಸದೃಶ ರೀತಿ ಪಾರಾಗಿವೆ. ಬೆಂಕಿಯ ಕಿಡಿಗಳು ಹಾರಿ ಆ ವಾಹನಗಳಿಗೂ ಸಣ್ಣ ಪ್ರಮಾಣದ ಹಾನಿಯಾಗಿದೆ. ಆದರೆ, ಆ ವಾಹನಗಳಲ್ಲಿದ್ದವರು ಅದೃಷ್ಟವಶಾತ್ ಯಾವುದೇ ಪ್ರಾಣಾಪಾಯವಿಲ್ಲದೇ ಪಾರಾಗಿದ್ದಾರೆ.

ಸೇತುವೆ ಬಂದ್: ಅಗ್ನಿಶಾಮಕ ದಳದ ಸಿಬ್ಬಂದಿ ತಕ್ಷಣವೇ ಸ್ಥಳಕ್ಕೆ ಧಾವಿಸಿ ಬಂದಿದ್ದು, ಬೆಂಕಿ ನಂದಿಸಲು ಶ್ರಮಿಸಿದ್ದಾರೆ. ಒಂದೂವರೆ ಕಿ.ಮೀ.ಗೂ ಅಧಿಕ ಉದ್ದವಾದ (1,654 ಮೀ.) 'ಬ್ರಿಡ್ಜ್ ಆಫ್ ದಿ ಅಮೆರಿಕಾಸ್'ಗೂ ಬೆಂಕಿ ಅವಘಡದಿಂದ ತೀವ್ರವಾಗಿ ಹಾನಿಯಾಗಿದೆ. ಹಾಗಾಗಿ ಅವಘಡದ ನಂತರ ಐತಿಹಾಸಿಕ ಸೇತುವೆಯನ್ನು ತಾತ್ಕಾಲಿಕವಾಗಿ ಬಂದ್ ಮಾಡಲಾಗಿದೆ.

ಇದೇ ಮೊದಲ ಬಾರಿ ವಿಶ್ವಸಂಸ್ಥೆಗೆ ಮಹಿಳಾ ಅಧ್ಯಕ್ಷೆ?

ನ್ಯೂಯಾರ್ಕ್: ಜಾಗತಿಕ ಶಾಂತಿ, ಸಹಕಾರ ದಲ್ಲಿ ಪ್ರಧಾನ ಪಾತ್ರ ವಹಿಸುವ ವಿಶ್ವ ಸಂಸ್ಥೆಯ ನೇತೃತ್ವವನ್ನು ಇದೇ ಮೊದಲ ಬಾರಿ ಮಹಿಳೆಯೊಬ್ಬರು ಹೊತ್ತುಕೊಳ್ಳುವ ಕಾಲ ಸನ್ನಿಹಿತವಾಗಿದೆ. ವಿಶ್ವಸಂಸ್ಥೆಯ ಪ್ರಧಾನ ಕಾರ್ಯದರ್ಶಿ ಹುದ್ದೆಗೆ ಮಹಿಳೆ ಯೊಬ್ಬರು ಆಯ್ಕೆಯಾಗುವ ಸಮಯ ಬಂದಿದೆ. ಪ್ರಧಾನ ಕಾರ್ಯದರ್ಶಿ ಯಾಗಿರುವ ಗುಟೆರೆಸ್ ಅವರ ಅಧಿಕಾರಾವಧಿ ಇದೇ ಏಪ್ರಿಲ್‌ಗೆ ಅಂತ್ಯವಾಗಲಿದೆ. ಏ.21, 22 ರಂದು ಈ ಸ್ಥಾನಕ್ಕೆ ಚುನಾವಣೆ ನಡೆಯ ಲಿದ್ದು, ವಿಶ್ವಸಂಸ್ಥೆಯ ಮಾನವ ಹಕ್ಕುಗಳ ಪ್ರಸ್ತುತ ಹೈಕಮಿಷನರ್, ಚಿಲಿಯ ಮಾಜಿ ಅಧ್ಯಕ್ಷೆ ಮಿಚೆಲ್ ಬ್ಯಾಚೆಲೆಟ್ ಹಾಗೂ ಕೋಸ್ಟರಿಕಾದ ಮಾಜಿ ಉಪಾಧ್ಯಕ್ಷೆ ರೆಬೆಕಾ ಗ್ರಿನ್ಸ್ಪಾನ್ ಅವರ ನಡುವೆ ಸ್ಪರ್ಧೆಯಿದೆ.

ಬಾಂಬ್ ದಾಳಿ: ಮಣಿಪುರ ಉದ್ವಿಗ್ನ

ಇಂಫಾಲ: ಮಣಿಪುರದಲ್ಲಿ ಮತ್ತೆ ಹಿಂಸಾಚಾರ ಶುರುವಾಗಿದೆ. ಅಲ್ಲಿನ 5 ಜಿಲ್ಲೆಗಳಲ್ಲಿ ಕರ್ಫ್ಯೂ ಹೇರಲಾಗಿದ್ದು, ಅಂತರ್ಜಾಲ ಸಂಪರ್ಕವನ್ನು ಸ್ಥಗಿತಗೊಳಿಸಲಿದೆ. ಸೋಮವಾರ ಮಧ್ಯರಾತ್ರಿ ಬಿಷ್ಣುಪುರ ಜಿಲ್ಲೆಯ ಮೊಯಿರಾಂಗ್‌ನ ಥ್ರಾಂಗ್ಲಾಪ್ಪಿ ಅವಾಂಗ್ ಲೈಕಾಯಿ ಹಳ್ಳಿಯಲ್ಲಿ ಮನೆಯೊಂದರ ಮೇಲೆ ಬಾಂಬ್ ದಾಳಿ ನಡೆದಿದೆ. ಮಲಗಿದ್ದಾಗಲೇ 5 ವರ್ಷದ ಗಂಡುಮಗು, 6 ತಿಂಗಳ ಹೆಣ್ಣುಮಗು ಸಾವನ್ನಪ್ಪಿದ್ದಾರೆ. ಘಟನೆಯಲ್ಲಿ ತಾಯಿ ಗಾಯಗೊಂಡಿದ್ದಾರೆ. ಕುಕಿ ಉಗ್ರಗಾಮಿಗಳಿಂದ ದಾಳಿ ನಡೆದಿದೆ ಎಂದು ಶಂಕಿಸಲಾಗಿದೆ. ಚುರಾಚಂದ್‌ಪುರದ ಬೆಟ್ಟ ಪ್ರದೇಶಗಳ ಬಳಿಯಿರುವ ಮೊಯಿರಾಂಗ್‌ನಲ್ಲಿ ಈ ಹಿಂದೆಯೂ ಗುಂಡಿನ ಚಕಮಕಿ ನಡೆದಿತ್ತು. ಇದನ್ನು ಕುಕಿ, ಮೈತೇಯಿ ಸಮುದಾಯದ ಸಂಘರ್ಷದ ಕೇಂದ್ರ ಎಂದೇ ಹೇಳಲಾಗುತ್ತದೆ.

ವಿಷಾಹಾರ ಸೇವನೆ: 40 ಮಂದಿ ಅಸ್ವಸ್ಥ

ಬೀದರ್: ಜಿಲ್ಲೆಯ ಭಾಲ್ಕಿಯ ಜಾಂತಿ ಗ್ರಾಮದಲ್ಲಿ ವಿಷಾಹಾರದ ಪರಿಣಾಮ 40ಕ್ಕೂ ಅಧಿಕ ಜನರು ಅಸ್ವಸ್ಥರಾಗಿದ್ದಾರೆ. ಹೊಸ ಮನೆಯ ಮೇಲ್ಛಾವಣಿ ಹಾಕಿದ ಖುಷಿಗೆ ರಾಜಕುಮಾರ್ ಎಂಬುವವರು ಹುಗ್ಗಿ, ಅನ್ನ, ಸಾಂಬಾರ್ ಮಾಡಿಸಿ, ಗ್ರಾಮಸ್ಥರಿಗೆ ಊಟ ಹಾಕಿಸಿದ್ದರು. ಇದನ್ನು ತಿಂದ ಜನರಿಗೆ ಬೆಳಗಿನ ಜಾವದ ಹೊತ್ತಿಗೆ ಅನಾರೋಗ್ಯವಾಗಿದೆ. ವಾಂತಿ, ಭೇದಿಯಿಂದ ಅಸ್ವಸ್ಥರಾಗಿದ್ದಾರೆ. 40ಕ್ಕೂ ಅಧಿಕ ಜನರು ಅಸ್ವಸ್ಥರಾಗಿದ್ದು, 5ರಿಂದ 6 ಜನರ ಸ್ಥಿತಿ ಗಂಭೀರವಾಗಿದೆ. ಆ್ಯಂಬ್ಯುಲೆನ್ಸ್ ಮೂಲಕ ಜನರನ್ನು ಬೀದರ್‌ನ ಬ್ರಿಮ್ಸ್ ಆಸ್ಪತ್ರೆಗೆ ಕರೆತರಲಾಗಿದ್ದು, 10ರಿಂದ 15 ಜನರಿಗೆ ಬ್ರಿಮ್ಸ್‌ನ ತುರ್ತು ಚಿಕಿತ್ಸಾ ಘಟಕದಲ್ಲಿ ಚಿಕಿತ್ಸೆ ನೀಡಲಾಗುತ್ತಿದೆ. ಇನ್ನೂ ಮನೆಯ ಮಾಲೀಕರಾದ ರಾಜಕುಮಾರ್, ಸಂಗೀತಾ, ಈರಮ್ಮ, ಶಿವಾನಂದ್ ಮತ್ತು ಅಂಬಿಕಾ ಸ್ಥಿತಿ ಕೂಡ ಗಂಭೀರವಾಗಿದೆ.

ಇಂದಿನಿಂದ ಮತ್ತೆ ಸಾರಿಗೆ ಮುಷ್ಕರ

ಬೆಂಗಳೂರು: ಸಾರಿಗೆ ನೌಕರರು ರಾಜ್ಯ ಸರಕಾರದ ವಿರುದ್ಧ ಸಮರವನ್ನೇ ಸಾರಿದ್ದಾರೆ. ಬುಧವಾರದಿಂದ ಚಿತ್ರದುರ್ಗದಿಂದ ಪಾದಯಾತ್ರೆ ಆರಂಭಿಸಲು ನಿರ್ಧರಿಸಲಾಗಿದ್ದು, ಏ.21ರಂದು ಬೆಂಗಳೂರಿನ ಫ್ರೀಡಂ ಪಾರ್ಕ್‌ನಲ್ಲಿ ಅನಿರ್ದಿಷ್ಟಾವಧಿ ಉಪವಾಸ ಸತ್ಯಾಗ್ರಹ ನಡೆಸಲು ತೀರ್ಮಾನಿಸಲಾಗಿದೆ. ಸರಕಾರವು ಸಾರಿಗೆ ನೌಕರರ ಜೊತೆಗೆ ಸಾಲುಸಾಲು ಸಂಧಾನ ಸಭೆ ನಡೆಸಿದರೂ ಅದು ಪ್ರಯೋಜನ ಆಗುತ್ತಿಲ್ಲ. ಸಾರಿಗೆ ನೌಕರರು ಈ ಹಿಂದೆಯೇ ಸರಕಾರದ ವಿರುದ್ಧ ಹೋರಾಟಕ್ಕೆ ಮುಂದಾಗಿದ್ದರು. 38 ತಿಂಗಳ ವೇತನ ಹಿಂಬಾಕಿ ಮತ್ತು ಹೊಸ ವೇತನ ಪರಿಷ್ಕರಣೆಗಾಗಿ ಆಗ್ರಹಿಸಿದ್ದರು. ಆದರೆ ಸರಕಾರ 26 ತಿಂಗಳ ವೇತನ ಹಿಂಬಾಕಿ, 2025 ಏಪ್ರಿಲ್‌ನಿಂದ ವೇತನ ಪರಿಷ್ಕರಣೆಗೆ ಒಪ್ಪಿಗೆ ನೀಡಿತ್ತು. ಇದಕ್ಕೆ ಸಾರಿಗೆ ನೌಕರರು ಒಪ್ಪಿಗೆ ನೀಡಿಲ್ಲ.

ಇತಿಹಾಸದಲ್ಲೇ ಮೊದಲ ಬಾರಿ ರಾತ್ರಿ ಫಲಿತಾಂಶ ಪ್ರಕಟ
ಫಲಿತಾಂಶ ತಾನೇ ಪ್ರಕಟಿಸಬೇಕೆಂಬ ಸಚಿವರ ಹಠ ಕಾರಣ?

ನಾಳೆ ರಾತ್ರಿ ಪಿಯುಸಿ ಫಲಿತಾಂಶ?

ಬೆಂಗಳೂರು: ವಿದ್ಯಾರ್ಥಿ ಜೀವನದ ಪ್ರಮುಖ ಘಟ್ಟವಾಗಿರುವ ದ್ವಿತೀಯ ಪಿಯುಸಿ ಪರೀಕ್ಷಾ ಫಲಿತಾಂಶ ಘೋಷಣೆಯಲ್ಲಿ, ರಾಜ್ಯ ಶಿಕ್ಷಣ ಇಲಾಖೆ ಹೊಸ ಸಂಪ್ರದಾಯಕ್ಕೆ ನಾಂದಿ ಹಾಡುವುದು ಬಹುತೇಕ ನಿಶ್ಚಿತ ಎನಿಸಿದೆ. ಮಂಗಳವಾರವೇ ಪ್ರಕಟವಾಗಬೇಕಿದ್ದ ಫಲಿತಾಂಶವನ್ನು ಗುರುವಾರ (ಏ.9)ರ ರಾತ್ರಿ 9 ಗಂಟೆಗೆ ಘೋಷಿಸುವ ಸಾಧ್ಯತೆಯಿದೆ ಎಂದು ತಿಳಿದುಬಂದಿದೆ.

ಈಗಾಗಲೇ ಪ್ರಶ್ನೆಪತ್ರಿಕೆಗಳ ಮೌಲ್ಯಮಾಪನ ಪೂರ್ಣಗೊಂಡು, ಫಲಿತಾಂಶ ಪ್ರಕಟಿಸಲು ಸಜ್ಜಾಗಿದ್ದರೂ ಶಿಕ್ಷಣ ಸಚಿವ ಮಧು ಬಂಗಾರಪ್ಪ

ಅವರು ತಾವೇ ಫಲಿತಾಂಶವನ್ನು ಘೋಷಿಸಬೇಕು ಎನ್ನುವ ಹಠಕ್ಕೆ ಬಿದ್ದಿದ್ದಾರೆ. ಉಪಚುನಾವಣೆ ಮತದಾನ ಮುಕ್ತಾಯದ ಬಳಿಕ ಫಲಿತಾಂಶ ವನ್ನು ಘೋಷಿಸಲು ಕರ್ನಾಟಕ ಪರೀಕ್ಷ ಮೌಲ್ಯಾಮಾಪನ ಮಂಡಳಿ ತೀರ್ಮಾನಿಸಿದೆ.

ಗೊಂದಲಕ್ಕೆ ಕಾರಣವೇನು?

ರಾಜ್ಯದ 2 ಕ್ಷೇತ್ರದಲ್ಲಿ ಚುನಾವಣೆ ನಡೆಯುತ್ತಿ ರುವುದರಿಂದ ಆ 2 ಕ್ಷೇತ್ರಗಳಲ್ಲಿ ನೀತಿಸಂಹಿತೆ ಜಾರಿಯಲ್ಲಿರುತ್ತದೆ. ಆದ್ದರಿಂದ ಫಲಿತಾಂಶ ಪ್ರಕಟಿಸಲು ಸಾಧ್ಯವಿಲ್ಲ. ಚುನಾವಣಾ ಆಯೋಗದ ಅನುಮತಿಯೊಂದಿಗೆ ಅಧಿಕಾರಿಗಳು ಪ್ರಕಟಿಸಬಹುದು. ಆದರೆ ಸಚಿವರು ತಾವೇ ಫಲಿತಾಂಶ ಪ್ರಕಟಿಸ ಬೇಕೆಂದು ಹಠ ಹಿಡಿದಿದ್ದಾರೆ ಎನ್ನಲಾಗಿದೆ.

ರಾಜ್ಯ ಮಹಿಳಾ ಆಯೋಗಕ್ಕೆ ಮಹಿಳೆಯಿಂದ ದೂರು ಸಲ್ಲಿಕೆ
ಲೈಂಗಿಕ ದೌರ್ಜನ್ಯದ ವಿಡಿಯೋ ಮಾಡಿ ಬೆದರಿಕೆ: ಆರೋಪ

ಜಯ ಶ್ರೀ ವಿರುದ್ಧ ಲೈಂಗಿಕ ಕಿರುಕುಳ ದೂರು

ಬೆಂಗಳೂರು: ಪಂಚಮಸಾಲಿ ಮೀಸಲಾತಿ ಹೋರಾಟದ ನೇತೃತ್ವವಹಿಸಿಕೊಂಡಿದ್ದ ಕೂಡಲ ಸಂಗಮ ಪಂಚಮಸಾಲಿ ಪೀಠದ ಜಯ ಮೃತ್ಯುಂಜಯ ಸ್ವಾಮೀಜಿ ವಿರುದ್ಧ ಮಹಿಳೆಯೊಬ್ಬರು ಲೈಂಗಿಕ ಕಿರುಕುಳ ಆರೋಪ ಮಾಡಿದ್ದಾರೆ. ಈ ಕುರಿತು ರಾಜ್ಯ ಮಹಿಳಾ ಆಯೋಗಕ್ಕೆ ದೂರು ದಾಖಲು ನೀಡಿದ್ದಾರೆ.

ಮಹಿಳೆ ಮೂಲತಃ ಬೆಂಗಳೂರಿನವರಾಗಿದ್ದು, ಸ್ವತಃ ಸ್ವಾಮೀಜಿ ನನ್ನ ಖಾಸಗಿ ವಿಡಿಯೋ ಮಾಡಿ ಲೈಂಗಿಕವಾಗಿ ಸಹಕರಿಸುವಂತೆ ಕಿರುಕುಳ ನೀಡುತ್ತಿದ್ದಾರೆ ಎಂದು ದೂರಿನಲ್ಲಿ ಉಲ್ಲೇಖಿಸಿದ್ದಾರೆ.

ಇನ್ನು ಸ್ವಾಮೀಜಿಯದ್ದು ಎನ್ನಲಾದ ಖಾಸಗಿ ವಿಡಿಯೋ ಇತ್ತೀಚೆಗೆ ಹರಿದಾಡಿದ್ದು, ಪ್ರಕರಣ ಗಂಭೀರ ಸ್ವರೂಪ ಪಡೆದುಕೊಂಡಿದೆ.

ದೂರಿನಲ್ಲಿ ಏನಿದೆ?: ಬೆಂಗಳೂರು ನಿವಾಸಿಯಾಗಿರುವ ನಾನು, ಲಿಂಗಾಯತ ಸಮಾಜಕ್ಕೆ ಸೇರಿದವಳಾಗಿದ್ದು ಬಸವಜಯ ಮೃತ್ಯುಂಜಯ ಸ್ವಾಮೀಜಿ ಪೀಠಾಧಿಪತಿಗಳು, ಮಹಾಪೀಠ ಕೂಡಲ ಸಂಗಮ, ಇವರ ಭಕ್ತಳಾಗಿದ್ದೇನೆ. ಬೆಂಗಳೂರಿಗೆ ಬಂದಾಗ ಹಲವು ಬಾರಿ ಭೇಟಿಯಾಗಿ ಮಾತನಾಡಿ ಅವರ ಹೋರಾಟಗಳಿಗೆ ಬೆಂಬಲವನ್ನೂ ನೀಡಿದ್ದೆನು. ಹೀಗೆ ಪರಿಚಯವಾಗಿದ್ದ ಸ್ವಾಮೀಜಿಯವರು ಅವರು ನನ್ನನ್ನು ಮಠಕ್ಕೆ ಕರೆಸಿ 'ಪ್ರಸಾದ ಕೊಡುತ್ತೇನೆ' ಎಂದು ಹೇಳಿ ನನ್ನ ವಿಶ್ವಾಸವನ್ನು ದುರುಪಯೋಗ ಮಾಡಿಕೊಂಡು ದೈಹಿಕವಾಗಿ ತಪ್ಪಾಗಿ ವರ್ತಿಸಿದ್ದಾರೆ. ನನಗೆ ಗೊತ್ತಾಗದಂತೆ ಲೈಂಗಿಕ ದೌರ್ಜನ್ಯದ ಖಾಸಗಿ ವಿಡಿಯೋವನ್ನು ಮಾಡಿಕೊಂಡಿದ್ದಾರೆ. ಇದನ್ನು ಬಳಸಿ ಬ್ಲಾಕ್‌ಮೇಲ್ ಮಾಡುತ್ತಿದ್ದಾರೆ ಎಂದು ದೂರು ನೀಡಲಾಗಿದೆ.

ಬಂಗಾಳ ಮತಪಟ್ಟಿ: 91 ಲಕ್ಷ ಮಂದಿ ಹೆಸರು ಡಿಲೀಟ್

ಕೋಲ್ಕತಾ: ಪಶ್ಚಿಮ ಬಂಗಾಳದಲ್ಲಿ 2025ರ ನವೆಂಬರ್‌ನಲ್ಲೇ ಆರಂಭವಾಗಿದ್ದ ಮತದಾರರ ಪಟ್ಟಿಯ ವಿಶೇಷ ಪರಿಷ್ಕರಣೆ (ಎಸ್‌ಐಆರ್) ಪ್ರಕ್ರಿಯೆ ಪೂರ್ಣ ಗೊಂಡಿದೆ. ಒಟ್ಟು 91 ಲಕ್ಷ ಅನರ್ಹ ಮತದಾರರ ಹೆಸರುಗಳನ್ನು ಮತದಾರರ ಪಟ್ಟಿಯಿಂದ ತೆಗೆದುಹಾಕಲಾಗಿದೆ ಎಂಬ ಮಾಹಿತಿಯನ್ನು ಕೇಂದ್ರ ಚುನಾವಣಾ ಆಯೋಗ ಮಂಗಳವಾರ ಪ್ರಕಟಿಸಿದೆ. ಈ ಪರಿಷ್ಕರಣೆಯ ನಂತರ ರಾಜ್ಯದಲ್ಲಿರುವ ಒಟ್ಟಾರೆ ಮತದಾರರ ಸಂಖ್ಯೆಯನ್ನು ಆಯೋಗ ಇನ್ನೂ ಪ್ರಕಟಿಸಿಲ್ಲ.

ಫನ್‌ತರಂಗ

- ರಘುಪತಿ ಶೃಂಗೇರಿ -

ದೇಶಾದ್ಯಂತ ಪೊಲೀಸ್ ಠಾಣೆಗಳಲ್ಲಿ 'ಕ್ಯಾಮೆರಾ' ಅಳವಡಿಸುವ ಯೋಜನೆ



9 ಸದಸ್ಯರ ಪೀಠದಿಂದ ಹಿಂದಿನ ತೀರ್ಪಿನ ಪರಿಶೀಲನೆ
ಮುಟ್ಟಾಗುವ ಸ್ತ್ರೀಯರಿಗೆ ಪ್ರವೇಶದ ಅರ್ಜಿ ವಿಚಾರಣೆ

ಶಬರಿಮಲೆ ಪ್ರವೇಶ ವಿವಾದ: ಸುಪ್ರೀಂ ಪೀಠ ವಿಚಾರಣೆ ಶುರು

ದೆಹಲಿ: ಶಬರಿಮಲೆ ಅಯ್ಯಪ್ಪ ದೇಗುಲಕ್ಕೆ ಎಲ್ಲಾ ವಯೋಮಾನದ ಮಹಿಳೆಯರ ಪ್ರವೇಶಕ್ಕೆ ಸಂಬಂಧಿಸಿದ 2018ರ ತೀರ್ಪಿನ ಮರುಪರಿಶೀಲನಾ ಅರ್ಜಿಗಳ ವಿಚಾರಣೆಯನ್ನು, ಸರ್ವೋಚ್ಚ ನ್ಯಾಯಾಲಯ ಏಪ್ರಿಲ್ 7ರಿಂದ ಆರಂಭಿಸಿದೆ. 9 ನ್ಯಾಯಮೂರ್ತಿಗಳ ಸಾಂವಿಧಾನಿಕ ಪೀಠವು ಈ ಸಂವೇದನಾಶೀಲ ಪ್ರಕರಣವನ್ನು ಪರಿಶೀಲಿಸುತ್ತಿದೆ. ಮುಟ್ಟಾಗುವ ಸ್ತ್ರೀಯರ (10ರಿಂದ 50 ವರ್ಷ)ಪ್ರವೇಶಕ್ಕೆ ಅವಕಾಶ ನೀಡಿದ್ದ ಹಿಂದಿನ ತೀರ್ಪನ್ನು ಭಕ್ತರು ಮತ್ತು ಕೇರಳ ಸರಕಾರ ವಿರೋಧಿಸಿದ್ದು, ಈ ಬಾರಿಯ ವಿಚಾರಣೆಯಲ್ಲಿ ಧಾರ್ಮಿಕ ಆಚರಣೆ ಮತ್ತು ಸಾಂವಿಧಾನಿಕ ಹಕ್ಕುಗಳ ಸಮತೋಲನದ ಕುರಿತು ಚರ್ಚೆ ನಡೆಯಲಿದೆ.

ಏಪ್ರಿಲ್ 7ರಿಂದ 9ವರೆಗೆ ಅರ್ಜಿಯ ಪರ, 14–16 ರವರೆಗೆ ವಿರೋಧಿಗಳ ವಾದ ನಡೆಯಲಿದೆ. ಏಪ್ರಿಲ್ 22ರೊಳಗೆ ಅಂತಿಮ ವಿಚಾರಣೆ ನಡೆಸಿ, ಈ ತಿಂಗಳೊಳಗೆ ತೀರ್ಪು ಪ್ರಕಟಿಸುವ ಸಾಧ್ಯತೆಯಿದೆ. 2018 ಸೆಪ್ಟೆಂಬರ್‌ನಲ್ಲಿ ಶಬರಿ ಮಲೆ ಪ್ರವೇಶಕ್ಕೆ ಸರ್ವೋಚ್ಚ ನ್ಯಾಯಾಲಯದ ಐದು ನ್ಯಾಯಮೂರ್ತಿಗಳ ಪೀಠವು ತೀರ್ಪು ನೀಡಿತ್ತು.

7 ಸಂಗತಿಗಳ ಪರಿಶೀಲನೆ

ಧಾರ್ಮಿಕ ಸ್ವಾತಂತ್ರ್ಯ, ವ್ಯಕ್ತಿ ಸ್ವಾತಂತ್ರ್ಯಕ್ಕೆ ಸಂಬಂಧಿಸಿದಂತೆ 7 ಮುಖ್ಯಸಂಗತಿಗಳನ್ನು, ಹಲವಾರು ವಿಧಿಗಳನ್ನು ಸರ್ವೋಚ್ಚ ನ್ಯಾಯಾಲಯ ಜಿಜ್ಞಾಸೆಗೊಳಪಡಿಸಲಿದೆ. ಸಂವಿಧಾನದ ವಿಧಿ 25ರಡಿ ಧಾರ್ಮಿಕ ಸ್ವಾತಂತ್ರ್ಯ, ವಿಧಿ 26ರಡಿ ವ್ಯಕ್ತಿ ಸ್ವಾತಂತ್ರ್ಯ ಮತ್ತು ಧಾರ್ಮಿಕ ಪದ್ಧತಿಗಳ ಸಮನ್ವಯ ಹೇಗೆ ಎಂಬ ಅಂಶ, ಕಾನೂನಿನ ಚೌಕಟ್ಟನ್ನೂ ದಾಟುವಂತಹ ನೈತಿಕತೆ, ಆರೋಗ್ಯದಂತಹ ಕೆಲವು ವಿಷಯಗಳಲ್ಲಿ ಧಾರ್ಮಿಕ ಪದ್ಧತಿಗಳನ್ನು ವಿವೇಚನೆಗೊಳಪಡಿಸುವುದು ಎಂಬ ವಿಚಾರಗಳು ಚರ್ಚೆಗೊಳಗಾಗಲಿವೆ.

8 ಸರಕಾರಿ ಅಧಿಕಾರಿಗಳಿಗೆ ಲೋಕಾ ಶಾಕ್

ಪ್ರಮುಖ ಅಧಿಕಾರಿಗಳಿಗೆ ಸೇರಿದ 35 ಸ್ಥಳಗಳಲ್ಲಿ ದಾಳಿ, ಅಕ್ರಮ ಆಸ್ತಿ ಪತ್ತೆ
ಮೈಸೂರು ಅಧಿಕಾರಿ ಬಳಿ 5, ಬೆಳಗಾವಿ ಅಧಿಕಾರಿ ಬಳಿ 6 ಕೋಟಿ ರು. ಆಸ್ತಿ!

ಬೆಂಗಳೂರು: ರಾಜ್ಯದಲ್ಲಿ ಭ್ರಷ್ಟಾಚಾರದ ಆರೋಪ ಎದುರಿಸುತ್ತಿರುವ ಅಧಿಕಾರಿಗಳಿಗೆ ಲೋಕಾಯುಕ್ತ ಬಿಸಿ ಮುಟ್ಟಿಸಿದ್ದು, ಮಂಗಳವಾರ ಬೆಳ್ಳಂಬೆಳಗ್ಗೆಯೇ 8 ಸರಕಾರಿ ಅಧಿಕಾರಿಗಳಿಗೆ ಸೇರಿದ 35 ಸ್ಥಳಗಳ ಮೇಲೆ ದಾಳಿ ನಡೆಸಿದೆ. ಆರೋಪಿ ಸರಕಾರಿ ಅಧಿಕಾರಿಗಳಿಗೆ ಸಂಬಂಧಿಸಿದ ಮನೆ, ಕಚೇರಿ ಹಾಗೂ ಸಂಬಂಧಿಕರ ಮನೆಗಳು ಸೇರಿದಂತೆ ಒಟ್ಟು 35 ಸ್ಥಳಗಳಲ್ಲಿ ಏಕಕಾಲಕ್ಕೆ ಶೋಧನಾ ಕಾರ್ಯ ಕೈಗೊಂಡಿದ್ದು, ಅಪಾರ ಆಸ್ತಿ ಪತ್ತೆಯಾಗಿದೆ.

ಮೈಸೂರಿನ ಲೋಕೋಪಯೋಗಿ ಇಲಾ ಖೆಯ ಸಹಾಯಕ ಕಾರ್ಯಪಾಲಕ ಅಭಿಯಂತ ರರ ಕಚೇರಿಯ ಸಹಾಯಕ ಅಭಿಯಂತರ ಜಿ.ಕೆ. ರೇವಣ್‌ಕುಮಾರ್‌ಗೆ ಸೇರಿದ 3 ಸ್ಥಳಗಳಲ್ಲಿ ಶೋಧಕಾರ್ಯ ಕೈಗೊಳ್ಳಲಾಗಿತ್ತು. ಒಟ್ಟು ಸ್ಥಿರಾಸ್ತಿ 75.45 ಲಕ್ಷ ರು., ಚರಾಸ್ತಿ 3.52 ಕೋಟಿ ರು., ಸೇರಿದಂತೆ ಒಟ್ಟು 4.27 ಕೋಟಿ ರು. ಆಸ್ತಿ ಇರುವುದನ್ನು ಪತ್ತೆ ಮಾಡಲಾಗಿದೆ. ಬೆಳಗಾವಿ ಜಿಲ್ಲಾಧಿಕಾರಿ ಕಚೇರಿಯ ಜಿಲ್ಲಾ ನಗರ ಅಭಿವೃದ್ಧಿ ಕೋಶದ ಸಹಾಯಕ ಕಾರ್ಯಪಾಲಕ ಅಭಿಯಂತರ ಅಜಯ್ ಸಿಂಗ್ ಭಪು ಸಿಂಗ್ ರಜಪೂತ್‌ಗೆ ಸೇರಿದ ಒಟ್ಟು 07 ಸ್ಥಳಗಳಲ್ಲಿ ಶೋಧ ನಡೆಸಿದ್ದಾರೆ. ಇವರಿಗೆ ಸೇರಿದ 07 ನಿವೇಶನಗಳು, 03 ವಾಸದ ಮನೆಗಳು, 12 ಎಕರೆ ಕೃಷಿ ಜಮೀನು, ಎಲ್ಲಾ ಸೇರಿ ಒಟ್ಟು 2.67 ಕೋಟಿ ರು. ಸ್ಥಿರಾಸ್ತಿ, 3.14 ಕೋಟಿ ರು. ಚರಾಸ್ತಿ ಸೇರಿದಂತೆ ಒಟ್ಟು 5.78 ಕೋಟಿ ರು. ಆಸ್ತಿ ಹೊಂದಿರುವುದು ಪತ್ತೆಯಾಗಿದೆ.

ಶಿವಮೊಗ್ಗದ ಅರಸು ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯ ಜಿಲ್ಲಾಧಿಕಾರಿ ಕೆ.ಆರ್. ಶೋಭಾಗೆ ಸೇರಿದ 6 ಸ್ಥಳಗಳಲ್ಲಿ ಲೋಕಾಯುಕ್ತ ಶೋಧ ಕಾರ್ಯಕ್ಕೆಗೊಂಡಿದೆ. ಸ್ಥಿರಾಸ್ತಿ 1.76 ಕೋಟಿ ರು., 2.12 ಕೋಟಿ ರು. ಚರಾಸ್ತಿ ಸೇರಿದಂತೆ 3.88 ಕೋಟಿ ರು. ಆಸ್ತಿ ಪತ್ತೆಯಾಗಿದೆ. ಬಳ್ಳಾರಿಯ ಮೀನುಗಾರಿಕೆ ಇಲಾಖೆಯ ಸಹಾಯಕ ನಿರ್ದೇಶಕ ಶಿವಣ್ಣಗೆ ಸೇರಿದ 5 ಸ್ಥಳಗಳಲ್ಲಿ ಲೋಕಾಯುಕ್ತ ಅಧಿಕಾರಿಗಳು ಪರಿಶೀಲನೆ ನಡೆಸಿ ಸ್ಥಿರಾಸ್ತಿ 2.24 ಕೋಟಿ ರು., ಚರಾಸ್ತಿ 58.82 ಲಕ್ಷ ರು. ಸೇರಿದಂತೆ ಒಟ್ಟು 1.93 ಕೋಟಿ ರು. ಆಸ್ತಿ ಪತ್ತೆ ಹಚ್ಚಲಾಗಿದೆ.

ಯಾರ ಬಳಿ ಎಷ್ಟು ಆಸ್ತಿ?

1. ಮೈಸೂರಿನ ಲೋಕೋಪಯೋಗಿ ಇಲಾಖೆಯ ಸಹಾಯಕ ಅಭಿಯಂತರ ಜಿ.ಕೆ.ರೇವಣ್‌ಕುಮಾರ್ ಬಳಿ 75.45 ಲಕ್ಷ ರು. ಸ್ಥಿರಾಸ್ತಿ, ಚರಾಸ್ತಿ 3.52 ಕೋಟಿ ರು.
2. ಬೆಳಗಾವಿ ಜಿಲ್ಲಾಧಿಕಾರಿ ಕಚೇರಿಯ ಜಿಲ್ಲಾ ನಗರ ಅಭಿವೃದ್ಧಿ ಕೋಶದ ಸಹಾಯಕ ಕಾರ್ಯಪಾಲಕ ಅಭಿಯಂತರ ಅಜಯ್ ಸಿಂಗ್ ರಜಪೂತ್ ಬಳಿ 7 ನಿವೇಶನ, 3 ವಾಸದ ಮನೆ, 12 ಎಕರೆ ಕೃಷಿ ಜಮೀನು. ಒಟ್ಟು 5.78 ಕೋಟಿ ರು. ಮೌಲ್ಯ
3. ಶಿವಮೊಗ್ಗದ ಅರಸು ಹಿಂದುಳಿದ ವರ್ಗಗಳ ಜಿಲ್ಲಾಧಿಕಾರಿ ಕೆ. ಆರ್.ಶೋಭಾ ಬಳಿ 1.76 ಕೋಟಿ ರು. ಸ್ಥಿರಾಸ್ತಿ, 2.12 ಕೋಟಿ ರು. ಚರಾಸ್ತಿ.

ನಿವೃತ್ತ ಲೆಕ್ಕಾಧಿಕಾರಿ ಬಳಿ ಎಂಟು ಕೋಟಿ ರು. ಆಸ್ತಿ!

ದಕ್ಷಿಣ ಕನ್ನಡ ಜಿಲ್ಲೆಯ ಸಹಾಯಕ ಔಷಧ ನಿಯಂತ್ರಕ ಬಾಬು ಮೇಲೆ ಲೋಕಾಯುಕ್ತ ಅಧಿಕಾರಿಗಳು ದಾಳಿ ಮಾಡಿದ್ದಾರೆ. ಇವರಿಗೆ ಸೇರಿದ 6 ಸ್ಥಳಗಳಲ್ಲಿ ಪರಿಶೀಲನೆ ನಡೆಸಿದ್ದಾರೆ. ಸ್ಥಿರಾಸ್ತಿ 2.19 ಕೋಟಿ ರು., ಚರಾಸ್ತಿ 2.21 ಕೋಟಿ ರು. ಸೇರಿದಂತೆ ಒಟ್ಟು 4 ಕೋಟಿ ರು. ಆಸ್ತಿಯನ್ನು ಪತ್ತೆ ಮಾಡಲಾಗಿದೆ. ಚಿತ್ರದುರ್ಗದ ನಿರ್ಮಿತಿ ಕೇಂದ್ರದ ಸಹಾಯಕ ಲೆಕ್ಕಾಧಿಕಾರಿ ಎಚ್.ಜಿ.ಸುಶೀಲಮ್ಮಗೆ ಸೇರಿದ 2 ಸ್ಥಳಗಳಲ್ಲಿ ಶೋಧನಾ ಕಾರ್ಯ ಕೈಗೊಳ್ಳಲಾಗಿದ್ದು, 13 ನಿವೇಶನಗಳು, 6 ವಾಸದ ಮನೆಗಳು, 1 ವಾಣಿಜ್ಯ ಸಂಕೀರ್ಣ, 34 ಎಕರೆ 02 ಗುಂಟೆ ಕೃಷಿ ಜಮೀನು, ಎಲ್ಲಾ ಸೇರಿ ಒಟ್ಟು ಮೌಲ್ಯ 6.75 ಕೋಟಿ ರು. ಸ್ಥಿರಾಸ್ತಿ ಪತ್ತೆಯಾಗಿದೆ. 1.57 ಕೋಟಿ ರು., ಚರಾಸ್ತಿ ಸೇರಿದಂತೆ 8.20 ಕೋಟಿ ರು. ಆಸ್ತಿ ಹೊಂದಿರುವುದು ತನಿಖೆಯಿಂದ ಬೆಳಕಿಗೆ ಬಂದಿದೆ.

ಪಂಚರಾಜ್ಯ ಪವರ್ ವಾರ್

ಮೆಲುಕು

ಉಗ್ಗಿದರೂ ಕುಗ್ಗದವರು

ದೇಶದ ಓರ್ವ ಕಮ್ಯುನಿಸ್ಟ್ ರಾಜಕಾರಣಿ ಹಾಗೂ ಸಿದ್ಧಾಂತವಾದಿಯಾಗಿದ್ದವರು ಇ.ಎಂ.ಎಸ್. ನಂಬೂದರಿಪಾದ್. 1957-59ರ ವರ್ಷದಲ್ಲಿ ಕೇರಳ ರಾಜ್ಯದ ಮೊದಲ ಮುಖ್ಯಮಂತ್ರಿ ಮತ್ತು ಭಾರತೀಯ ಗಣರಾಜ್ಯದ ಮೊದಲ ಕಾಂಗ್ರೆಸ್ಸೇತರ ಮುಖ್ಯ ಮಂತ್ರಿ ಎಂಬ ಹೆಗ್ಗಳಿಕೆಗೆ ಪಾತ್ರ ರಾಗಿದ್ದ ಇವರು, 1967-69ರ ಅವಧಿಯಲ್ಲಿ ಮತ್ತೊಮ್ಮೆ ಇದೇ ಹುದ್ದೆಯಲ್ಲಿ ಸೇವೆ ಸಲ್ಲಿಸಿದರು. ಕೇರಳದಲ್ಲಿ ಭೂ ಸುಧಾರಣೆ ಮತ್ತು ಶೈಕ್ಷಣಿಕ ಸುಧಾರಣೆಗಳ ಅಧ್ವರ್ಯು ಎನಿಸಿಕೊಂಡ ಇವರು ಆ ರಾಜ್ಯದ ಇತಿಹಾಸದ ಬಗ್ಗೆ ಬರೆದ ಪುಸ್ತಕವು ಈಗಲೂ ಶ್ರೇಷ್ಠ ಆಕರ ಗ್ರಂಥಗಳಲ್ಲಿ ಒಂದೆನಿಸಿಕೊಂಡಿದೆ. ತಾವು ಪ್ರತಿನಿಧಿಸುತ್ತಿದ್ದ 'ಸಿಪಿಐ' ಪಕ್ಷದ ವಿಭಜನೆಯಾದಾಗ, 'ಕಮ್ಯುನಿಸ್ಟ್ ಪಾರ್ಟಿ ಆಫ್ ಇಂಡಿಯಾ- ಮಾರ್ಕ್ಸಿಸ್ಟ್' (ಸಿಪಿಐ-ಎಂ) ಜತೆಗೆ ನಂಬೂದರಿಪಾದ್ ಹೆಗಲು ಕೊಟ್ಟರು. 1998ರಲ್ಲಿ ಅಸುನೀಗುವವರೆಗೂ ಅವರು 'ಸಿಪಿಐ-ಎಂ'ನ ಕೇಂದ್ರ ಸಮಿತಿ ಮತ್ತು ಪಾಲಿಟ್‌ಬ್ಯೂರೋ ಸದಸ್ಯರಾಗಿ ಸೇವೆ ಸಲ್ಲಿಸಿದರು. ಮಹಾತ್ಮ ಗಾಂಧಿಯವರನ್ನು 'ಹಿಂದೂ ಮೂಲಭೂತವಾದಿ' ಎಂದು ಕರೆಯುವಷ್ಟರ ಮಟ್ಟಿಗಿನ ದಿಟ್ಟತನ 'ಇಎಂಎಸ್'ರಲ್ಲಿ ಕೆನೆಗಟ್ಟಿತ್ತು. ಉಗ್ಗು ವಿಕೆಯ ಸಮಸ್ಯೆಯು ರಾಜಕೀಯ ಬದುಕಿನುದ್ದಕ್ಕೂ ಕಾಡಿ ದರೂ, ಅವರೊಬ್ಬ ಪ್ರಖರ ವಾಗ್ಮಿಯಾಗಿದ್ದರು. ನಂಬೂದರಿಪಾದ್‌ರನ್ನು ಸಂದರ್ಶಿಸಲು ಬಂದವ ರೊಬ್ಬರು, ''ನಿಮಗೆ ಈ ಉಗ್ಗುವಿಕೆಯ ಸಮಸ್ಯೆ ಯಾವಾ ಗಲೂ ಕಾಡುತ್ತದೆಯೇ?'' ಎಂದು ಪ್ರಶ್ನಿಸಿದ್ದಕ್ಕೆ, ''ಯಾವಾಗಲೂ ಅಲ್ಲ, ಕೇವಲ ಮಾತನಾಡುವಾಗಷ್ಟೇ'' ಎಂದುತ್ತರಿಸಿದ್ದರು ನಂಬೂದರಿಪಾದ್. ಉಗ್ಗುವಿಕೆಯ ಸಮಸ್ಯೆಯಿಂದ ಬಳಲುತ್ತಿರುವವರಿಗೆ ಅವರ ಈ ಧೋರಣೆ ಭರವಸೆದಾಯಕ, ಆತ್ಮವಿಶ್ವಾಸದ ಪ್ರತೀಕ.

ಚುನಾವಣಾ ಚುರುಮುರಿ

ಶ್ರೀಲೇಖಾ ಶ್ರೀಕಾರ?

ಕೇರಳದ ಮೊದಲ ಮಹಿಳಾ ಐಪಿಎಸ್ ಅಧಿಕಾರಿ ಶ್ರೀಲೇಖಾ ಸುದ್ದಿಯಲ್ಲಿದ್ದಾರೆ. ತಿರುವನಂತಪುರಂನ ಹೃದಯಭಾಗ ದಲ್ಲಿರುವ ವಟ್ಟಿಯೂರ್‌ಕಾವು ಕ್ಷೇತ್ರದಲ್ಲಿ ಬಿಜೆಪಿ ವತಿಯಿಂದ ಸ್ಪರ್ಧಿಸಿರುವ ಇವರು ಈ ಬಾರಿ ವಿಧಾನಸಭೆಯಲ್ಲಿ ತಮ್ಮ ಛಾಪು ಮೂಡಿಸುವ ತವಕದಲ್ಲಿದ್ದಾರೆ. 2025ರ ಸ್ಥಳೀಯ ಸಂಸ್ಥೆ ಚುನಾವಣೆಯಲ್ಲಿ, ತಿರುವನಂತಪುರಂ ಕಾರ್ಪೊರೇಷನ್‌ನ ಶಾಸ್ತಮಂಗಲಂ ವಾರ್ಡ್‌ನಿಂದ ಗೆದ್ದು ರಾಜಕಾರಣಕ್ಕೆ ಅಡಿಯಿಟ್ಟ ಶ್ರೀಲೇಖಾರನ್ನು 'ಸಂಭಾವ್ಯ ಮೇಯರ್' ಎಂದೇ ಬಿಂಬಿಸಲಾಗಿತ್ತು. ಆದರೆ ಬಿಜೆಪಿ ಅಂತಿಮವಾಗಿ ಮಣೆಹಾಕಿದ್ದು ಜಿಲ್ಲೆಯ ಪ್ರಮುಖ ನಾಯಕ ವಿ.ವಿ. ರಾಜೇಶ್ ಅವರಿಗೆ. ಈ ನಡೆಯಿಂದ ಅಸಮಾಧಾನಗೊಂಡ ಶ್ರೀಲೇಖಾ, ಪ್ರಧಾನಿ ನರೇಂದ್ರ ಮೋದಿಯವರು ಕರೆದಿದ್ದ ಬಿಜೆಪಿ-ಎನ್‌ಡಿಎ ಚುನಾಯಿತ ಪ್ರತಿನಿಧಿಗಳ ಸಭೆಯಿಂದ ದೂರವೇ ಉಳಿದುಬಿಟ್ಟರು. ಈ ನೋವಿಗೆ ಮುಲಾಮು ಹಚ್ಚುವ ಕ್ರಮ ಎಂಬಂತೆ ಈಗ ಶ್ರೀಲೇಖಾರನ್ನು ವಟ್ಟಿಯೂರ್‌ಕಾವು ಕ್ಷೇತ್ರದಿಂದ ಕಣಕ್ಕಿಳಿಸ ಲಾಗಿದೆ. ಸಿಪಿಎಂನ ಹಾಲಿ ಶಾಸಕ ವಿ.ಕೆ. ಪ್ರಶಾಂತ್ ಮತ್ತು ಹಿರಿಯ ಕಾಂಗ್ರೆಸ್ಸಿಗ ಕೆ.ಮುರಳೀಧರನ್‌ರಂಥ ಅತಿರಥ- ಮಹಾರಥರ ಎದುರು ಶ್ರೀಲೇಖಾ ಈಗ ಸೆಣಸಬೇಕಾಗಿ ಬಂದಿದೆ. ಸ್ಥಳೀಯ ಸಂಸ್ಥೆ ಚುನಾವಣೆಯಲ್ಲಿ ಬಿಜೆಪಿ ಈ ಪ್ರದೇಶದಲ್ಲಿ ಉತ್ತಮ ಪ್ರದರ್ಶನ ನೀಡಿದ್ದರೂ, 2016 ಮತ್ತು 2021ರ ವಿಧಾನಸಭಾ ಚುನಾವಣೆಗಳಲ್ಲಿ 'ರನ್ನರ್ ಅಪ್' ಸ್ಥಾನವನ್ನು ಪಡೆದಿದ್ದರೂ, ಬಿಜೆಪಿಯ ವಿರುದ್ಧ ಅಲ್ಪಸಂಖ್ಯಾತರ ಮತಗಳು ಕ್ರೋಡೀಕರಣಗೊಂಡಿರುವುದು ಶ್ರೀಲೇಖಾರ ನಾಗಾಲೋಟಕ್ಕೆ ಕೊಂಚ ಬ್ರೇಕ್ ಹಾಕಬಹುದು ಎನ್ನಲಾಗುತ್ತಿದೆ. ಒಟ್ಟಿನಲ್ಲಿ ಕಾದುನೋಡೋಣ..

ಜಾತಿ ಲೆಕ್ಕಾಚಾರ

ಯಾವುದೇ ಚುನಾವಣೆ ಬರಲಿ, 'ಜಾತಿ ಲೆಕ್ಕಾಚಾರ'ವು ಅಲ್ಲಿ ಪ್ರಮುಖ ಪಾತ್ರ ವಹಿಸುತ್ತದೆ ಎಂಬುದು ನಿರಾಕರಿಸ ಲಾಗದ ಸತ್ಯ. ಕೇರಳ ವಿಧಾನಸಭಾ ಚುನಾವಣೆಯೂ ಇದಕ್ಕೆ ಹೊರತಾಗಿಲ್ಲ. ಅದರಲ್ಲೂ ನಿರ್ದಿಷ್ಟವಾಗಿ ಕ್ರೈಸ್ತ ಬಾಂಧವರ ಮತಗಳನ್ನು ದಕ್ಕಿಸಿಕೊಳ್ಳಲು ಇಲ್ಲಿ ಇನ್ನಿಲ್ಲದ ಪೈಪೋಟಿ ಶುರುವಾಗಿದ್ದು, ಈ ಅಲ್ಪಸಂಖ್ಯಾತ ಸಮುದಾಯವನ್ನು ಒಲೈಸಲು ಬಿಜೆಪಿಯೂ ಹರಸಾಹಸ ಪಡುತ್ತಿದೆ. ತನ್ನೊಂದಿಗೆ ಕ್ರೈಸ್ತರು ಇರುವುದನ್ನು ಖಚಿತಪಡಿಸಿಕೊಳ್ಳಲು ಎಲ್ಲಾ ಯತ್ನಗಳನ್ನು ಮಾಡುತ್ತಿರುವ ಕಾಂಗ್ರೆಸ್ ಕೂಡ ಈ ಹೊಣೆಗಾರಿಕೆಯನ್ನು ಕರ್ನಾಟಕದ ಹಿರಿಯ ಸಚಿವ ಹಾಗೂ ಮೂಲತಃ ಮಲಯಾಳಿ ಆಗಿರುವ ಕೆ.ಜೆ. ಜಾರ್ಜ್ ಅವರಿಗೆ ವಹಿಸಿದೆ. ಪಕ್ಷದ ಕೇಂದ್ರ ಚುನಾವಣಾ ಸಮಿತಿಯ ಸದಸ್ಯರೂ, 'ತಾರಾ ಪ್ರಚಾರಕ'ರೂ ಆಗಿರುವ ಜಾರ್ಜ್ ಅವರು, ಎಐಸಿಸಿ ಜಂಟಿ ಕಾರ್ಯ ದರ್ಶಿ ಮ್ಯಾಥ್ಯೂ ಆ್ಯಂಟನಿ ಅವರ ನೆರವಿನಿಂದ ಸುಮಾರು 2 ಡಜನ್‌ನಷ್ಟು ಹಿರಿಯ ಚರ್ಚ್ ನಾಯಕರನ್ನು ಭೇಟಿ ಮಾಡುತ್ತಿದ್ದಾರಂತೆ. ಮಧ್ಯ ಕೇರಳದ ಕ್ರಿಶ್ಚಿಯನ್ ಪ್ರಾಬಲ್ಯದ ಕ್ಷೇತ್ರಗಳಲ್ಲಿ ಪ್ರಚಾರ ಮಾಡುತ್ತಿರುವ ಅವರು, ''ಕೇರಳದಲ್ಲಿ ಕ್ರೈಸ್ತರನ್ನು ತಲುಪಲು ಬಿಜೆಪಿ ನಡೆಸುತ್ತಿರುವ ಕಸರತ್ತುಗಳು ಸಂಪೂರ್ಣ ಅವಕಾಶವಾದಿತ್ವದಿಂದ ಮತ್ತು ಬೂಟಾಟಿಕೆಯಿಂದ ಕೂಡಿವೆ'' ಎನ್ನುತ್ತಾರೆ.

ಕೋಟ್ ಆಫ್ ದ ಡೇ

ಪಶ್ಚಿಮ ಬಂಗಾಳದಲ್ಲಿ ನಡೆದ ಮತದಾರರ ಪಟ್ಟಿಯ ವಿಶೇಷ ತೀವ್ರ ಪರಿಷ್ಕರಣೆ ಪ್ರಕ್ರಿಯೆಯ ಬಳಿಕ, ಕೆಲವು ಸಮುದಾಯಗಳ ಮತದಾರರ ಹೆಸರನ್ನು ಉದ್ದೇಶಪೂರ್ವಕವಾಗಿ ಆ ಪಟ್ಟಿಯಿಂದ ತೆಗೆದು ಹಾಕಲಾಗಿದೆ. ಹೆಸರನ್ನು ಕಳೆದುಕೊಂಡ ಮತದಾರರಿಗೆ ನಮ್ಮ ಪಕ್ಷ ಬೆಂಬಲ ನೀಡಲಿದೆ.

ಮಮತಾ ಬ್ಯಾನರ್ಜಿ, ಪಶ್ಚಿಮ ಬಂಗಾಳ ಮುಖ್ಯಮಂತ್ರಿ

ಬಂಗಾಳಿ ಅಸ್ಮಿತೆ, ಸಂಸ್ಕೃತಿ ಮತ್ತು ಪ್ರಾದೇಶಿಕ ಭಾವನೆಗಳನ್ನು ಉದ್ದೀಪಿಸುತ್ತಿರುವ ಮಮತಾ

ಮೋದಿ, ದೀದಿ: ಯಾರಾಗುವರು ಬಂಗಬಂಧು?

ಈಗಾಗಲೇ ತಿಳಿದಿರುವಂತೆ, ದೇಶದ ಐದು ರಾಜ್ಯಗಳಲ್ಲಿ ವಿಧಾನಸಭಾ ಚುನಾವಣೆಯ ಕಾವೇರಿದೆ. ಪಶ್ಚಿಮ ಬಂಗಾಳ ರಾಜ್ಯದಲ್ಲಿ ಏಪ್ರಿಲ್ 23 ಮತ್ತು 29ರಂದು ಎರಡು ಹಂತಗಳಲ್ಲಿ ಚುನಾವಣೆ ನಡೆಯಲಿದ್ದು, ಇತರ ನಾಲ್ಕು ರಾಜ್ಯಗಳ ಜತೆಗೆ ಮೇ 4ರಂದು ಮತಗಳ ಎಣಿಕೆ ನಡೆಯಲಿದೆ.



ಬಿಜೆಪಿಯ ರಣವೀಳ್ಯವನ್ನು ಸ್ವೀಕರಿಸಿರುವ ತೃಣಮೂಲ ಕಾಂಗ್ರೆಸ್ (ಟಿಎಂಸಿ) ಪಕ್ಷದ ಮುಖ್ಯಸ್ಥೆ ಹಾಗೂ ರಾಜ್ಯದ ಮುಖ್ಯಮಂತ್ರಿ ಮಮತಾ ಬ್ಯಾನರ್ಜಿಯವರು ಸಾಧ್ಯವಿರುವ ಕಡೆಯೆಲ್ಲಾ ಬಿಜೆಪಿಯನ್ನು ಗುರಿಯಾಗಿಸಿ ವಾಗ್ದಾಳಿ ಮಾಡುವುದನ್ನು ಮುಂದುವರಿಸಿದ್ದಾರೆ.

ಅಚ್ಚರಿಯ ಸಂಗತಿಯೆಂದರೆ, ಮಮತಾ ದೀದಿಯ ವಾಗ್ದಾಳಿ ಬಿಜೆಪಿಗಷ್ಟೇ ಸೀಮಿತವಾಗಿಲ್ಲ, ಭಾರತದ ಚುನಾವಣಾ ಆಯೋಗ(ಇಸಿಐ) ಕೂಡ ಅದರ 'ಫಲಾನುಭವಿ' ಆಗಿದೆ! ಮೊನ್ನೆ ಭಾನುವಾರ ಅವರು 'ವಿದ್ಯುನ್ಮಾನ ಮತಯಂತ್ರ'ಗಳನ್ನು (ಇವಿಎಂ) ಮುಂದುಮಾಡಿಕೊಂಡು ಈ ನಿಟ್ಟಿನಲ್ಲಿ ಕಸರತ್ತು ನಡೆಸಿದ್ದೇ ಇದಕ್ಕೆ ಸಾಕ್ಷಿ. ಇವಿಎಂಗಳನ್ನು 'ಹ್ಯಾಕ್' ಮಾಡುವ ಹಾಗೂ ತಾಂತ್ರಿಕ ಕಾರಣಗಳನ್ನು ಮುಂದುಮಾಡಿ 'ಟಿಎಂಸಿ' ಪಕ್ಷದ ಅಭ್ಯರ್ಥಿಗಳನ್ನು ಅನರ್ಹಗೊಳಿಸುವ ಯತ್ನಗಳು ಈ ಬಾರಿಯ ಚುನಾವಣೆಯಲ್ಲಿ ನಡೆಯಬಹುದು ಎಂಬ ಆತಂಕವನ್ನು ಮೊನ್ನೆ ಮಮತಾ ವ್ಯಕ್ತಪಡಿಸಿರುವುದು ಇಲ್ಲಿ ಉಲ್ಲೇಖನೀಯ.

ಆತಂಕಕ್ಕೆ ಹಲವು ಮಗ್ಗುಲು: ಪಶ್ಚಿಮ ಬಂಗಾಳದಲ್ಲಿ ಈ ಬಾರಿಯ ವಿಧಾನಸಭಾ ಚುನಾವಣೆಯು 'ಮೋದಿ ವರ್ಸಸ್ ದೀದಿ' ಎಂಬ ಟ್ಯಾಗ್‌ಲೈನ್ ನೊಂದಿಗೆ ಪ್ರಧಾನಿ ನರೇಂದ್ರ ಮೋದಿ ಹಾಗೂ ರಾಜ್ಯದ ಸಿಎಂ ಮಮತಾ ಬ್ಯಾನರ್ಜಿಯವರ ನಡುವಿನ ಪ್ರತಿಷ್ಠೆಯ ಕಾಳಗವಾಗಿ ಮಾರ್ಪಟ್ಟಿದೆ. ರಾಜ್ಯವನ್ನು 'ಟಿಎಂಸಿ'ಯ ಕಬ್ಜಾದಿಂದ ಶತಾಯಗತಾಯ ತನ್ನ ಮಡಿಲಿಗೆ ಕೆಡವಿಕೊಳ್ಳಬೇಕು ಎಂಬ ಹಠಕ್ಕೆ ಬಿದ್ದಿರುವ ಬಿಜೆಪಿ ವಿವಿಧ ತೆರನಾದ 'ವ್ಯೂಹಾತ್ಮಕ ಕಾರ್ಯತಂತ್ರ'ಗಳಿಗೆ ಮೊರೆಹೋಗಿದೆ. ಇದನ್ನು ಸಮರ್ಥವಾಗೇ ಮನಗಂಡಿರುವ ಮಮತಾ, ಬಿಜೆಪಿಯ ತಂತ್ರಗಳಿಗೆ ತಕ್ಕ ಮಾರುತ್ತರ ನೀಡುವ ಯತ್ನದ ಭಾಗವಾಗಿ, ಮುರ್ಷಿದಾಬಾದ್‌ನ ಸಂಸರ್‌ಗಂಜ್‌ನಲ್ಲಿ ಮೊನ್ನೆ ನಡೆದ ರ‍್ಯಾಲಿಯಲ್ಲಿ ಪಕ್ಷದ ಕಾರ್ಯಕರ್ತರಿಗೆ ಹಾಗೂ ಮತದಾರರಿಗೆ ತಮ್ಮದೇ ಶೈಲಿಯಲ್ಲಿ ಒಂದಿಷ್ಟು ಕಿವಿಮಾತುಗಳನ್ನು ಹೇಳಿದರು. ಕಳೆದ ವರ್ಷದ ಏಪ್ರಿಲ್‌ನಲ್ಲಿ ಈ ಜಿಲ್ಲೆಯಲ್ಲಿ ವಕ್ಫ್ (ತಿದ್ದುಪಡಿ) ಕಾಯ್ದೆಯ ವಿರುದ್ಧ ಪ್ರತಿಭಟನೆಗಳು ನಡೆದಾಗ ಈ ಪ್ರದೇಶವು ಹಿಂಸಾಚಾರದ ಕೇಂದ್ರಬಿಂದುವಾಗಿತ್ತು ಎಂಬುದಿಲ್ಲಿ ಉಲ್ಲೇಖನೀಯ. ಮಮತಾರ ಆ ಕಿವಿಮಾತುಗಳು ಹೀಗಿವೆ:

- ಮತದಾನಕ್ಕೂ ಮುನ್ನ 'ಇವಿಎಂ'ಗಳನ್ನು ಸರಿಯಾಗಿ ಪರಿಶೀಲಿಸಿ; ಮತವನ್ನು ಚಲಾಯಿಸಿದ ನಂತರ 'ವಿವಿ-ಪ್ಯಾಟ್' ಅನ್ನು ಕೇಳಿ (ವಿವಿ-ಪ್ಯಾಟ್ ಎಂದರೆ, ಮತದಾರರು ಪರಿಶೀಲಿಸಬಹುದಾದ ಪೇಪರ್ ಆಡಿಟ್ ಟ್ರಯಲ್. ಇದು ಇವಿಎಂಗೆ ಜೋಡಿಸಲ್ಪಟ್ಟ ವ್ಯವಸ್ಥೆಯಾಗಿದ್ದು, ಮತದಾರರು ತಾವು ಚಲಾಯಿಸಿದ ಮತವು ಸರಿಯಾದ ಅಭ್ಯರ್ಥಿಗೆ ಬಿದ್ದಿದೆಯೇ ಎಂಬುದನ್ನು ಖಚಿತಪಡಿಸಿಕೊಳ್ಳಲು 7 ಸೆಕೆಂಡುಗಳ ಕಾಲ ಕಾಗದದ ಪಟ್ಟಿಯನ್ನು ಈ ಯಂತ್ರ ಪ್ರದರ್ಶಿಸುತ್ತದೆ; ನಂತರ ಆ ಪಟ್ಟಿಯು ಮೊಹರಾದ ಪೆಟ್ಟಿಗೆಯೊಳಗೆ ಬೀಳುತ್ತದೆ. ಚುನಾವಣಾ ಪ್ರಕ್ರಿಯೆಯಲ್ಲಿ ಪಾರದರ್ಶಕತೆ ಮತ್ತು ವಿಶ್ವಾಸಾರ್ಹತೆಯನ್ನು ಹೆಚ್ಚಿಸುವ ವ್ಯವಸ್ಥೆಯಿದು).
- ಇವಿಎಂನ ಕಾರ್ಯನಿರ್ವಹಣೆ ಅಸಮರ್ಪಕವಾಗಿದ್ದರೆ ಮತಗಟ್ಟೆಯ ಸಿಬ್ಬಂದಿ ಅದನ್ನು ದುರಸ್ತಿ ಮಾಡುವುದಕ್ಕೆ ಬಿಡಬೇಡಿ; ಅದನ್ನು ಬದಲಿಸುವಂತೆ ಆಗ್ರಹಿಸಿ.
- ಮತದಾನದ ದಿನ ಹಾಗೂ ಎಣಿಕೆಯ ದಿನದ ನಡುವೆ ಹಲವು ದಿನಗಳ ಅಂತರವಿರುತ್ತದೆ. ಇವಿಎಂಗಳನ್ನು ಕಾಪಿಟ್ಟುಕೊಳ್ಳುವ ಕೇಂದ್ರ ಪಡೆಗಳು (ಅರೆಸೈನಿಕ ಪಡೆಗಳು), ಅವನ್ನು ಹಾಳು ಮಾಡದಂತೆ ನೋಡಿಕೊಳ್ಳಿ. ಅವು ಮಾಡಲು ಸಾಧ್ಯವಾಗದಂಥದ್ದು ಏನೂ ಇಲ್ಲ, ಹೀಗಾಗಿ 24/7 ಜಾಗೃತರಾಗಿರಿ.
- ಅಭ್ಯರ್ಥಿಗಳು ನಾಮಪತ್ರವನ್ನು ಸಲ್ಲಿಸುವಾಗ ಜಾಗರೂಕರಾಗಿರಬೇಕು, ಜತೆಯಲ್ಲಿ ವಕೀಲರನ್ನೂ ಕರೆದುಕೊಂಡು ಹೋಗಬೇಕು. ಏಕೆಂದರೆ, ನಾಮಪತ್ರಗಳನ್ನು ತಿರಸ್ಕರಿಸಲು ಬಿಜೆಪಿ ಎಲ್ಲಾ ಬಗೆಯ ಯೋಜನೆಗಳನ್ನು ರೂಪಿಸಿದೆ; ತಾಂತ್ರಿಕ ಕಾರಣಗಳನ್ನು ಮುಂದುಮಾಡಿ ನಾಮಪತ್ರಗಳನ್ನು ತಿರಸ್ಕರಿಸಲೆಂದೇ 'ಆಯ್ದ' ಒಂದಿಷ್ಟು ಅಧಿಕಾರಿಗಳನ್ನು ನಿಯೋಜಿಸಲಾಗಿದೆ.

ಬಿಜೆಪಿ ತಿರುಗೇಟು: ವಿದ್ಯುನ್ಮಾನ ಮತಯಂತ್ರಗಳನ್ನು ಬಿಜೆಪಿ ದುರುಪಯೋಗಪಡಿಸಿಕೊಳ್ಳುವ ಸಾಧ್ಯತೆಯಿದೆ ಎಂಬ ಸಿಎಂ ಮಮತಾರ ಆರೋಪಕ್ಕೆ ಪಶ್ಚಿಮ ಬಂಗಾಳ ಬಿಜೆಪಿಯ ಮುಖ್ಯ ವಕ್ತಾರ ದೇಬ್‌ಜಿತ್ ಸರ್ಕಾರ್ ಅವರು, ''ತಾವು ಮತ್ತೊಮ್ಮೆ ಅಧಿಕಾರಕ್ಕೆ ಬರುವುದು ದುಸ್ತರ ಎಂಬುದು ಅರಿವಾದ ನಂತರ ಮಮತಾ ಬ್ಯಾನರ್ಜಿಯವರು ಜನರಿಂದ ಒದಗುವ ಸೋಲಿಗೆ ಉತ್ತರಿಸಲು ಎಲ್ಲ ತೆರನಾದ ಸಂಭಾವ್ಯ ನೆಪಗಳನ್ನು ಹುಡುಕಲು ಶುರುಹಚ್ಚಿಕೊಂಡಿದ್ದಾರೆ'' ಎಂದು ಖಡಕ್ಕಾಗಿ ಪ್ರತಿಕ್ರಿಯಿಸಿರುವುದು ಗಮನಾರ್ಹ.

ಬಂಗಾಳಿ ಅಸ್ಮಿತೆಯ ಪುನರುಚ್ಚಾರ: 'ಜೊಯ್ ಬಾಂಗ್ಲಾ' (ಬಂಗಾಳಕ್ಕೆ ಜಯವಾಗಲಿ) ಎಂಬುದು 'ಟಿಎಂಸಿ' ವತಿಯಿಂದ ಮತ್ತೆ ಮತ್ತೆ ಕೇಳಿಬರುವ ಘೋಷವಾಕ್ಯ. ಇದು ಬಂಗಾಳದ ಸಾಂಸ್ಕೃತಿಕ ಮತ್ತು ಭಾಷಿಕ ಅಸ್ಮಿತೆಯನ್ನು ಒತ್ತಿಹೇಳುವ ಪದಗುಚ್ಛವೂ ಹೌದು. ರಾಷ್ಟ್ರೀಯ ಪಕ್ಷ ಬಿಜೆಪಿಯು ಬಂಗಾಳದಲ್ಲಿ ಠಿಕಾಣಿ ಹೂಡಲು ಹಠ ತೊಟ್ಟಾಗಿನಿಂದ 'ಜೊಯ್ ಬಾಂಗ್ಲಾ' ಘೋಷವಾಕ್ಯವನ್ನು ಪುನರಾವರ್ತಿಸುತ್ತಾ ಸ್ಥಳೀಯ ಸಂಸ್ಕೃತಿ ಮತ್ತು ಪ್ರಾದೇಶಿಕ ಭಾವನೆಗಳನ್ನು ಉದ್ದೀಪಿಸುವ ಯತ್ನದಲ್ಲಿದ್ದಾರೆ ಮಮತಾ. ಮತದಾರರ ಪಟ್ಟಿಯ ವಿಶೇಷ ತೀವ್ರ ಪರಿಷ್ಕರಣೆಯ (ಎಸ್‌ಐಆರ್) ಸಂದರ್ಭವನ್ನು ಇದಕ್ಕೆ ಪೂರಕವಾಗಿ ಬಳಸಿಕೊಂಡ ಅವರು, ''ಪ್ರಜಾಪ್ರಭುತ್ವವು ನಿಮಗೆ ನೀಡಿರುವ ಶಕ್ತಿಯನ್ನು ಬಳಸಿಕೊಳ್ಳಿ; ಮತದಾರರ ಪಟ್ಟಿಯಿಂದ ನಿಮ್ಮ ಹೆಸರುಗಳನ್ನು ಅಳಿಸಿದ್ದಕ್ಕಾಗಿ ಸೇಡು ತೀರಿಸಿಕೊಳ್ಳಿ ಮತ್ತು 'ಎಸ್‌ಐಆರ್' ವಿರುದ್ಧ ನಿಮ್ಮ ಮತಗಳನ್ನು ಚಲಾಯಿಸಿ. ಹೀಗಾದಲ್ಲಿ ಚುನಾವಣಾ ಫಲಿತಾಂಶದಲ್ಲಿ ನಿಮ್ಮ ಭಾವನೆ ಬಿಂಬಿತವಾಗುತ್ತದೆ'' ಎಂದು ಹೇಳಿದ್ದರ ಜತೆಗೆ, ಎಸ್‌ಐಆರ್ ಪ್ರಕ್ರಿಯೆಯ ಸಮಯದಲ್ಲಿ ಯಾರ ಹೆಸರುಗಳು ಅಳಿಸಲ್ಪಟ್ಟಿವೆಯೋ, ಅಂಥವರು ನ್ಯಾಯ ಮಂಡಳಿಯ ಮುಂದೆ ಮೇಲ್ಮನವಿ ಸಲ್ಲಿಸಬೇಕು ಎಂದೂ ಆಗ್ರಹಿಸಿದರು. ಈ ಬಾರಿಯ ಚುನಾವಣೆಯನ್ನು ಬಡಪೆಟ್ಟಿಗೆ ಸೋಲದಿರಲು ಮಮತಾ ಹೇಗೆಲ್ಲಾ ಯತ್ನಿಸುತ್ತಿದ್ದಾರೆ ಎಂಬುದಕ್ಕೆ ಈ ನಡೆಯೇ ಸಾಕ್ಷಿ.

ಬರ್ತಾರಂತೆ ಬಾಡಿಗೆ ಬೆಂಬಲಿಗರು!: ಮಮತಾರ ಹರಸಾಹಸ ಇಷ್ಟಕ್ಕೇ ನಿಲ್ಲುವುದಿಲ್ಲ. ರಾಜ್ಯ ವಿಧಾನಸಭಾ ಚುನಾವಣಾ ತೀರ್ಪಿನ ಮೇಲೆ ಪ್ರಭಾವ ಬೀರಲೆಂದೇ ಬಿಜೆಪಿಯು ಇತರ ರಾಜ್ಯಗಳಿಂದ ಜನರನ್ನು ಬಂಗಾಳಕ್ಕೆ ಕರೆತರುತ್ತಿದೆ. ಬಿಜೆಪಿಯು ಬಿಹಾರ ಮತ್ತು ಉತ್ತರ ಪ್ರದೇಶ ರಾಜ್ಯಗಳಿಂದ ಮತದಾರರನ್ನು ಮಾತ್ರವಲ್ಲದೆ, ಹಣ ಪಡೆದು ಕೆಲಸ ಮಾಡುವ ಹಿಂಡುಗಟ್ಟಲೆ 'ಬಾಡಿಗೆ ಬೆಂಬಲಿಗರನ್ನೂ' ತರುತ್ತಿದೆ ಎಂಬ ಆಣಿಮುತ್ತುಗಳೂ ಅವರಿಂದ ಉದುರಿವೆ. ಮುರ್ಷಿದಾಬಾದ್ ಜಿಲ್ಲೆಯಲ್ಲಿ ಮಮತಾ ಅವರು ಹೀಗೆ ಪ್ರಚೋದನಕಾರಿಯಾಗಿ ಮಾತಾಡುವುದಕ್ಕೆ ಮತ್ತೊಂದು ಕಾರಣವೂ ಇದೆ. 2011ರ ಜನಗಣತಿಯ ಪ್ರಕಾರ ಈ ಜಿಲ್ಲೆಯಲ್ಲಿ ಪಶ್ಚಿಮ ಬಂಗಾಳದ ಅತಿಹೆಚ್ಚು ಮುಸ್ಲಿಂ ಜನಸಂಖ್ಯೆ (ಶೇ.66.28) ಇದ್ದರೆ, ಪಕ್ಕದ ಮಾಲ್ಡಾ ಜಿಲ್ಲೆಯು ಈ ಬಾಬತ್ತಿನಲ್ಲಿ ಎರಡನೇ ಸ್ಥಾನದಲ್ಲಿದೆ (ಶೇ. 51.27).

ಒಟ್ಟಿನಲ್ಲಿ, ನರೇಂದ್ರ 'ಮೋದಿ' ಮತ್ತು ಮಮತಾ 'ದೀದಿ' ಎಂಬ ಎರಡು ಘಟಾನುಘಟಿಗಳ ಪೈಕಿ ಯಾರಾಗಲಿದ್ದಾರೆ 'ಬಂಗಬಂಧು' ಎಂಬುದನ್ನು ಕಾಣಲು ಮೇ ತಿಂಗಳ 4ರವರೆಗೂ ಕಾಯಬೇಕು.

ಸಮೀಕ್ಷೆ ಪ್ರಸಾರಕ್ಕೆ ನಿರ್ಬಂಧ

ದೆಹಲಿ: ಈ ತಿಂಗಳು ಪಂಚರಾಜ್ಯಗಳ ವಿಧಾನಸಭಾ ಚುನಾವಣೆಗಳು ನಡೆಯುವ ಹಿನ್ನೆಲೆಯಲ್ಲಿ ಏಪ್ರಿಲ್ 9ರ ಬೆಳಗ್ಗೆ 7 ಗಂಟೆ ಯಿಂದ ಏಪ್ರಿಲ್ 29ರ ಸಂಜೆ 6.30ರವರೆಗೆ ಮತಗಟ್ಟೆ ಸಮೀಕ್ಷೆಗಳನ್ನು ನಡೆಸುವಂತಿಲ್ಲ, ಬಿತ್ತರಿಸುವಂತಿಲ್ಲ ಎಂದು ಚುನಾವಣಾ ಆಯೋಗ ಸೂಚಿಸಿದೆ. ಒಂದೊಮ್ಮೆ ಇಂಥ ಚಟುವಟಿಕೆಗಳನ್ನು ಕೈಗೊಂಡಲ್ಲಿ ಅದು 1951ರ ಜನಪ್ರತಿನಿಧಿ ಕಾಯ್ದೆಯ '126-ಎ' ಸೆಕ್ಷನ್‌ನ ಉಲ್ಲಂಘನೆಯಾಗುತ್ತದೆ, ಸಂಬಂಧಪಟ್ಟವರು ನಿಗದಿತ ದಂಡ ಹಾಗೂ 2 ವರ್ಷಗಳ ಜೈಲುಶಿಕ್ಷೆಗೆ ಒಳಗಾಗಬೇಕಾಗುತ್ತದೆ ಎಂದು ಆಯೋಗ ಎಚ್ಚರಿಸಿದೆ.

ಅಸ್ಸಾಂ, ಕೇರಳ ಮತ್ತು ಪುದುಚೇರಿಯಲ್ಲಿ ಏಪ್ರಿಲ್ 9ರಂದು, ತಮಿಳುನಾಡಿನಲ್ಲಿ ಏಪ್ರಿಲ್ 23ರಂದು, ಪಶ್ಚಿಮ ಬಂಗಾಳದಲ್ಲಿ ಏಪ್ರಿಲ್ 23 ಮತ್ತು 29ರಂದು (2 ಹಂತಗಳಲ್ಲಿ) ಮತದಾನ ನಡೆಯಲಿದೆ. ಐದೂ ರಾಜ್ಯಗಳ ಚುನಾವಣಾ ಫಲಿತಾಂಶವು ಮೇ 4ರಂದು ಪ್ರಕಟವಾಗಲಿದೆ.

ಚುನಾವಣಾ ಅಧಿಕಾರಿಯ ಜೆನ್‌ಝೀ ನೃತ್ಯ!

ತಿರುವನಂತಪುರಂ: ಮತದಾನದ ಪ್ರಮಾಣವನ್ನು ಹೆಚ್ಚಿಸಲು ಹಾಗೂ 'ಚುನಾವಣೆ' ಎಂಬ ಪ್ರಜಾಪ್ರಭುತ್ವದ ಹಬ್ಬದಲ್ಲಿ ಭಾಗಿಯಾಗುವಂತೆ ಹೊಸ ಮತದಾರರನ್ನು ಉತ್ತೇಜಿಸಲು ಚುನಾವಣಾ ಆಯೋಗವು ಹಲವು ಕಸರತ್ತುಗಳನ್ನು ಮಾಡುವುದು ವಾಡಿಕೆ. ಈ ನಿಟ್ಟಿನಲ್ಲಿ ಒಂದು ಹೆಜ್ಜೆ ಮುಂದೆ ಹೋಗಿರುವ ಕೇರಳ ಚುನಾವಣಾ ಆಯೋಗದ ಮುಖ್ಯ ಚುನಾವಣಾಧಿಕಾರಿ ರತನ್ ಕೇಲ್ಕರ್ ಅವರು ಬೀಚ್ ಒಂದರಲ್ಲಿ ತಮ್ಮ ತಂಡದೊಂದಿಗೆ ಜೆನ್‌ಝೀ ನೃತ್ಯ ಮಾಡಿರುವುದು ಭಾರಿ ಗಮನ ಸೆಳೆದಿದೆ.



ತಿರುವನಂತಪುರಂನ ಜಿಲ್ಲಾಧಿಕಾರಿ ಅನುಕುಮಾರಿ, ಸಹಾಯಕ ಜಿಲ್ಲಾಧಿಕಾರಿ ಶಿವಶಕ್ತಿವೇಲ್ ಮಾತ್ರವಲ್ಲದೆ, ಇದೇ ಮೊದಲ ಬಾರಿಗೆ ಮತವನ್ನು ಚಲಾಯಿಸುತ್ತಿರುವ ಜೆನ್‌ಝೀ ತಲೆಮಾರಿನ ಒಂದಿಷ್ಟು ಯುವಕ-ಯುವತಿಯರೂ ಈ ನೃತ್ಯದಲ್ಲಿ ಹೆಜ್ಜೆಹಾಕಿರುವುದು ವಿಶೇಷ. 'ಇದು ನಿಮ್ಮ ಮತ, ನಿಮ್ಮ ಮತ ನಮ್ಮ ರಾಜ್ಯಕ್ಕೆ ಬೇಕು, ಒಂದು ದೃಢನಿರ್ಧಾರ ಪಂದ್ಯದ ದಿಕ್ಕಿನ ಬದಲಾವಣೆಗೆ ಆಧಾರ, ನಿಮ್ಮ ಒಂದು ಮತ ರಾಜ್ಯದ ಭವಿಷ್ಯದ ನಿರ್ಧಾರ' ಎಂಬರ್ಥ ಬರುವ ಹಾಡಿನೊಂದಿಗೆ ಈ ನೃತ್ಯವನ್ನು ಪ್ರಸ್ತುತಪಡಿಸಲಾಗಿದೆ.

ಪ್ರಚಾರ ರ‍್ಯಾಕೆಟ್ ಬೀಸಿದ ಲಿಯಾಂಡರ್

ಮಾಜಿ ಟೆನಿಸ್ ಆಟಗಾರ, ಒಲಿಂಪಿಕ್ ಪದಕ ವಿಜೇತ ಹಾಗೂ ಬಿಜೆಪಿ ನಾಯಕ ಲಿಯಾಂಡರ್ ಪೇಸ್ ಅವರು ಕೇರಳ ವಿಧಾನಸಭಾ ಚುನಾವಣೆ ಹಿನ್ನೆಲೆಯಲ್ಲಿ ವಿವಿಧ ಕ್ಷೇತ್ರಗಳಲ್ಲಿ ಎನ್‌ಡಿಎ ಮೈತ್ರಿಕೂಟದ ಅಭ್ಯರ್ಥಿಗಳ ಪರ ಪ್ರಚಾರಕಾರ್ಯದಲ್ಲಿ ತೊಡಗಿಸಿಕೊಂಡರು.

ರಾಷ್ಟ್ರಮಟ್ಟದಲ್ಲಿ ಇಂಡಿ ದೋಸ್ತಿ ಕೇರಳಂನಲ್ಲಷ್ಟೇ ಜಂಗೀಕುಸ್ತಿ

ನಮ್ಮ ನೆರೆರಾಜ್ಯವಾಗಿರುವ ಕೇರಳಂ ಹಲವಾರು ವಿಚಾರಗಳಲ್ಲಿ ತನ್ನದೇ ಆದ ವೈಶಿಷ್ಟ್ಯ ಹೊಂದಿದ್ದು, ರಾಜಕೀಯದಲ್ಲೂ ಅದು ತನ್ನದೇ ಆದ ಛಾಪು ಮೂಡಿಸಿದೆ. ರಾಷ್ಟ್ರಮಟ್ಟದಲ್ಲಿ ಎಡಪಕ್ಷಗಳು ಕಾಂಗ್ರೆಸ್ ನಾಯಕತ್ವದ ಇಂಡಿ ಒಕ್ಕೂಟದ ಭಾಗವಾಗಿದ್ದರೂ, ಕೇರಳದಲ್ಲಿ ಅವೆರಡೂ ಪರಸ್ಪರ ಬದ್ಧ ಎದುರಾಳಿಗಳು ಎಂಬುದು ಅಲ್ಲಿನ ಚುನಾವಣಾ ಕಣದ ವಿಶೇಷತೆಯಾಗಿದೆ.

ನರೇಂದ್ರ ಪಾರೆಕಟ್

ನಾಳೆ ಕೇರಳಂನಲ್ಲಿ ನಡೆಯಲಿರುವ 140 ವಿಧಾನಸಭಾ ಕ್ಷೇತ್ರಗಳ ಚುನಾವಣೆಗೆ ಅಬ್ಬರದ ಪ್ರಚಾರ ಮಂಗಳವಾರ ಸಂಜೆ ಅಂತ್ಯಗೊಂಡಿದೆ. ಈ ಹಿಂದೆಯೆಲ್ಲಾ ನಡೆದ ಚುನಾವಣಾ ಕಣಕ್ಕೆ ಹೋಲಿಸಿದರೆ ಈ ಸಲ ಅಲ್ಲಿ ತುಸು ಹೆಚ್ಚಿನ ಪೈಪೋಟಿ ಕಂಡುಬಂದಿದೆ.

ಒಂದು ಕಡೆ ಕಳೆದ ಹತ್ತು ವರ್ಷಗಳಿಂದ ಕೇರಳದಲ್ಲಿ ಆಡಳಿತ ನಡೆಸುತ್ತಿರುವ ಎಡರಂಗ ಒಕ್ಕೂಟದ ಸರಕಾರವು ಮತ್ತೆ ಅಧಿಕಾರದ ಗದ್ದುಗೆ ಹಿಡಿಯಬೇಕೆಂಬ ಹ್ಯಾಟ್ರಿಕ್ ಪ್ರಯತ್ನದಲ್ಲಿದೆ. ಹಿಂದೊಮ್ಮೆ ಕೇರಳವನ್ನು ಹೊರತುಪಡಿಸಿ ಪಶ್ಚಿಮ ಬಂಗಾಳ, ತ್ರಿಪುರಾ ಸೇರಿದಂತೆ ಮೂರ್‍ನಾಲ್ಕು ರಾಜ್ಯಗಳಲ್ಲಿ ಎಡರಂಗ ಸರಕಾರದ್ದೇ ಪಾರಮ್ಯ ಇತ್ತು. ಆದರೆ ಕಳೆದ ಹತ್ತದಿನೈದು ವರ್ಷಗಳಿಂದ ನಮ್ಮ ದೇಶದಲ್ಲಿ ಕೇರಳಂವೊಂದನ್ನು ಬಿಟ್ಟರೆ ಎಡಪಕ್ಷಗಳಿಗೆ ಬೇರೆ ರಾಜ್ಯಗಳಲ್ಲಿ ಹೇಳಿಕೊಳ್ಳುವಂತಹ ನೆಲೆ ಇಲ್ಲ, ಆಡಳಿತದ ಚುಕ್ಕಾಣಿ ಹಿಡಿದದ್ದೂ ಇಲ್ಲ. ಹಾಗಾಗಿ ಎಲ್‌ಡಿಎಫ್‌ಗೆ ಈ ಸಲ ಕೇರಳಂ ರಾಜ್ಯ ಚುನಾವಣೆ ಪ್ರತಿಷ್ಠೆಯ ಕಣ. ಹೇಗಾದರೂ ಈ ಏಕೈಕ ರಾಜ್ಯದಲ್ಲಿ ತನ್ನ ಅಧಿಕಾರ ಉಳಿಸುವ ತವಕ.

ಎಲ್ಲಾ ಕ್ಷೇತ್ರಗಳಲ್ಲೂ ಎಲ್‌ಡಿಎಫ್ ಸ್ಪರ್ಧೆ: ಈ ಸಲ ಎಡರಂಗ ಒಕ್ಕೂಟವುವು ತನ್ನ ಒಕ್ಕೂಟದ 10 ಪಕ್ಷಗಳೊಂದಿಗೆ ಎಲ್ಲಾ 140 ಕ್ಷೇತ್ರಗಳಲ್ಲೂ ಸ್ಪರ್ಧಿಸಿದೆ. ಒಕ್ಕೂಟದ ಪ್ರಮುಖ ಪಕ್ಷವಾಗಿರುವ ಸಿಪಿಐಎಂ 80 ಸ್ಥಾನದಲ್ಲಿ ಸ್ಪರ್ಧಿಸಿದ್ದು, ಸಿಪಿಐ 23 ಸ್ಥಾನಗಳಲ್ಲಿ ಸ್ಪರ್ಧಿಸಿದೆ. ಒಕ್ಕೂಟದ 3ನೇ ದೊಡ್ಡ ಪಕ್ಷವಾದ ಕೇರಳ ಕಾಂಗ್ರೆಸ್ (ಮಾಣಿ ವಿಭಾಗ) 12 ಸ್ಥಾನಗಳಲ್ಲಿ ಕಣಕ್ಕಿಳಿದಿದೆ. ಎನ್‌ಸಿಪಿ ಮತ್ತು ಆರ್‌ಜೆಡಿ ತಲಾ 3 ಸ್ಥಾನಗಳಲ್ಲಿ ಸ್ಪರ್ಧೆಯಲ್ಲಿದ್ದರೆ, ಉಳಿದ 5 ಪಕ್ಷಗಳು ತಲಾ 1 ಕ್ಷೇತ್ರಗಳಲ್ಲಿ ಎಲ್‌ಡಿಎಫ್ ಪರ ಕಣಕ್ಕಿಳಿದಿವೆ. 16 ಕಡೆ ಎಲ್‌ಡಿಎಫ್ ಬೆಂಬಲಿತ ಪಕ್ಷೇತರ ಅಭ್ಯರ್ಥಿಗಳು ಕಣದಲ್ಲಿದ್ದಾರೆ.

92 ಕ್ಷೇತ್ರಗಳಲ್ಲಿ ಕಾಂಗ್ರೆಸ್ ಕಣಕ್ಕೆ: ಮತ್ತೊಂದು ಕಡೆ ಯುಡಿಎಫ್ ತನ್ನ ಒಕ್ಕೂಟದ 7 ಪಕ್ಷಗಳೊಂದಿಗೆ ಈ ಸಲ ಚುನಾವಣಾ ಕಣದಲ್ಲಿದೆ. ಕಾಂಗ್ರೆಸ್ 92 ಸ್ಥಾನಗಳಲ್ಲಿ ಸ್ಪರ್ಧಿಸಿದರೆ, ಇಂಡಿಯನ್ ಯೂನಿಯನ್ ಮುಸ್ಲಿಂ ಲೀಗ್ 26 ಸ್ಥಾನಗಳಲ್ಲಿ ಸ್ಪರ್ಧೆಯಲ್ಲಿದೆ. ಕೇರಳ ಕಾಂಗ್ರೆಸ್ 8, ಆರ್‌ಎಸ್‌ಪಿ 4 ಮತ್ತು ಉಳಿದ 3 ಪಕ್ಷಗಳು ತಲಾ ಒಂದು ಸ್ಥಾನದಲ್ಲಿ ಸ್ಪರ್ಧಿಸಿವೆ. 7 ಕಡೆ ಯುಡಿಎಫ್ ಬೆಂಬಲಿತ ಪಕ್ಷೇತರ ಅಭ್ಯರ್ಥಿಗಳು ಸ್ಪರ್ಧೆಯಲ್ಲಿದ್ದಾರೆ.

98 ಕ್ಷೇತ್ರಗಳಲ್ಲಿ ಬಿಜೆಪಿ ಸ್ಪರ್ಧೆ: ಎನ್‌ಡಿಎಯ ಪ್ರಮುಖ ಪಕ್ಷವಾದ ಬಿಜೆಪಿ ಕೇರಳಂನಲ್ಲಿ ಈ ಬಾರಿ 98 ಕ್ಷೇತ್ರಗಳಲ್ಲಿ ಸ್ಪರ್ಧಾ ಕಣದಲ್ಲಿದೆ. 22 ಸ್ಥಾನಗಳನ್ನು ಅದು ತನ್ನ ಪ್ರಮುಖ ಅಂಗಪಕ್ಷವಾದ ಬಿಡಿಜೆಎಸ್‌ಗೆ ನೀಡಿದ್ದು, ಮತ್ತೊಂದು ಅಂಗಪಕ್ಷವಾದ ಟ್ವೆಂಟಿ-ಟ್ವೆಂಟಿ ಈ ಬಾರಿ ಎನ್‌ಡಿಎ ಒಕ್ಕೂಟದಲ್ಲಿ 19 ಸ್ಥಾನಗಳನ್ನು ಪಡೆದಿದ್ದು, ಒಂದು ಕ್ಷೇತ್ರದಲ್ಲಿ ಮಾತ್ರ ಎನ್‌ಡಿಎ ಪಕ್ಷೇತರ ಅಭ್ಯರ್ಥಿಗೆ ಬೆಂಬಲ ಘೋಷಿಸಿದೆ.

ದೋಸ್ತಿ-ಕುಸ್ತಿ: ಯುಡಿಎಫ್ ಒಕ್ಕೂಟದ ಪ್ರಮುಖ ಪಕ್ಷವಾಗಿರುವ ಕಾಂಗ್ರೆಸ್, ಕೇರಳ ಹೊರತುಪಡಿಸಿ ರಾಷ್ಟ್ರಮಟ್ಟದ ಉಳಿದ ಎಲ್ಲಾ ರಾಜ್ಯಗಳಲ್ಲೂ ಇಂಡಿ ಒಕ್ಕೂಟದ ಪ್ರಮುಖ ಪಕ್ಷ. ಆ ಎಲ್ಲಾ ರಾಜ್ಯಗಳಲ್ಲೂ ಎಡ ಪಕ್ಷಗಳು ಇಂಡಿ ಒಕ್ಕೂಟದಲ್ಲಿದ್ದು ಕಾಂಗ್ರೆಸ್ ಜತೆ ಸೀಟು ಹೊಂದಾಣಿಕೆ ಯಲ್ಲಿಯೇ ಪ್ರತೀ ಚುನಾವಣೆಯಲ್ಲೂ ಸ್ಪರ್ಧಿಸುತ್ತಿವೆ. ಆದರೆ ಕೇರಳಂನಲ್ಲಿ ಮಾತ್ರ ಅವೆರಡೂ ಪರಸ್ಪರ ಬದ್ಧ ವಿರೋಧಿ ಪಕ್ಷಗಳು ಎಂಬುದು ರಾಜಕೀಯ ವೈಶಿಷ್ಟ್ಯ.

ಕೇರಳಂನ 140 ಸ್ಥಾನಗಳ ಪೈಕಿ 125 ಸ್ಥಾನಗಳಲ್ಲಿ ಯುಡಿಎಫ್-ಎಲ್‌ಡಿಎಫ್ ಮಧ್ಯೆಯೇ ನೇರ ಸ್ಪರ್ಧೆ. ಹಿಂದಿನ ಚುನಾವಣೆಗಳ ಫಲಿತಾಂಶ ಗಮನಿಸಿದಾಗ ಒಂದು ವೇಳೆ ಈ ಸಲ ಬಿಜೆಪಿ ಎರಡರಿಂದ ಐದು ಸ್ಥಾನಗಳನ್ನು ಗೆಲ್ಲುವ ಸಾಧ್ಯತೆ ಇದ್ದರೂ, ಉಳಿದ ಆರೆಂಟು ಕ್ಷೇತ್ರಗಳಲ್ಲಿ ಬಿಜೆಪಿ 2ನೇ ಸ್ಥಾನಕ್ಕಷ್ಟೇ ತೃಪ್ತಿಪಡಬೇಕಾದ ಫಲಿತಾಂಶ ಈ ಸಲ ಬಂದರೂ ಬರಬಹುದು. ಈ ಚುನಾವಣೆಯಲ್ಲಿ ಎಲ್‌ಡಿಎಫ್ ಅಧಿಕಾರಕ್ಕೆ ಬಾರದಿದ್ದರೆ, 2031ರ ಚುನಾವಣಾ ವೇಳೆ ತಮ್ಮ ಪಕ್ಷ ನಿರ್ಣಾಯಕ ಶಕ್ತಿಯಾಗಿ ಕೇರಳಂ ರಾಜ್ಯ ರಾಜಕೀಯದಲ್ಲಿ ಭರ್ಜರಿಯಾಗಿ ನೆಲೆ ಕಾಣಬಹುದೆನ್ನುವ ನಿರೀಕ್ಷೆ ಬಿಜೆಪಿಯದ್ದಾಗಿದೆ. ಹಾಗಾಗಿ ನಾಳೆ ಕೇರಳ ವಿಧಾನಸಭೆಗೆ ನಡೆಯುವ ವಿಧಾನಸಭಾ ಚುನಾವಣೆ ಅಲ್ಲಿನ 3 ಪ್ರಮುಖ ಒಕ್ಕೂಟಗಳಿಗೂ ಬಹಳ ನಿರ್ಣಾಯಕವಾಗಿದೆ.

ಕಣದಲ್ಲಿ 890 ಅಭ್ಯರ್ಥಿಗಳು

ನಾಳೆ ಕೇರಳಂನಲ್ಲಿ ನಡೆಯುತ್ತಿರುವುದು 16ನೇ ವಿಧಾನಸಭಾ ಚುನಾವಣೆ. ಒಟ್ಟು 890 ಅಭ್ಯರ್ಥಿಗಳು ಕಣದಲ್ಲಿದ್ದು, 2.71 ಕೋಟಿ ಮತದಾರರು ತಮ್ಮ ಹಕ್ಕನ್ನು ಚಲಾಯಿಸಲಿದ್ದಾರೆ. ರಾಜ್ಯದಲ್ಲಿ ಒಟ್ಟು 3173 ಮತದಾನ ಕೇಂದ್ರಗಳಿವೆ. ಒಂದೇ ಹಂತದಲ್ಲಿ ಕೇರಳಂ ಮತದಾನ ನಡೆಯಲಿದ್ದು ಫಲಿತಾಂಶ ಮೇ 2ರಂದು ಪ್ರಕಟವಾಗಲಿದೆ. ಎರಡೂ ಒಕ್ಕೂಟಗಳ ನಡುವಿನ ನೇರ ಭರ್ಜರಿ ಪೈಪೋಟಿ ಫಲಿತಾಂಶದ ಈ ಸಲದ ಫಲಿತಾಂಶವೆಂಬುವುದು ಚುನಾವಣಾಪೂರ್ವ ಸಮೀಕ್ಷೆಗಳ ಇದುವರೆಗಿನ ಲೆಕ್ಕಾಚಾರ.

ಖೇರಾ ನಿವಾಸದ ಮೇಲೆ ದಾಳಿ

ದೆಹಲಿ: ಕಾಂಗ್ರೆಸ್ ನಾಯಕ ಪವನ್ ಖೇರಾ ಅವರ ದೆಹಲಿಯ ನಿವಾಸದ ಮೇಲೆ ಅಸ್ಸಾಂ ಪೊಲೀಸರು ದಾಳಿ ನಡೆಸಿದ್ದು, ಇದಕ್ಕೆ ದೆಹಲಿ ಪೊಲೀಸರ ನೆರವು ಒದಗಿದೆ ಎನ್ನಲಾಗಿದೆ. ಅಸ್ಸಾಂ ಮುಖ್ಯಮಂತ್ರಿ ಹಿಮಂತ ಬಿಸ್ವ ಶರ್ಮಾರ ಪತ್ನಿಯ ಬಳಿ ಮೂರು ವಿದೇಶಿ ಪಾಸ್‌ಪೋರ್ಟ್‌ಗಳಿವೆ, ಅವರಿಗೆ ದುಬೈನಲ್ಲಿ ಆಸ್ತಿಗಳಿವೆ. ಅವರು ಅಮೆರಿಕದಲ್ಲಿ ಕಂಪನಿಗಳನ್ನು ಹೊಂದಿದ್ದಾರೆ ಎಂದು ಪವನ್ ಖೇರಾ ಇತ್ತೀಚೆಗೆ ಆರೋಪಿಸಿದ್ದರು. ಈ ಆರೋಪಕ್ಕೆ ಹಿಮಂತ ಬಿಸ್ವ ಅವರು, ''ಪಾಕಿಸ್ತಾನ ಮೂಲದ ಸಾಮಾಜಿಕ ಮಾಧ್ಯಮಗಳಿಂದ ಪಡೆದ ಸುಳ್ಳು ಮಾಹಿತಿಯನ್ನು ಆಧರಿಸಿ ಈ ಆರೋಪ ಮಾಡಲಾಗಿದೆ. ಇದು ಅಸ್ಸಾಂ ಚುನಾವಣೆಯ ಮೇಲೆ ಪರಿಣಾಮ ಬೀರುವ ಹುನ್ನಾರ ಮತ್ತು ಶಿಕ್ಷಾರ್ಹ ಅಪರಾಧ'' ಎಂದು ತಿರುಗೇಟು ನೀಡಿದ್ದರು ಎಂಬುದನ್ನಿಲ್ಲಿ ಸ್ಮರಿಸಬಹುದು.

ಯಾರಿಗೆ ಒಲಿಯುತ್ತೆ ಗದ್ದುಗೆ?



ಚುನಾವಣಾ ಚಟುವಟಿಕೆಯಿಂದಾಗಿ ನಳನಳಿಸುತ್ತಿರುವ ಕೇರಳ ರಾಜ್ಯದಲ್ಲಿ, ಸಿಪಿಐ-ಎಂ ಮುಂದಾಳತ್ವದ 'ಎಲ್‌ಡಿಎಫ್' ಹಾಗೂ ಕಾಂಗ್ರೆಸ್ ನೇತೃತ್ವದ 'ಯುಡಿಎಫ್' ಮೈತ್ರಿಕೂಟಗಳ ನಡುವಿನ ಪೈಪೋಟಿ ಜೋರಾಗಿದೆ. ಜತೆಗೆ, ಮುಖ್ಯಮಂತ್ರಿ ಯಾರಾಗಬೇಕೆಂಬ ಲೆಕ್ಕಾಚಾರಗಳೂ ಅದಾಗಲೇ ಒಳಗೊಳಗೇ ನಡೆಯುತ್ತಿವೆ.

ದೇಶದ ಸಾಕಷ್ಟು ಕಡೆ ಕಾಣಬರುವಂತೆ ಕೇರಳದಲ್ಲೂ 'ಬಣ ರಾಜಕೀಯ' ಧಾಳಾಗಿಯೇ ಕಾಣುತ್ತದೆ. ರಾಜ್ಯ ಕಾಂಗ್ರೆಸ್ ಕೂಡ ಇದಕ್ಕೆ ಹೊರತಾಗಿಲ್ಲ; ಇಲ್ಲಿ ಮೂರ್‍ನಾಲ್ಕು ಬಣಗಳಿರುವುದೇ ಈ ಮಾತಿಗೆ ಸಾಕ್ಷಿ. ಮುಖ್ಯಮಂತ್ರಿ ಗದ್ದುಗೆಗಾಗಿ ಪ್ರದೇಶ ಕಾಂಗ್ರೆಸ್‌ನ ಮಾಜಿ ಅಧ್ಯಕ್ಷ ರಮೇಶ್ ಚೆನ್ನಿತಾಲ, ಕಾಂಗ್ರೆಸ್ ಶಾಸಕಾಂಗ ಪಕ್ಷದ ಹಾಲಿ ನಾಯಕ ವಿ.ಡಿ. ಸತೀಶನ್, ಎಐಸಿಸಿ ಪ್ರಧಾನ ಕಾರ್ಯದರ್ಶಿ ಕೆ.ಸಿ. ವೇಣುಗೋಪಾಲ್ ನಡುವೆ ಪೈಪೋಟಿ ಏರ್ಪಟ್ಟಿದೆಯಂತೆ. ಈ ಮೂವರೂ ರಾಜ್ಯದ ಪ್ರಭಾವಿ 'ನಾಯರ್' ಸಮುದಾಯಕ್ಕೆ ಸೇರಿದವರು ಎಂಬುದು ಗಮನಾರ್ಹ.

ಮತ್ತೊಂದೆಡೆ, 'ಎಲ್‌ಡಿಎಫ್' ಪಾಳಯದಲ್ಲೂ ಬೇರೆಯದೇ ತೆರನಾದ ಗುಸುಗುಸು ಕೇಳಿಬರುತ್ತಿದೆ. ಪಿಣರಾಯಿ ವಿಜಯನ್ ಮೊದಲ ಅವಧಿಗೆ ಮುಖ್ಯಮಂತ್ರಿಯಾಗಿ ದ್ದಾಗ ನಿರ್ಣಯಗಳನ್ನು ತಳೆಯುವ ವಿಷಯ ದಲ್ಲಿ ಅವರು 'ಏಕಮೇವಾದ್ವಿತೀಯ'ರಾಗಿ ದ್ದರು; ಆದರೆ ಎರಡನೇ ಅಧಿಕಾರಾವಧಿಯಲ್ಲಿ ಅವರ ಕುಟುಂಬದ ಸದಸ್ಯರ ಹಸ್ತಕ್ಷೇಪವಿದ್ದುದರ ಬಗ್ಗೆ ಗಂಭೀರ ಆರೋಪಗಳು ಕೇಳಿ ಬರುತ್ತಿವೆ. ಎಲ್‌ಡಿಎಫ್‌ನ ಬೆಂಬಲಿಗರೆನಿಸಿ ಕೊಂಡವರೇ ಈ ವಿಷಯದಲ್ಲಿ ಕೊಂಚ ಅಸಮಾಧಾನವನ್ನು ವ್ಯಕ್ತಪಡಿಸುವುದುಂಟು. ಪಿಣರಾಯಿ ಅವರ ಪುತ್ರ, ಪುತ್ರಿ ಹಾಗೂ ಅಳಿಯ ಸಂಪಾದಿಸಿರುವ ಭಾರಿ ಪ್ರಮಾಣದ ಆಸ್ತಿ, ಹೊರರಾಜ್ಯ- ಹೊರದೇಶಗಳಲ್ಲಿ ನಡೆಸು ತ್ತಿರುವ ವ್ಯವಹಾರ ಮುಂತಾದ ಸಂಗತಿಗಳು ಪಕ್ಷದೊಳಗೇ ಒಂದಿಷ್ಟು ವಿಷಾದವನ್ನು ಹುಟ್ಟು ಹಾಕಿದೆ ಎನ್ನಲಾಗುತ್ತಿದೆ. ಹೀಗಾಗಿ 'ಎಲ್‌ಡಿಎಫ್' ಮತ್ತೊಮ್ಮೆ ಬಹುಮತವನ್ನು ದಕ್ಕಿಸಿ ಕೊಂಡರೂ, ಮುಖ್ಯಮಂತ್ರಿ ಆಯ್ಕೆಯ ವಿಷಯದಲ್ಲಿ ಒಂದಿಷ್ಟು ನಾಟಕೀಯ ಬೆಳವಣಿಗೆಗಳು ನಡೆಯಬಹುದು ಎನ್ನುತ್ತಾರೆ ರಾಜಕೀಯ ಪಂಡಿತರು. ಅಂದರೆ, ಒಂದೊಮ್ಮೆ ಪಿಣರಾಯಿ ಅವರನ್ನೇ ಸಿಎಂ ಗದ್ದುಗೆಯಲ್ಲಿ ಕೂರಿಸಬೇಕಾಗಿ ಬಂದರೂ, ವಯಸ್ಸು ಹಾಗೂ ಅನಾರೋಗ್ಯದ ಕಾರಣದಿಂದ ಅವರು ಸಂಪೂರ್ಣ 5 ವರ್ಷಗಳವರೆಗೆ ದರ್ಬಾರ್ ನಡೆಸಲಾರರು; ಅಂಥ ಸಂದರ್ಭ ದಲ್ಲಿ, ಎಲ್‌ಡಿಎಫ್ ಪಾಳಯದ ಮತ್ತೊಬ್ಬ ಪ್ರಭಾವಿ ಎನಿಸಿರುವ ಕೆ.ಕೆ. ಶೈಲಜಾ ಅವರಿಗೆ (ಇವರು 'ಶೈಲಜಾ ಟೀಚರ್' ಎಂದೇ ಖ್ಯಾತರು) ಸಿಎಂ ಸೀಟು ದಕ್ಕಿದರೂ ಅಚ್ಚರಿಯಿಲ್ಲ ಎನ್ನಲಾಗುತ್ತದೆ.

ಒಟ್ಟಿನಲ್ಲಿ, ಈ ಬಾರಿಯ ಕೇರಳ ವಿಧಾನಸಭಾ ಚುನಾವಣೆ 'ಕುತೂಹಲದ ಮೂಟೆ' ಆಗಿರುವುದಂತೂ ಖರೆ!

ವಿಶ್ವವಾಣಿ
ಬೆಂಗಳೂರು
08-04-2026
ಬುಧವಾರ
@vishwavaninews
ಆರಾಮ
ಅನುದಿನವೂ ವಿರಾಮಕ್ಕೆ ಒಂದು ನೆಪ

ಹಿಮಶಿಲ್ಪಕ್ಕೆ ಜೀವ ತಂದ ಎಲ್-ಡೋಪ

ಹಿಂದಿರುಗಿ ನೋಡಿದಾಗ
ಡಾ. ನಾ.ಸೋಮೇಶ್ವರ
naasomeswara@gmail.com

ಇಂದಿಗೆ ಸುಮಾರು 100 ವರ್ಷಗಳ ಹಿಂದೆ, ಜಗತ್ತು ಎರಡು ಭೀಕರ ಪರಿಸ್ಥಿತಿಗಳನ್ನು ಎದುರಿಸುತ್ತಿತ್ತು. ಮೊದಲನೆಯದು 1914ರಿಂದ 1918ರವರೆಗೆ ನಡೆದ ವಿಶ್ವದ ಮೊದಲನೆಯ ಮಹಾಯುದ್ಧ. ಎರಡನೆಯದು 1918ರಿಂದ 1920ರವರೆಗೆ ಭಾರತವನ್ನೂ ಒಳಗೊಂಡಂತೆ ಜಗತ್ತನ್ನು ಕಾಡಿದ 'ಸ್ಪ್ಯಾನಿಶ್ ಫ್ಲೂ' ಪಿಡುಗು. 1918ರ ಮಾರ್ಚ್‌ನಲ್ಲಿ 'ಇನ್‌ಫ್ಲುಯೆಂಜ಼-ಟೈಪ್ ಎ' ಎಂಬ ಎಚ್1 ಎನ್1 ವೈರಸ್ಸು ಬಹುಶಃ ಹಕ್ಕಿಗಳ ಮೂಲದಿಂದ ಮನುಷ್ಯರಿಗೆ ಹರಡಿತು. ಇದರಲ್ಲಿ ಮೂರು ನಮೂನೆಯ ವೈರಸ್‌ಗಳಿದ್ದವು. ಟೈಪ್-1, ಟೈಪ್-2 ಮತ್ತು ಟೈಪ್-3. ಮೊಟ್ಟ ಮೊದಲ ಪ್ರಕರಣವು ಅಮೆರಿಕದಲ್ಲಿ ಕಂಡುಬಂದಿತು. ಆದರೆ ಈ ಫ್ಲೂ ಪಿಡುಗನ್ನು ಮೊದಲ ಬಾರಿಗೆ ಬಹಿರಂಗವಾಗಿ ಗುರುತಿಸಿ, ಅದನ್ನು ನಿಗ್ರಹಿಸುವ ದಿಶೆಯಲ್ಲಿ ರಾಷ್ಟ್ರೀಯ ಮಟ್ಟದ ಯೋಜನೆಗಳನ್ನು ರೂಪಿಸಿಕೊಂಡದ್ದು ಸ್ಪೇನ್ ದೇಶ. ಹಾಗಾಗಿ ತಪ್ಪು ತಪ್ಪಾಗಿ ಈ ಪಿಡುಗನ್ನು 'ಸ್ಪ್ಯಾನಿಶ್ ಫ್ಲೂ' ಎಂದು ಕರೆದು ಅಪಚಾರವೆಸಗಿದರು. ಆ ಹೆಸರು ಇಂದಿಗೂ ಉಳಿದುಕೊಂಡು ಬಂದಿದೆ.

1918-19ರ ನಡುವೆ ಜಗತ್ತಿನ 500 ದಶಲಕ್ಷ ಜನರು ಫ್ಲೂ ಪೀಡಿತರಾದರು. 1918ರಲ್ಲಿ ಮೂರು ಅಲೆಗಳಲ್ಲಿ ಅದು ಆಕ್ರಮಣವನ್ನು ಮಾಡಿತು. ಅಂದರೆ ಜಗತ್ತಿನ 1/3 ಭಾಗದಷ್ಟು ಜನರಿಗೆ ಸೋಂಕು ಅಂಟಿಕೊಂಡಿತು. ಅವರಲ್ಲಿ ಸುಮಾರು 100 ದಶಲಕ್ಷ ಜನರು ಜೀವವನ್ನು ಬಿಟ್ಟರು. ಅವರಲ್ಲಿ ಹೆಚ್ಚಿನವರು 20-40 ವರ್ಷ ವಯಸ್ಸಿನವರಾಗಿದ್ದರು. ಅದು ಯುದ್ಧದ ಸಮಯವಾಗಿದ್ದ ಕಾರಣ, ಫ್ಲೂ ತಡೆಗಟ್ಟುವ ಕಾರ್ಯಕ್ರಮಗಳನ್ನು ಜಾರಿಗೆ ತರಲು ಜಗತ್ತಿನ ಬಹುಪಾಲು ದೇಶಗಳು ಅಸಮರ್ಥವಾಗಿದ್ದವು. ವೈದ್ಯಕೀಯ ಸೌಲಭ್ಯಗಳು ಸೀಮಿತವಾಗಿದ್ದವು. ವೈರಸ್ಸು ಶ್ವಾಸಕೋಶಗಳಿಗೆ ಆಘಾತವನ್ನು ಉಂಟುಮಾಡುತ್ತಿದ್ದ ಕಾರಣ, ದ್ವಿತೀಯಕ ಬ್ಯಾಕ್ಟೀರಿಯ ಸೋಂಕು (ಸೆಕೆಂಡರಿ ಬ್ಯಾಕ್ಟೀರಿಯಲ್ ಇನ್‌ಫೆಕ್ಷನ್) ಶ್ವಾಸಕೋಶಗಳಲ್ಲಿ ಉಗ್ರ ಸ್ವರೂಪದ ಸೋಂಕನ್ನು ಉಂಟುಮಾಡುತ್ತಿದ್ದವು. ಆಗ ಇನ್ನೂ ಪ್ರತಿಜೈವಿಕಗಳನ್ನು (ಆಂಟಿಬಯೋಟಿಕ್ಸ್) ಕಂಡುಹಿಡಿದಿರಲಿಲ್ಲ. ಹಾಗಾಗಿ ಜನರು ತರಗೆಲೆಯಂತೆ ಉದುರಿ ಸಾಯುವುದು ಅನಿವಾರ್ಯವಾಯಿತು.

ನಿದ್ರಾರೋಗ: ನಮ್ಮ ಕಥೆಯು ಮೊದಲನೆಯ ಮಹಾಯುದ್ಧದ ನೆರಳಿನಲ್ಲಿ ಪ್ರಾರಂಭವಾಗುತ್ತದೆ. ಯುರೋಪ್ ಖಂಡವು ಯುದ್ಧ, ಹಸಿವು, ದುಃಖ ಮತ್ತು ಫ್ಲೂ ಸಾಂಕ್ರಾಮಿಕ ಪಿಡುಗಿನ ಕಾರಣ ದಣಿದಿತ್ತು. ಇಂಥ ವಿಷಮ ಸ್ಥಿತಿಯಲ್ಲಿ, ಹುಣ್ಣಿನ ಮೇಲೆ ಬರೆ ಎಳೆದಂತೆ, ಅಂದಿನ ವೈದ್ಯಲೋಕವನ್ನು ದಿಗ್ಭ್ರಮೆಗೊಳಿಸಿದ, ಕಂಡೂ ಕೇಳರಿಯದ ವಿಚಿತ್ರ ಕಾಯಿಲೆಯೊಂದು ಬಂದೆರಗಿತು. ರೋಗಿಗಳಲ್ಲಿ ಅಸಾಮಾನ್ಯ ನಿದ್ರಾಹೀನತೆ, ಕಣ್ಣಿನ ವಿಚಿತ್ರ ಚಲನೆಯ ಸಮಸ್ಯೆಗಳು, ಜ್ವರ ಮತ್ತು ಮಾನಸಿಕ ಬದಲಾವಣೆಗಳು ಕಂಡುಬರಲಾರಂಬಿಸಿದವು. ಕೆಲವರು ಮಹಾನ್ ದಡ್ಡಶಿಖಾಮಣಿಗಳಂತೆ ವರ್ತಿಸಲಾರಂಭಿಸಿದರು. ಹಲವರು ತೀವ್ರ ಮಾನಸಿಕ ಪ್ರಕ್ಷುಬ್ಧತೆ ಅಥವಾ ಮನೋವೈಕಲ್ಯಕ್ಕೆ ಒಳಗಾದರು. ಇತರರು ತೀವ್ರ ಅನಾರೋಗ್ಯದಿಂದ ಬದುಕುಳಿದರು, ವರ್ಷಗಳ ನಂತರ ಅವರ ದೈಹಿಕ ಚಲನವಲನಗಳು ನಿಧಾನವಾದವು. ಸ್ನಾಯು ಬಿಗಿತ ಹೆಚ್ಚಾದವು. ದೇಹ ಮತ್ತು ಮನಸ್ಸಿನ ನಡುವೆ ಒಂದು ವಿಚಿತ್ರ ಬಂಧವು ಕಂಡುಬಂದಿತು. ಇವೆಲ್ಲವನ್ನು ಆಸ್ಟ್ರಿಯನ್ ನರವಿಜ್ಞಾನಿ ಕಾನ್‌ಸ್ಟಾಂಟಿನ್ ವಾನ್ ಎಕಾನೊಮೊ (1876-1931) ಎಂಬುವವರು ಗುರುತಿಸಿ, ಅವನ್ನು ಪಟ್ಟಿ ಮಾಡಿ ವಿವರಿಸಿದರು. ಅವರು ಇದೊಂದು 'ನರವೈಜ್ಞಾನಿಕ ಭೂತ' ಎಂದು ಬಗೆದರು. ಆಗ ಯಾರಿಗೂ ಈ ಲಕ್ಷಣಾವಳಿಯನ್ನು ಪೂರ್ಣ ಅರ್ಥಮಾಡಿಕೊಳ್ಳಲಾಗಲಿಲ್ಲ. ಇದನ್ನು 'ವಾನ್ ಎಕೋನೋಮೋ' ಲಕ್ಷಣಾವಳಿ ಎಂದು ಕರೆದರು.

ಉರಿಯೂತ: ಸ್ಪ್ಯಾನಿಶ್ ಫ್ಲೂ, ಮನುಕುಲ ಕಂಡ ಉಗ್ರ ಪಿಡುಗುಗಳಲ್ಲಿ ಒಂದು ಎನ್ನುವುದರಲ್ಲಿ ಯಾವುದೇ ಅನುಮಾನವಿಲ್ಲ. ಆದರೆ ಈ ಪಿಡುಗಿನಲ್ಲಿ ಅಳಿದುಳಿದು ಬದುಕಿದವರಲ್ಲಿ ಕೆಲವರು ಅನುಭವಿಸಿದ ಒಂದು ವಿಚಿತ್ರ ಕಾಯಿಲೆ 'ಎನ್ಸೆಫಲೈಟಿಸ್ ಲೆಥರ್ಜಿಕ' (ಇ.ಎಲ್.) . 'ಎನ್ಸೆಫಲೋ' ಎಂದರೆ 'ಮಿದುಳು' ಎಂದರ್ಥ. 'ಐಟಿಸ್' ಎಂದರೆ 'ಉರಿಯೂತ'. ಫ್ಲೂ ಕಾರಣ, ವೈರಸ್ಸು ನೇರವಾಗಿ ಸಮಗ್ರ ಮಿದುಳಿನ ಮೇಲೆ ದಾಳಿಯನ್ನು ಮಾಡಿ ಉರಿಯೂತಕ್ಕೆ ಕಾರಣವಾಗಿತ್ತು. ಈ ಸ್ಥಿತಿಯಲ್ಲಿದ್ದ ಮಿದುಳು 'ಲೆಥರ್ಜಿಕ' ಎನ್ನುವ ಸ್ಥಿತಿಯನ್ನು ಪ್ರವೇಶಿಸಿತ್ತು. 'ಲೆಥರ್ಜಿಕಸ್' ಎಂದರೆ ಜಡತೆ, ಅತಿನಿದ್ರೆ, ತಾಮಸ, ಮಂಪರು ಹೀಗೆಲ್ಲ ವರ್ಣಿಸಬಹುದು. ಇ.ಎಲ್. ಅನ್ನು ಸರಳವಾಗಿ 'ಮಿದುಳುರಿಯೂತದ ಜಡತೆ' ಎನ್ನಬಹುದು. ಏಕೆಂದರೆ ರೋಗಿಯ ಮಿದುಳು ಉರಿಯೂತದ ಕಾರಣ, ತನ್ನ ಸಹಜ ಕೆಲಸ ಕಾರ್ಯಗಳನ್ನು ಬಿಟ್ಟು ಸಂಪೂರ್ಣವಾಗಿ ಜಡವಾಗಿತ್ತು. ಫ್ಲೂ, ಶ್ವಾಸಕೋಶಗಳಿಗೆ ಸಂಬಂಧಿಸಿದ ರೋಗ. ಆದರೆ ಎನ್ಸೆಫಲೈಟಿಸ್ ಲೆಥರ್ಜಿಕ ಸಂಪೂರ್ಣವಾಗಿ ಮಿದುಳನ್ನು ಕಾಡುವ ಮಾರಕ ರೋಗವಾಗಿ ಪರಿಣಮಿಸಿತು.

ಲಕ್ಷಣಗಳು: ನಮ್ಮ ಮಿದುಳು ಒಂದು ಸಂಕೀರ್ಣ ನಗರ. ಈ ನಗರದ ಕೇಂದ್ರ ಎಂದರೆ ಎಂದರೆ ನಡುಮಿದುಳು (ಮಿಡ್ ಬ್ರೈನ್) ಮತ್ತು ಬೇಸಲ್ ಗ್ಯಾಂಗ್ಲಿಯಾನ್ ಎಂಬ ಭಾಗಗಳು. ಇಲ್ಲಿರುವ ವಿದ್ಯುತ್ ವ್ಯವಸ್ಥೆಯನ್ನು ವೈರಸ್ ಅಲ್ಲೋಲಕಲ್ಲೋಲಗೊಳಿಸಿತು. ಅದರ ಫಲವಾಗಿ ಈ ಎರಡು ಭಾಗಗಳಲ್ಲಿ ಉರಿಯೂತವು ತಲೆದೋರಿ, ಊದಿಕೊಂಡವು. ಇಲ್ಲಿದ್ದಂಥ ವಿದ್ಯುನ್ಮಂಡಲವು (ಇಲೆಕ್ಟ್ರಿಕ್ ಸರ್ಕ್ಯೂಟ್) 'ಉರಿದು ಬೂದಿಯಾಯಿತು'. ಹಲವರು ತತ್‌ಕ್ಷಣ ಮರಣಿಸಿದರು. ಹೇಗೋ ಬದುಕುಳಿದ ಕೆಲವರು 'ಮಿದುಳುರಿಯೋತ್ತರ ಲಕ್ಷಣಾವಳಿ'ಗೆ (ಪೋಸ್ಟ್ ಎನ್ಸೆಫಲೈಟಿಕ್ ಸಿಂಡ್ರೋಮ್) ತುತ್ತಾದರು. ಇವರು ತಮ್ಮನ್ನು ತಾವು 'ಗೃಹಬಂಧನ'ದಲ್ಲಿ ಇರಿಸಿಕೊಂಡರು.

ಇವರ ರೋಗಲಕ್ಷಣಗಳು ಮೇಲುನೋಟಕ್ಕೆ ಅರ್ಥವಾಗದ ಚಿತ್ರವಿಚಿತ್ರ ಲಕ್ಷಣಗಳನ್ನು ತೋರುತ್ತಿದ್ದವು. ನೋಡಿದರೆ ಯಾವುದಾದರೂ 'ಹಾರರ್ ಮೂವಿ'ಯ ದೃಶ್ಯಗಳಂತೆ ಕಾಣುತ್ತಿದ್ದವು.

ಹಿಮಗಟ್ಟಿದ ಶಿಲ್ಪಗಳು: 1910ರ ದಶಕದ ಹೊತ್ತಿಗೆ, ಫ್ಲೂ ಪಿಡುಗು, ಹೇಗೆ ಯಾವುದೇ ಮುನ್ಸೂಚನೆಯನ್ನು ಕೊಡದೆ, ಆಕ್ರಮಿಸಿತ್ತೋ ಹಾಗೆಯೇ 1930ರ ದಶಕದ ಹೊತ್ತಿಗೆ ಯಾವುದೇ ಸೂಚನೆಯಿಲ್ಲದೇ, ನಿಗೂಢವಾಗಿ ಕಣ್ಮರೆಯಾಯಿತು; ಆದರೆ ಅದು ಸಾವಿರಾರು ಇ.ಎಲ್. ರೋಗಿಗಳನ್ನು ಬಿಟ್ಟು ಹೋಯಿತು. ಈ ಬದುಕುಳಿದವರು 'ಪಾರ್ಕಿನ್ಸನ್ ಕಾಯಿಲೆ'ಯನ್ನು ಹೋಲುವ ಒಂದು ವಿಚಿತ್ರ ಕಾಯಿಲೆಗೆ ತುತ್ತಾದರು. ಅವರು ದಶಕಗಳವರೆಗೆ ಈ ಕಾಯಿಲೆಯಿಂದ ನಿರಂತರವಾಗಿ ನರಳಲಾರಂಬಿಸಿದರು. ಮೌಂಟ್ ಕಾರ್ಮೆಲ್ ಆಸ್ಪತ್ರೆಗಳಂಥ ದೀರ್ಘಕಾಲದ ಆರೈಕೆ ಸೌಲಭ್ಯಗಳಿದ್ದ ಕೆಲವು ಕಡೆ 'ಮರೆತುಹೋದ ಹಿಮಗಟ್ಟಿದ ಶಿಲ್ಪ'ಗಳಾಗಿ, ತಮ್ಮ ದೇಹವೆಂಬ ಬಂದೀಖಾನೆಯಲ್ಲಿ ಗೃಹಬಂಧಿಗಳಾಗಿದ್ದರು. ಇವರ ಪ್ರಮುಖ ಲಕ್ಷಣಗಳನ್ನು ಈ ಕೆಳಕಂಡಂತೆ ಸಂಗ್ರಹಿಸಬಹುದು.

1 ವಿಲೋಮ ನಿದ್ರಾ-ಜಾಗೃತಿ (ದಿ ಸ್ಲೀಪ್ ವೇಕ್ ಇನ್ವರ್ಶನ್): ಕೆಲವು ರೋಗಿಗಳು ದಿನಗಟ್ಟಲೆ, ಹಗಲೂ ಇರುಳೂ ನಿದ್ರಿಸುತ್ತಿದ್ದರು (ನಿದ್ರಾರೋಗ). ಉಳಿದವರು ದಿನಗಟ್ಟಲೆ, ಹಗಲೂ ಇರುಳೂ ಎಚ್ಚರವಾಗಿರುತ್ತಿದ್ದರು.

2 ನಯನ ಚಕ್ರಭ್ರಮಣ ಬಿಕ್ಕಟ್ಟು (ಆಕ್ಯುಲೋಗೈರಸ್ ಕ್ರೈಸಿಸ್): ಇದು ನೋಡುವುದಕ್ಕೆ ಅತ್ಯಂತ ಭಯಾನಕವಾಗಿದ್ದ ರೋಗಲಕ್ಷಣ. ಕಣ್ಣುಗುಡ್ಡೆಗಳು ಇದ್ದಕ್ಕಿದ್ದ ಹಾಗೇ ಮೇಲಕ್ಕೆ ಹೊರಟುಹೋಗುತ್ತವೆ. ಕಣ್ಣುಗುಡ್ಡೆಗಳು ಇದ್ದ ಸ್ಥಳದಲ್ಲಿ ಬರೀ ಬಿಳಿಯ ಬಣ್ಣ! ನೋಟವು ಹಾಗೆಯೇ ಗಂಟೆಗಟ್ಟಲೆ, ದಿನಗಟ್ಟಲೆ, ತಿಂಗಳುಗಟ್ಟಲೆ ಉಳಿದಿರುತ್ತಿತ್ತು. ಕೆಲವು ಸಲ ಕಣ್ಣುಗುಡ್ಡೆಗಳು ಬಂಡಿಯ ಚಕ್ರದಂತೆ ಇದ್ದಲ್ಲೇ ಗಿರಗಿರನೇ ಸುತ್ತುತ್ತಿದ್ದವು.

3 ಜೀವಂತ ಹಿಮಶಿಲ್ಪಗಳು: ಎ.ಎಲ್. ಪೀಡಿತರ ದೈಹಿಕ ಚಲನವಲನ ಸ್ಥಗಿತವಾಗಿದ್ದವು. ಕುಳಿತವರು ಕುಳಿತಕಡೆಯೇ, ಕುಳಿತಿದ್ದ ಹಾಗೆಯೇ ದಿನಗಳು, ವಾರಗಳು, ತಿಂಗಳುಗಳಲ್ಲ, ವರ್ಷಾನುಗಟ್ಟಲೆ ಕುಳಿತೇ ಇರುತ್ತಿದ್ದರು. ಮಲಗಿದವರು ಮಲಗಿದಲ್ಲಿಯೇ 'ಸ್ಟ್ಯಾಚೂ' ಆಗಿಬಿಡುತ್ತಿದ್ದರು. ಚಲನವಲನಗಳೂ ಕಿಂಚಿತ್ತೂ ಇರುತ್ತಿರಲಿಲ್ಲ. ಅವರಿಗೆ ಪ್ರಜ್ಞೆಯಿತ್ತು. ಆದರೆ ಜಾಗೃತರಾಗಿರಲಿಲ್ಲ. ಎದುರಿಗೇ ಬೆಂಕಿಬಿದ್ದರೂ ಒಂದು ಮಾತನ್ನೂ ಆಡದೆ ಮಹಾಮೌನದಲ್ಲಿ ಮುಳುಗಿಹೋಗುತ್ತಿದ್ದರು.

4 ವಿಪರ್ಯಾಸಕರ ಚಲನೆ (ಕೈನೀಸಿಯ ಪ್ಯಾರಡಾಕ್ಸಿಕ): ಹೀಗೆ ಕುಳಿತ ಕಡೆಯಲ್ಲಿಯೇ ಮರಗಟ್ಟಿದ ಅಥವಾ ಹಿಮಗಟ್ಟಿದ ಶಿಲ್ಪದಂತಿದ್ದ ಕೆಲವರ ಮುಂದೆ ಹಠಾತ್ತನೆ ಒಂದು ಚೆಂಡನ್ನು ಎಸೆದರೆ, ಅವರು ತಕ್ಷಣವೇ ಅದನ್ನು ಹಿಡಿದುಕೊಳ್ಳಲು ಪ್ರಯತ್ನಿಸುತ್ತಿದ್ದರು! ಈ ಅನಿರೀಕ್ಷಿತ ಚಲನೆಯು ನಿಜಕ್ಕೂ ವಿಪರ್ಯಾಸಕರವಾಗಿತ್ತು.





ಆಲಿವರ್ ಸ್ಯಾಕ್ಸ್: 1966ರಲ್ಲಿ, ಆಲಿವರ್ ಸ್ಯಾಕ್ಸ್ (1933-2015) ಎಂಬ ಯುವ ಬ್ರಿಟಿಷ್ ನರವಿಜ್ಞಾನಿ ಮೌಂಟ್ ಕಾರ್ಮೆಲ್‌ಗೆ ಬಂದರು. ಸ್ಯಾಕ್ಸ್ ಒಬ್ಬ ಸಾಮಾನ್ಯ ವೈದ್ಯರಾಗಿರಲಿಲ್ಲ; ಅವರು ಕವಿಹೃದಯಿಗಳಾಗಿದ್ದರು. ಕಾರ್ಮೆಲ್ ರೋಗಿಗಳ ಬಗ್ಗೆ ಆಳವಾದ ಸಹಾನುಭೂತಿಯನ್ನು ಹೊಂದಿದ್ದರು. ಜತೆಗೆ ಅವರ 'ಹಿಮಶಿಲ್ಪ' ಸ್ಥಿತಿಯ ಬಗ್ಗೆ ತೀವ್ರಸ್ವರೂಪದ ಕುತೂಹಲವನ್ನು ಹೊಂದಿದ್ದರು. ಈ ಜೀವಂತ 'ಪ್ರತಿಮೆ'ಗಳ ಒಳಗೆ ಇನ್ನೂ ಒಬ್ಬ ವ್ಯಕ್ತಿ ಇದ್ದಾನೆಯೇ ಎಂದು ಆಶ್ಚರ್ಯಪಟ್ಟರು. ಈ ರೋಗಿಗಳು ಸಾಮಾನ್ಯ ಚಲನವಲನವನ್ನು ತೋರದಿದ್ದರೂ, ಅವರೆಡೆಗೆ ಒಂದು ಚೆಂಡನ್ನು ಹಠಾತ್ ಎಸೆದಾಗ, ಅವರು ಆ ಚೆಂಡನ್ನು 'ಹಿಡಿಯಬಲ್ಲರು' ಎಂಬುದನ್ನು ಗಮನಿಸಿದರು. ಇದರಿಂದ ಅವರ ಇಡೀ ದೇಹವು ಮಂಜುಗಟ್ಟಿದ್ದರೂ, ಆ ಮಂಜುಮೂರ್ತಿಗಳ ಕಾಯಚಲನಾ ವ್ಯವಸ್ಥೆಯು (ಮೋಟಾರ್ ಮೂವ್ಮೆಂಟ್) ಆರೋಗ್ಯಕರವಾಗಿದೆ ಎನ್ನುವುದನ್ನು ಗಮನಿಸಿದರು. ನರಪಥಗಳು ನಾಶವಾಗಿಲ್ಲ; ಅವು ಸರಳವಾಗಿ 'ಲಾಕ್' ಆಗಿವೆ ಎನ್ನುವುದನ್ನು ಮನಗಂಡರು.

ಪವಾಡ ಔಷಧ: 1960ರ ದಶಕದ ಹೊತ್ತಿಗೆ, ಮಿದುಳಿನಲ್ಲಿರುವ 'ಡೋಪಮಿನ್' ಎನ್ನುವ ನರರಾಸಾಯನಿಕದ ಕೊರತೆಯಿಂದ 'ಪಾರ್ಕಿನ್ಸನ್ ಕಾಯಿಲೆ'ಯು ಬರುತ್ತದೆ ಎನ್ನುವುದನ್ನು ವಿಜ್ಞಾನಿಗಳು ತಿಳಿದಿದ್ದರು. ಆದರೆ ರೋಗಿಗೆ ನೇರವಾಗಿ ಡೋಪಮಿನ್ ಮಾತ್ರೆಯನ್ನು ನೀಡಲು ಸಾಧ್ಯವಿರಲಿಲ್ಲ; ಏಕೆಂದರೆ ಅದು ಮಿದುಳನ್ನು ಆವರಿಸಿರುವ 'ರಕ್ತ-ಮಿದುಳಿನ ತಡೆಗೋಡೆ'ಯನ್ನು (ಬ್ಲಡ್ ಬ್ರೈನ್ ಬ್ಯಾರಿಯರ್) ದಾಟಿ ಮಿದುಳನ್ನು ತಲುಪಲು ಆಗುತ್ತಿರಲಿಲ್ಲ. ಹಾಗಾಗಿ 'ಲೆವೊಡೋಪಾ' (ಎಲ್-ಡೋಪ) ಎಂಬ ಔಷಧವನ್ನು ನೀಡಿದರು. ಇದು ರಕ್ತಮಿದುಳಿನ ತಡೆಗೋಡೆಯ ಮೂಲಕ ಹಾದು ಮಿದುಳನ್ನು ತಲುಪಿತು. ಮಿದುಳು ಈ ಎಲ್-ಡೋಪವನ್ನು ಬಳಸಿಕೊಂಡು ಡೋಪಮಿನ್ ಅನ್ನು ಸೃಜಿಸಿತು. ಆಗ ಪಾರ್ಕಿನ್ಸನ್ ಕಾಯಿಲೆಯ ರೋಗಲಕ್ಷಣಗಳು ಕಡಿಮೆಯಾಗಲಾರಂಭಿಸಿದವು. ಹಾಗಾಗಿ ಸ್ಯಾಕ್ಸ್ 1969ರಲ್ಲಿ, 'ಹಿಮಶಿಲ್ಪ'ಗಳಿಗೆ ಎಲ್-ಡೋಪ ಔಷಧವನ್ನು ನೀಡಲು ಸಂಬಂಧಪಟ್ಟವರಿಂದ ಪೂರ್ವಾನುಮತಿಯನ್ನು ಪಡೆದರು. ಹಿಮಶಿಲ್ಪಗಳಿಗೆ ಎಲ್-ಡೋಪ ಔಷಧವನ್ನು ನೀಡಿದರು.

ಲಿಯೊನಾರ್ಡ್ ಎಲ್: ಸ್ಯಾಕ್ಸ್ ನೀಡಿದ ಎಲ್-ಡೋಪವು ಪವಾಡಸದೃಶವೆಂಬಂತೆ ಹಿಮಶಿಲ್ಪಗಳಲ್ಲಿ ಜೀವವನ್ನು ತುಂಬಿತು. ಅವುಗಳಲ್ಲಿ ಅತ್ಯಂತ ಪ್ರಸಿದ್ಧ ಪ್ರಕರಣ, ಲಿಯೊನಾರ್ಡ್ ಎಲ್ ಎಂಬ ವ್ಯಕ್ತಿಯದ್ದಾಗಿತ್ತು. ಲಿಯೊನಾರ್ಡ್ 15 ವರ್ಷ ವಯಸ್ಸಿನಿಂದಲೂ 'ಹಿಮಶಿಲ್ಪ'ವಾಗಿ ಬದುಕನ್ನು ಕಳೆದಿದ್ದರು. 30 ವರ್ಷಗಳನ್ನು ಮಹಾಮೌನದಲ್ಲಿ ಕಳೆದಿದ್ದರು. ಎಲ್-ಡೋಪವನ್ನು ಪ್ರಾರಂಭಿಸಿದ ಕೆಲವೇ ದಿನಗಳಲ್ಲಿ, ಪವಾಡವು ನಡೆಯಿತು. ಲಿಯೋನಾರ್ಡ್ ಹಿಮಕೋಟೆಯನ್ನು ಭೇದಿಸಿಕೊಂಡು ಹೊರಬಂದರು, ಎದ್ದರು, ನಡೆದರು. ಓಡಿದರು, ಮಾತನಾಡಿದರು, ಹರಟಿದರು. ಕವನವನ್ನು ಬರೆದರು, ಹಾಡಿದರು, ಕುಣಿದು ಕುಪ್ಪಳಿಸಿದರು. ಬದುಕಿನ ಎಲ್ಲ ಆಯಾಮಗಳು ಅವರಿಗೆ ಅತ್ಯಾಕರ್ಷಕವಾಗಿ ಕಂಡವು. ಓದಲಾರಂಭಿಸಿದರು. ಬಕಾಸುರನಂತೆ ಕೈಗೆ ಸಿಕ್ಕ ಎಲ್ಲ ಪುಸ್ತಕಗಳನ್ನು ನಿರಂತರವಾಗಿ ಓದಿದರು. ತಾತ್ತ್ವಿಕ ವಿಚಾರಗಳು ಅವರನ್ನು ಅತೀವವಾಗಿ ಆಕರ್ಷಿಸಿದವು. ಅದರ ಬಗ್ಗೆ ಆಳವಾದ ಚರ್ಚೆಯಲ್ಲಿ ತೊಡಗಿದರು.

ಎಲ್-ಡೋಪ ಔಷಧವನ್ನು ಸೇವಿಸಿದ ಹಲವು ರೋಗಿಗಳಲ್ಲಿ ರೋಸ್ ಆರ್ ಒಬ್ಬಳು. 1926ರಿಂದ ರೋಸ್ 'ಹೆಪ್ಪು'ಗಟ್ಟಿದ್ದಳು. 1969ರಲ್ಲಿ ಅವಳು 'ಎಚ್ಚರವಾದಾಗ', ತಾನು ಇನ್ನೂ ಜಾಝ್ ಯುಗದಲ್ಲಿ ಇದ್ದೇನೆ ಎಂದು ನಂಬಿದ್ದಳು. ಅವಳ ಪಾಲಿಗೆ ದೇಹವು ಮಾತ್ರವಲ್ಲ, ಕಾಲವೂ ಹಿಮಗಟ್ಟಿತ್ತು. ಅವಳು ತನ್ನ ಫ್ಲಾಪರ್ ಉಡುಪುಗಳನ್ನು ಕೇಳಿದಳು ಮತ್ತು 40 ವರ್ಷಗಳ ಹಿಂದಿನ ಪಾರ್ಟಿಗಳು ಮತ್ತು ಸಂಗೀತದ ಬಗ್ಗೆ ಮಾತನಾಡಿದಳು. ರೋಸ್‌ಗೆ, ತಾನು ಹಿಮಶಿಲ್ಪವಾಗಿ ಕಳೆದ ದಶಕಗಳ ಬಗ್ಗೆ ಕಿಂಚಿತ್ ಅರಿವೇ ಇರಲಿಲ್ಲ. ಅವಳು ಒಂದು ಯುಗದಲ್ಲಿ ಕಣ್ಣುಗಳನ್ನು ಮುಚ್ಚಿದ್ದಳು. ಈಗ ಮತ್ತೊಂದು ಯುಗದಲ್ಲಿ ಕಣ್ಣುಗಳನ್ನು ತೆರೆದಿದ್ದಳು.

ಕರಾಳಮುಖ: ಎಲ್-ಡೋಪ ಔಷಧವನ್ನು ಸೇವಿಸಿದ ಎಲ್ಲರ ಬದುಕು ಲಿಯೋನಾರ್ಡ್ ಹಾಗೆ ಅಥವಾ ರೋಸ್ ಹಾಗೆ ಸಕಾರಾತ್ಮಕವಾಗಿರಲಿಲ್ಲ. 1969ನೆಯ ವರ್ಷದಲ್ಲಿ ಈ ಪ್ರಯೋಗವನ್ನು ಆರಂಭಿಸಿದ್ದರು. ಎಲ್-ಡೋಪ ಔಷಧವು ಒಗ್ಗದ ಕೆಲವರಲ್ಲಿ ಭಾವನೆಗಳು ಉಕ್ಕಿ ಹರಿಯಲಾರಂಭಿಸಿದವಿ. ಅವರು ಕೂಗಾಡಿದರು, ಅರಚಿದರು, ಜಗಳವಾಡಿದರು, ಭ್ರಮಾಪೀಡಿತರಾಗಿ ವಿಚಿತ್ರವಾಗಿ ವರ್ತಿಸಲಾರಂಭಿಸಿದರು. ಉನ್ಮಾದಕ್ಕೀಡಾದವರು ತಮ್ಮ ಸಹಚರರ ಮೇಲೆ ಹಾಗೂ ಆಸ್ಪತ್ರೆಯ ಸಿಬ್ಬಂದಿಯ ಮೇಲೆ ಹಲ್ಲೆಯನ್ನು ಮಾಡಲಾರಂಭಿಸಿದರು. ಇವರನ್ನು ನಿಯಂತ್ರಿಸುವುದು ಸವಾಲಿನ ಕೆಲಸವಾಯಿತು.

ಇತ್ಯಾತ್ಮಕ ಪರಿಣಾಮವನ್ನು ತೋರಿದ ಕೆಲವರಲ್ಲಿ ತಾಳಿಕೆ (ಟಾಲರನ್ಸ್) ಬೆಳೆಯಿತು. ಹಾಗಾಗಿ ಅಂಥವರು ಅನಿವಾರ್ಯವಾಗಿ ಔಷಧವನ್ನು ನಿಲ್ಲಿಸಬೇಕಾಯಿತು. ಅವರು ಮತ್ತೆ ಹಿಮಶಿಲ್ಪಗಳಾಗಿ ಪರಿವರ್ತನೆ ಯಾಗುವುದು ಅನಿವಾರ್ಯವಾಯಿತು.

ಚಿತ್ರಗಳು: 1920ರಿಂದ ಮಹಾಮೌನ ತಪಸ್ಸಿನಲ್ಲಿದ್ದ ಲಿಯೋನಾರ್ಡ್ ಮತ್ತು ರೋಸ್ ಅಂಥವರ ಕಥೆಯು ರಂಗಭೂಮಿ, ಟೆಲಿವಿಷನ್ ಮತ್ತು ಚಿತ್ರರಂಗದ ಹಲವು ನಿರ್ದೇಶಕರನ್ನು ಆಕರ್ಷಿಸಿತು. ಅಲಿವರ್ ಸ್ಯಾಕ್ಸ್ 'ಅವೇಕನಿಂಗ್' ಎನ್ನುವ ಪುಸ್ತಕವನ್ನು ಬರೆದರು. ರಾಬಿನ್ ವಿಲಿಯಮ್ಸ್ ಮತ್ತು ರಾಬರ್ಟ್ ದಿ ನೀರೋ ಪ್ರಧಾನ ಪಾತ್ರಗಳಲ್ಲಿ ಅಭಿನಯಿಸಿದ 'ಅವೇಕನಿಂಗ್' ಚಿತ್ರವು ಬಿಡುಗಡೆಯಾಯಿತು. ಹೆರಾಲ್ಡ್ ಪಿಂಟರ್ 'ಎ ಕೈಂಡ್ ಆಫ್ ಅಲಾಸ್ಕ' ಎಂಬ ನಾಟಕವನ್ನು ಬರೆದರು. 29 ವರ್ಷದ ಹುಡುಗಿಯೊಬ್ಬಳಿಗೆ ಮತ್ತೆ ಪ್ರಜ್ಞೆ ಬಂದಾಗ ಆಕೆಗೆ ಮಧ್ಯವಯಸ್ಸು. ಅವಳ ಮಧ್ಯವಯಸ್ಸಿನ ದೇಹದಲ್ಲಿ ಯುವತಿಯ ಹಸಿ-ಬಿಸಿ ಮಿದುಳಿನ ಪ್ರಭಾವದ ಸಮರ್ಥ ಚಿತ್ರಣವಾಗಿತ್ತು. ಬಿಬಿಸಿ ಮತ್ತು ಡಿಸ್ಕವರಿ ವಾಹಿನಿಗಳು ಸಾಕ್ಷ್ಯಚಿತ್ರಗಳನ್ನು ನಿರ್ಮಿಸಿದವು. ಹೀಗೆ ನಿದ್ರಾರೋಗವು ಪ್ರಬಲ ಮನರಂಜನಾ ಮಾಧ್ಯಮವಾಯಿತು. ಈಗ ಸ್ಪ್ಯಾನಿಶ್ ಫ್ಲೂ ಇಲ್ಲ. ಹಾಗಾಗಿ ಇ.ಎಲ್. ಇಲ್ಲ. ಹಿಮಶಿಲ್ಪಗಳನ್ನು ಇಂದು ನೋಡಲು ಸಾಧ್ಯವಿಲ್ಲ. ಆದರೆ ಆ ಎಲ್ಲವನ್ನೂ ಕಾದಂಬರಿಯಲ್ಲಿ, ಚಿತ್ರದಲ್ಲಿ, ನಾಟಕದಲ್ಲಿ, ಸಾಕ್ಷ್ಯ ಚಿತ್ರಗಳಲ್ಲಿ ನೋಡಬಹುದು.

ಸ್ವಸ್ಥ ಜೀವನಕ್ಕೆ ಸರಳ ಸೂತ್ರಗಳು

• ಡಾ. ಮೈತ್ರಿ ಭಟ್, ವಿಟ್ಲ

ಇಂದಿನ ಯಾಂತ್ರಿಕ ಯುಗದಲ್ಲಿ ಧಾವಂತದಲ್ಲಿ ಸಾಗುವ ಕ್ಷಣಗಳ ಮಧ್ಯೆ ಆರೋಗ್ಯ ಸೂತ್ರಗಳನ್ನು ಪಾಲಿಸಲು ನಮಗೆ ಸಮಯವೇ ಇಲ್ಲದಂತಾಗಿದೆ. ಹೀಗಿರುವಾಗ ಆರೋಗ್ಯಯುತವಾಗಿ ಬಾಳಿ ಬದುಕುವುದಾದರೂ ಹೇಗೆ?

ಉತ್ತಮ ಆಹಾರ, ದೈನಂದಿನ ವ್ಯಾಯಾಮ ಮತ್ತು ಸಾಕಷ್ಟು ನಿದ್ರೆ, ಇವು ಆರೋಗ್ಯಕರ ಜೀವನಕ್ಕೆ ಅಡಿಪಾಯವಾಗಿವೆ. ಉತ್ತಮ ಜೀವನ ಶೈಲಿಯು ನಮ್ಮನ್ನು ಸದಾ ಸದೃಢವಾಗಿ, ಶಕ್ತಿಯುತವಾಗಿ ಹಾಗೂ ಆರೋಗ್ಯವಾಗಿರಿಸುತ್ತದೆ. ವಿಶ್ವ ಆರೋಗ್ಯ ಸಂಸ್ಥೆಯ ಪ್ರಕಾರ ಆರೋಗ್ಯಕರ ಅಭ್ಯಾಸವು ಸಂತಸಮಯ ಜೀವನಕ್ಕೆ ಸುಲಭ ಮಾರ್ಗವಾಗಿದೆ.

ನಮ್ಮ ಹಿರಿಯರ ಕಾಲದಲ್ಲಿ ವೈದ್ಯರು, ವೈದ್ಯಕೀಯ ವ್ಯವಸ್ಥೆ, ಔಷಧಗಳ ಲಭ್ಯತೆ, ವೈದ್ಯಕೀಯ ಜ್ಞಾನ ಇವೆಲ್ಲವುಗಳ ಕೊರತೆಯಿತ್ತು. ಇಷ್ಟಾಗಿಯೂ ಅವರಿಗೆ ಆರೋಗ್ಯದ ಕೊರತೆ ಇರಲಿಲ್ಲ. ಇಂದು ಸೌಕರ್ಯಗಳೆಲ್ಲವೂ ಬೇಕಾದಷ್ಟಿದ್ದರೂ 'ನಾನು ಆರೋಗ್ಯವಾಗಿದ್ದೇನೆ' ಎಂದು ಹೇಳುವವರನ್ನು ಕಾಣುವುದು ಕಷ್ಟವಾಗಿದೆ. ಬಹುತೇಕ ಮನೆಗಳಲ್ಲಿ ಮಕ್ಕಳಿಗಿಂತ ತಂದೆ-ತಾಯಿಯೇ ಹೆಚ್ಚು ಆರೋಗ್ಯವಂತರು. ಹೀಗಾಗಲು ನಮ್ಮ ಜೀವನಶೈಲಿಯೇ ಕಾರಣ ಎಂಬುದನ್ನು ನಾವು ಮರೆಯಬಾರದು.

ಬಾಳು ಸುಗಮವಾಗಿ, ಸುಖಮಯವಾಗಿ ಸಾಗಲು ನಮ್ಮ ಕೆಲಸದ ಒತ್ತಡದ ನಡುವೆಯೇ ಆರೋಗ್ಯದ ಬಗೆಗೂ ಗಮನ ಹರಿಸಬೇಕಾದುದು ಅತ್ಯಗತ್ಯ. 'ಆರೋಗ್ಯವೇ ಭಾಗ್ಯ' ಎಂಬುದನ್ನು ಬಾಲ್ಯದಲ್ಲೇ ಓದಿದ ನಾವೆಲ್ಲ ನಂತರ ಅದನ್ನು ಹಾಗೆಯೇ ಮರೆತು ಬಿಟ್ಟಿದ್ದೇವೆ ಎನಿಸುತ್ತಿದೆ. ಬದುಕಿನ ಧಾವಂತದಲ್ಲಿ ಆರೋಗ್ಯ ನಮಗೆಷ್ಟು ಮುಖ್ಯ ಎಂಬುದನ್ನು ಕೂಡಾ ಮರೆತಿದ್ದೇವೆ ಎಂದೇ ಭಾಸವಾಗುತ್ತಿದೆ.

ಆರೋಗ್ಯ ಎಂದರೆ ಬರೀ ದೈಹಿಕವಾಗಿ ಆರೋಗ್ಯವಂತರಾಗಿರುವುದಲ್ಲ. ಜತೆಗೆ ಮನಸ್ಸು ಹಾಗೂ ಭಾವನೆಗಳನ್ನು ಸಮತೋಲನದಲ್ಲಿಟ್ಟುಕೊಳ್ಳುವುದು ಕೂಡಾ ಮುಖ್ಯ. ಇತ್ತೀಚಿನ ದಿನಗಳಲ್ಲಿ ನಾವು ಸೇವಿಸುವ ಆಹಾರ ಪದಾರ್ಥಗಳು ಕಲಬೆರಕೆಯಿಂದ ಕೂಡಿದ್ದು, ಇದರಿಂದಾಗಿ ಹಲವಾರು ಕಾಯಿಲೆಗಳು ಅವರಿಸಿಕೊಳ್ಳುತ್ತಿವೆ. ನಮ್ಮ ಜೀವನಶೈಲಿಯನ್ನು ಬದಲಾವಣೆ ಮಾಡಿಕೊಂಡರೆ ಮಾತ್ರ ಕಾಯಿಲೆಗಳಿಂದ ಮುಕ್ತರಾಗಿ ಆರೋಗ್ಯಕರವಾಗಿರಲು ಸಾಧ್ಯ.

ನಾವು ಪೌಷ್ಟಿಕಾಂಶಯುಕ್ತ ಆಹಾರವನ್ನು ಪ್ರತಿದಿನ ಸೇವಿಸುವುದರಿಂದ ದೈಹಿಕವಾಗಿ ಆರೋಗ್ಯವಾಗಿರಬಹುದು. ಪ್ರಸ್ತುತ, ಆರೋಗ್ಯಕ್ಕೆ ಹಾನಿಕಾರಕವಾಗಿರುವ ಜಂಕ್‌ಫುಡ್‌ಗಳಿಗೆ ಹೆಚ್ಚಿನ ಜನರು ಮೊರೆಹೋಗಿದ್ದಾರೆ. ಇದು ಆರೋಗ್ಯಕ್ಕೆ ಹಾನಿಕರ. ಆದರೆ ನಮ್ಮ ದೈನಂದಿನ ಚಟುವಟಿಕೆಗಳಲ್ಲಿ ಸರಿಯಾದ ಆಹಾರಕ್ರಮ, ಯೋಗಾಭ್ಯಾಸ, ವ್ಯಾಯಾಮವನ್ನು ಅಳವಡಿಸಿಕೊಳ್ಳುವುದರಿಂದ ಆರೋಗ್ಯವನ್ನು ಕಾಪಾಡಿಕೊಳ್ಳಬಹುದು. ಅದರಲ್ಲೂ ಇಂದ್ರಿಯ, ಮನಸ್ಸು ಮತ್ತು ಆತ್ಮವು ಪ್ರಸನ್ನವಾಗಿರಬೇಕು. ಭೌತಿಕ, ಮಾನಸಿಕ, ಆಧ್ಯಾತ್ಮಿಕ ವಿಕಸನಕ್ಕೆಂದು ಮನಸ್ಸಿನ ಮೇಲೆ ಹತೋಟಿ, ಸಕಾರಾತ್ಮಕ ಚಿಂತನೆ/ಧೋರಣೆ ಅಗತ್ಯ.

ಈಚೀಚೆಗೆ, ಆಹಾರ ಧಾನ್ಯಗಳನ್ನು ಬೆಳೆಯುವಾಗ, ಶೇಖರಿಸುವಾಗ, ಸಂಸ್ಕರಿಸುವಾಗ, ಅವು ಆಕರ್ಷಕವಾಗಿ ಕಾಣುವಂತೆ ಮಾಡಲು, ಹೀಗೆ ಹಲವು ಹಂತಗಳಲ್ಲಿ ರಾಸಾಯನಿಕಗಳನ್ನು ಬೇಕಾಬಿಟ್ಟಿ ಬಳಸಲಾಗುತ್ತಿದೆ. ಈ ಆಧುನಿಕ ಯುಗದಲ್ಲಿ ಸಂಪೂರ್ಣವಾಗಿ ರಾಸಾಯನಿಕ ರಹಿತ ಆಹಾರ ಸೇವನೆ ಸಾಧ್ಯವಿಲ್ಲವಾದರೂ, ರಾಸಾಯನಿಕಗಳನ್ನು ಎಷ್ಟರಮಟ್ಟಿಗೆ ನಮ್ಮ ಊಟದಲ್ಲಿ ಕಡಿಮೆ ಮಾಡಿಕೊಳ್ಳುತ್ತೇವೆ ಎಂಬುದರ ಮೇಲೆ ನಮ್ಮ ಆರೋಗ್ಯ ನಿಂತಿದೆ.

ಸ್ವಲ್ಪವೂ ಕೊಬ್ಬಿನ ಅಂಶವಿಲ್ಲದ ಆಹಾರವನ್ನು ಸೇವಿಸುವುದು ಆರೋಗ್ಯಕ್ಕೆ ಪೂರಕವಲ್ಲ. ನಮ್ಮ ಮಿದುಳು, ಹೃದಯ, ಮೂಳೆಗಳು ಹೀಗೆ ಇಡೀ ಶರೀರ ಸರಿಯಾಗಿ ಕಾರ್ಯನಿರ್ವಹಿಸಬೇಕೆಂದರೆ ಕೊಬ್ಬು ಬೇಕೇ ಬೇಕು. ಆದರೆ ಸಂಸ್ಕರಿತ, ಅತಿಯಾಗಿ ಕರಿದ ಕೊಬ್ಬಿನ ಪದಾರ್ಥಗಳು ವಿಷಕಾರಿ ಎಂಬುದರಲ್ಲಿ ಯಾವುದೇ ಸಂಶಯವಿಲ್ಲ.

ನಾವು ತಿನ್ನುವ ಊಟದ ಪ್ರಮಾಣದ ಮೇಲೂ ನಮ್ಮ ಆರೋಗ್ಯ ಅವಲಂಬಿತವಾಗಿದೆ. ಪೌಷ್ಟಿಕ ಆಹಾರವೆಂದು ಮಿತಿಮೀರಿ ಸೇವಿಸಿದರೆ ಅದು ವಿಷವಾಗಿ ಪರಿಣಮಿಸುತ್ತದೆ. ಆದುದರಿಂದ ಊಟಕ್ಕೆ ಕುಳಿತಾಗ ಎಷ್ಟು ತಿನ್ನಬೇಕು ಎಂಬುದರ ಅರಿವು ಅಗತ್ಯ. ವ್ಯಕ್ತಿಯ ದೇಹಪ್ರಕೃತಿ, ವಯಸ್ಸು, ಇರುವ ಪ್ರದೇಶ, ಕಾಲ ಇವುಗಳೆಲ್ಲದರ ಮೇಲೆ ಹಸಿವಿನ ಪ್ರಮಾಣ ಮತ್ತು ಸೇವಿಸುವ ಆಹಾರದ ಪ್ರಮಾಣವೂ ಭಿನ್ನವಾಗಿರುತ್ತದೆ. ಹಸಿವಾಗದೇ ಊಟ ಮಾಡುವುದು ಮತ್ತು ಹಸಿವಾದ ನಂತರವೂ ಊಟ ಮಾಡದೇ ಇರುವುದು ಎರಡೂ ಹಿತವಲ್ಲ. ಆಯಾ ಕಾಲದಲ್ಲಿ ವಾತಾವರಣದಲ್ಲಿ ಆಗುವ ಬದಲಾವಣೆಗೆ ಅನುಸಾರವಾಗಿ ನಮ್ಮ ಆಹಾರದಲ್ಲೂ ಬದಲಾವಣೆ ಬೇಕು. ಜತೆಗೆ ಆಯಾ ಕಾಲದಲ್ಲಿ ಬೆಳೆಯುವ ಹಣ್ಣುಗಳು, ತರಕಾರಿಗಳನ್ನು ಹೆಚ್ಚಾಗಿ ಸೇವಿಸಬೇಕು. ಹಾಗೆಯೇ ಟಿವಿ, ಮೊಬೈಲ್ ನೋಡುತ್ತಾ ಆಹಾರ ಸೇವಿಸುವುದು ತರವಲ್ಲ. ಷಡ್ರಸಗಳಿಂದ ಕೂಡಿದ ಭೋಜನವೇ ನಮ್ಮ ಹಿರಿಯರ ಆರೋಗ್ಯದ ಗುಟ್ಟಾಗಿತ್ತು ಎಂಬುದನ್ನು ನೆನಪಿಡಬೇಕು.

ದಿನವೂ ಬೆಳಗ್ಗೆ ಬೇಗನೇ ಎದ್ದು ಆಸನ, ಪ್ರಾಣಾಯಾಮ, ದೈಹಿಕ ವ್ಯಾಯಾಮಗಳನ್ನು ಮಾಡುವುದು, ಸಾಧ್ಯವಾದಷ್ಟೂ ರಾಸಾಯನಿಕರಹಿತ ವಸ್ತುಗಳನ್ನು ಬಳಸುವುದು, ರಾತ್ರಿ ಬೇಗ ಮಲಗುವುದು ಇವೆಲ್ಲಾ ಆರೋಗ್ಯಕ್ಕೆ ಹಿತಕರ.

ಒಟ್ಟಿನಲ್ಲಿ ಆರೋಗ್ಯವಾಗಿರುವುದು ಎಂದರೆ ಕೇವಲ ರೋಗ ಅಥವಾ ದೌರ್ಬಲ್ಯದ ಅನುಪಸ್ಥಿತಿಯಲ್ಲ; ಬದಲಿಗೆ ಅದು ಸಂಪೂರ್ಣ ದೈಹಿಕ, ಮಾನಸಿಕ ಮತ್ತು ಸಾಮಾಜಿಕ ಯೋಗಕ್ಷೇಮದ ಸ್ಥಿತಿಯಾಗಿದೆ. ಆದುದರಿಂದ ಕ್ಷಣಿಕ ಸುಖದ ಹಿಂದೆ ಬಿದ್ದು ಶಾಶ್ವತ ಸುಖವನ್ನು ಕಳೆದುಕೊಳ್ಳದಿರೋಣ. ಅಲ್ಲವೇ?

VISHWAVANI TV
SPECIAL
ಯುಟ್ಯೂಬ್ ಚಾನೆಲ್
ಸಬ್‌ಸ್ಕ್ರೈಬ್ ಆಗಿ

ಪದಬಂಧ

• ಸಿ.ರವಿಶಂಕರ ಶಾಸ್ತ್ರಿ, ದಂಬೆ

1		2	■	3	■	4		5
	■	6					■	
7		■	■		■	■	8	
	■	9				10	■	
■	11		■	■	■	12		■
13	■	14		15			■	16
17		■	■		■	■	18	
	■	19				20	■	
21			■		■	22		

ಎಡದಿಂದ ಬಲಕ್ಕೆ

1. ಎರಡೂ ಕಡೆ ಬಾಗಿದ ಮೈಯುಳ್ಳ ಗಾಜು (3)
4. ಕಣ್ಣಿಗೆ ಹಚ್ಚುವ ಕಾಡಿಗೆ (3)
6. ಜನರ ಮನಸ್ಸಿನಲ್ಲಿ ವಿಶಿಷ್ಟ ಸ್ಥಾನವನ್ನು ಪಡೆದವನು (5)
7. ಸರಿಯಾಗಿ ಕಾಣುತ್ತಿಲ್ಲ, ನಸುಗತ್ತಲೆ (2)
8. ಮೂಲ, ಮೊದಲು ಎಂದರ್ಥ (2)
9. ದನಗಳನ್ನು ಕಾಯುವವನು (5)
11. ಒಂದು ಹನಿ (2)
12. ಮನ್ಮಥನ ಪತ್ನಿಯ ಹೆಸರು (2)
14. ಹಾಳಾಗು ಎನ್ನುವುದನ್ನು ಧ್ವನಿಸುವ ನುಡಿಗಟ್ಟು (5)
17. ಕುದುರೆಗೆ ಮತ್ತೊಂದು ಹೆಸರು (2)
18. ನಿಷ್ಠೆಗೆ ಹೆಸರಾದ ಪ್ರಾಣಿ (2)
19. ಬಸದಿ ಬೆಟ್ಟವೆಂದು ಹೆಸರಾದ ತುಮಕೂರಿನ ಬಳಿಯ ಜೈನಕ್ಷೇತ್ರ (5)
21. ರಾಗದೊಂದಿಗೆ ಬಂದಿರುವ ಸಲೀಸು (3)
22. ಗದ್ದಲದಲ್ಲಿ ಮೋಟಾರು ವಾಹನವೊಂದು ಇದೆ (3)

ಮೇಲಿಂದ ಕೆಳಕ್ಕೆ

1. ಮೊಮ್ಮಗನ ಅಥವಾ ಮೊಮ್ಮಗಳ ಮಗ (4)
2. ಬಿಡುವಿನ ದಿನ ತೆಗೆದ ಧೂಳು (2)
3. ಯೋಗ್ಯವಾದವನು ಕೊನೆಗೆ ದೀರ್ಘವಾಗಿ ಬಂದಿದ್ದಾನೆ (4)
4. ಮೈಗೆ ತೊಡುವ ಉಡುಪು (2)
5. ದಾಖಲೆ ಮಾಡು (4)
9. ವಿರಳವಾಗಿ ಬಂದಿರುವ ತಾವರೆ (3)
10. ನೀರಾಗು ಅಥವಾ ಮರುಕಗೊಳ್ಳು (3)
13. ಜತೆಯಲ್ಲಿ ವಾಸಿಸುವುದು ಅಥವಾ ಒಡನಾಟ (4)
15. ಚುರುಕಾಗಿರುವ ದ್ರವರೂಪದ ಲೋಹ (4)
16. ಗಿಡಕ್ಕೆ ಮುಖ್ಯವಾದ ಬೇರು (4)
19. ಕಪಿ, ವಾನರ (2)
20. ಪುರದಲ್ಲೂ ಸಿಗಬಹುದು ಶತ್ರು (2)

ಸರಿಯುತ್ತರಗಳು

ರಾಮಾಚರಿತ ಮಾನಸ: ರಾಮ ಮತ್ತು ಹನುಮರ ಭೇಟಿ

ಒಂದೊಳ್ಳೆ ಮಾತು
ರೂಪಾ ಗುರುರಾಜ್

Vishwavani TV
Special
ಯೂಟ್ಯೂಬ್
ಚಾನೆಲ್‌ನಲ್ಲಿ

ನಮ್ಮ ಬದುಕಿನಲ್ಲಿ ನಾವು ಯಾರನ್ನಾದರೂ ಹುಡುಕುತ್ತಾ ಹೊರಟಾಗ, ಆ ದಾರಿಯಲ್ಲಿ ನಮಗೆ ಸಿಗುವ ವ್ಯಕ್ತಿಗಳು ನಮ್ಮ ಗುರಿಯನ್ನು ನಿರ್ಧರಿಸುತ್ತಾರೆ. ರಾಮಚರಿತ ಮಾನಸದಲ್ಲಿ ಕಾಣಬರುವ ಶ್ರೀರಾಮ ಮತ್ತು ಹನುಮಂತನ ಭೇಟಿಯು ಕೇವಲ ಇಬ್ಬರು ವ್ಯಕ್ತಿಗಳ ಭೇಟಿಯಲ್ಲ; ಅದು ಪರಮಾತ್ಮ ಮತ್ತು ಭಕ್ತನ ಮಿಲನ.

ಮೂಲ ಶ್ಲೋಕ (ಚೌಪಾಯಿ):

ಸೋಇ ಜಾನು ಜೇಹಿ ದೇಹು ಜನಾಯಿ । ಜಾನತ ತುಮಹಿ ತುಮಹಿ ಹೋಯಿ ಜಾಯಿ ॥

ತುಮರಿ ಕೃಪಾ ತುಮಹಿ ರಘುನಂದನ । ಜಾನಹಿಂ ಭಗತ ಭಗತಿ ಭಯ ಭಂಜನ ॥

ಅಂದರೆ, ಹೇ ರಘುನಂದನ, ನೀನು ಯಾರಿಗೆ ನಿನ್ನ ಅರಿವನ್ನು ಮಾಡಿಕೊಡುತ್ತೀಯೋ ಅವರು ಮಾತ್ರ ನಿನ್ನನ್ನು ತಿಳಿಯಬಲ್ಲರು. ನಿನ್ನನ್ನು ಅರಿತವರು ನಿನ್ನವರೇ ಆಗಿಹೋಗುತ್ತಾರೆ. ಭಕ್ತರ ಭಯವನ್ನು ಹೋಗಲಾಡಿಸುವವನೇ, ನಿನ್ನ ಕೃಪೆಯಿದ್ದರೆ ಮಾತ್ರ ಭಕ್ತರು ನಿನ್ನ ಭಕ್ತಿಯನ್ನು ತಿಳಿಯಲು ಸಾಧ್ಯ ಎಂದರ್ಥ.

ಸೀತೆಯನ್ನು ಹುಡುಕುತ್ತಾ ರಾಮ ಮತ್ತು ಲಕ್ಷ್ಮಣರು ಪಂಪಾ ಸರೋವರದ ತೀರವನ್ನು ದಾಟಿ ಋಷ್ಯಮೂಕ ಪರ್ವತದ ತಪ್ಪಲಿಗೆ ಬಂದರು. ಕೈಯಲ್ಲಿ ಧನುಸ್ಸು, ಮುಖದಲ್ಲಿ ಸೂರ್ಯನಂಥ ತೇಜಸ್ಸು ಹೊಂದಿದ್ದ ಆ ಇಬ್ಬರು ಅಜಾನುಬಾಹುಗಳನ್ನು ಕಂಡ ಸುಗ್ರೀವನಿಗೆ ಎಲ್ಲಿಲ್ಲದ ಭಯ ಕಾಡಿತು. ಅಣ್ಣ ವಾಲಿಯು ತನ್ನನ್ನು ಕೊಲ್ಲಲು ಕಳುಹಿಸಿದ ಗೂಢಚಾರಿಗಳೇ ಇವರು ಎಂದು ಶಂಕಿಸಿ, ಸತ್ಯವೇನೆಂದು ಅರಿತು ಬರಲು ಸುಗ್ರೀವ ತನ್ನ ನಂಬಿಕಸ್ಥ ಸಚಿವ ಹನುಮಂತನನ್ನು ಕಳುಹಿಸಿದ.

ಹನುಮಂತನು ಚತುರ. ನೇರವಾಗಿ ಹೋಗದೆ ಒಬ್ಬ ಸನ್ಯಾಸಿಯ ವೇಷ ಧರಿಸಿ ರಾಮ-ಲಕ್ಷ್ಮಣರ ಮುಂದೆ ಬಂದು ನಿಂತನು. ಅತ್ಯಂತ ವಿನಯದಿಂದ ಕೈಮುಗಿದು, ಮಧುರವಾದ ಧ್ವನಿಯಲ್ಲಿ ಕೇಳಿದನು: ''ಎಲೈ ವೀರರೇ, ದೇವತೆಗಳಂತೆ ಕಂಗೊಳಿಸುತ್ತಿರುವ ನೀವು ಯಾರು? ಈ ಕಠಿಣ ಕಾಡಿನಲ್ಲಿ ಸನ್ಯಾಸಿಗಳಂತೆ ಜಟೆಯನ್ನು ಧರಿಸಿದ್ದೀರಿ, ಆದರೆ ರಾಜಕುಮಾರರಂತೆ ಆಯುಧಗಳನ್ನು ಹಿಡಿದಿದ್ದೀರಿ. ನಿಮ್ಮನ್ನು ನೋಡಿದರೆ ಈ ಸೃಷ್ಟಿಯನ್ನೇ ಆಳುವ ಶಕ್ತಿ ನಿಮ್ಮಲ್ಲಿದೆ ಎನಿಸುತ್ತಿದೆ. ನನ್ನನ್ನು ಸುಗ್ರೀವನ ಮಂತ್ರಿ ಎಂದು ತಿಳಿಯಿರಿ''.

ಹನುಮಂತನ ಸಂಸ್ಕಾರಯುತವಾದ ಮಾತುಗಳನ್ನು ಕೇಳಿದ ರಾಮನು ಲಕ್ಷ್ಮಣನ ಕಡೆ ತಿರುಗಿ, ''ಲಕ್ಷ್ಮಣಾ, ಈತನ ಮಾತುಗಳನ್ನು ಕೇಳಿದೆಯಾ? ವೇದಗಳನ್ನು ಪೂರ್ಣವಾಗಿ ಅಭ್ಯಾಸ ಮಾಡಿದವರಿಗೆ ಮಾತ್ರ ಇಂಥ ಶುದ್ಧವಾದ ಮತ್ತು ಸ್ಪಷ್ಟವಾದ ಭಾಷೆ ಸಿದ್ಧಿಸಲು ಸಾಧ್ಯ. ಈತನ ಮಾತುಗಳಲ್ಲಿ ಅಹಂಕಾರವಿಲ್ಲ, ಕೇವಲ ವಿನಯವಿದೆ'' ಎಂದು ಪ್ರಶಂಸಿಸಿದನು. ತನ್ನ ಎದುರಿಗಿರುವವರು ಅಯೋಧ್ಯೆಯ ರಾಜಕುಮಾರ ಶ್ರೀರಾಮಚಂದ್ರ ಎಂದು ತಿಳಿಯುತ್ತಿದ್ದಂತೆಯೇ ಹನುಮಂತನಿಗೆ ರೋಮಾಂಚನವಾಯಿತು. ತಾನು ಯಾವುದಕ್ಕಾಗಿ ಕಾಯುತ್ತಿದ್ದನೋ ಆ ದೈವವೇ ತನ್ನೆದುರು ನಿಂತಿತ್ತು!

ಕೂಡಲೇ ಸನ್ಯಾಸಿ ವೇಷವನ್ನು ಕಳಚಿ ತನ್ನ ನಿಜರೂಪಕ್ಕೆ ಬಂದ ಹನುಮಂತನು, ಭಕ್ತಿಯಿಂದ ಶ್ರೀರಾಮನ ಪಾದಗಳಿಗೆ ನಮಸ್ಕರಿಸಿದನು.

ಕಣ್ಣೀರು ತುಂಬಿದ ದನಿಯಲ್ಲಿ ಹನುಮಂತ ''ಸ್ವಾಮೀ, ಜಗತ್ತಿನ ಒಡೆಯನಾದ ನೀನೇ ನನ್ನನ್ನು ಗುರುತಿಸಿ ಪ್ರಶಂಸಿಸಿದೆಯಲ್ಲಾ? ನಿನ್ನನ್ನು ನೋಡದೆ ದೂರವಿದ್ದ ಈ ಭಕ್ತನನ್ನು ಕ್ಷಮಿಸು'' ಎಂದನು.

ಆಗ ರಾಮನು ಪ್ರೀತಿಯಿಂದ ಹನುಮಂತನನ್ನು ತಬ್ಬಿ ಎತ್ತಿಕೊಂಡನು. ಅಂದು ಋಷ್ಯಮೂಕ ಪರ್ವತದ ತಪ್ಪಲಿನಲ್ಲಿ ಪ್ರಾರಂಭವಾದ ಆ ಸ್ನೇಹ ಮತ್ತು ಭಕ್ತಿಯ ಬಂಧ, ಇಂದಿಗೂ ಜಗತ್ತಿಗೆ ಆದರ್ಶವಾಗಿದೆ.

ಮಾತು ಎಂಬುದು ಮನುಷ್ಯನ ಸಂಸ್ಕಾರದ ಕನ್ನಡಿ. ಹನುಮಂತನ ವಿನಯಶೀಲ ಮಾತುಗಳೇ ಅವನನ್ನು ಶ್ರೀರಾಮನಿಗೆ ಹತ್ತಿರವಾಗುವಂತೆ ಮಾಡಿದವು. ನಮ್ಮ ಬದುಕಿನಲ್ಲಿ ನಾವು ಏನೇನೋ ಆಗಲು ಬಯಸುತ್ತೇವೆ, ಆದರೆ ಎಲ್ಲಕ್ಕಿಂತ ಮಿಗಿಲಾಗಿ 'ಪ್ರಾಮಾಣಿಕ ವ್ಯಕ್ತಿ'ಯಾಗುವುದು ದೊಡ್ಡ ಸಾಧನೆ. ಹನುಮಂತನಂತೆ ನಾವು ಮಾಡುವ ಕೆಲಸದಲ್ಲಿ ಸಮರ್ಪಣಾ ಭಾವವಿದ್ದರೆ, ನಾವು ಹುಡುಕುತ್ತಿರುವ ಗುರಿಯೇ ನಮ್ಮನ್ನು ಹುಡುಕಿಕೊಂಡು ಬರುತ್ತದೆ. ಅನೇಕರು ಹಲವಾರು ಡಿಗ್ರಿಗಳನ್ನು ಪಡೆದು ಜ್ಞಾನವಂತರಾದರೂ, ಅವರಲ್ಲಿ ವಿನಯಶೀಲತೆ ಇಲ್ಲದೆ ಇರುವುದರಿಂದ ತಮ್ಮದೇ ದುಡುಕಿನಿಂದ ಜೀವನದಲ್ಲಿ ಬರುವ ದೊಡ್ಡ ದೊಡ್ಡ ಅವಕಾಶಗಳನ್ನು ಉಳಿಸಿಕೊಳ್ಳದೆ ಹೋಗುತ್ತಾರೆ. ಕೆಲವರು ಹುಟ್ಟಿನಿಂದ ಜಾಣರಲ್ಲದಿದ್ದರೂ ತಮ್ಮ ವಿಧೇಯತೆಯಿಂದ, ಪ್ರಾಮಾಣಿಕತೆಯಿಂದ, ಶ್ರಮದಿಂದ ಜೀವನದಲ್ಲಿ ಬಹಳ ಮೇಲೆ ಏರುತ್ತಾರೆ. ಇದು ನಮ್ಮೆಲ್ಲರಿಗೂ ದೊಡ್ಡ ಪಾಠ ಅಲ್ಲವೇ?

ನೀವೂ ಬರೆಯಬಹುದು
ನಮ್ಮ ವಿಳಾಸ
ಪುರವಣಿ ವಿಭಾಗ, ನಂ.1687, 3ನೇ ಮಹಡಿ, ನಿಸರ್ಗ ಸೆರೆನಿಟಿ ಕಾಂಪ್ಲೆಕ್ಸ್, ರಾಘವೇಂದ್ರ ಸ್ವಾಮಿ ಮಠದ ಹತ್ತಿರ, ಬಿಇಎಂಎಲ್ ಬಡಾವಣೆ, ರಾಜರಾಜೇಶ್ವರಿ ನಗರ, ಬೆಂಗಳೂರು-560098
e-mail: vishwavanimagazine@gmail.com

ಸಮಾಚಾರ ಸಣ್ಣದಲ್ಲ

ಮದ್ಯಪಾನ ಮಾಡಿ ವಾಹನ ಚಾಲನೆ: ವಾರ್ನರ್ ಬಂಧನ

ದೆಹಲಿ: ಪ್ರಸ್ತುತ ನಡೆಯುತ್ತಿರುವ ಪಾಕಿಸ್ತಾನ ಸೂಪರ್ ಲೀಗ್ ಟೂರ್ನಿಯಲ್ಲಿ ಕರಾಚಿ ಕಿಂಗ್ಸ್ ತಂಡವನ್ನು ಮುನ್ನಡೆಸುತ್ತಿರುವ ಆಸ್ಟ್ರೇಲಿಯಾ ಮಾಜಿ ಆರಂಭಿಕ ಬ್ಯಾಟ್ಸ್‌ಮನ್ ಡೇವಿಡ್ ವಾರ್ನರ್, ಟೂರ್ನಿಯ ವೇಳಾಪಟ್ಟಿಯ ನಡುವಿನ ವಿರಾಮದ ಸಂದರ್ಭದಲ್ಲಿ



ನಾಲ್ಕು ದಿನಗಳ ವಿಶ್ರಾಂತಿಗಾಗಿ ತಮ್ಮ ಸ್ವಂತ ನಗರ ಸಿಡ್ನಿಗೆ ಮರಳಿದ್ದರು. ಆದರೆ ಅವರು ಅಲ್ಲಿ ಮದ್ಯಪಾನ ಮಾಡಿ ವಾಹನ ಚಲಾಯಿಸಿದ ಕಾರಣ ಎಡಗೈ ಬ್ಯಾಟ್ಸ್‌ಮನ್ ಅನ್ನು ಅರೆಸ್ಟ್ ಮಾಡಲಾಗಿದೆ ಎಂದು ವರದಿಯಾಗಿದೆ. ಏಪ್ರಿಲ್ 5ರಂದು ರಾತ್ರಿ ಸುಮಾರು 11.20ಕ್ಕೆ ಸೌತ್ ಡೌಲಿಂಗ್ ಸ್ಟ್ರೀಟ್‌ನಲ್ಲಿ 39ರ ವಯಸ್ಸಿನ ಡೇವಿಡ್ ವಾರ್ನರ್ ಅವರನ್ನು ತಪಾಸಣೆಗಾಗಿ ತಡೆಯಲಾಯಿತು. ಅವರ ಪ್ರಾಥಮಿಕ ರಕ್ತ ಪರೀಕ್ಷೆಯಲ್ಲಿ ಮದ್ಯಪಾನ ಮಾಡಿರುವುದು ದೃಢವಾಗಿದ್ದು, ನಂತರ ಅವರನ್ನು ಸರ್ರೆ ಹಿಲ್ಸ್ ಪೊಲೀಸ್ ಠಾಣೆಗೆ ಕರೆದೊಯ್ಯಲಾಗಿದ್ದು, ಅಲ್ಲಿ ಎರಡನೇ ಬಾರಿ ಮದ್ಯಪಾನ ಸೇವನೆ ನಡೆಸಲಾಗಿದೆ ಎಂದು ನ್ಯೂ ಸೌಥ್ ವೇಲ್ಸ್ ಪೊಲೀಸರು ಮಾಹಿತಿ ನೀಡಿದ್ದಾರೆ.

ಸಂಜುಗೆ ಸಿಎಸ್‌ಕೆ ಕೋಚ್ ಬೆಂಬಲ

ಚೆನ್ನೈ: ಹ್ಯಾಟ್ರಿಕ್ ಪಂದ್ಯದ ವೈಫಲ್ಯದ ಹೊರತಾಗಿಯೂ ಚೆನ್ನೈ ಸೂಪರ್ ಕಿಂಗ್ಸ್ ತಂಡದ ಆರಂಭಿಕ ಆಟಗಾರ ಸಂಜು ಸ್ಯಾಮ್ಸನ ಅವರನ್ನು ತಂಡದ ಮುಖ್ಯ ಕೋಚ್ ಸ್ಟೀಫನ್ ಫ್ಲೆಮಿಂಗ್ ಶ್ಲಾಘಿಸಿ, ಅವರ ಮೇಲೆ ಬಲವಾದ ವಿಶ್ವಾಸ ವ್ಯಕ್ತಪಡಿಸುತ್ತಾರೆ. ಅಷ್ಟೇ ಅಲ್ಲದೆ ಸಿಎಸ್‌ಕೆ ಚೌಕಟ್ಟಿನಲ್ಲಿ ಇದೀಗಷ್ಟೇ ಅವರು ಬೆಳೆಯಲಾರಂಭಿಸಿರುವುದರಿಂದ ತಂಡವು ಅವರನ್ನು ಸಂಪೂರ್ಣವಾಗಿ ಬೆಂಬಲಿಸುತ್ತದೆ ಎಂದಿದ್ದಾರೆ. 'ಟಿ20 ಕ್ರಿಕೆಟ್ ಬೇಗನೆ ಬದಲಾವಣೆ ಆಗಬಹುದು. ಟಿ20 ವಿಶ್ವಕಪ್‌ನಲ್ಲಿ ಏನಾಯಿತು ಎಂಬುದನ್ನು ನಾವು ನೋಡಿದ್ದೇವೆ ಮತ್ತು ಒಬ್ಬ ಬ್ಯಾಟ್ಸ್‌ಮನ್ ರನ್ ಗಳಿಸಿದಾಗ ತುಂಬಾ ಪ್ರಾಬಲ್ಯ ಸಾಧಿಸುವ ವ್ಯಕ್ತಿಯಾಗಿರುತ್ತಾನೆ. ಸಂಜು ವಿರೋಧಿ ತಂಡಗಳಿಗೆ ತುಂಬಾ ಅಪಾಯಕಾರಿ ಆಟಗಾರ ಆದ್ದರಿಂದ ಹಳದಿ ಬಣ್ಣದಲ್ಲಿ ತನ್ನ ಹಾದಿಯನ್ನು ರೂಪಿಸಿಕೊಳ್ಳುತ್ತಿರುವ ಸಂಜುಗೆ ನಮ್ಮ ಕಡೆಯಿಂದ ಬೆಂಬಲ ಮತ್ತು ವಿಶ್ವಾಸವನ್ನು ಹೊರತುಪಡಿಸಿ ಬೇರೇನೂ ಇರುವುದಿಲ್ಲ' ಎಂದು ಫ್ಲೆಮಿಂಗ್ ಸುದ್ದಿಗಾರರಿಗೆ ತಿಳಿಸಿದ್ದಾರೆ.

ಮಳೆಯಿಂದ ಪಂದ್ಯ 11 ಓವರ್‌ಗೆ ಇಳಿಕೆ | ಜೈಸ್ವಾಲ್ ಸ್ಫೋಟಕ ಬ್ಯಾಟಿಂಗ್ | ಮುಂಬೈಗೆ ಸೋಲು

ರಾಜಸ್ಥಾನಕ್ಕೆ ಹ್ಯಾಟ್ರಿಕ್ ಗೆಲುವು

ಗುವಾಹಟಿ: ಇಲ್ಲಿ ಮಂಗಳವಾರ ನಡೆದ ಐಪಿಎಲ್ ಪಂದ್ಯಕ್ಕೆ ಮಳೆ ಅಡ್ಡಿಯಾದರೂ, 11 ಓವರ್‌ಗಳಿಗೆ ಸೀಮಿತಗೊಂಡ ಪಂದ್ಯದಲ್ಲಿ ರಾಜಸ್ಥಾನ ತಂಡವು ಮುಂಬೈಯನ್ನು 27 ರನ್‌ಗಳಿಂದ ಸೋಲಿಸಿತು.

ಮೊದಲು ಬ್ಯಾಟಿಂಗ್ ಮಾಡಿದ ರಾಜಸ್ಥಾನವು 3 ವಿಕೆಟ್ ನಷ್ಟಕ್ಕೆ 150 ರನ್ ಗಳಿಸಿತು. ಯುವ ಬ್ಯಾಟರ್ ಯಶಸ್ವಿ ಜೈಸ್ವಾಲ್ ಅಜೇಯ 77 ರನ್ ಗಳಿಸಿದರೆ, ವೈಭವ್ ಸೂರ್ಯವಂಶಿ 14 ಎಸೆತಗಳಲ್ಲಿ 39 ರನ್ ಗಳಿಸಿ ಈ ಬೃಹತ್ ಮೊತ್ತಕ್ಕೆ ಕಾರಣರಾದರು.

ಆ ಮೊತ್ತವನ್ನು ಬೆಂಬತ್ತಿದ ಮುಂಬೈ ತಂಡ 9 ವಿಕೆಟ್ ನಷ್ಟಕ್ಕೆ 123 ರನ್ ಗಳಿಸಲಷ್ಟೇ ಶಕ್ತವಾಯಿತು.

ರಾಜಸ್ಥಾನದ ಪರ ಬ್ಯಾಟಿಂಗ್‌ಗೆ ಇಳಿದ ಯುವ ಆಟಗಾರರಾದ ಯಶಸ್ವಿ ಜೈಸ್ವಾಲ್ ಹಾಗೂ ವೈಭವ್ ಸೂರ್ಯವಂಶಿ ಮೊದಲ ವಿಕೆಟ್ ಜತೆಯಾಟದಲ್ಲಿ 5 ಓವರ್‌ಗಳಲ್ಲೇ 80 ರನ್ ಸೂರೆಗೈದರು. ದೀಪಕ್ ಚಹಾರ್ ಎಸೆದ ಮೊದಲ ಓವರ್‌ನಲ್ಲಿ ಜೈಸ್ವಾಲ್ 4 ಬೌಂಡರಿ, ಒಂದು ಸಿಕ್ಸರ್ ಸಹಿತ 22 ರನ್ ಬಾರಿಸಿ ಭರ್ಜರಿ ಆರಂಭ ನೀಡಿದರು. ವೈಭವ್ ಸೂರ್ಯವಂಶಿಯವರು ಬುಮ್ರಾ ಓವರ್‌ನಲ್ಲಿ ಎರಡು ಸಿಕ್ಸರ್ ಸಿಡಿಸಿ ಅಬ್ಬರಿಸಿದರು.

ಶಾರ್ದೂಲ್ ಠಾಕೂರ್ ಎಸೆದ 5ನೇ ಓವರ್‌ನ ಕೊನೆಯ ಎಸೆತದಲ್ಲಿ ವೈಭವ್ ಸೂರ್ಯವಂಶಿ ಸಿಕ್ಸರ್ ಹೊಡೆಯುವ ಪ್ರಯತ್ನದಲ್ಲಿ ಡಿತಿಲಕ್ ವರ್ಮಾಗೆ ಕ್ಯಾಚ್ ನೀಡಿ ಔಟ್ ಆದರು. ವೈಭವ್ ಕೇವಲ 14 ಎಸೆತಗಳಲ್ಲಿ 1 ಬೌಂಡರಿ, 5 ಸಿಕ್ಸರ್‌ಗಳ ಸಹಿತ 39 ರನ್ ಗಳಿಸಿದರು. ನಂತರ ಬಂದ ಧ್ರುವ್ ಜುರೆಲ್ ಕೇವಲ 2 ರನ್ ಗಳಿಸಿ ಔಟ್ ಆದರು. ನಾಯಕ ರಿಯಾನ್ ಪರಾಗ್ 10 ಎಸೆತಗಳಲ್ಲಿ 1 ಬೌಂಡರಿ, 2 ಸಿಕ್ಸರ್ ಸಹಿತ 20 ರನ್ ಗಳಿಸಿ ತಿಲಕ್ ವರ್ಮಾಗೆ ಕ್ಯಾಚ್ ನೀಡಿ ಔಟ್ ಆದರು.

ಆರಂಭಿಕನಾಗಿ ಬಂದು ಕೊನೆಯವರೆಗೂ ಅಬ್ಬರದ ಆಟವಾಡಿದ ಯಶಸ್ವಿ ಜೈಸ್ವಾಲ್ 32 ಎಸೆತಗಳಲ್ಲಿ 10 ಬೌಂಡರಿ, 4 ಸಿಕ್ಸರ್‌ಗಳ ಸಹಿತ ಅಜೇಯ 77 ರನ್ ಗಳಿಸಿದರು. ಶಿಮ್ರಾನ್ ಹೆಟ್ಮೆಯರ್ ಅಜೇಯ 6 ರನ್ (7 ಬಾಲ್) ಗಳಿಸಿದರು.

ಆರಂಭದಲ್ಲೇ ಮುಂಬೈ ಕುಸಿತ: 151 ರನ್‌ಗಳ ಗೆಲುವಿನ ಗುರಿಯನ್ನು ಪಡೆದ ಮುಂಬೈ, ಆರಂಭದ ಓವರ್‌ನಲ್ಲೇ ಸ್ಫೋಟಕ ಬ್ಯಾಟಿಂಗ್‌ಗೆ ಒತ್ತುಕೊಟ್ಟರೂ ಆ ಓವರ್‌ನ ಕೊನೆಯ ಬಾಲ್‌ನಲ್ಲಿ ರಿಕಲ್ಟನ್ (8) ವಿಕೆಟ್ ಕಳೆದುಕೊಂಡಿತು.

2ನೇ ಓವರ್‌ನಲ್ಲಿ ಮುಂಬೈ ತಂಡದ ಸೂರ್ಯಕುಮಾರ್ ಯಾದವ್ (6) ಔಟ್ ಆದರು. ಬಳಿಕ ರೋಹಿತ್ ಶರ್ಮಾ-ತಿಲಕ್ ವರ್ಮಾ ಜತೆಯಾಟ ಹೆಚ್ಚು ಹೊತ್ತು ಸಾಗಲಿಲ್ಲ. 5 ರನ್ ಗಳಿಸಿದ್ದ ರೋಹಿತ್ ಎಲ್‌ಬಿಡಬ್ಲ್ಯು ಬಲೆಗೆ ಸಿಲುಕಿ ತಮ್ಮ ವಿಕೆಟ್ ಕಳೆದುಕೊಂಡರು.

ಹಾರ್ದಿಕ್ ಪಾಂಡ್ಯ-ತಿಲಕ್ ವರ್ಮಾ ಜತೆಯಾಟ ಹೆಚ್ಚು ಹೊತ್ತು ಮುಂದುವರಿಯಲಿಲ್ಲ. 6 ಬಾಲ್‌ಗಳಲ್ಲಿ 9 ರನ್ ಗಳಿಸಿದ್ದ ಪಾಂಡ್ಯ ರವಿ ಬಿಷ್ಣೋಯ್ ಬೌಲಿಂಗ್‌ನಲ್ಲಿ ವಿಕೆಟ್ ಕಳೆದುಕೊಂಡರು. ಆ ನಂತರ ತಂಡದ ಸ್ಕೋರ್ 46 ಆಗಿದ್ದ ವೇಳೆ 5ನೇ ವಿಕೆಟ್ ರೂಪದಲ್ಲಿ 14 ರನ್ ಗಳಿಸಿದ್ದ ತಿಲಕ್ ವರ್ಮಾ ಕೂಡಾ ಔಟ್ ಆದರು.

ನಮನ್ ಧೀರ್-ರುಥರ್‌ಫೋರ್ಡ್ ಜತೆಯಾಟ ಕೂಡಾ ಸ್ವಲ್ಪ ಹೊತ್ತಷ್ಟೇ ಸಾಗಿತು. 8 ಬಾಲ್‌ಗಳಲ್ಲಿ 25 ರನ್ ಗಳಿಸಿದ್ದ ವೇಳೆ ರುಥರ್‌ಫೋರ್ಡ್ ಔಟ್ ಆಗಿ ಪೆವಿಲಿಯನ್ ಸೇರಿದರು.

ಆ ನಂತರ ಶಾರ್ದೂಲ್ ಠಾಕೂರ್-ನಮನ್ ಧೀರ್ ಸ್ವಲ್ಪ ಹೊತ್ತು ಕ್ರೀಸಿನಲ್ಲಿ ನೆಲವೂರಿದರು. 25 ರನ್ ಗಳಿಸಿದ್ದ ನಮನ್ ಧೀರ್ ರವಿ ಬಿಷ್ಣೋಯ್‌ಗೆ ಕ್ಯಾಚ್ ನೀಡಿ ಪೆವಿಲಿಯನ್ ತೆರಳಿದರು.

ಶಾರ್ದೂಲ್ ಠಾಕೂರ್ ಕೇವಲ 8 ರನ್ ಗಳಿಸುವಲ್ಲಿ ಮಾತ್ರ ಶಕ್ತರಾದರು. ಮುಂಬೈ ತಂಡವು ಅಂತಿಮವಾಗಿ 11 ಓವರ್‌ನಲ್ಲಿ 9 ವಿಕೆಟ್ ನಷ್ಟಕ್ಕೆ 123 ರನ್ ಗಳಿಸಿತು.

ಬಲಿಷ್ಠ ಅಕ್ಷರ್ ಪಟೇಲ್ ಪಡೆಗೆ ಗಿಲ್ ತಂಡ ಎದುರಾಳಿ

ಇಂದು ಡೆಲ್ಲಿ-ಗುಜರಾತ್ ಕದನ

ದೆಹಲಿ: ಇಲ್ಲಿನ ಅರುಣ್ ಜೇಟ್ಲಿ ಸ್ಟೇಡಿಯಂನಲ್ಲಿ ಇಂದು ನಡೆಯಲಿರುವ ಐಪಿಎಲ್ ಟೂರ್ನಿಯಲ್ಲಿ ಅತಿಥೇಯ ಡೆಲ್ಲಿ ಕ್ಯಾಪಿಟಲ್ಸ್ ತಂಡವು ಗುಜರಾತ್ ಟೈಟಾನ್ಸ್ ತಂಡವನ್ನು ಎದುರಿಸಲಿದೆ.

ಅಕ್ಷರ್ ಪಟೇಲ್ ನಾಯಕತ್ವದ ಈಗಾಗಲೇ 2 ಪಂದ್ಯಗಳನ್ನು ಆಡಿದ್ದು ಅವೆರಡರಲ್ಲೂ ಗೆದ್ದು 4 ಅಂಕಗಳನ್ನು ಗಿಟ್ಟಿಸಿಕೊಂಡಿದೆ. ಆದರೆ 2 ಪಂದ್ಯಗಳನ್ನು ಆಡಿರುವ ಶುಭ್‌ಮನ್ ಗಿಲ್ ನಾಯಕತ್ವದ ಗುಜರಾತ್ ತಂಡ 2 ಪಂದ್ಯಗಳಲ್ಲೂ ಸೋಲುಂಡು ಅಂಕಪಟ್ಟಿಯಲ್ಲಿ ಇನ್ನೂ ಖಾತೆ ತೆರೆದಿಲ್ಲ.

ಕಳೆದ ಬುಧವಾರ ನಡೆದ ಪಂದ್ಯದಲ್ಲಿ ಡೆಲ್ಲಿ ತಂಡ ಲಖನೌವನ್ನು 6 ವಿಕೆಟ್‌ಗಳಿಂದ ಮಣಿಸಿತ್ತು. ಮೊದಲು ಬ್ಯಾಟ್ ಮಾಡಿದ್ದ ಲಖನೌ 141 ರನ್ ಗಳಿಸಿದ್ದರೆ, ಡೆಲ್ಲಿ 17.1 ಓವರ್‌ಗಳಲ್ಲೇ ಗೆಲುವು ದಾಖಲಿಸಿತ್ತು. ಕಳೆದ ಶನಿವಾರ ನಡೆದ ಪಂದ್ಯದಲ್ಲಿ ಡೆಲ್ಲಿ ತಂಡ ಮುಂಬೈ ವಿರುದ್ಧ 6 ವಿಕೆಟ್‌ಗಳ ಗೆಲುವು ಪಡೆದಿತ್ತು. ಮೊದಲು ಬ್ಯಾಟ್ ಮಾಡಿದ್ದ ಮುಂಬೈ 162 ರನ್ ದಾಖಲಿಸಿದರೆ, ಡೆಲ್ಲಿ 18.1 ಓವರ್‌ಗಳಲ್ಲಿ ಗೆಲುವು ಕಂಡುಕೊಂಡಿತ್ತು.

ಈ ಬಾರಿಯ ಐಪಿಎಲ್ ಆವೃತ್ತಿಯ ತನ್ನ ಮೊದಲ ಪಂದ್ಯದಲ್ಲಿ ಗುಜರಾತ್ ತಂಡವು ಪಂಜಾಬ್ ವಿರುದ್ಧ ಸೋಲೊಪ್ಪಿತ್ತು. ಮೊದಲು ಬ್ಯಾಟ್ ಮಾಡಿದ ಗುಜರಾತ್ 162 ರನ್ ಗಳಿಸಿದ್ದರೆ, 19.1 ಓವರ್‌ಗಳಲ್ಲೇ ಪಂಜಾಬ್ ಗೆಲುವು ಸಾಧಿಸಿತು. ಕಳೆದ ಶನಿವಾರ ನಡೆದ ಪಂದ್ಯದಲ್ಲಿ ಮೊದಲು ಬ್ಯಾಟ್ ಮಾಡಿದ್ದ ರಾಜಸ್ಥಾನವು 210 ರನ್ ಗಳಿಸಿತ್ತು. ಆ ಮೊತ್ತ ಬೆಂಬತ್ತಿದ ಗುಜರಾತ್ 8 ವಿಕೆಟ್ ನಷ್ಟಕ್ಕೆ 201 ರನ್ ಗಳಿಸಲಷ್ಟೇ ಶಕ್ತವಾಯಿತು.

2 ಪಂದ್ಯಗಳನ್ನೂ ಗೆದ್ದಿರುವ ಡೆಲ್ಲಿ ಬುಧವಾರದ ಪಂದ್ಯದಲ್ಲೂ ಗುಜರಾತ್ ವಿರುದ್ಧ ಬಹಳ ಸುಲಭ ಜು ಗಳಿಸಬಹುದೆನ್ನುವ ನಿರೀಕ್ಷೆಯಲ್ಲಿದೆ.

ಐಪಿಎಲ್ ಮುಖಾಮುಖಿ
ಒಟ್ಟು ಪಂದ್ಯಗಳು: 7
ಗುಜರಾತ್ ಗೆಲುವು:4
ಡೆಲ್ಲಿ ಗೆಲುವು: 3

ಇಂದಿನ ಪಂದ್ಯ

ಡೆಲ್ಲಿ-ಗುಜರಾತ್
ತಾಣ: ಅರುಣ್ ಜೇಟ್ಲಿ ಸ್ಟೇಡಿಯಂ
ಸಮಯ: ರಾ.7 ಗಂಟೆ
ನೇರ ಪ್ರಸಾರ: ಸ್ಟಾರ್ ಸ್ಪೋರ್ಟ್ಸ್
ಲೈವ್ ಸ್ಟ್ರೀಮಿಂಗ್: ಜಿಯೋ ಹಾಟ್‌ಸ್ಟಾರ್

ಮತ್ತೊಂದೆಡೆ ಗುಜರಾತ್ ತನ್ನ ಹ್ಯಾಟ್ರಿಕ್ ಸೋಲನ್ನು ತಪ್ಪಿಸುವ ಸಾಹಸ ಮಾಡಬೇಕಾಗಿದೆ.

ಪಿಚ್ ರಿಪೋರ್ಟ್: ದೆಹಲಿಯ ಅರುಣ್ ಜೇಟ್ಲಿ ಕ್ರೀಡಾಂಗಣವು ಇತ್ತೀಚಿನ ಋತುಗಳಲ್ಲಿ ಅತ್ಯುತ್ತಮ ಬ್ಯಾಟಿಂಗ್ ಮೇಲ್ಮೈಗಳನ್ನು ಒದಗಿಸಿದೆ. ಸಣ್ಣ ಬೌಂಡರಿಗಳು ಬೌಲರ್‌ಗಳಿಗೆ ರನ್‌ಗಳ ಹರಿವನ್ನು ತಡೆಯಲು ಕಷ್ಟವಾಗುತ್ತವೆ. ಆದರೂ ಈ ಆವೃತ್ತಿಯಲ್ಲಿ ಇಲ್ಲಿ ನಡೆದ ಮೊದಲ ಪಂದ್ಯದಲ್ಲಿ, ಲೋ ಸ್ಕೋರ್ ದಾಖಲಾಗಿತ್ತು.

ಐಪಿಎಲ್‌ನಲ್ಲಿ ಈ ಸಲವೂ ಕೋಲ್ಕತ್ತಾ ನಿರಾಶಾದಾಯಕ ಪ್ರದರ್ಶನ

ಕೆಕೆಆರ್ ಆಟಗಾರರ ವಿರುದ್ಧ ಶಾರುಖ್ ಗರಂ?

ಕೊಲ್ಕತ್ತಾ: ಕೋಲ್ಕತ್ತಾ ತಂಡವು ಈ ಆವೃತ್ತಿಯ ಐಪಿಎಲ್‌ನಲ್ಲಿ ನಿರಾಶಾದಾಯಕ ಪ್ರದರ್ಶನ ಮುಂದುವರಿಸಿದೆ. ತಂಡದ ಮಾಲೀಕರಾದ ಶಾರುಖ್ ಖಾನ್ ಕೂಡಾ ತಮ್ಮ ತಂಡದ ಬಗ್ಗೆ ಅಸಮಾಧಾನಗೊಂಡಿದ್ದಾರೆ ಎನ್ನಲಾಗುತ್ತಿದೆ. ಸೋಮವಾರ ನಡೆದಿದ್ದ ಪಂಜಾಬ್ ವಿರುದ್ಧದ ಪಂದ್ಯದ ವೇಳೆ ಕೆಕೆಆರ್ ಡ್ರೆಸ್ಸಿಂಗ್ ರೂಮ್‌ನಲ್ಲಿ ಅವರೂ ಅತೃಪ್ತರಾಗಿರುವಂತೆ ಕಾಣಿಸಿಕೊಂಡ ವಿಡಿಯೋ ಸೋಶಿಯಲ್ ಮೀಡಿಯಾದಲ್ಲಿ ವೈರಲ್ ಆಗಿದೆ.

ಅದನ್ನು ನೋಡಿದ ಅಭಿಮಾನಿಗಳು ಶಾರುಖ್ ಖಾನ್ ಕೆಕೆಆರ್ ಆಟಗಾರರಿಗೆ ಕ್ಲಾಸ್ ತೆಗೆದುಕೊಂಡಿರಬಹುದು ಎಂದು ಹೇಳುತ್ತಿದ್ದಾರೆ. ಮಳೆ ಬಂದು ಪಂದ್ಯ ನಿಂತಿದ್ದ ವೇಳೆ ಅವರು ಹೋಗಿ ಆಟಗಾರರನ್ನು ಭೇಟಿಯಾಗಿದ್ದಾರೆ. ಅದೇ ವೇಳೆ ಕೆಕೆಆರ್‌ನ ಸಿಇಒ ವೆಂಕಿ ಮೈಸೂರು ಅವರೊಂದಿಗೆ ಚರ್ಚೆಯನ್ನೂ ನಡೆಸಿದ್ದಾರೆ. ವೈರಲ್ ಆಗಿರುವ ವಿಡಿಯೋದಲ್ಲಿ, ಶಾರುಖ್ ಖಾನ್ ಗಂಭೀರವಾಗಿ ಮಾತನಾಡುತ್ತಿರುವುದು ಸೆರೆಯಾಗಿದೆ.

ಕೆಕೆಆರ್ ತಂಡವು ಈ ಐಪಿಎಲ್‌ನ ಮೊದಲ 2 ಪಂದ್ಯಗಳಲ್ಲಿ

ಸೋತಿದೆ. ಆದ್ದರಿಂದ ಮೂರನೇ ಪಂದ್ಯದಲ್ಲಿ ಕಳಪೆ ಆರಂಭದ ನಂತರ ಶಾರುಖ್ ಅಸಮಾಧಾನಗೊಂಡಿದ್ದಾರೆ ಎಂದು ನೆಟ್ಟಿಗರು ಕಾಮೆಂಟ್ ಮಾಡುತ್ತಿದ್ದಾರೆ. ಪಂದ್ಯ ರದ್ದಾಗಿ ತಲಾ 1 ಅಂಕಗಳಿಸಿದ ಬಳಿಕ ಅದನ್ನು ನೋಡಿದ ಕೆಲವರು 'ಶಾರುಖ್ ಬಂದ ನಂತರವೇ ಕೆಕೆಆರ್‌ನ ಪಾಯಿಂಟ್ ಟೇಬಲ್ ಖಾತೆ ತೆರೆಯಿತು' ಎಂದು ವ್ಯಂಗ್ಯವಾಡಿದರೆ, ಇತರರು 'ಶಾರುಖ್ ಅವರ ಕಾಲ್ಗುಣ ಚೆನ್ನಾಗಿದೆ' ಎಂದು ಹೇಳಿದ್ದಾರೆ.

ಆರ್‌ಸಿಬಿಯಿಂದ ಪಡಿಕ್ಕಲ್ ವಿಡಿಯೊ ಬಿಡುಗಡೆ | ಸಂತಸ ಹಂಚಿಕೊಂಡ ಕನ್ನಡಿಗ

ಆರ್‌ಸಿಬಿ ಸೇರ್ಪಡೆ ನನ್ನ ಪಾಲಿನ ತಿರುವು

ಬೆಂಗಳೂರು: ಐಪಿಎಲ್‌ನಲ್ಲಿ ನಾನು ಆರ್‌ಸಿಬಿ ತಂಡಕ್ಕೆ ಮರಳಿದ್ದು, ನನ್ನ ವೃತ್ತಿ ಜೀವನಕ್ಕೆ ದೊರೆತ ಮಹತ್ವದ ತಿರುವು ಎಂದು ಆರ್‌ಸಿಬಿ ಬ್ಯಾಟ್ಸ್‌ಮನ್ ದೇವದತ್ ಪಡಿಕ್ಕಲ್ ಹೇಳಿದ್ದಾರೆ.

ಆರ್‌ಸಿಬಿ ಶೇರ್ ಮಾಡಿದ ವಿಡಿಯೊದಲ್ಲಿ ಮಾತನಾಡಿದ ದೇವದತ್ ಪಡಿಕ್ಕಲ್, 'ಐಪಿಎಲ್ ಹರಾಜು ನನ್ನ ಕ್ರಿಕೆಟ್ ವೃತ್ತಿ ಜೀವನದ ಪಾಲಿಗೆ ಹಲವು ಹಾದಿಯಲ್ಲಿ ಟರ್ನಿಂಗ್ ಪಾಯಿಂಟ್ ಎಂದು ನಾನು ಭಾವಿಸುತ್ತೇನೆ. ಒಂದು ಹಂತದಲ್ಲಿ ನಾನು ಯಾವ ರೀತಿಯ ಕ್ರಿಕೆಟ್ ಆಡಬೇಕು, ನಾನು ಯಾವ ರೀತಿಯ ಕ್ರಿಕೆಟಿಗನಾಗಬೇಕು ಎಂಬುದಕ್ಕೆ ಸಂಪೂರ್ಣವಾಗಿ ತಿಳಿದು ಅದಕ್ಕೆ ಬದ್ಧನಾಗಬೇಕಾದ ಅವಶ್ಯಕತೆ ಇತ್ತು. ಆರ್‌ಸಿಬಿಗೆ ಮರುಪ್ರವೇಶ ಮಾಡುವುದು ನಾನು ಆಡಲು ಬಯಸಿದ ಕ್ರಿಕೆಟ್



ಶೈಲಿಯತ್ತ ನನ್ನ ಉತ್ತಮ ದಾರಿಯನ್ನು ನಿರ್ಮಿಸಿತು' ಎಂದು ಅವರು ತಿಳಿಸಿದ್ದಾರೆ.

ಎಡಗೈ ಬ್ಯಾಟ್ಸ್‌ಮನ್ ತನ್ನ ಮಾತು ಮುಂದುವರಿಸಿ, ಆ ಅವಕಾಶವು ಫಲಿತಾಂಶಗಳನ್ನು ಪರಿಗಣಿಸದೆ ಸ್ವಯಂ ಸುಧಾರಣೆಯತ್ತ ಗಮನಹರಿಸಲು ಹೇಗೆ ಪ್ರೇರೇಪಿಸಿತು ಮತ್ತು ಆಟದತ್ತ ಗಮನವನ್ನು ಹೇಗೆ ಬದಲಾಯಿಸಿತು ಎಂಬುದನ್ನು ವಿವರಿಸಿದ್ದಾರೆ.

'ನನಗೆ ಆರ್‌ಸಿಬಿಗೆ ಜತೆ ಅವಕಾಶ ಸಿಕ್ಕಾಗ, ನಾನು ಮಾಡಬೇಕಾದ ಅನೇಕ ಸಂಗತಿಗಳಿವೆ ಎಂದು ಅಂದುಕೊಂಡೆ. ಫಲಿತಾಂಶ ಏನೇ ಆಗಲಿ, ಅದರ ಬಗ್ಗೆ ಚಿಂತಿಸದೆ ಆ ವಿಷಯಗಳ ಮೇಲೆ ಸಂಪೂರ್ಣವಾಗಿ ಕೆಲಸ ಮಾಡಲು ನಾನು ಬದ್ಧನಾಗಬೇಕೆಂದು ನಾನು ಅದೇ ದಿನ ನಿರ್ಧರಿಸಿದೆ' ಎಂದು ಅವರು ಮಾತಿನಲ್ಲಿ ಸೇರಿಸಿದರು.

ದೇವದತ್ ಪಡಿಕ್ಕಲ್ ಅವರು 2020ರ ತಮ್ಮ ಐಪಿಎಲ್ ಪದಾರ್ಪಣೆ ಆವೃತ್ತಿಯಲ್ಲಿ ಆರ್‌ಸಿಬಿ ಪರ ಎಮರ್ಜಿಂಗ್ ಪ್ಲೇಯರ್ ಪ್ರಶಸ್ತಿ ಗೆದ್ದಿದ್ದರು. ಆದರೆ ನಂತರ ರಾಜಸ್ಥಾನ್ ರಾಯಲ್ಸ್ ಹಾಗೂ ಲಖನೌ ಸೂಪರ್ ಜಯಂಟ್ಸ್ ಜತೆಗಿನ ಅವಧಿಗಳ ಆವೃತ್ತಿಯಲ್ಲಿ ವಿಫಲರಾಗಿದ್ದರು.

ವಿಟಾಕೀಸ್

ಟ್ರೇಲರ್‌ನಲ್ಲಿ ಕಾಲೆಳೆದ ಚಂದನ್

ಸುಜಯ್ ಶಾಸ್ತ್ರಿ ನಿರ್ದೇಶನದ, ಗೋಕುಲ ಎಲ್ರ ಕಾಲೆಳಿಯತ್ತೆ ಕಾಲ ಚಿತ್ರದ ಟ್ರೇಲರ್ ರಿಲೀಸ್ ಆಗಿದೆ. ತೊಂಬತ್ತರ ಕಾಲಘಟ್ಟದ ಈ ಸ್ಟೋರಿ ರೆಟ್ರೊ ಶೈಲಿಯಲ್ಲಿ ಮೂಡಿಬಂದಿದೆ. ಏಪ್ರಿಲ್ 17 ರಂದು ಚಿತ್ರ ಬಿಡುಗಡೆಯಾಗುತ್ತಿದ್ದು, ಚಿತ್ರ ನೋಡಲು ಅಭಿಮಾನಿಗಳು ಕಾತುರದಿಂದ ಕಾಯುತ್ತಿದ್ದಾರೆ.

ಚಂದನ್ ಶೆಟ್ಟಿ ನಾಯಕನಾಗಿ ನಟಿಸಿದ್ದು, ನಾಯಕಿಯಾಗಿ ಅರ್ಚನಾ ಕೊಟ್ಟಿಗೆ ಬಣ್ಣಹಚ್ಚಿದ್ದಾರೆ. ಮಂಜು ಪಾವಗಡ, ಮಹಾಂತೇಶ್, ಅನಂತ ಪದ್ಮನಾಭ ಮುಂತಾದವರು ತಾರಾಗಣದಲ್ಲಿದ್ದಾರೆ.

ರಿಯಾಲಿಟಿ ಶೋ ವೊಂದರಲ್ಲಿ ಚಂದನ್ ಶೆಟ್ಟಿ ಅವರನ್ನು ನೋಡಿದ ನನಗೆ ನಮ್ಮ ಕಥೆಗೆ ಇವರು ಸೂಕ್ತ ನಾಯಕ ಎಂದೆನಿಸಿತು. ನಂತರ ಚಂದನ್ ಶೆಟ್ಟಿ ಅವರಿಗೆ ನನ್ನ ಗೆಳೆಯ ರಾಜಗುರು ಹೊಸಕೋಟೆ ಬರೆದಿರುವ ಈ ಚಿತ್ರದ ಕಥೆ ಹೇಳಿದ್ದೆವು. ಚಂದನ್ ಅಭಿನಯಿಸಲು ಒಪ್ಪಿದರು. ಎಲ್ಲರ ಮನಸ್ಸಿಗೂ ಹತ್ತಿರವಾಗುವಂತಹ ಕಥೆಯನ್ನು ರಾಜಗುರು ಹೊಸಕೋಟೆ ಬರೆದಿದ್ದಾರೆ. ಪ್ರವೀಣ್ , ಪ್ರದೀಪ್ ಸುಮಧುರ ಸಂಗೀತ ನೀಡಿದ್ದಾರೆ ಎಂದು ನಿರ್ದೇಶಕ ಸುಜಯ್ ಶಾಸ್ತ್ರಿ ಹೇಳಿದರು.

ನಾನು ಈ ಚಿತ್ರದ ಕೇಳಿದಾಕ್ಷಣ ನಟಿಸಲು ಸಂತಸದಿಂದ ಸಮ್ಮತಿಸಿದೆ. ಅಂತಹ ಅದ್ಭುತ ಕಥೆ ಚಿತ್ರದಲ್ಲಿದೆ. ನಾಯಕನಾಗಿ ಇದು ನನ್ನ ಮೊದಲ ಚಿತ್ರ. ಸುಜಯ್ ಶಾಸ್ತ್ರಿ, ರಾಜಗುರು ಹೊಸಕೋಟೆ ಅವರೆಲ್ಲಾ ರಂಗಭೂಮಿ ಹಿನ್ನೆಲೆಯವರು. ಇವರೆಲ್ಲರೂ ಒಂದು ರೀತಿ ಶಾಲೆ ಇದ್ದ ಹಾಗೆ. ಅವರಿಂದ ನಾನು ಸಾಕಷ್ಟು ಕಲಿತಿದ್ದೇನೆ. ಟ್ರೇಲರ್ ಗೆ ನಿರೀಕ್ಷೆಗೂ ಮೀರಿ ಮೆಚ್ಚುಗೆ ಸಿಕ್ಕಿದೆ. ಮನೆಮಂದಿಯೆಲ್ಲಾ ಒಟ್ಟಿಗೆ ಕುಳಿತು ನೋಡುವ ಒಂದೊಳ್ಳೆಯ ಸಿನಿಮಾವಿದು ಚಂದನ್ ಶೆಟ್ಟಿ ಸಂತಸದಿಂದ ನುಡಿದರು.

ಸುಜಯ್ ಶಾಸ್ತ್ರಿ ಅವರ ಗುಬ್ಬಿ ಮೇಲೆ

ಬ್ರಹ್ಮಾಸ್ತ್ರ ಚಿತ್ರ ನೋಡಿದ ಮೇಲೆ ಅವರ ನಿರ್ದೇಶನದಲ್ಲಿ ಚಿತ್ರವನ್ನು ನಿರ್ಮಿಸುವ ಆಸೆಯಾಯಿತು. ರಾಜಗುರು ಅವರು ಹೇಳಿದ ಕಥೆ ಇಷ್ಟವಾಯಿತು. ನಂತರ ಈ ಚಿತ್ರ ನಿರ್ಮಾಣವಾಯಿತು. ಇದೇ ಏಪ್ರಿಲ್ 17 ನಮ್ಮ ಚಿತ್ರ ಬಿಡುಗಡೆಯಾಗುತ್ತಿದೆ. ಕೆ.ವಿ.ಎನ್ ಸಂಸ್ಥೆ ನಮ್ಮ ಚಿತ್ರವನ್ನು ವಿತರಣೆ ಮಾಡುತ್ತಿದೆ ಎಂದು ನಿರ್ಮಾಪಕ ಗೋವಿಂದರಾಜು ಹೇಳಿದರು. ಕಾಲದ ಮಹತ್ವ ಸಾರುವ ಕಥೆಯಿದು ಎಂದು ರಾಜಗುರು ಹೊಸಕೋಟೆ ಮಾಹಿತಿ ನೀಡಿದರು.

ಅಂಡರ್ ವರ್ಲ್ಡ್ ಸಿನಿಮಾಗಳಲ್ಲಿ ನಟಿಸಿ ಮನಗೆದ್ದಿರುವ ನಟ ಆದಿತ್ಯ, ಈಗ ಮತ್ತೊಮ್ಮೆ ಭೂಗತ ಲೋಕದ ಕಥೆಯ ಸಿನಿಮಾದ ಮೂಲಕ ತೆರೆಗೆ ಬರಲು ಸಿದ್ಧವಾಗಿದ್ದಾರೆ. ಹೌದು ಟೆರರ್ ಚಿತ್ರದಲ್ಲಿ ಆದಿತ್ಯ ನಾಯಕರಾಗಿ ನಟಿಸಿದ್ದು, ಈ ಹಿಂದಿನ ಎಲ್ಲಾ ಸಿನಿಮಾಗಳಿಗಿಂತ ವಿಭಿನ್ನವಾಗಿ ಕಾಣಿಸಿಕೊಂಡಿದ್ದು, ಆಕ್ಷನ್‌ನಲ್ಲಿ ಅಬ್ಬರಿಸಿದ್ದಾರೆ. ಶ್ರೀನಗರ ಕಿಟ್ಟಿ ಬಹು ವರ್ಷಗಳ ಬಳಿಕ ಆದಿತ್ಯ ಅವರ ಜತೆಗೆ ಅಭಿನಯಿಸುತ್ತಿದ್ದಾರೆ. ದೇವರಾಜ್, ಶಶಿಕುಮಾರ್, ಕುಮಾರ್ ಬಂಗಾರಪ್ಪ, ಶರತ್ ಲೋಹಿತಾಶ್ವ, ಧರ್ಮ, ಕೋಟೆ ಪ್ರಭಾಕರ್, ರವಿ ಭಟ್, ಶಿವಾಂಗಿ, ಅಕ್ಷರಾ ಗೌಡ ಹೀಗೆ ದೊಡ್ಡ ತಾರಾಬಳಗವೇ ಚಿತ್ರದಲ್ಲಿದೆ. ಟೆರರ್ ಮಾಸ್ ಕ್ಲಾಸ್ ಆಗಿ ಮೂಡಿಬಂದಿದ್ದು, ರಂಜನ್ ಶಿವರಾಮ್ ಗೌಡ ಚಿತ್ರಕ್ಕೆ ಕಥೆ, ಚಿತ್ರಕಥೆ ಹಾಗೂ ಸಂಭಾಷಣೆ ಬರೆದು ನಿರ್ದೇಶನ ಮಾಡಿದ್ದಾರೆ. ರಂಜನ್ ಶಿವರಾಮ ಗೌಡ ಈ ಚಿತ್ರದ ಮೂಲಕ ಸ್ವತಂತ್ರ ನಿರ್ದೇಶಕರಾಗಿ ಚಿತ್ರರಂಗಕ್ಕೆ ಪಾದಾರ್ಪಣೆ ಮಾಡುತ್ತಿದ್ದಾರೆ. ಟೆರರ್ ಈಗಾಗಲೇ ಟೀಸರ್ ಹಾಗೂ ಹಾಡುಗಳ ಮೂಲಕ ಚಿತ್ರ ಪ್ರೇಕ್ಷಕರ ಗಮನಸೆಳೆದಿದೆ. ಮುಂಬೈ ಬೆಡಗಿ ಶಿವಾಂಗಿ ಹಾಡಿನಲ್ಲಿ ಹೆಜ್ಜೆ ಹಾಕಿರುವುದು ಈ ಚಿತ್ರದ ವಿಶೇಷ.

ನವೀನ್ ಅಕ್ಷಿ ಛಾಯಾಗ್ರಹಣ ಹಾಗೂ ಶ್ರೀಕಾಂತ್ ಸಂಕಲನ ವಿರುವ ಈ ಚಿತ್ರಕ್ಕೆ ಕನಲ್ ಕಣ್ಣನ್ ಸಾಹಸ ನಿರ್ದೇಶನ ಹಾಗೂ ಭಾನು ಮಾಸ್ಟರ್, ಭೂಷಣ್ ಮಾಸ್ಟರ್ ನೃತ್ಯ ನಿರ್ದೇಶನ ಈ ಚಿತ್ರಕ್ಕಿದೆ. ಉಪ್ಪಿ ಎಂಟರ್ ಟೈನರ್ಸ್ ಲಾಂಛನದಲ್ಲಿ ಸಿಲ್ಕ್ ಮಂಜು, ರವಿ ಹಾಗೂ ಸ್ಮಿತಾ ವಸಿಷ್ಠ ಒಟ್ಟಾಗಿ ಚಿತ್ರ ನಿರ್ಮಾಣ ಮಾಡಿದ್ದಾರೆ. ಇದೇ ವಾರ ಟೆರರ್ ರಾಜ್ಯಾದ್ಯಂತ ತೆರೆಗೆ ಬರಲಿದೆ. ಟೆರರ್ ಆದಿತ್ಯಗೆ ಮತ್ತೊಂದು ಬಿಗ್ ಬ್ರೇಕ್ ನೀಡುವ ನಿರೀಕ್ಷೆ ಇದೆ.

ಈ ವಾರ ತೆರೆಗೆ ಟೆರರ್

ಕೆಡಿಯ ಹೊಸ ಹಾಡು

ಜೋಗಿ ಪ್ರೇಮ್ ನಿರ್ದೇಶನದಲ್ಲಿ ಸಿದ್ಧವಾಗಿರುವ ಕೆಡಿ ಚಿತ್ರ ಬಿಡುಗಡೆಗೂ ಮುನ್ನವೇ ಕುತೂಹಲ ಮೂಡಿಸಿದೆ. ಅಂತೆಯೇ ಹಾಡಿನಲ್ಲಿಯೂ ವಿವಾದ ಸೃಷ್ಟಿಸಿದೆ. ಸರಸೆ ಸರ್ಗ... ಹಾಡು ಅಶ್ಲೀಲ ಸಾಹಿತ್ಯದಿಂದ ಕೂಡಿದೆ ಹಾಗಾಗಿ ಆ ಹಾಡನ್ನು ಚಿತ್ರದಿಂದ ತೆಗೆಯಬೇಕು ಎಂಬ ಒತ್ತಾಯಗಳು ಕೇಳಿಬಂದಿದ್ದವು. ಬಾಲಿವುಡ್ ನಟಿ ನೂರಾ ಫತೇಹಿ ಈ ಹಾಡಿನಲ್ಲಿ ಹೆಜ್ಜೆ ಹಾಕಿ, ಪಡ್ಡೆ ಹುಡುಗರ

ನಿದ್ದೆಗೆಡಿಸಿದ್ದರು. ಈಗಾಗಲೇ ಹಿಂದಿಯಲ್ಲಿ ಈ ಹಾಡನ್ನು ತೆಗೆಯಲಾಗಿದೆ. ಈ ನಡುವೆಯೇ ಪ್ರೇಮ್ ಚಿತ್ರದ ಮತ್ತೊಂದು ಹಾಡನ್ನು ರಿಲೀಸ್ ಮಾಡಲು ಸಿದ್ಧವಾಗಿದ್ದಾರೆ. ನುಗ್ಗಿ ಹೊಡಿ.. ಎಂಬ ಹಾಡು ಇದಾಗಿದ್ದು, ಮಾಸ್ ಆಗಿ ಮೂಡಿಬರಲಿದೆ ಎಂದು ತಿಳಿಯುತ್ತದೆ. ಸದ್ಯ ಈ ಹಾಡಿನ ಪ್ರೋಮೊ ಇದಾಗಿದ್ದು, ಸಿನಿಪ್ರಿಯರಲ್ಲಿ ಕುತೂಹಲ ಮೂಡಿಸಿದೆ. ನನ್ನ ಮೌನದಲ್ಲಿ ಡೆವಿಲ್ ಇದೆ... ಮತ್ತು ನನ್ನ ಕೋಪದಲ್ಲಿ ದೇವರು ಇದ್ದಾನೆ. ಜಾಗರೂಕತೆಯಿಂದ ನೋಡಿ. ನೀವು ನಂಬಿದ್ದನ್ನು ಮಾತ್ರ ನೀವು ಕಾಣುವಿರಿ. ಮುಂದಿನ ಸಿಂಗಲ್ ಎಂದು ಕೆವಿನ್ ಪ್ರೊಡಕ್ಷನ್ ಸೋಷಿಯಲ್ ಮೀಡಿಯಾದಲ್ಲಿ ಹಂಚಿಕೊಂಡಿದೆ. ಸದ್ಯ ಬಿಡುಗಡೆಯಾಗುತ್ತಿರುವ ಹೊಸ ಹಾಡಿಗೂ ನಿರ್ದೇಶಕ ಪ್ರೇಮ್ ಅವರೇ

ಸಾಹಿತ್ಯ ರಚಿಸಿದ್ದಾರೆ. ಹಾಗಾಗಿ ಈ ಗೀತೆಯ ಬಗ್ಗೆಯೂ ಸಹಜವಾಗಿ ಕುತೂಹಲ ಮೂಡಿದೆ.

ಕೆಡಿ ಭೂಗತ ಲೋಕದ ಕಥೆಯನ್ನು ಒಳಗೊಂಡಿದ್ದು ಅರವತ್ತು, ಎಪ್ಪತ್ತರ ದಶಕದ ಕಥೆಯನ್ನು ಒಳಗೊಂಡಿದೆ. ಹಾಗಾಗಿ ಇಡೀ ಚಿತ್ರ ರೆಟ್ರೋ ಶೈಲಿಯಲ್ಲಿ ಸಾಗಲಿದೆ. ಅಂಡರ್‌ವರ್ಲ್ಡ್ ಡಾನ್ ಕಾಳಿದಾಸನಾಗಿ ಧ್ರುವ ಸರ್ಜಾ ಅಬ್ಬರಿಸಿದ್ದಾರೆ. ರೀಷ್ಮಾ ನಾಯಕಿಯಾಗಿ ಬಣ್ಣಹಚ್ಚಿದ್ದು, ಬಾಲಿವುಡ್ ಬೆಡಗಿ ಶಿಲ್ಪಾ ಶೆಟ್ಟಿ, ಸಂಜಯ್ ದತ್, ರಮೇಶ್ ಅರವಿಂದ್, ರವಿಚಂದ್ರನ್ ಹೀಗೆ ದೊಡ್ಡ ತಾರಾಬಳಗವೇ ಚಿತ್ರದಲ್ಲಿದೆ. ಕೆಡಿ ಪ್ಯಾನ್ ಇಂಡಿಯಾ ಸಿನಿಮಾವಾಗಿದ್ದು ಇದೇ 30 ರಂದು ವಿಶ್ವಾದ್ಯಂತ ಅದ್ದೂರಿಯಾಗಿ ತೆರೆಗೆ ಬರಲಿದೆ.

ದಿಯಾ ಖ್ಯಾತಿಯ ಪೃಥ್ವಿ ಅಂಬರ್ ಬಹುತೇಕ ಸಿನಿಮಾಗಳಲ್ಲಿ ಲವ್ವರ್ ಬಾಯ್ ಆಗಿ ಕಾಣಿಸಿಕೊಂಡಿದ್ದಾರೆ. ಒಂದೆರಡು ಸಿನಿಮಾಗಳಲ್ಲಿ ಆ್ಯಕ್ಷನ್‌ನಲ್ಲಿಯೂ ಮಿಂಚಿದ್ದರು. ಈಗ ಕಾಮಿಡಿ ಕಥೆಯಲ್ಲಿಯೂ ಪ್ರೇಕ್ಷಕರನ್ನು ರಂಜಿಸಲು ಸಿದ್ಧವಾಗುತ್ತಿದ್ದಾರೆ. ನಿರ್ದೇಶಕ ಸ್ವಸ್ತಿಕ್ ಆ್ಯಕ್ಷನ್ ಕಟ್ ಹೇಳುತ್ತಿರುವ ದರ್ಶನ ಸಿನಿಮಾದಲ್ಲಿ ಹೊಸ ಅವತಾರದಲ್ಲಿ ಕಾಣಿಸಿಕೊಳ್ಳಲಿದ್ದಾರೆ. ಮುಹೂರ್ತ ನೆರವೇರಿಸಿಕೊಂಡಿರುವ ದರ್ಶನ ಚಿತ್ರೀಕರಣ ಆರಂಭಿಸಿದೆ.

ಡಾರ್ಕ್ ಕಾಮಿಡಿ: ಸಿನಿಮಾದ ಕಥೆಗೆ ಹೊಂದುತ್ತದೆ ಎಂಬ ನಿಟ್ಟಿನಲ್ಲಿ ದರ್ಶನ ಎಂಬ ಶೀರ್ಷಿಕೆ ಆಯ್ದುಕೊಂಡಿದ್ದೇವೆ. ಇಲ್ಲಿ ಕಾಮಿಡಿಯೇ ಪ್ರಧಾನವಾಗಿದ್ದು, ಸಿನಿಮಾದ ಆರಂಭದಿಂದ ಅಂತ್ಯದವರೆಗೂ ಹಾಸ್ಯಮಯ ಸನ್ನಿವೇಶಗಳೇ ಸಾಗುತ್ತವೆ. ಅದರ ಜತೆಗೆ ಒಂದಷ್ಟು ಲವ್‌ಸ್ಟೋರಿ, ಸೆಂಟಿಮೆಂಟ್, ಥ್ರಿಲ್ಲರ್ ಕಥೆಯೂ ಕೂಡ ಬೆರೆತಿದೆ. ಪೃಥ್ವಿ ಅಂಬರ್, ನಿಶಾ, ಗೌರವ್ ಶೆಟ್ಟಿ ಮುಂತಾದವರು ಪ್ರಮುಖ ಪಾತ್ರದಲ್ಲಿ ಅಭಿನಯಿಸುತ್ತಿದ್ದಾರೆ. ಎಲ್ಲರಿಗೂ ಇದು ಹೊಸತನದ ಕಥೆ ಮತ್ತು ಸಿನಿಮಾವಾಗಿದೆ. ಹಾಗಾಗಿ ಸಹಜವಾಗಿ ನಿರೀಕ್ಷೆ ಹೆಚ್ಚುವಂತೆ ಮಾಡಿದೆ.

ಪ್ರಸ್ತುತತೆಯ ಸ್ಟೋರಿ: ಇದು ಪ್ರಸ್ತುತ ಕಾಲಘಟ್ಟದಲ್ಲಿ ಸಾಗುವ ಕಥೆಯನ್ನು ಒಳಗೊಂಡಿದೆ. ಪರಿಸ್ಥಿತಿಗೆ ಸಿಲುಕಿ ನಲುಗುವ ಯುವಕರ ಸ್ಟೋರಿಯೂ ಇಲ್ಲಿ ಅಡಕವಾಗಿದೆ. ಹಾಗಾಗಿ ಚಿತ್ರವನ್ನು ನೋಡುತ್ತಿದ್ದರೆ ನಾವು ಅನುಭವಿಸಿದ, ಎದುರಿಸಿದ ಘಟನೆಗಳು ನೆನಪಾಗುತ್ತವೆ. ಇದು ನಗರದಲ್ಲಿ ನಡೆಯುವ ಕಥೆಯಾಗಿದ್ದು ಬೆಂಗಳೂರಿನ ಸುತ್ತಮುತ್ತ ಚಿತ್ರೀಕರಣ ನಡೆಸಲು ಯೋಜನೆ ಹಾಕಿಕೊಂಡಿದ್ದೇವೆ. ಮನೆಮಂದಿಯೆಲ್ಲಾ ಕುಳಿತು ನೋಡುವ ಸಿನಿಮಾ ಇದಾಗಿದೆ ಎನ್ನುತ್ತಾರೆ ನಿರ್ದೇಶಕ ಸ್ವಸ್ತಿಕ್.

ಕಾಮಿಡಿ ಕಥೆಯಲ್ಲಿ ಪೃಥ್ವಿ

ಪೃಥ್ವಿ ಅಂಬರ್ ಅವರನ್ನು ಇದುವರೆಗೆ ಲವ್ವರ್ ಬಾಯ್ ಆಗಿ ನೋಡಿದ್ದಾರೆ. ನಮ್ಮ ಚಿತ್ರದಲ್ಲಿ ಅವರು ಹೊಸ ಅವತಾರದಲ್ಲಿ ದರ್ಶನ ಕೊಡಲಿದ್ದಾರೆ. ದರ್ಶನ್ ಹಾಸ್ಯಭರಿತ ಕಥೆಯಾಗಿದ್ದು ಪೃಥ್ವಿ ಕಾಮಿಡಿಯಲ್ಲಿ ಕಮಾಲ್ ಮಾಡಲಿದ್ದಾರೆ. ಅವರೊಂದಿಗೆ ಗೌರವ್ ಶೆಟ್ಟಿ ಕೂಡ ನಟಿಸುತ್ತಿದ್ದು, ಚಿತ್ರದಲ್ಲಿ ಭರಪೂರ ಮನರಂಜನೆ ಇರಲಿದೆ. ಆದಷ್ಟು ಬೇಗ ಚಿತ್ರೀಕರಣ ಮುಗಿಸಿ ಸೆಪ್ಟೆಂಬರ್‌ನಲ್ಲಿ ಚಿತ್ರವನ್ನು ತೆರೆಗೆ ತರುವ ಯೋಜನೆಯಿದೆ.

-ಸ್ವಸ್ತಿಕ್, ನಿರ್ದೇಶಕ